ವಿಶ್ವವಾಣಿ
ವಿಶ್ವಾಸವೇ ವಿಶ್ವ

ರಾಜೀವ್ ಶುಕ್ಲಾಗೆ ಬಿಸಿಸಿಐ ಸಾರಥ್ಯ?

ಭಾರತದ ಮಾಜಿ ಆಲ್‌ರೌಂಡರ್ ಮತ್ತು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ರೋಜರ್ ಬಿನ್ನಿ ಅವರು ಇಂದು (ಜುಲೈ 19) 70ನೇ ವರ್ಷಕ್ಕೆ ಕಾಲಿಡಲಿದ್ದಾರೆ. ಇದರ ಬೆನ್ನಲ್ಲೇ ಅವರನ್ನು ವಯಸ್ಸಿನ ಮಿತಿಯ ಕಾರಣದಿಂದ ಅಧ್ಯಕ್ಷ ಸ್ಥಾನದಿಂದ ಬದಲಾವಣೆ ಮಾಡುವ ನಿರೀಕ್ಷೆ ಇದೆ. ಬಿಸಿಸಿಐ ನಿಯಮದ ಪ್ರಕಾರ 70 ವರ್ಷದ ಬಳಿಕ ಬಿಸಿಸಿಐ ಅಧ್ಯಕ್ಷರಾಗಿ ಇರುವಂತಿಲ್ಲ. ಇವರ ಸ್ಥಾನಕ್ಕೆ ರಾಜೀವ್ ಶುಕ್ಲಾ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸುವ ಸಾಧ್ಯತೆ ಇದೆ.

ಕೈ ಶಾಸಕರಿಗೆ 50, ಪ್ರತಿಪಕ್ಷ ಶಾಸಕರಿಗೆ 25 ಕೋಟಿ ರು. ಅನುದಾನ
ಜುಲೈ 30,31 ರಂದು ಶಾಸಕರ ಸಭೆ ಕರೆದ ಸಿಎಂ ಸಿದ್ದರಾಮಯ್ಯ

ಶಾಸಕರಿಗೆ ಅನುದಾನ ಭಾಗ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅನುದಾನ ವಿಷಯದಲ್ಲಿ ಸ್ವಪಕ್ಷೀಯರು ಮತ್ತು ಪ್ರತಿಪಕ್ಷ ಶಾಸಕರ ಅಸಮಾಧಾನಕ್ಕೆ ಪರಿಹಾರ ಕಂಡುಕೊಳ್ಳಲು ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಜೆಟ್‌ನಲ್ಲಿ ಘೋಷಿಸಿದ್ದ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಲು ಮುಂದಾಗಿದ್ದಾರೆ.

ಕ್ಷೇತ್ರದ ಅಭಿವೃದ್ಧಿ ಅನುದಾನ ನೀಡುತ್ತಿಲ್ಲ ಎನ್ನುವ ನಿರಂತರ ಆರೋಪಗಳಿಗೆ ತಿರುಗೇಟು ನೀಡಲು ಮುಖ್ಯಮಂತ್ರಿಗಳು ಈ ತೀರ್ಮಾನ ಮಾಡಿದ್ದಾರೆ. ಈ ವಿಶೇಷ ಅನುದಾನದಲ್ಲಿ 50 ಕೋಟಿ ಅನುದಾನ ಕೈ ಶಾಸಕರಿಗೆ ಲಭಿಸಲಿದ್ದು, ಪ್ರತಿಪಕ್ಷ ಶಾಸಕರಿಗೆ 25 ಕೋಟಿ ರು. ಲಭಿಸಲಿದೆ ಎಂದು ಮೂಲಗಳು ತಿಳಿಸಿವೆ.

2025-26ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದ 'ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ'ಯಲ್ಲಿ ಕಾಂಗ್ರೆಸ್ ಶಾಸಕರಿಗೆ 50 ಕೋಟಿ ಹಾಗೂ ಬಿಜೆಪಿ-ಜೆಡಿಎಸ್ ಶಾಸಕರಿಗೆ ತಲಾ 25 ಕೋಟಿ ರು. ನೀಡಲು ತೀರ್ಮಾನಿಸಲಾಗಿದೆ. ಈ ಅನುದಾನದಲ್ಲಿ ಶೇ.60ರಷ್ಟು ಅನುದಾನ ಮೂಲಸೌಕರ್ಯಾಭಿವೃದ್ಧಿ ಬಳಸಲು ಹಾಗೂ ಇನ್ನುಳಿದ ಅನುದಾನವನ್ನು ಶಾಸಕರ ವಿವೇಚನಾಧಿಕಾರದಲ್ಲಿ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಇತ್ತೀಚಿಗೆ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ನಡೆಸಿದ ಶಾಸಕರ ಸಭೆಯಲ್ಲಿ ಅನುದಾನ ವಿಷಯದ ಬಗ್ಗೆಯೂ ಅನೇಕ ಶಾಸಕರು ಆರೋಪಿಸಿದ್ದರು. ಆದ್ದರಿಂದ ಶಾಸಕರಿಗೆ ಅನುದಾನ ಬಿಡುಗಡೆಗೊಳಿಸುವಂತೆ ಸಿಎಂ ಸಿದ್ದರಾಮಯ್ಯ ಅವರಿಗೆ ಸುರ್ಜೇವಾಲ ಅವರು ಸಲಹೆ ನೀಡಿದ್ದರು. ಇದರ ಬೆನ್ನಲ್ಲೇ, ಸ್ವಪಕ್ಷೀಯರಿಗೆ 50 ಕೋಟಿ ರು. ನೀಡಲು ತೀರ್ಮಾನಿಸಲಾಗಿದೆ. ಆದರೆ ಈ ಅನುದಾನದಲ್ಲಿ ಯಾವೆಲ್ಲ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು ಎನ್ನುವ ಬಗ್ಗೆ ಲಿಖಿತ ರೂಪದಲ್ಲಿ ವಿವರಣೆ ನೀಡಲು ಶಾಸಕರಿಗೆ ಸೂಚನೆ ನೀಡಲಾಗಿದೆ. ಅನುದಾನ ಬಳಕೆಗೆ ಶಾಸಕರು ಕೈಗೊಂಡಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಪಡೆಯಲು ಎರಡು ದಿನಗಳ ಕಾಲ ವಿಧಾನಸೌಧ ದಲ್ಲಿ ಜಿಲ್ಲಾವಾರು ಸಭೆ ನಡೆಸಲು ಮುಖ್ಯ ಮಂತ್ರಿ ಗಳು ತೀರ್ಮಾನಿಸಿದ್ದಾರೆ.

ಆದರೆ ಕಾಂಗ್ರೆಸ್ ಶಾಸಕರಿಗೆ 50 ಕೋಟಿ ರು. ನೀಡಿ, ಪ್ರತಿಪಕ್ಷದ ಶಾಸಕರಿಗೆ 25 ಕೋಟಿ ರು. ನೀಡಲು ತೀರ್ಮಾನಿಸಿರುವುದು ವಿವಾದಕ್ಕೆ ಕಾರಣ ವಾಗುವ ಸಾಧ್ಯತೆಯಿದೆ.

ಜಿಲ್ಲಾವಾರು ಸಭೆ ನಡೆಸಲು ತೀರ್ಮಾನ

ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ನಡೆಸಿದ ಪ್ರತ್ಯೇಕ ಸಭೆಯ ಬಳಿಕ ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಶಾಸಕರೊಂದಿಗೆ ಜಿಲ್ಲಾ ಮಟ್ಟದ ಸಭೆ ನಡೆಸಲು ತೀರ್ಮಾನಿಸಿದ್ದಾರೆ. ಎರಡು ದಿನಗಳ ಕಾಲ ನಡೆಯಲಿರುವ ಈ ಸಭೆಗೆ ಶಾಸಕರು ಬರುವಾಗ, ಸಿಎಂ ಬಿಡುಗಡೆಗೊಳಿಸಲಿರುವ 50 ಕೋಟಿ ಅನುದಾನವನ್ನು ಯಾವೆಲ್ಲ ಯೋಜನೆಗೆ ಬಳಸಲಾಗುವುದು ಎನ್ನುವ ವಿವರ ಪತ್ರದೊಂದಿಗೆ ಆಗಮಿಸಬೇಕು ಎಂದು ಎಲ್ಲ ಶಾಸಕರಿಗೆ ಸ್ವತಃ ಸಿದ್ದರಾಮಯ್ಯ ಅವರು ಪತ್ರ ಬರೆದಿದ್ದಾರೆ.

ಕಾಂಗ್ರೆಸ್‌ನ ಪ್ರತಿ ಶಾಸಕರಿಗೆ

50 ಕೋಟಿ ಅನುದಾನ

37.50 ಕೋಟಿ
ಲೋಕೋಪಯೋಗಿ ಇಲಾಖೆ ಯೋಜನೆಗೆ

12.50 ಕೋಟಿ
ಶಾಸಕರ ವಿವೇಚನಾಧಿಕಾರದಲ್ಲಿ ಬಳಕೆ

37.50 ಕೋಟಿ
ಲೋಕೋಪಯೋಗಿ ಇಲಾಖೆ ಯೋಜನೆಗೆ

- ಜಿಲ್ಲಾವಾರು ಶಾಸಕರ ಸಭೆ ನಡೆಸಿ ಹಣ ಹಂಚಿಕೆಗೆ ತೀರ್ಮಾನ

ಉಸ್ತುವಾರಿ ಹಸ್ತಕ್ಷೇಪಕ್ಕೆ ಅತೃಪ್ತಿ

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ವಿರುದ್ಧ ಕೆಲವು ಸಚಿವರು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಶಾಸಕರ ಸಭೆ ನಡೆಸುವುದು ಬಳಿಕ ಸಚಿವರಿಂದ ಪ್ರತ್ಯೇಕ ವರದಿ ಪಡೆಯುವುದು ಸರಿಯಲ್ಲ. ಇದರಿಂದ ಅನವಶ್ಯಕವಾಗಿ ಪ್ರತಿಪಕ್ಷಗಳಿಗೆ ಅಸ್ತ್ರ ನೀಡಿದಂತಾಗು ತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅದರಲ್ಲಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿ ರುವ ಕೆಲ ಹಿರಿಯ ಸಚಿವರೇ ಈ ಅಸಮಾಧಾನ ಹೊರಹಾಕಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಸಿದ್ದು ಶಕ್ತಿ ಪ್ರದರ್ಶನಕ್ಕೆ ಮತ್ತೊಮ್ಮೆ ವೇದಿಕೆ ಸಜ್ಜು

ಇಂದು ಮೈಸೂರಿನಲ್ಲಿ ಸಾಧನಾ ಸಮಾವೇಶ

ಮೈಸೂರಿನ ಮಹಾರಾಜ ಕಾಲೇಜಿನ ಮೈದಾನದಲ್ಲಿ ನಡೆಯುವ ಸಾಧನಾ ಸಮಾವೇಶದ ಸಿದ್ಧತೆಯನ್ನು ಸಿಎಂ ಸಿದ್ದರಾಮಯ್ಯ ಶುಕ್ರವಾರ ಪರಿಶೀಲಿಸಿದರು.

ಮೈಸೂರು: ರಾಜ್ಯ ಸರಕಾರಕ್ಕೆ ಎರಡು ವರ್ಷ ಪೂರೈಸಿದ್ದು ಶನಿವಾರ (ಜು.19) ಮೈಸೂರಿನಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ, ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಜತೆ ಸಾಧನಾ ಸಮಾವೇಶ ಏರ್ಪಡಿಸಲಾಗಿದೆ. ಸಿಎಂ ಸಿದ್ದರಾಮಯ್ಯ ಅವರಿಗೆ ಸದ್ಯದ ರಾಜಕೀಯ ಹಿನ್ನೆಲೆಯಲ್ಲಿ ತಮ್ಮ ವಿರೋಧಿಗಳಿಗೆ ಸಂದೇಶವನ್ನು ನೀಡಲು ಈ ಸಮಾವೇಶ ವೇದಿಕೆಯಾಗುವ ನಿರೀಕ್ಷೆ ಇದೆ.

ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಸೇರಿದಂತೆ ಪ್ರಮುಖರು ಸಮಾವೇಶ ನಡೆಯುವ ನಗರದ ಮಹಾರಾಜ ಕಾಲೇಜು ಮೈದಾನಕ್ಕೆ ಭೇಟಿ ನೀಡಿ ಸಿದ್ಧತಾ ಕಾರ್ಯ ಪರಿಶೀಲಿಸಿದರು. ಸಾಧನ ಸಮಾವೇಶಕ್ಕೆ ಬೃಹತ್ ವೇದಿಕೆ ಸಜ್ಜಾಗಿದ್ದು, ಭರ್ಜರಿ ತಯಾರಿ ನಡೆಸಲಾಗುತ್ತಿದೆ. ಮಹಾರಾಜ ಕಾಲೇಜು ಮೈದಾನದಲ್ಲಿ ಜರ್ಮನ್ ಟೆಂಟ್ ನಲ್ಲಿ ನಿರ್ಮಾಣವಾದ ಬೃಹತ್ ಗಾತ್ರದ ವೇದಿಕೆ ನಿರ್ಮಾಣ ಮಾಡಲಾಗಿದೆ.

- ಮಹಾರಾಜ ಕಾಲೇಜು ಮೈದಾನದಲ್ಲಿ ಬೃಹತ್ ವೇದಿಕೆ ಸಜ್ಜು
- ಲಕ್ಷ ಜನ ಸೇರುವ ನಿರೀಕ್ಷೆ | ಕೆಪಿಸಿಸಿ, ಎಐಸಿಸಿ ಅಧ್ಯಕ್ಷರು ಭಾಗಿ
- ಮೈಸೂರಿಗೆ 2,569 ಕೋಟಿ ವೆಚ್ಚದ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ
- ವೇದಿಕೆ ಮಧ್ಯದಲ್ಲಿ ಸಿದ್ದರಾಮಯ್ಯ 'ವಾಕಥಾನ್'ಗೆ ಸ್ಪೆಷಲ್ ಟ್ರ್ಯಾಕ್

ಸಮಾವೇಶದಲ್ಲಿ ಮೈಸೂರಿನ ವಿವಿಧ ಕ್ಷೇತ್ರಗಳಿಗೆ 2,569 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಾಗುತ್ತದೆ.

→ 4

ಯಾರೋ ಹೇಳಿದ ಮಾತ್ರಕ್ಕೆ ಎಸ್‌ಐಟಿ ರಚನೆ ಇಲ್ಲ: ಸಿಎಂ

ಮೈಸೂರು: ಧರ್ಮಸ್ಥಳ ಸಂಬಂಧ ಕೇಳಿ ಬರುತ್ತಿರುವ ಆರೋಪಗಳ ಸಂಬಂಧ ಪೊಲೀಸರು ತನಿಖೆ ನಡೆಸುತ್ತಿದ್ದು ಯಾರೋ, ಹೇಳಿದ ಮಾತ್ರಕ್ಕೆ ವಿಶೇಷ ತನಿಖಾ ತಂಡ ರಚಿಸಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು,'' ಎತ್ತು ಮರಿ ಹಾಕಿತ್ತು ಅಂಥ ಕೊಟ್ಟಿಗೆ ರೆಡಿ ಮಾಡಲು ಸಾಧ್ಯನಾ. ಇದು ಅದೇ ರೀತಿ, ಒಬ್ಬ ವ್ಯಕ್ತಿ ಬಂದು ಸ್ವಯಂಪ್ರೇರಿತ ಹೇಳಿಕೆ ಕೊಟ್ಟಿದ್ದಾನೆ. ನಾನು ಧರ್ಮಸ್ಥಳದಲ್ಲಿ ಎಷ್ಟೋ ಶವಗಳನ್ನು ಹೂತು ಹಾಕಿದ್ದೇನೆ ಎಂದು ಹೇಳಿದ್ದಾನೆ. ಪೊಲೀಸರು ಅದರ ಬಗ್ಗೆ ತನಿಖೆ ಮಾಡುತ್ತಿದ್ದಾರೆ. ಪೊಲೀಸರು ಏನು ವರದಿ ಕೊಡುತ್ತಾರೋ ನೋಡೋಣ. ಆ ವರದಿ ಆಧಾರದ ಮೇಲೆ ನಾವು ಮುಂದಿನ ಕ್ರಮ ಕೈಗೊಳ್ಳುತ್ತೇವೆ. ಈಗಲೇ ಯಾರೋ ಹೇಳಿದರು ಎಂದು ಏನೇನೊ ಘೋಷಣೆ ಮಾಡಲು ಸಾಧ್ಯವಿಲ್ಲ. ಧರ್ಮಸ್ಥಳದ ಪ್ರಕರಣದಲ್ಲಿ ನಮ್ಮ ಮೇಲೆ ಯಾರ ಒತ್ತಡವೂ ಇಲ್ಲ. ಒತ್ತಡ ಬಂದರೂ ನಾವು ಅದಕ್ಕೆ ಬಗ್ಗುವುದಿಲ್ಲ'' ಎಂದು ಸ್ಪಷ್ಟಪಡಿಸಿದರು.

ಬಿಜೆಪಿಗೆ ತಿರುಗೇಟು

ರಾಜ್ಯ ಸರ್ಕಾರದ ಸಾಧನಾ ಸಮಾವೇಶ ಕುರಿತು ಬಿಜೆಪಿ ಟೀಕೆ ಮಾಡುತ್ತಿರುವುದಕ್ಕೆ ತಿರುಗೇಟು ನೀಡಿದ ಸಿಎಂ, ಸುಳ್ಳು ಅಪಪ್ರಚಾರ ಮಾಡುತ್ತಿರುವ ಬಿಜೆಪಿಗೆ ಉತ್ತರ ನೀಡಲು ನಾವು ಸಮಾವೇಶ ಮಾಡುತ್ತಿದ್ದೇವೆ. ಅಭಿವೃದ್ಧಿಗೆ ದುಡ್ಡಿಲ್ಲ ಎಂದು ಬಿಜೆಪಿ ಹೇಳುತ್ತಿದೆ. ನಾವು ಸಾವಿರಾರು ಕೋಟಿ ಹಣವನ್ನು ಒಂದೇ ನಗರಕ್ಕೆ ಮಂಜೂರು ಮಾಡಿದ್ದೇವೆ. ಇದನ್ನು ಜನರಿಗೆ ಹೇಳಲು ಸಮಾವೇಶ ಮಾಡುತ್ತಿದ್ದೇವೆ. ಇದು ಸಾಧನಾ ಸಮಾವೇಶವೇ ಹೊರತು ಶಕ್ತಿ ಸಮಾವೇಶ ಅಲ್ಲ ಎಂದರು.

ಸಭೆ ಬಳಿಕ ತೀರ್ಮಾನ: ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಕಾಲ್ತುಳಿತ ಪ್ರಕರಣ ಕುರಿತು ನ್ಯಾಯಮೂರ್ತಿ ಮೈಕೆಲ್ ಡಿ'ಕುನ್ಹಾ ಅವರು ವರದಿ ಕೊಟ್ಟಿದ್ದಾರೆ. ಆ ವರದಿ ಸಂಪುಟದಲ್ಲಿ ಮಂಡನೆ ಯಾಗಿದೆ. ಆದರೆ ಈ ಬಗ್ಗೆ ಚರ್ಚೆ ಆಗಿಲ್ಲ. ಆ ವರದಿಯ ಮುಖ್ಯ ಅಂಶಗಳನ್ನು ಸಚಿವರಿಗೆ ಕೊಟ್ಟಿದ್ದೇವೆ. ಮುಂದಿನ ಸಭೆಯಲ್ಲಿ ಅದರ ಬಗ್ಗೆ ಚರ್ಚೆ ಮಾಡಿ ಮುಂದಿನ ತೀರ್ಮಾನ ಕೈಗೊಳ್ಳುತ್ತೇವೆ ಎಂದರು.

ದೆಹಲಿಯ 50, ಬೆಂಗ್ಳೂರಿನ 40 ಶಾಲೆಗಳಿಗೆ ಬಾಂಬ್ ಬೆದರಿಕೆ ಕರೆ

ದೆಹಲಿ/ಬೆಂಗಳೂರು: ರಾಜಧಾನಿ ದೆಹಲಿಯ 50 ಹಾಗೂ ಬೆಂಗಳೂರಿನ 40 ಖಾಸಗಿ ಶಾಲೆಗಳಿಗೆ ಶುಕ್ರವಾರ ಬಾಂಬ್ ಬೆದರಿಕೆ ಇಮೇಲ್ ಬಂದಿದ್ದು, ಶಾಲಾ ಸಿಬ್ಬಂದಿ ಮತ್ತು ಪೋಷಕರಲ್ಲಿ ಆತಂಕಕ್ಕೆ ಕಾರಣವಾಯಿತು. ತನಿಖೆ ಬಳಿಕ ಇವು ಹುಸಿ ಕರೆ ಎನ್ನುವುದು ಸ್ಪಷ್ಟವಾಗಿದೆ.

ಬೆಂಗಳೂರಿನ ಆರ್.ಆರ್. ನಗರ, ಕೆಂಗೇರಿ ಸೇರಿದಂತೆ 40 ಖಾಸಗಿ ಶಾಲೆಗಳಿಗೆ ಬಾಂಬ್ ಬೆದರಿಕೆ ಸಂದೇಶ ಬಂದಿವೆ. roadkill333 atomicmail.ಜಿಟ ಎಂಬ ಇ-ಮೇಲ್‌ನಿಂದ ಸಂದೇಶ ಬಂದಿದ್ದು, ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಮತ್ತು ಬಾಂಬ್ ನಿಷ್ಕ್ರಿಯದಳ ಸಿಬ್ಬಂದಿ ಮಕ್ಕಳನ್ನು ಹೊರಗೆ ಕಳುಹಿಸಿ ತಪಾಸಣೆ ಮಾಡಿದ್ದಾರೆ. ತಪಾಸಣೆಯ ಬಳಿಕ ಇದೊಂದು ಹುಸಿ ಬಾಂಬ್ ಕರೆ ಎನ್ನುವುದು ದೃಢಪಟ್ಟಿದೆ.



ಬೆದರಿಕೆ ಹಿನ್ನೆಲೆಯಲ್ಲಿ ಚಾಮರಾಜಪೇಟೆ ವಿಸ್ಡಮ್ ಅಂತಾರಾಷ್ಟ್ರೀಯ ಶಾಲೆಯಲ್ಲಿದ್ದ 800 ಮಕ್ಕಳನ್ನು ಬೇರೆ ಕಟ್ಟಡಕ್ಕೆ ಸ್ಥಳಾಂತರ ಮಾಡಲಾಯಿತು.

ದೆಹಲಿಯ 50ಕ್ಕೂ ಹೆಚ್ಚು ಶಾಲೆಗಳಿಗೂ ಇದೇ ಮಾದರಿಯ ಬಾಂಬ್ ಬೆದರಿಕೆ ಸಂದೇಶಗಳು ಬಂದಿವೆ. ಸ್ಥಳಕ್ಕೆ ಅಗ್ನಿಶಾಮಕ ದಳವು ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಬಾಂಬ್ ನಿಷ್ಕ್ರಿಯ ದಳ ಶೋಧ ಕಾರ್ಯ ನಡೆಸಿದ ಬಳಿಕ ಇದು ಹುಸಿ ಕರೆ ಎನ್ನುವುದನ್ನು ದೃಢಪಡಿಸಿದೆ.

ಸುಪ್ರೀಂ ಕೋರ್ಟ್ ಕದ ತಟ್ಟಿದ ನ್ಯಾಯಮೂರ್ತಿ ವರ್ಮಾ

ದೆಹಲಿ: ದೆಹಲಿಯಲ್ಲಿರುವ ತಮ್ಮ ಅಧಿಕೃತ ನಿವಾಸದಲ್ಲಿ ಕೋಟ್ಯಂತರ ಮೊತ್ತದ ನೋಟಿನ ಕಂತೆ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ತಮ್ಮ ವಿರುದ್ಧ ಸುಪ್ರೀಂ ಕೋರ್ಟ್ ಆಂತರಿಕ ಸಮಿತಿ ನೀಡಿದ ವರದಿ ಕಾನೂನುಬಾಹಿರ ಎಂದು ಅವರು ವಾದಿಸಿದ್ದಾರೆ. ನ್ಯಾಯಮೂರ್ತಿ ವರ್ಮಾ ಅವರ ಪದಚ್ಯುತಿಗೆ ಸಂಸತ್ತಿನಲ್ಲಿ ಮಹಾಭಿಯೋಗ ಪ್ರಕ್ರಿಯೆ ನಡೆಸಲು ಸಿದ್ಧತೆ ನಡೆಸುತ್ತಿರುವಾಗಲೇ ವರ್ಮಾ ಸುಪ್ರೀಂಕೋರ್ಟ್ ಬಾಗಿಲು ತಟ್ಟಿದ್ದಾರೆ. ನಿವೃತ್ತ ಸಿಜೆಐ ಸಂಜೀವ್ ಖನ್ನಾ ಅವರು ಹೈಕೋರ್ಟ್ ನ್ಯಾಯಮೂರ್ತಿ ಸ್ಥಾನದಿಂದ ತಮ್ಮನ್ನು ವಜಾ ಗೊಳಿಸುವಂತೆ ಮಾಡಿದ ಶಿಫಾರಸನ್ನು ಅಸಾಂವಿಧಾನಿಕ ಮತ್ತು ಕಾನೂನು ಬಾಹಿರ ಎಂದು ಘೋಷಿಸುವಂತೆ ವರ್ಮಾ ಕೋರಿದ್ದಾರೆ.

ನ್ಯಾಯಾಧೀಶರ (ವಿಚಾರಣಾ) ಕಾಯ್ದೆ, 1968 ರ ಅಡಿಯಲ್ಲಿ ಒದಗಿಸಲಾದ ಸುರಕ್ಷತಾ ಕ್ರಮಗಳನ್ನು ಆಂತರಿಕ ಕಾರ್ಯವಿಧಾನವು ಹೊಂದಿಲ್ಲ. ಯಾವುದೇ ಔಪಚಾರಿಕ ದೂರು ದಾಖಲಾಗದೇ ಇದ್ದಾಗ ತನ್ನ ವಿರುದ್ಧ ಆಂತರಿಕ ವಿಚಾರಣೆ ನಡೆಸಲಾಗಿದೆ. ಇದು ಅನುಚಿತ ಮತ್ತು ಅಮಾನ್ಯವಾಗಿದೆ. ಸುಪ್ರೀಂ ಕೋರ್ಟ್ ಪತ್ರಿಕಾ ಪ್ರಕಟಣೆಯ ಮೂಲಕ ಆರೋಪಗಳನ್ನು ಬಹಿರಂಗ ಪಡಿಸಿದ್ದರಿಂದ ಅವರು ಮಾಧ್ಯಮ ವಿಚಾರಣೆಗೆ ಒಳಪಟ್ಟಿದ್ದಾರೆ ಎಂದು ವರ್ಮಾ ಆರೋಪಿಸಿದ್ದಾರೆ.

ಸಾರಿಗೆ ಬಂದ್‌ಗೆ ಕಡಿವಾಣ

ಬೆಂಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಆಗಸ್ಟ್ 5ರಿಂದ ಅನಿರ್ದಿಷ್ಟಾವಧಿಗೆ ಮುಷ್ಕರ ನಡೆಸಲು ಮುಂದಾಗಿದ್ದ ರಾಜ್ಯ ಸಾರಿಗೆ ನೌಕರರ ವಿರುದ್ಧ ಎಸ್ಮಾ ಜಾರಿಗೆ ಸರಕಾರ ಮುಂದಾಗಿದೆ. ಕೆಎಸ್‌ಆರ್‌ಟಿಸಿ ಸಾರಿಗೆ ನೌಕರರು ಪ್ರತಿಭಟನೆ ನಡೆಸದಂತೆ ಎಸ್ಮಾ ಜಾರಿ ಮಾಡಲಾಗಿದ್ದು, ಮುಂದಿನ ಆರು ತಿಂಗಳು ಇದು ಜಾರಿಯಿರುವ ಹಿನ್ನೆಲೆಯಲ್ಲಿ ಯಾವುದೇ ರೀತಿಯ ಮುಷ್ಕರ ನಡೆಸುವುದನ್ನು ನಿಷೇಧಿಸಲಾಗಿದೆ. ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ರಾಜ್ಯ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆ.5ರಂದು ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿತ್ತು.

ಜು. 30ಕ್ಕೆ ಪ್ರಜ್ವಲ್ ಭವಿಷ್ಯ

ಬೆಂಗಳೂರು: ಮೈಸೂರಿನ ಕೆ.ಆರ್.ನಗರ ಮಹಿಳೆ ಮೇಲೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅತ್ಯಾಚಾರ ಎಸಗಿದ್ದಾರೆನ್ನಲಾದ ಪ್ರಕರಣದ ವಾದ ಮಂಡನೆ ಪೂರ್ಣವಾಗಿದ್ದು, ಜುಲೈ 30ರಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಈ ಪ್ರಕರಣದ ತೀರ್ಪು ಪ್ರಕಟಿಸಲಿದೆ. ವಾದ ಪ್ರತಿವಾದ ಆಲಿಸಿದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಆದೇಶವನ್ನು ಕಾದಿರಿಸಿದ್ದಾರೆ. ಒಂದು ವೇಳೆ ಕೋರ್ಟ್, ಪ್ರಜ್ವಲ್ ರೇವಣ್ಣನನ್ನು ದೋಷಿ ಎಂದು ತೀರ್ಪು ನೀಡಿದರೆ ಕನಿಷ್ಠ 10 ವರ್ಷ, ಗರಿಷ್ಠ ಜೀವಾವಧಿ ಶಿಕ್ಷೆಗೆ ಒಳಗಾಗಲಿದ್ದಾರೆ.

ಶಾಸಕ ಬೈರತಿಗೆ ನೋಟಿಸ್

ಬೆಂಗಳೂರು: ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣದ ಎ5 ಆರೋಪಿಯಾಗಿರುವ ಕೆಆರ್ ಪುರಂ ಶಾಸಕ ಬೈರತಿ ಬಸವರಾಜ್‌ಗೆ ಪೊಲೀಸರ ವಿಚಾರಣೆಗೆ ಹಾಜರಾಗುವಂತೆ ಹೈಕೋರ್ಟ್ ತಾಕೀತು ಮಾಡಿದ ಬೆನ್ನಲ್ಲೇ ಪೊಲೀಸರು ನೋಟಿಸ್ ನೀಡಿದ್ದಾರೆ. ಬಿಎನ್‌ಎಸ್‌ಎಸ್ 35 (3)ಯ ನಿಯಮಗಳನ್ನು ಪಾಲಿಸುವಂತೆ ಹೈಕೋರ್ಟ್ ತನಿಖಾಧಿಕಾರಿಗೆ ಸೂಚನೆ ನೀಡಿದೆ. ಕೊಲೆಯಲ್ಲಿ ಆರೋಪಿ ಪಾತ್ರವಿರುವ ಬಗ್ಗೆ ದೂರುದಾರೆ ಹೇಳಿರುವುದರಿಂದ ಅರೆಸ್ಟ್ ಮಾಡದಂತೆ ಸೂಚಿಸಲು ಸಾಧ್ಯವಿಲ್ಲ ಎಂದು ಸಹ ಹೈಕೋರ್ಟ್ ಹೇಳಿದೆ. ಹೀಗಾಗಿ, ಇವತ್ತಿನ ಹೈಕೋರ್ಟ್ ಆದೇಶ ಬೈರತಿ ಬಸವರಾಜ್‌ಗೆ ಅಡಕತ್ತರಿಯಲ್ಲಿ ಸಿಲುಕುವಂತೆ ಮಾಡಿದೆ.

ಸದ್ಗುರು ಭೇಟಿ ಮಾಡಿ ಸಹಕಾರ ಕೋರಿದ ಶಾಸಕ ಪ್ರದೀಪ್ ಈಶ್ವರ್

ಭೋಗನಂದಿಗೆ ಯುನೆಸ್ಕೋ ಪಟ್ಟಕ್ಕೆ ಯತ್ನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರಿಗ ನೆಚ್ಚಿನ ಪಿಕ್‌ನಿಕ್ ಸ್ಪಾಟ್ ಆಗಿರುವ ನಂದಿಗಿರಿಧಾಮವನ್ನು ಇದೀಗ ಅಂತಾರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗುವ ನಿಟ್ಟಿನಲ್ಲಿ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಮಹತ್ವದ ಹೆಜ್ಜೆಯಿಟ್ಟಿದ್ದಾರೆ.

ನಂದಿಬೆಟ್ಟವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿ ತಾಣವಾಗಿ ಗುರುತಿಸುವಂತಾಗಬೇಕು ಎನ್ನುವ ಉದ್ದೇಶದಿಂದ ಪ್ರದೀಪ್ ಈಶ್ವರ್ ಇದೀಗ ಭೋಗನಂದೀಶ್ವರ ದೇವಾಲಯಕ್ಕೆ ಯುನೆಸ್ಕೋ ಮಾನ್ಯತೆ ಸಿಗುವಂತೆ ಮಾಡಲು ಪ್ರಯತ್ನಿಸಿದ್ದು, ಇದಕ್ಕೆ ಇದೀಗ ಈಶಾ ಫೌಂಡೇಶನ್‌ನ ಸದ್ಗುರು ಜಗ್ಗಿ ವಾಸುದೇವ ಅವರ ಬೆಂಬಲವನ್ನು ಯಾಚಿಸಿದ್ದಾರೆ.

ಈ ಸಂಬಂಧ ಚರ್ಚಿಸಲು ಚಿಕ್ಕಬಳ್ಳಾಪುರದಲ್ಲಿ ಸದ್ಗುರು ಜಗ್ಗಿ ವಾಸುದೇವ ಅವರನ್ನು ಭೇಟಿಯಾಗಿರುವ ಪ್ರದೀಪ್ ಈಶ್ವರ್, ನಂದಿಬೆಟ್ಟದಲ್ಲಿ ಇತಿಹಾಸ, ಮಹತ್ವ ಹಾಗೂ ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಇದರೊಂದಿಗೆ ಯುನೆಸ್ಕೋ ವರ್ಲ್ಡ್ ಹೆರಿಟೇಜ್ ಪಟ್ಟಿಗೆ ನಂದಿಬೆಟ್ಟವನ್ನು ಸೇರಿಸುವುದರಿಂದ, ಸುತ್ತಮುತ್ತಲಿನ ಪ್ರದೇಶ ಹಾಗೂ ಪ್ರವಾಸೋದ್ಯಮ ಸ್ಥಳಗಳ ಅಭಿವೃದ್ಧಿಗೆ ಯಾವೆಲ್ಲ ರೀತಿಯಲ್ಲಿ ಸಹಕಾರಿಯಾಗಲಿದೆ ಎಂದು ವಿವರಿಸಿದ್ದಾರೆ. ಈಗಾಗಲೇ ಯುನೆಸ್ಕೋಗೆ ಈ ಸಂಬಂಧ ಅಗತ್ಯ ಪತ್ರವ್ಯವಹಾರವನ್ನೂ ಆರಂಭಿಸಿರುವ ಪ್ರದೀಪ್ ಈಶ್ವರ್, ಸದ್ಗುರು ಈ ವಿಷಯದಲ್ಲಿ ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ಸದ್ಗುರು ಜಗ್ಗಿ ವಾಸುದೇವ ಅವರನ್ನು ಶಾಸಕ ಪ್ರದೀಪ್ ಈಶ್ವರ್ ಭೇಟಿಯಾಗಿ ನಂದಿ ದೇವಾಲಯವನ್ನು ಯುನೆಸ್ಕೋ ವಿಶ್ವ ಪರಂಪರೆ ಪಟ್ಟಿಗೆ ಸೇರಿಸುವ ಬಗ್ಗೆ ಚರ್ಚೆ ನಡೆಸಿದರು.

ಅಭಿವೃದ್ಧಿಗೆ ಕ್ರಮ: ರಾಜ್ಯ ಸರಕಾರ ನಂದಿಬೆಟ್ಟದ ಸುತ್ತಮುತ್ತಲಿನ ಪ್ರದೇಶವನ್ನು ಅಭಿವೃದ್ಧಿಪಡಿಸಲು ಈಗಾಗಲೇ ಹಲವು ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಅದರಲ್ಲಿ ಪ್ರಮುಖವಾಗಿ, ರೋಪ್ ಯೋಜನೆಗೆ ಈಗಾಗಲೇ ಸಕಲ ಸಿದ್ಧತೆ ನಡೆಸಿಕೊಂಡಿದ್ದು, ಶೀಘ್ರವೇ ಕಾಮಗಾರಿ ಪ್ರಕ್ರಿಯೆ ಆರಂಭಿಸುವ ಸಾಧ್ಯತೆಯಿದೆ. ಇದೇ ರೀತಿ ಪ್ರವಾಸಿಗರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮೂಲಸೌಕರ್ಯ ಅಭಿವೃದ್ಧಿ, ರಸ್ತೆ ಅಭಿವೃದ್ಧಿ ಸೇರಿದಂತೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ ವಸತಿ ಗೃಹಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದೆ.

ನಂದಿ ದೇವಾಲಯವನ್ನು ಯುನೆಸ್ಕೋ ವಿಶ್ವ ಪರಂಪರೆ ಪಟ್ಟಿಗೆ ಸೇರಿಸಲು ಈಗಾಗಲೇ ಸರಕಾರದ ಮನವೊಲಿಸಲಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದ ಪ್ರಮುಖ ಪ್ರವಾಸಿ ತಾಣಕ್ಕೆ ಪ್ರಾಮುಖ್ಯತೆ ಸಿಗುವಂತೆ ಮಾಡಲು ಈಗಾಗಲೇ ಹಲವು ಗಣ್ಯರನ್ನು ಭೇಟಿಯಾಗಿ ಮನವಿ ಮಾಡಲಾಗಿದೆ ಎಂದು ಶಾಸಕ ಪ್ರದೀಪ್ ಈಶ್ವರ್ ತಿಳಿಸಿದ್ದಾರೆ.

ನಂದಿಬೆಟ್ಟದ ವಿಶೇಷತೆ

- ಸಮುದ್ರಮಟ್ಟದಿಂದ 4851 ಅಡಿ (1478 ಮೀ) ಎತ್ತರದಲ್ಲಿದೆ.
- ಭಾರತದ ಎರಡನೆಯ ಅತ್ಯಂತ ದೊಡ್ಡ ಬೆಟ್ಟ.
- ರಾಜಧಾನಿ ಬೆಂಗಳೂರಿನಿಂದ 45 ಕಿಮೀ ದೂರದಲ್ಲಿದೆ
- ರಾಜೀವ್ ಪ್ರಧಾನಿಯಾಗಿದ್ದಾಗ ಸಾರ್ಕ್ ಸಮ್ಮೇಳನಕ್ಕೆ ಆತಿಥ್ಯ

ಉದ್ಯಮಿಗಳಿಗೆ ಕೋಟಿ, ಕೋಟಿ ವಂಚನೆ, ಶೋಕಿವಾಲ ಸೆರೆ
ಐಷಾರಾಮಿ ಮನೆಯಲ್ಲಿ ಬಾರ್, ವಿದೇಶಿ ಹುಡುಗಿಯರ ಪಾರ್ಟಿ

ಬಹುಕೋಟಿ ವಂಚಕನ ಮಾಯಾಲೋಕ

ಮಂಗಳೂರು: ಉದ್ಯಮಿಗಳಿಗೆ ನೂರಾರು ಕೋಟಿ ಸಾಲ ಕೊಡಿಸುವ ನೆಪದಲ್ಲಿ 200 ಕೋಟಿ ರು.ಗಳಿಗೂ ಹೆಚ್ಚು ವಂಚನೆ ಎಸಗಿದ್ದಾನೆ ಎನ್ನಲಾದ ಅಂತಾರಾಜ್ಯ ವಂಚಕನನ್ನು ಇಲ್ಲಿನ ಪೊಲೀಸರು ಬಂಧಿಸಿದ್ದಾರೆ.

ಕಂಕನಾಡಿ ಬಜಾಲ್ ಬೊಲ್ಲಗಡ್ಡ ನಿವಾಸಿ ರೋಶನ್ ಸಲ್ಡಾನ (43) ಅಲಿಯಾಸ್ ರೋಹನ್ ಸಲ್ಡಾನ ಬಂಧಿತ. ಮಂಗಳೂರು ಹೊರವಲಯದ ಜಪ್ಪಿನಮೊಗರು ಬಳಿಯ ಈತನ ಐಷಾರಾಮಿ ಬಂಗಲೆಯ ಮೇಲೆ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ನೇತೃತ್ವದಲ್ಲಿ ಶುಕ್ರವಾರ ದಾಳಿ ನಡೆಸಿ ದ್ದಾರೆ. ದಾಳಿ ವೇಳೆ ವಂಚಕ ರೋಶನ್ ಕಾರಸ್ಥಾನ ಮತ್ತು ಈ ಐಷಾರಾಮಿ ಬಂಗಲೆಯ ರಹಸ್ಯಗಳು ಹೊರಬಿದ್ದಿವೆ.

ರೋಶನ್ ಈ ಬಂಗಲೆಗೆ ಅನೇಕ ವಿದೇಶಿ ಯುವತಿಯರನ್ನು ಕರೆಸಿಕೊಂಡು ಪಾರ್ಟಿ ಮಾಡುತ್ತಿದ್ದ ಎಂಬುದು ಗೊತ್ತಾಗಿದೆ. ಗೆಸ್ಟ್ ರೂಮ್‌ನಲ್ಲಿ, ಫ್ರಿಡ್ಜ್‌ನಲ್ಲಿ ವಿದೇಶಿ ಮದ್ಯದ ಬಾಟಲ್‌ಗಳ ರಾಶಿಯೇ ಪತ್ತೆಯಾಗಿವೆ. ಅಲ್ಲದೆ, ಅಡಗಿಕೊಳ್ಳಲು ರಹಸ್ಯ ಕೋಣೆಯಿರುವುದೂ ಪತ್ತೆಯಾಗಿದೆ. ಆಂಧ್ರ ಪ್ರದೇಶ ಮೂಲದ ಸಿಲ್ಕ್ ಸ್ಯಾರಿ ತಯಾರಿಕ ಕಂಪನಿ ಮಾಲೀಕ, 2023ರಲ್ಲಿ ಸಾಲ ಪಡೆಯುವ ಪ್ರಯತ್ನದಲ್ಲಿ ಬೆಂಗಳೂರಿನಲ್ಲಿ ಫೈನಾನ್ಸ್ ಕನ್ಸಲ್ಟೆನ್ಸಿ ನಡೆಸಿಕೊಂಡಿರುವ ವಿಮಲೇಶ್ ಎಂಬಾತನ ಕೈಯಲ್ಲಿ ಮೋಸ ಹೋಗಿದ್ದ. ಈ ಸಂಬಂಧ ಕಳೆದ ವರ್ಷ ಜುಲೈ 16ರಂದು ಚಿತ್ರದುರ್ಗ ನಗರ ಠಾಣೆಗೆ ದೂರು ನೀಡಲಾಗಿತ್ತು. ತನಿಖೆಯ ವೇಳೆ ಸಾಲ ವ್ಯವಹಾರದ ರೂವಾರಿ ರೋಷನ್ ವಂಚನೆ ಬಯಲಾಗಿದೆ.

ರೋಹನ್, ದೇಶದ ದೊಡ್ಡ ದೊಡ್ಡ ಉದ್ಯಮಿಗಳನ್ನು ಸಂಪರ್ಕಿಸಿ ದೊಡ್ಡ ಮೊತ್ತದ ಸಾಲದ ಆಮಿಷವೊಡ್ಡುತ್ತಿದ್ದ. ಐಷಾರಾಮಿ ವ್ಯಕ್ತಿಗಳು, ಉದ್ಯಮಿಗಳನ್ನು ಟಾರ್ಗೆಟ್ ಮಾಡುತ್ತಿದ್ದ ಈತ ಭೂ ವ್ಯವಹಾರ, ಸಾಲ ನೀಡುವ ನೆಪದಲ್ಲಿ ನಂಬಿಸಿ ಮಂಗಳೂರಿನ ಜಪ್ಪಿನಮೊಗರುವಿನ ಐಷಾರಾಮಿ ಬಂಗಲೆಗೆ ಕರೆದು ವ್ಯವಹಾರ ಕುದುರಿಸುತ್ತಿದ್ದ. ಮೋಸಕ್ಕೆ ಒಳಗಾದವರು ಹಣ ಕೇಳಿಕೊಂಡು ಮನೆಗೆ ಬಂದಾಗ ಈ ಖತರ್ನಾಕ್ ವಂಚಕ ಬೆಡ್ ರೂಮ್ ಕೆಳಗೆ ಇದ್ದ ಗುಪ್ತ ದ್ವಾರದ ಮೂಲಕ ತನ್ನ ಅಡಗುತಾಣ ಸೇರಿಕೊಳ್ಳುತ್ತಿದ್ದ. ಹುಡುಕಿಕೊಂಡು ಬಂದವರು ಏನೂ ಸಿಗದೆ ಕೊನೆಗೆ ಬರಿಗೈಯಲ್ಲಿ ವಾಪಸ್ ಆಗುತ್ತಿದ್ದರು.

ಚಿನ್ನ- ವಜ್ರಾಭರಣ: ಮನೆಯಿಂದ ದಾಖಲಾತಿಗಳನ್ನು, ಖಾಲಿ ಚೆಕ್ ಗಳನ್ನು ಹಾಗೂ 667 ಗ್ರಾಂ ಚಿನ್ನದ ಆಭರಣಗಳು ಮತ್ತು ಅಂದಾಜು 2.75 ಕೋಟಿ ಮೌಲ್ಯದ ವಜ್ರದ ಉಂಗುರವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ರೋಷನ್ ವಿರುದ್ಧ ಚಿತ್ರದುರ್ಗ, ಮುಂಬೈ ಸೇರಿದಂತೆ ವಿವಿಧೆಡೆ ಈತನ ವಿರುದ್ಧ ವಂಚನೆ ಪ್ರಕರಣಗಳು ದಾಖಲಾಗಿವೆ.

ವಿದೇಶಿ ಮದ್ಯದ ಘಮಲು

ಅಬಕಾರಿ ಕಾರ್ಯಾಚರಣೆ: ಪೊಲೀಸರು ರೋಷನ್ ಸಲ್ಡಾನನ ಮನೆಗೆ ದಾಳಿ ನಡೆಸಿದಾಗ ಮನೆಯ ಅಡಗುತಾಣದಲ್ಲಿ ಆತ ಪತ್ತೆಯಾಗಿದ್ದಾನೆ. ತಪಾಸಣೆ ನಡೆಸಿದಾಗ ಮನೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 6,72,947 ರು. ಮೌಲ್ಯದ ದೇಶಿ ಮತ್ತು ವಿದೇಶಿ ಮದ್ಯ ದೊರೆತಿದೆ. ಮದ್ಯವನ್ನು ಮುಂದಿನ ಕ್ರಮದ ಬಗ್ಗೆ ಸ್ವಾಧೀನಪಡಿಸಿಕೊಂಡು ಅಬಕಾರಿ ಕಾಯ್ದೆಯಂತೆ ಪ್ರಕರಣವನ್ನು ದಾಖಲಿಸಲಾಗಿದೆ.

ಸೊಂಪಾದ ಪುಟಗಳು

ಮತಬ್ಯಾಂಕ್ ರಾಜಕಾರಣಕ್ಕೆ ಆರೆಸ್ಸೆಸ್ ಟೀಕೆ
ಶಿಶಿರಕಾಲ
ಶಿಶಿರ್ ಹೆಗಡೆ 6

ಕೃಷ್ಣನ ಬೆಣ್ಣೆ ಕಳ್ಳತನದ ಹಿಂದಿರುವ ಗುಟ್ಟು, ಆಯುರ್ವೇದದಲ್ಲಿ ರಟ್ಟು
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ 7

ದಾರಿದೀಪೋಕ್ತಿ

ಯಾವ ಕೆಲಸವನ್ನೇ ಆಗಲಿ, ನಿಮಗಿಂತ ಯಾರು ಚೆನ್ನಾಗಿ ಮಾಡುತ್ತಿದ್ದಾರೆ ಅಥವಾ ಕೆಟ್ಟದಾಗಿ ಮಾಡುತ್ತಿದ್ದಾರೆ ಎಂದು ಎಂದಿಗೂ ಯೋಚಿಸಬೇಡಿ. ನೀವು ಯೋಚಿಸಬೇಕಾಗಿದ್ದೇನೆಂದರೆ, ನೀವು ಉತ್ಕೃಷ್ಟವಾದುದನ್ನು ಮಾಡುತ್ತಿದ್ದೀರಾ ಎಂದು?

ವಕ್ರತುಂಡೋಕ್ತಿ

ಸಂತಸ, ಸಮಾಧಾನವೇ ಬದುಕಿನ ವಿಂಡೋ ಸೀಟ್. ಆದರೂ ಎಲ್ಲರೂ ಐಲ್ ಸೀಟಿನಲ್ಲಿ ಕುಳಿತುಕೊಳ್ಳಲು ಬಯಸುತ್ತಾರೆ.

ಅಂದು ಕ್ಲರ್ಕ್, ಇಂದು ಅದೇ ಬ್ಯಾಂಕ್‌ಗೆ ಎಂಡಿ

ಮಂಗಳೂರು: ಕರ್ನಾಟಕ ಬ್ಯಾಂಕ್‌ಗೆ ಗುಮಾಸ್ತ ಹುದ್ದೆಗೆ ಸೇರಿ ಅದೇ ಬ್ಯಾಂಕ್‌ನಲ್ಲಿ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹುದ್ದೆ ಅಲಂಕರಿಸಿ ರಾಘವೇಂದ್ರ ಎಸ್.ಭಟ್ ಸಾಧನೆ ಮಾಡಿದ್ದಾರೆ. ಬ್ಯಾಂಕಿನಲ್ಲಿ ದೀರ್ಘ ಕಾಲ ಸೇವೆ ಸಲ್ಲಿಸಿ ನಿವೃತ್ತಿಯಾದ ಸಿಬ್ಬಂದಿ ಕೈಗೆ ಚುಕ್ಕಾಣಿ ನೀಡುವ ಮೂಲಕ ಮಂಗಳೂರು ಮೂಲದ ಬ್ಯಾಂಕ್ ಹೊಸ ಇತಿಹಾಸ ಬರೆದಿದೆ. ಉಡುಪಿಯ ಹಾವಂಜೆ ಮೂಲದ ರಾಘವೇಂದ್ರ ಭಟ್ ಶ್ರೀನಿವಾಸ ಭಟ್ 1981ರಲ್ಲಿ ಕರ್ನಾಟಕ ಬ್ಯಾಂಕ್‌ಗೆ ಗುಮಾಸ್ತನಾಗಿ ಉದ್ಯೋಗ ಗಿಟ್ಟಿಸಿಕೊಂಡಿದ್ದರು. ನಿವೃತ್ತಿಯಾಗಿ ಆರು ವರ್ಷದ ಬಳಿಕ ಅವರಿಗೆ ಬ್ಯಾಂಕಿನ ಸಾರಥ್ಯ ವಹಿಸಲಾಗಿದೆ.

ಪೂರ್ಣ ವಿವರ ಪುಟ-4

ವಿದ್ಯುತ್ ತಗುಲಿ ನಾಲ್ವರ ಸಾವು

ಯಾದಗಿರಿ: ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಏಕಾಏಕಿ ವಿದ್ಯುತ್ ಪ್ರವಹಿಸಿ ಮೂವರು ಸಾವನ್ನಪ್ಪಿರುವ ದಾರುಣ ಘಟನೆ ಜಿಲ್ಲೆಯ ಹುಣಸಗಿ ತಾಲೂಕಿನ ಅಗತೀರ್ಥ ಸೀಮಾಂತರ ಪ್ರದೇಶದಲ್ಲಿ ಶುಕ್ರವಾರ ಜರುಗಿದೆ. ವಿದ್ಯುತ್ ಶಾಕ್‌ನಿಂದ ಒದ್ದಾಡುತ್ತಿದ್ದವನನ್ನು ನೋಡಿ ಉಳಿದಿಬ್ಬರು ರಕ್ಷಣೆ ಧಾವಿಸಿ ಸ್ಥಳದಲ್ಲಿಯೆ ಅಸುನೀಗಿ ದ್ದಾರೆ.

ಲೈನ್‌ಮ್ಯಾನ್ ಸಾವು: ತಿಂಗಳ ಹಿಂದಷ್ಟೇ ಮದುವೆಯಾಗಿದ್ದ ಲೈನ್‌ಮ್ಯಾನ್ ವಿದ್ಯುತ್ ಶಾಕ್‌ನಿಂದ ಸಾವನ್ನಪ್ಪಿದ ಘಟನೆ ಚಿಕ್ಕಮಗಳೂರು ಎನ್.ಆರ್.ಪುರ ತಾಲೂಕಿನ ಹೊನ್ನೆಕೊಪ್ಪ ಗ್ರಾಮದಲ್ಲಿ ನಡೆದಿದೆ. ಬಾಗಲಕೋಟೆಯ ಪ್ರವೀಣ್ (26) ಚಿಕ್ಕಮಗಳೂರು ಜಿಲ್ಲೆ ಯಲ್ಲಿ ಮೆಸ್ಕಾಂ ಕಚೇರಿಯಲ್ಲಿ ಲೈನ್‌ಮ್ಯಾನ್ ಆಗಿದ್ದರು.

ಫನ್‌ತರಂಗ

- ರಘುಪತಿ ಶೃಂಗೇರಿ -

ಸಮೋಸಾ, ಜಿಲೇಬಿ ಬಗ್ಗೆ ಆರೋಗ್ಯ ಇಲಾಖೆ ಎಚ್ಚರಿಕೆ ನೀಡಿದೆ ಎನ್ನಲಾದ ಸುದ್ದಿ ಸುಳ್ಳು - ಸರ್ಕಾರ

ಅಂದ್ರೆ ಸಮೋಸಾ, ಜಿಲೇಬಿ ಬಗ್ಗೆ ಇರೋ ಸುದ್ದಿಯಲ್ಲಿ ಏನೋ ಮೋಸ, ಲಾಬಿ ಇರೋ ಹಾಗೆ ಕಾಣಿಸ್ತಿದೆ..ಅಲ್ವೇನ್ರೀ...?

ಸಮಾಚಾರ ಸಣ್ಣದಲ್ಲ

20ಕ್ಕೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಶಿರಸಿ: ಇಲ್ಲಿನ ಮರಾಠಿಕೊಪ್ಪದ ಸುಭಾಷನಗರದಲ್ಲಿರುವ ಅಜಿತ ಮನೋಚೇತನಾ ಕೇಂದ್ರದಲ್ಲಿ ಪ್ರತಿ ತಿಂಗಳು ನಡೆಯುವ ಮಾನಸಿಕ ಆರೋಗ್ಯದ ಉಚಿತ ತಪಾಸಣಾ ಶಿಬಿರವನ್ನು ಜು.20ರಂದು ಏರ್ಪಡಿಸಲಾಗಿದೆ. ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ನಡೆಯುವ ಆರೋಗ್ಯ ತಪಾಸಣಾ ಶಿಬಿರದಲ್ಲಿ ಹುಬ್ಬಳ್ಳಿಯ ಖ್ಯಾತ ಮನೋವೈದ್ಯ ಡಾ. ಎಸ್.ಸಿ.ಕುಲಕರ್ಣಿ ಅವರು ಪಾಲ್ಗೊಂಡು ಸಲಹೆ, ಚಿಕಿತ್ಸೆ ನೀಡಲಿದ್ದಾರೆ. ಕಾರಣ ಸಾರ್ವಜನಿಕರು ಈ ಶಿಬಿರದ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಸಂಸ್ಥೆಯ ಅಧ್ಯಕ್ಷ ಸುಧೀರ ಭಟ್ ಹಾಗೂ ಕಾರ್ಯದರ್ಶಿ ಅನಂತ ಹೆಗಡೆ ಆಶೀಸರ ಇವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ವಿದ್ಯುತ್ ಅದಾಲತ್, ಗ್ರಾಹಕರ ಸಂವಾದ ಸಭೆ

ಕಾರವಾರ: ಹೊನ್ನಾವರ ಉಪ-ವಿಭಾಗ ವ್ಯಾಪ್ತಿಯಲ್ಲಿ ಜು.19 ರಂದು ಬೆಳಗ್ಗೆ 11 ಗಂಟೆಗೆ ವಿದ್ಯುತ್ ಅದಾಲತ್ ಸಭೆಯನ್ನು ಹಾಗೂ ಮಧ್ಯಾಹ್ನ 3.30 ಗಂಟೆಗೆ ಗ್ರಾಹಕರ ಸಂವಾದ ಸಭೆಯನ್ನು ಹೊನ್ನಾವರ ಉಪ- ವಿಭಾಗ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಹೊನ್ನಾವರ ಉಪ-ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ)ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

20ರಂದು ಮಹಾದೇವರ ಮಾಸ್ತರಗೆ ಅಭಿನಂದನೆ

ಅಂಕೋಲಾ: ಸೂರ್ವೆಯ ನಿವೃತ್ತ ಶಿಕ್ಷಕ ಮಹಾದೇವ ಹಮ್ಮಣ್ಣ ನಾಯಕ ಅವರಿಗೆ 90 ನೇ ವರ್ಷದ ನಿಮಿತ್ತ ಅವರ ಕುಟುಂಬ ಮತ್ತು ಅಭಿಮಾನಿ ಬಳಗದ



ವತಿಯಿಂದ ಪಟ್ಟಣದ ಪಿ.ಎಂ.ಪ.ಪೂ ಕಾಲೇಜಿನ ಗಂಗಾದೇವಿ ತೊರ್ಕೆ ಸಭಾಂಗಣದಲ್ಲಿ ಜು.20 ರಂದು ಬೆಳಿಗ್ಗೆ 10.30 ಕ್ಕೆ 90 ನೇ ಜನ್ಮದಿನದ ನಿಮಿತ್ತ ಅಭಿನಂದನಾ ಕಾರ್ಯಕ್ರಮ ಆಯೋಜಿಸಿದ್ದಾರೆ. ಅಂದು ಪತ್ರಕರ್ತ ಕೃಷ್ಣಮೂರ್ತಿ ಹೆಬ್ಬಾರ ಅಭಿನಂದನಾ ಮಾತುಗಳನ್ನಾಡಲಿದ್ದಾರೆ. ಹಿರಿಯ ಸಾಹಿತಿ ಶಾಂತಾರಾಮ ನಾಯಕ ಹಿಚ್ಕಡ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಈ ಹಿಂದೆ ಮಹಾದೇವ ಮಾಸ್ತರ ಅವರ ಕುರಿತು ಅಭಿನಂದನಾ ಗ್ರಂಥ ಕೂಡ ಬಿಡುಗಡೆಗೊಳಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಹಾದೇವ ಮಾಸ್ತರ ಶಿಷ್ಯರು ಹಾಗೂ ಅಭಿಮಾನಿಗಳು ಆಗಮಿಸುವಂತೆ ಸಂಘಟಕರು ವಿನಂತಿಸಿದ್ದಾರೆ.

ಪತ್ರಕರ್ತ ಗುರುಪ್ರಸಾದ ಹೆಗಡೆ ನಿಧನ

ಶಿರಸಿ: ಶಿರಸಿಯಲ್ಲಿಯೂ ಕರ್ತವ್ಯ ನಿರ್ವಹಿಸಿ, ಕಾರವಾರ ದಲ್ಲಿ ಕನ್ನಡಪ್ರಭ ದಿನಪತ್ರಿಕೆ ಯಲ್ಲಿ ಹಲವು ವರ್ಷಗಳಿಂದ ವರದಿಗಾರರಾಗಿ ಕೆಲಸ ಮಾಡುತ್ತಿದ್ದ

ಗುರುಪ್ರಸಾದ ಹೆಗಡೆ (34) ಶುಕ್ರವಾರ ಅಕಾಲಿಕ ಅನಾರೋಗ್ಯದಿಂದ ನಿಧನರಾದರು. ಶಿರಸಿ ತಾಲೂಕಿನ ತೋಟದಳ್ಳಿ ಗ್ರಾಮದ ನಿವಾಸಿಯಾಗಿದ್ದ ಗುರುಪ್ರಸಾದ ಹೆಗಡೆ ನಗು ಮೊಗದ ಸ್ನೇಹಿತನಾಗಿ ಎಲ್ಲಾ ಪತ್ರಕರ್ತರ ಪ್ರೀತಿಗೆ ಪಾತ್ರನಾಗಿದ್ದನು. ಉತ್ತಮ ಸುದ್ದಿಗಾರನಾಗಿದ್ದ ಗುರುಪ್ರಸಾದ ಅನಾರೋಗ್ಯದಿಂದಾಗಿ ಬನವಾಸಿಯಲ್ಲಿ ಸಂಬಂಧಿಗಳ ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದನು. ಆದರೆ ಚಿಕಿತ್ಸೆ ಫಲಾಕಾರಿಯಾಗದೇ ನಿಧನ ಹೊಂದಿದರು. ಗುರುಪ್ರಸಾದ ನಿಧನಕ್ಕೆ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಭೀಮಣ್ಣ ನಾಯ್ಕ ಸೇರಿದಂತೆ ಉತ್ತರ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಶಿರಸಿ ತಾಲೂಕಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಸಂತಾಪ ಸೂಚಿಸಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಜೋಯಿಡಾ ತಾಲೂಕು ಪತ್ರಕರ್ತರ ಸಂಘದಿಂದ ಪತ್ರಿಕಾ ದಿನಾಚರಣೆ ಮಂಜುನಾಥ ಮೊಕಾಶಿ ಸಲಹೆ

ಮಾಧ್ಯಮ ಸಮಾಜಕ್ಕೆ ಉತ್ತಮ ಸಂದೇಶ ನೀಡಲಿ

ಜೋಯಿಡಾ: ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘವು ಹಮ್ಮಿಕೊಂಡ ಪತ್ರಿಕಾ ದಿನಾಚರಣೆ, ಮತ್ತು ಗೌರವ ಸನ್ಮಾನವು ಶ್ರೀ ಕ್ಷೇತ್ರ ಉಳವಿಯಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಉಳವಿ ಗ್ರಾಮ ಪಂಚಾಯತ ಅಧ್ಯಕ್ಷ ಮಂಜುನಾಥ ಮೊಕಾಶಿ ಯವರು ಮಾತನಾಡಿದರು. ಈ ವೇಳೆ ಮಾತನಾಡಿ ಅವರು, ತಾಲೂಕಿನ ಅಭಿವೃದ್ಧಿಗೆ ಕೆಲಸ ಕೊಡುವವರು ಮಾರ್ಗದರ್ಶಕರು ನಮಗೆ ಶಾಸಕರಾದ ಆರ್. ವಿ. ದೇಶಪಾಂಡೆ ಅವರು ಹಾಗೇ ಪತ್ರಕರ್ತರು ಕೊಡುತ್ತಿರುವ ಸೂಕ್ತ ಸಲಹೆಗಳನ್ನು ಕೂಡ ನಾವು ಸ್ವೀಕರಿಸಿ ಕೊಳ್ಳುವದು ನಮ್ಮ ಲ್ಲಿದೆ, ಅವರು ಉಳವಿಯಲ್ಲಿ ಕಾರ್ಯಕ್ರಮ ನಡೆಸುತ್ತಿರುವುದು ನಮಗೆ ಸಂತಸ ತಂದಿದೆ ಎಂದರು.

ತಹಸೀಲ್ದಾರ ಮಂಜುನಾಥ ಮುನ್ನೊಳ್ಳಿ ಮಾತನಾಡಿ, ಸಮಾಜದ ಎರಡೂ ಮಗ್ಗುಲ ಗಳಲ್ಲಿನ ಸಮಸ್ಯೆಗಳ ಬಗ್ಗೆ ಇಲ್ಲಿನ ಪತ್ರಕರ್ತರು ಬೆಳಕು ಚೆಲ್ಲುತ್ತಿದ್ದಾರೆ. ಕಳೆದ ವರ್ಷ ಕೂಡ ನನ್ನನ್ನು ಕಾರ್ಯಕ್ರಮಕ್ಕೆ ಆಮಂತ್ರಿಸಿದ್ದರು. ಅನಿವಾರ್ಯದಿಂದ ಹೋಗಿರಲಿಲ್ಲ, ಈ ಸಲ ನನ್ನನ್ನು ಆಮಂತ್ರಿಸಲು ಬಂದಾಗ, ನಿಮ್ಮ ಇಲಾಖೆಯ ಎಲ್ಲ ಕಾರ್ಯಕ್ರಮ ಕ್ಕೆ ನಾವು ಇರುತ್ತೇವೆ, ನೀವು ತಪ್ಪದೇ ಬರಬೇಕು ಎಂದ ಕಾರಣ ಬಂದಿದ್ದೇನೆ, ಸಂತೋಷವಾಗಿದೆ ಎಂದು ಇಲಾಖೆಯ ಕೆಲವು ಮಾಹಿತಿಗಳನ್ನು ಸಾರ್ವಜನಿಕರಿಗೆ

ತಿಳಿಸಿದರು.

ನಂದಿಗದ್ದೆ ಗ್ರಾಮ ಪಂಚಾಯತ ಅಧ್ಯಕ್ಷ ಅರುಣ ದೇಸಾಯಿ ಮಾತನಾಡಿ, ಸುದ್ದಿ ಮಾಡುವವರ ಕಾರ್ಯಕ್ರಮದಲ್ಲಿ ನಾವಿದ್ದೇವೆ, ಮಾಧ್ಯಮ ಈಗ ಸಾಕಷ್ಟು ಬೆಳೆದಿದೆ ಉತ್ತಮ ವರದಿಗಾರನಾಗಲು, ಸಂಯಮ ಮತ್ತು ನಿಷ್ಪಕ್ಷ ವರದಿ ಗಳಿಂದ ಮಾತ್ರ ಸಾಧ್ಯ. ಸಮಾಜಕ್ಕೆ ಈ ನಾಲ್ಕನೇ ಅಂಗ ದಿಂದ ಉತ್ತಮ ಸಂದೇಶ ಸಿಗಬೇಕು ಎಂದರು.

ರಾಜ್ಯ ಸಮಿತಿ ಸದಸ್ಯ ಬಸವರಾಜ್ ಪಾಟೀಲ ಮಾತನಾಡಿ ಜೋಯಿಡಾ ತಾಲೂಕಿನಲ್ಲಿ ಓಡಾಡಿ ವರದಿ ಮಾಡುವದು ತುಂಬಾ ಕಷ್ಟದ ಕೆಲಸ ಆದರೂ ಇಲ್ಲಿನ ಸಂಘಟನೆ ಉತ್ತಮ ಕೆಲಸ ಮಾಡುತ್ತಿದೆ ಅದೇ ಕಾರಣಕ್ಕೆ ನಾನು ಬಂದಿದ್ದೇನೆ ಎಂದು ಪತ್ರಿಕೆ ನಡೆದು ಬಂದ ದಾರಿಯಬಗ್ಗೆ ತಿಳಿಸಿದರು. ಇದೇ ಸಂದರ್ಭದಲ್ಲಿ ನಾಟಿ ವೈದ್ಯೆ ಕಾಶಿಬಾಯಿ ಕಾಡಪೋಡ್ಕರ, ಮತ್ತು ಸಾಮಾಜಿಕ ಹೋರಾಟಗಾರ ಶಿವಪುರದ ಗೋಪಾಲ ಭಟ್‌ರ ಸಾಧನೆಗೆ ಗೌರವಿಸಲಾಯಿತು. ಪತ್ರ ಕರ್ತರ, ಸಾಧನೆಗೆ ವಿಠ್ಠಲ ದಾಸ್ ಕಾಮತ ಮತ್ತು ಬಸವರಾಜ್ ಪಾಟೀಲರನ್ನು ಗೌರವಿಸಲಾಯಿತು ಹಾಗೇ ತಾಲೂಕಿನ ರಾಜಕಾರಣ ದಲ್ಲಿ ಜೋಡೆತ್ತುಗಳು ಎಂದು ಕರೆಸಿಕೊಳ್ಳುತ್ತಿರುವ ನಂದಿಗದ್ದೆ ಗ್ರಾಮ ಪಂಚಾಯತ ಅಧ್ಯಕ್ಷ ಅರುಣ ದೇಸಾಯಿ ಮತ್ತು ಉಳವಿ ಗ್ರಾಮ ಪಂಚಾಯತ ಅಧ್ಯಕ್ಷ ಮಂಜುನಾಥ ಮೊಕಾಶಿ ಯವರ ಪರವಾಗಿ ಸ್ಥಳೀಯರಾದ ಮಂಜುನಾಥ ಮೊಕಾಶಿ ಅವರನ್ನು ಗೌರವಿಸಲಾಯಿತು.

ಎಲ್ಲಾ ಶಾಲಾ ಮಕ್ಕಳಿಗೆ ನಂದಿಗದ್ದೆ ಸಹಕಾರಿ ಸಂಘದ ಅಧ್ಯಕ್ಷ ಆರ್ ವಿ ದಾನಗೇರಿ ಪತ್ರಿಕಾ ದಿನಾಚರಣೆ ಅಂಗವಾಗಿ ಪೆನ್ನ ವಿತರಿಸಿದರು.

ಉಳವಿ ದೇವಸ್ಥಾನದ ಆಡಳಿತಾಧಿಕಾರಿ ಶಂಕರಯ್ಯ ಶಾಸ್ತ್ರಿ ಅಧ್ಯಕ್ಷ ತೆ ವಹಿಸಿ ಮಾತನಾಡಿದರು. ಪ್ರಾಸ್ತಾವಿಕವಾಗಿ ಸಂಘದ ಅಧ್ಯಕ್ಷ ಸಂದೇಶ ದೇಸಾಯಿ ಮಾತನಾಡಿ ಸ್ಥಳೀಯರು ಇಲ್ಲಿ ನೀಡಿದ ಸಹಕಾರಕ್ಕೆ ಚಿರಋಣಿ ಎಂದರು. ಸುಭಾಷ ಗಾವುಡಾ ನಿರ್ವಹಿಸಿದರೆ, ಹರೀಶ್ ಭಟ್, ತಿಲಕರಾಜ್, ಟಿ ಕೆ ದೇಸಾಯಿ ಸಹಕರಿಸಿದರು. ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಜುಬೇರ ಶೇಖ ಮಂಜುಳಾ ವಸ್ತ್ರದ, ರಮೇಶ ಪಡಸಲಗಿ, ಎಸ್ ಆರ್ ನರಸಣ್ಣವರ, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸರಕಾರದ ಸೌಲಭ್ಯ ಸಿಗಲಿ

ವಿಶೇಷ ಆಹ್ವಾನಿತರಾಗಿ ಬಂದಿರುವ ಹೊಸದಿಗಂತ ಪತ್ರಿಕೆಯ ಹುಬ್ಬಳ್ಳಿ ಬ್ಯುರೋ ಮುಖ್ಯಸ್ಥರಾದ ವಿಠ್ಠಲದಾಸ್ ಕಾಮತರು ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ನಾವು ನಮ್ಮ ವೃತ್ತಿಯನ್ನು ಪ್ರೀತಿಸಬೇಕು. ಸಮಾಜಕ್ಕೆ ಒಳ್ಳೆಯದನ್ನು ಹೊಸತನ್ನು ನೀಡಬೇಕು. ವೃತ್ತಿಯಲ್ಲಿ ಯಾರೇ ಆಗಲಿ ಋಣಾತ್ಮಕವಾಗಿ ವಿಚಾರ ಮಾಡದೇ ಧನಾತ್ಮಕವಾಗಿ ಕೆಲಸ ಮಾಡಿದರೇನೇ ಸಾಕಷ್ಟು ಒಳ್ಳೆಯ ಬೆಳವಣಿಗೆ ಸಾಧ್ಯ. ಇಂತಹ ಸ್ಪರ್ಧಾತ್ಮಕ ಯುಗದಲ್ಲಿ ಪತ್ರಿಕೆ ಬೆಳೆಸುವುದು ಕಷ್ಟ ಕರ ಆದರೆ ಸಮಾಜದ ಒಳಿತಿಗೆದುಡಿಯುವ ಶಾಸಕಾಂಗದ ನಾಲ್ಕನೇ ಅಂಗ ಪತ್ರಿಕಾ ರಂಗಕ್ಕೆ ಸರಕಾರದ ಉಪದೇಶದ ಹೊರತು ಬೇರೇನೂ ಸಿಗದಿರುವದು ಬೇಸರದ ಸಂಗತಿ. ಸಂವಿಧಾನದ ಉಳಿದ ಮೂರು ಅಂಗಗಳಿಗೆ ಎಲ್ಲಾ ಸೌಲಭ್ಯ ಗಳಿವೆ. ಪತ್ರಿಕಾ ರಂಗಕ್ಕೆ ಮಾತ್ರ ಬಸ್ ಪಾಸ್ ಇರಲಿ ವಿಮೆ ಇರಲಿ ಇನ್ನಿಲ್ಲದ ಕಟ್ಟಳೆ ಗಳು. ಇವೆಲ್ಲ ಸರಳೀಕರಣ ವಾಗಬೇಕು. ಇಲ್ಲವಾದಲ್ಲಿ ಪತ್ರಕರ್ತರು ಭ್ರಷ್ಟರಾಗಲು ಕಾರಣ ಹುಡುಕಬೇಕಾಗುತ್ತದೆ. ಏನೇ ಆದರೂ ನಿಮ್ಮ ಮೇಲೆ ನಿಮಗೆ ವಿಶ್ವಾಸ ವಿರಲಿ ಸಮಾಜಕ್ಕೆ ಕನ್ನಡಿಯಾಗಿ ಎಂದರು.

ರೋಟರಿ ಕ್ಲಬ್ ರೂರಲ್ ಪದಗ್ರಹಣ ಸಮಾರಂಭದಲ್ಲಿ ಶೇಖರ ಶೆಟ್ಟಿ ಅಭಿಪ್ರಾಯ

ಸೇವೆಯೇ ಕಾಯಕವನ್ನಾಗಿಸಿಕೊಂಡ ರೋಟರಿ ಕ್ಲಬ್

ಅಂಕೋಲಾ: ಸಮಾಜದ ದುರ್ಬಲರನ್ನು ಸಬಲರನ್ನಾಗಿಸಲು ಇಟ್ಟಕೊಂಡಿರುವ ರೋಟರಿ ಕ್ಲಬ್ ಇಂದಿಗೂ ಕೂಡ ತನ್ನ ಭಿನ್ನತೆಯನ್ನು ಉಳಿಸಿಕೊಂಡಿದೆ. ಸೇವೆಯೇ ತನ್ನ ಕಾಯಕವನ್ನಾಗಿಸಿಕೊಂಡಿರುವ ರೋಟರಿ ಕ್ಲಬ್‌ನ ಎಲ್ಲ ಪದಾಧಿಕಾರಿಗಳು ಮಾಡುವ ಕಾರ್ಯ ಶ್ಲಾಘನೀಯವಾದುದು ಎಂದು ಇನಸ್ಟಾಲೇಶನ್ ಆಫೀಸರ್ ಶೇಖರ ಶೆಟ್ಟಿ ಹೇಳಿದರು.

ತಾಲೂಕಿನ ಶೆಟಗೇರಿಯ ವಾಸುದೇವ ಸಭಾಂಗಣದಲ್ಲಿ ನಡೆದ ರೋಟರಿ ಕ್ಲಬ್ ರೂರಲ್ ಪದಗ್ರಹಣ ಸಮಾರಂಭದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಡಾ. ದಿನಕರ ದೇಸಾಯಿ, ಸುಕ್ರಿ ಗೌಡ, ತುಳಸಿ ಗೌಡ ಸೇರಿದಂತೆ ವೈದ್ಯರು, ಇಂಜಿನೀಯರ್, ಪೊಲೀಸ್ ಇಲಾಖೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ರಾಜ್ಯ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ ಎಂದರು.

ಜಿಲ್ಲಾ ಹಾಲಕ್ಕಿ ಒಕ್ಕಲಿಗರ ಸಂಘದ ಅಧ್ಯಕ್ಷ ಹನುಮಂತ ಗೌಡ ಮಾತನಾಡಿ, ರೋಟರಿ ಕ್ಲಬ್ ಬಡ ಜನರ ನೋವಿಗೆ ಸ್ಪಂದಿಸುವ ಮಾತೃತ್ವದ ಗುಣ ಅಳವಡಿಸಿಕೊಂಡಿದೆ. ಗ್ರಾಮೀಣ ಭಾಗದ ಶಾಲೆಗಳಿಗೆ ಹಾಗೂ ಅನಾರೋಗ್ಯಕ್ಕೆ ಒಳಗಾದವರಿಗೆ ಸಹಾಯ, ಆರೋಗ್ಯ ಶಿಬಿರ ಕೂಡ ಹಮ್ಮಿಕೊಳ್ಳುತ್ತ ಬರುತ್ತಿರುವುದು ಶ್ಲಾಘನೀಯವಾದುದು ಎಂದರು.

ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸುಮಲತಾ ನಾಯಕ ಮಾತನಾಡಿ, ನನಗೆ ಈ ಹುದ್ದೆ ಬರುತ್ತಿರುವುದು ನನ್ನ ಸೌಭಾಗ್ಯ ಎಂದುಕೊಂಡಿದ್ದೇನೆ. ಒಂದು ವರ್ಷದ ಅವಧಿಯಲ್ಲಿ ಸಾಕಷ್ಟು ಮಾನವೀಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿದ್ದೇನೆ. ಬೋಳೆ ಹೊಸಗದ್ದೆ ಸರಕಾರಿ ಶಾಲೆಯನ್ನು ದತ್ತು ಪಡೆಯುವದರ ಜತೆಗೆ ಅವರಿಗೆ ಅಗತ್ಯವಾಗಿ ಬೇಕಾಗುವ ಪರಿಕರಗಳನ್ನು ಇಂದೇ ವಿತರಿಸುತ್ತನೆ ಎಂದರು.

ನಿಕಟಪೂರ್ವ ಅಧ್ಯಕ್ಷ ರವಿ ನಾಯಕ ಸ್ವಾಗತಿಸಿದರು. ವಿನಾಯಕ ಕಾಮತ ಪ್ರತಿಜ್ಞಾವಿಧಿ ಬೋಧಿಸಿದರು. ಮಾಜಿ ಅಧ್ಯಕ್ಷ ತುಳಸಿದಾಸ ಕಾಮತ ವರದಿ ವಾಚಿಸಿದರು. ಯೋಗಿತಾ ಕಾಮತ. ಸಾಯಿಶ ಕೇಣಿಕರ, ಹರ್ಷಾ ನಾಯಕ, ಶ್ರೀಧರ ನಾಯ್ಕ, ಪ್ರವೀಣ ಶೆಟ್ಟಿ ಪರಿಚಯಿಸಿದರು. ಖಜಾಂಚಿ ನಾಗರಾಜ ನಾಯಕ ಉಪಸ್ಥಿತರಿದ್ದರು. ಡಾ. ಸಂಜು ನಾಯಕ ನಿರೂಪಿಸಿದರು. ನೂತನ ಕಾರ್ಯದರ್ಶಿ ಸದಾನಂದ ನಾಯಕ ವಂದಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ಎಂ. ಅವರಿಗೆ ರೋಟರಿ ಕ್ಲಬ್ ವತಿಯಿಂದ 'ಸಮಾಜ ಪರಿವರ್ತಿತ' ಪ್ರಶಸ್ತಿ ನೀಡಿ ಗೌರವಿಸಿದರು. ಹಾಗೇ ನೂತನವಾಗಿ ಅಧ್ಯಕ್ಷೆಯಾದ ಪುಷ್ಪಲತಾ ನಾಯಕ ಹಾಗೂ ಆರ್.ಜಿ.ನಾಯಕ ದಂಪತಿಗಳನ್ನು ಕುಟುಂಬಸ್ಥರು ಸನ್ಮಾನಿಸಿದರು.

ಭಾರತ್ ಸ್ಕೌಟ್ಸ್ ಗೈಡ್ಸ್ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಿಂಧ್ಯಾ

ಶಿರಸಿ: ಮಾಜಿ ಸಚಿವ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಆಯುಕ್ತ ಪಿ.ಜಿ.ಆರ್ ಸಿಂಧ್ಯಾ ಶಿರಸಿಗೆ ಭೇಟಿ ನೀಡಿ ಶ್ರೀ ಮಾರಿಕಾಂಬಾ ದೇವಿ ಆರ್ಶಿವಾದ ಪಡೆದರು.

ನಂತರ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಶಿರಸಿ ಶೈಕ್ಷಣಿಕ ಜಿಲ್ಲಾ ಸಂಸ್ಥೆಯಿಂದ ಆಯೋಜಿಸಿದ್ದ, ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ, ಜಿಲ್ಲೆಯಲ್ಲಿ ಸ್ಕೌಟಿಂಗ್ ಗೈಡಿಂಗ್ ಅಭಿವೃದ್ಧಿಪಡಿಸುವ ಬಗ್ಗೆ ಹಾಗೂ ವಿವಿಧ ವಿಚಾರಗಳ ಬಗ್ಗೆ ಚರ್ಚಿಸಿ 2025-26 ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಪುಸ್ತಕವನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ವಿ.ಎಚ್.ಭಟ್ಕಳ ಜಿಲ್ಲಾ ಮುಖ್ಯ ಆಯುಕ್ತರು, ಎಮ್.ಎಮ್.ಭಟ್ ಉಪಾಧ್ಯಕ್ಷರು, ಶಂಕರ ನಾಗರಕಟ್ಟಿ ಉಪಾಧ್ಯಕ್ಷರು, ಅಂಜನಾ ಹೆಗಡೆ ಗೈಡ್ಸ್ ಆಯುಕ್ತರು, ಪ್ರಭಾಕರ ಭಟ್ ಎಸ್.ಓ.ಸಿ, ಮಂಜುಳಾ ಸಿ ಎಸ್.ಓ.ಸಿ, ಟಿ.ಕೆ ನಾಯ್ಕ ಜಿಲ್ಲಾ ಕಾರ್ಯದರ್ಶಿ, ಹರ್ಷಪ್ರಭು ಜಿಲ್ಲಾ ಖಜಾಂಚಿ, ವಿರೇಶ ಮಾದರ ಎ.ಎಸ್.ಓ.ಸಿ, ವಿನಾಯಕ ಧೀರನ್, ಮಹಾಬಲೇಶ್ವರ ಪಂಡಿತ, ನಾಗರಾಜ ಮೊಗೇರ ಉಪಸ್ಥಿತರಿದ್ದರು.

ಕಳಚೆಯ ಹೊಸಕುಂಬ್ರಿಯಲ್ಲಿ ಭೂ ಕುಸಿತ

ಯಲ್ಲಾಪುರ: ತಾಲೂಕಿನ ಕಳಚೆಯ ಹೊಸಕುಂಬ್ರಿಯಲ್ಲಿ ಸಣ್ಣ ಪ್ರಮಾಣದಲ್ಲಿ ಭೂ ಕುಸಿತ ಉಂಟಾದ ವರಿಯಾಗಿದೆ.

ರಾಮಚಂದ್ರ ವಿ. ಭಟ್ಟ ಅವರ ಮನೆಯ ಹಿಂಭಾಗದಲ್ಲಿ ಭೂ ಕುಸಿತವಾಗಿದ್ದು, ಘಟನೆಯಿಂದ ಈ ಹಿಂದಿನ ಕಹಿ ಘಟನೆ ಮತ್ತೆ ನೆನಪಿಗೆ ಬರುವಂತಾಗಿದೆ. ಮಳೆ ಬಿಟ್ಟುಬಿಡದೆ ಸುರಿಯುತ್ತಿದ್ದು, ತಳಕೆಬೈಲ ಗಣಿ ಪ್ರದೇಶದಲ್ಲಿ ಗಣಿಗಾರಿಕೆಯಿಂದ ತೆರವಾದ ಗುಂಡಿಗಳು ಮಳೆ ನೀರಿನಿಂದ ತುಂಬಿವೆ. ಇದರ ಪರಿಣಾಮ ಕೆಳಭಾಗದಲ್ಲಿ ನೀರು ಹರಿಯುವ ಆತಂಕ ಇದ್ದು, ಅಪಾಯ ಆಗುವ ಮೊದಲೇ ತಾಲೂಕಾ ಆಡಳಿತ ಕ್ರಮಕೈಗೊಳ್ಳಬೇಕಿದೆ ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಹೊನ್ನಾವರ ರೋಟರಿ ಕ್ಲಬ್ ಪದಗ್ರಹಣ ಕಾರ್ಯಕ್ರಮದಲ್ಲಿ ಡಾ. ರವಿ ಹುಂಜೆ

ಸಮಾಜಮುಖಿ ಕಾರ್ಯದಲ್ಲಿ ರೋಟರಿ ಮುಂದೆ

ಹೊನ್ನಾವರ: ನಿಸ್ವಾರ್ಥ ಸೇವೆ ಮೂಲಕ ವಿಶ್ವದ ವಿವಿದೆಡೆ ತನ್ನದೇ ಆದ ಛಾಪು ಮೂಡಿಸುವ ಮೂಲಕ ರೋಟರಿ ಕ್ಲಬ್ ಸಮಾಜಮುಖಿ ಕಾರ್ಯ ಮಾಡುತ್ತಿದೆ ಎಂದು ರೋಟರಿ ಜಿಲ್ಲಾ ಕಾರ್ಯದರ್ಶಿ ಡಾ. ರವಿ ಹುಂಜೆ ಸಂತಸ ವ್ಯಕ್ತಪಡಿಸಿದರು.

ಕಳೆದ 60 ವರ್ಷಗಳಿಂದ ತಾಲೂಕಿನಲ್ಲಿ ಜನಮನ್ನಣೆ ಪಡೆದ ಹೊನ್ನಾವರ ರೋಟರಿ ಕ್ಲಬ್ ಪದಗ್ರಹಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಜಿಲ್ಲೆಯಲ್ಲಿ ವಿಶಿಷ್ಠ ಕಾರ್ಯಕ್ರಮದ ಮೂಲಕ ಹೊನ್ನಾವರ ರೋಟರಿ ಕ್ಲಬ್ ತನ್ನದೇ ಆದ ಹಿರಿಮೆ ಹೊಂದಿದೆ. ಕಳೆದ ಬಾರಿ 50 ಲಕ್ಷ ಹಣ ಸಮಾಜಮುಖಿ ಕಾರ್ಯಕ್ಕೆ ವಿನಿಯೋಗಿಸಿದೆ. ಇಂದು ನೂತನ ಸಾರಥ್ಯದಲ್ಲಿ ಒಂದು ವರ್ಷ ಸಮಾಜ ಸೇವೆಯ ಜವಬ್ದಾರಿಯನ್ನು ಪಡೆದವರಿಗೆ ಅಧಿಕಾರ ಹಸ್ತಾಂತರ ನಡೆಯಲಿದೆ. ರೋಟರಿಯಲ್ಲಿ ಅಧಿಕಾರ ಉಳಿಸಿಕೊಳ್ಳಲು ರಾಜಕೀಯ ಇರುವುದಿಲ್ಲ. ಅತ್ಯಂತ ಖುಷಿಯಿಂದ ಅಧಿಕಾರ ಹಸ್ತಾಂತರ ನಡೆಯಲಿದ್ದು, ಮುಂಬರುವ ಇನಷ್ಟು ಸಮಾಜಮುಖಿ ಕಾರ್ಯದ ಮೂಲಕ ಎಲ್ಲರ ಮೆಚ್ಚುಗೆ ಪಡೆಯಲಿ ಎಂದು ಶುಭಹಾರೈಸಿದರು.

ರೋಟರಿ ಕ್ಲಬ್ ಅಸಿಸ್ಟೆಂಟ್ ಗವರ್ನರ್ ಮಹೇಶ ಕಲ್ಯಾಣಪುರ ಮಾತನಾಡಿ ರೋಟರಿ ಹಿನ್ನಲೆ ಹಾಗೂ ಸದಸ್ಯರ ಜವಬ್ದಾರಿ ಬಗ್ಗೆ, ಕಾರ್ಯವೈಖರಿಯ ಬಗ್ಗೆ ಮಾಹಿತಿ ನೀಡಿದರು. ಪ್ರಸಕ್ತ ವರ್ಷದ ರೋಟರಿ ಕ್ಲಬ್ ಪದಾಧಿಕಾರಿಳಾದ ರೋಟರಿ ಅಧ್ಯಕ್ಷರಾಗಿ ಡಾ.ರಾಜು ಮಾಳಗಿಮನಿ, ಕಾರ್ಯದರ್ಶಿಯಾಗಿ ಹೆನ್ರಿ ಲೀಮಾ , ಖಜಾಂಚಿಯಾಗಿ ಸೋಹನ್ ಹೊರ್ಟಾ ಅಧಿಕಾರ ಸ್ವೀಕರಿಸಿದರು.

ಅಧಿಕಾರ ಸ್ವೀಕರಿಸಿದ ಬಳಿಕ ಡಾ. ರಾಜು ಮಾಳಗಿಮನಿ ಮಾತನಾಡಿ ನಿಸ್ವಾರ್ಥ ಸೇವೆಯ ಮೂಲಕ ಎಲ್ಲರ ವಿಶ್ವಾಸ ಪಡೆದು ರೋಟರಿ ಜನಪ್ರಿಯತೆ ಹೆಚ್ಚಿಸುವ ಭರವಸೆಯನ್ನು ನೀಡಿದರು. ಪ್ರಸಕ್ತ ಅವಧಿಯಲ್ಲಿ ತಾಲೂಕಿನಲ್ಲಿ ರೋಟರಿ ಉದ್ಯೋಗ ಮೇಳವನ್ನು ಆಯೋಜಿಸುವ ವಿಶ್ವಾಸ ವ್ಯಕ್ತಪಡಿಸಿ ಕನಿಷ್ಟ ನೂರು ಉದ್ಯೋಗಾರ್ಥಿಗಳಿಗೆ ನೌಕರಿ ಸಿಗುವಂತೆ ಪ್ರಯತ್ನಿಸುವ ವಿಶ್ವಾಸ ವ್ಯಕ್ತಪಡಿಸಿದರು.

ರೋಟರಿ ನಿಕಟಪೂರ್ವ ಪದಾಧಿಕಾರಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಶಾಲಾ ವಿದ್ಯಾರ್ಥಿಗೆ ಶೈಕ್ಷಣಿಕ ಪರಿಕರ ವಿತರಿಸಲಾಯಿತು. ರೋಟರಿ ಕ್ಲಬ್‌ನ ಪ್ರತಿ ತಿಂಗಳ ಪತ್ರಿಕೆ ರೋಟಾವರ್ ಪತ್ರಿಕೆ ಬಿಡುಗಡೆಗೊಳಿಸಲಾಯಿತು. ನಿಕಟಪೂರ್ವ ಅಧ್ಯಕ್ಷ ಸೂರ್ಯಕಾಂತ್ ಸಾರಂಗ ಸ್ವಾಗತಿಸಿದರು. ಕಾರ್ಯದರ್ಶಿ ಹೇನ್ರಿ ಲಿಮಾ ವಂದಿಸಿದರು. ಎಂ. ಎಂ. ಹೆಗಡೆ ವರದಿ ವಾಚಿಸಿದರು. ದಿನೇಶ ಕಾಮತ ಕಾರ್ಯಕ್ರಮ ನಿರ್ವಹಿಸಿದರು.

CHANGE OF NAME

I, **HIMATLAL GOPAL PATEL S/O GOPAL PATEL** (Old Name) have changed my name and shall hereafter be known as **HIMMAT LAL PATEL S/O GOPAL PATEL** (New Name) R/o P.No.28, 4th Cross, Near Ganesh Temple, Rajatgiri, Vidyagiri, Dharwad Vide affidavit sworn before notary Venkatesh.S. Naik at Dharwad on 18/07/2025.

ಕಳೆದಿದೆ

ನಾನು ಶ್ರೀ ವಿಶ್ವನಾಥ ತಂದೆ ಬಸವರಾಜ ಕಮತಗಿ ಸಾ॥ ಬಾದಾಮಿನಗರ, ಕೇಶ್ವಾಪೂರ, ಹುಬ್ಬಳ್ಳಿ ಸತ್ಯ ಪ್ರತಿಜ್ಞೆಯ ಮೇರೆಗೆ ಮಾಡುವ ಪ್ರಮಾಣ ಪತ್ರ ಏನೆಂದರೆ:-

ಧಾರವಾಡ ಜಿಲ್ಲಾ, ಹುಬ್ಬಳ್ಳಿ ಶಹರದ ದಾಜೀಬಾನ ಪೇಟದಲ್ಲಿ ಇರುವ ಆಸ್ತಿ ಇದರ ಸಿಟಿ ಸರ್ವೆ ನಂ: 3178/1ಬಿ, ವಾರ್ಡ ನಂ:45 ಸದರ ಆಸ್ತಿಯು ನನ್ನ ಸ್ವಂತ ಮಾಲ್ಕೀ ಇದ್ದು ಸದರ ಆಸ್ತಿಯ ದಸ್ತವೇಜ ನಂ: 2776/1985-86, ದಿ: 18-12-1985 ರಂದು ನೊಂದಾಯಿತ ಆಸ್ತಿಯ ಮೂಲ ಖರೀದಿ ಪತ್ರವು ದಿ: 10-01-2025 ರಂದು ಹುಬ್ಬಳ್ಳಿಯ ಸಿ.ಬಿ.ಟಿ ಹತ್ತಿರ ನನ್ನ ನಜರಚೂಕಿನಿಂದ ಕಳೆದುಕೊಂಡಿರುತ್ತೇನೆ. ಆದ್ದರಿಂದ ಈ ಕಾಗದ ಪತ್ರಗಳು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ವಿಳಾಸಕ್ಕೆ ತಲುಪಿಸಲು ಕೋರಿಕೆ.

ಶ್ರೀ ವಿಶ್ವನಾಥ ಬಸವರಾಜ ಕಮತಗಿ
ಬಾದಾಮಿ ನಗರ, ಕೇಶ್ವಾಪೂರ, ಹುಬ್ಬಳ್ಳಿ
ಸೆಲ್ : 94802 96045

ಜು.24 ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಉಪವಾಸ ಸತ್ಯಾಗ್ರಹ: ಶ್ರೀ ಪ್ರಣವಾನಂಥದ ಸ್ವಾಮೀಜಿ

ಗುಡ್ಡ ಕುಸಿತ ಪ್ರಕರಣ: ಆರೋಪಿಗಳನು ಬಂಧಿಸದ ಪೊಲೀಸರು

ಗೋಕರ್ಣ : ಶಿರೂರು ಗುಡ್ಡ ಕುಸಿತ ಪ್ರಕರಣ ನಡೆದು ವರ್ಷ ಕಳೆದಿದೆ. ಇದಕ್ಕೆ ಕಾರಣಿಕರ್ತರಾದ ಐಆರ್‌ಬಿ ಕಂಪನಿ ವಿರುದ್ಧ ಇದುವರೆಗೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಈ ಹಿನ್ನಲೆಯಲ್ಲಿ ಜು. 24 ರಂದು ಕಾರವಾರದ ಜಿಲ್ಲಾಧಿಕಾರಿಗಳ ಕಚೇರಿಯ ಎದುರು ಉಪವಾಸ ಸತ್ಯಾಗ್ರಹ ಮಾಡಲಾಗುವುದು ಎಂದು ರಾಷ್ಟ್ರೀಯ ಈಡಿಗ ಮಹಾಮಂಡಳಿ ಹಾಗೂ ಶ್ರೀ ನಾರಾಯಣಗುರು ಶಕ್ತಿ ಪೀಠದ ಸ್ವಾಮೀಜಿ ಪ್ರಣವಾನಂದ ಶ್ರೀ ತಿಳಿಸಿದರು.

ಐಆರ್‌ಬಿಯ 8 ಅಧಿಕಾರಿಗಳ ಮೇಲೆ ನಾನು ನ್ಯಾಯಾಲಯದಲ್ಲಿ ದೂರನ್ನು ದಾಖಲಿಸಿದ ನಂತರ ನ್ಯಾಯಾಲಯ 8 ಜನರ ವಿರುದ್ಧ ಕ್ರಮ ಕೈಗೊಳ್ಳಲು ಪೊಲೀಸರಿಗೆ ಸೂಚನೆ ನೀಡಿತ್ತು. ಕೊಲೆ ಪ್ರಕರಣ ದಾಖಲಾಗಿ 4 ತಿಂಗಳು ಕಳೆದರೂ ಅಂಕೋಲಾ ಪೊಲೀಸ್ ನಿರೀಕ್ಷಕ ಚಂದ್ರಶೇಖರ ಮಠಪತಿ ಅವರು ಆರೋಪಿಗಳನ್ನು ಬಂಧಿಸದಿರುವುದರಿಂದ ಅವರನ್ನು ಕೂಡಲೇ ಅಮಾನತಗೊಳಿಸಲು ಒತ್ತಾಯಿಸಿ ಈ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಗಳು ವಿವರಿಸಿದ್ದಾರೆ.

ಗುಡ್ಡ ಕುಸಿತದಲ್ಲಿ ಸಾವನ್ನಪ್ಪಿದ 11 ಜನರಲ್ಲಿ 7 ಜನರು ನಾಮಧಾರಿ ಸಮಾಜಕ್ಕೆ ಸೇರಿದವರು. ಹಾಗೇ ಹಾಲಕ್ಕಿ ಸಮಾಜಕ್ಕೆ ಸೇರಿದ ಒಬ್ಬಳು



ಶಿರೂರಿನಲ್ಲಿ ನಡೆದ ಗುಡ್ಡ ಕುಸಿತದ ದುರಂತದ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೇಂದ್ರ ಸಚಿವ ನಿತಿನ ಗಡ್ಕರಿ ಅವರಿಗೆ ಪ್ರಣವಾನಂದ ಸ್ವಾಮೀಜಿ ಮನವಿ ಸಲ್ಲಿಸಿದರು.

ಮಹಿಳೆಯಾಗಿದ್ದಾಳೆ. ಈ ಕುರಿತು ಉಪವಾಸಕ್ಕೆ ಕೂರುವುದಾಗಿ ಈಗಾಗಲೇ ಅನುಮತಿಯನ್ನು ಕೂಡ ಪಡೆಯಲಾಗಿದೆ. ನ್ಯಾಯ ಸಿಗುವವರೆಗೂ ನಮ್ಮ ಹೋರಾಟ ನಿರಂತರ ಮುಂದುವರಿಯಲಿದೆ. ಹಾಗೇ ಘಟನೆ ನಡೆದ ಸ್ಥಳವನ್ನು ಇದುವರೆಗೂ ಮತ್ತೆ ಗುಡ್ಡ ಕುಸಿಯದಂತೆ ತಡೆಯುವ ಯಾವ ಪ್ರಯತ್ನವೂ ಮಾಡಲಿಲ್ಲ. ಹಾಗೇ ಗಂಗಾವಳಿ ನದಿಯಲ್ಲಿ ಬಿದ್ದ ಮಣ್ಣನ್ನು ತೆರವುಗೊಳಿಸದೇ ಇರುವುದು ಕೂಡ ಅಕ್ಷಮ್ಯ ಅಪರಾಧವಾಗಿದೆ ಎಂದು ಶ್ರೀಗಳು ತಿಳಿಸಿದರು.

ಜನರ ಜೀವದ ಜತೆಗೆ ಆಟವಾಡುವ ಐಆರ್‌ಬಿ ಕಂಪನಿಯವರು ನಿರಾಶ್ರಿತರಿಗೆ ಯಾವುದೇ ಪರಿಹಾರ ನೀಡಿಲ್ಲ. ಇನ್ನು ಉಳುವರೆಯಲ್ಲಿ 6 ಮನೆಗಳು ಸಂಪೂರ್ಣ ನೀರು ಪಾಲಾದರೂ ರಾಜ್ಯ ಸರಕಾರ ನೀಡಿದ್ದು ತಲಾ 1.20 ಲಕ್ಷ ಮಾತ್ರ. ಇದರಲ್ಲಿ ಮನೆ ನಿರ್ಮಿಸಿಕೊಳ್ಳಲು ಸಾಧ್ಯವೇ. ಹೀಗಾಗಿ ಕನಿಷ್ಟ ಆ ಕುಟುಂಬಗಳಿಗೆ ಮನೆ ನಿರ್ಮಿಸಿಕೊಳ್ಳಲು ತಲಾ 10 ಲಕ್ಷದಂತೆ ನೀಡಬೇಕು. ಈ ಬಗ್ಗೆ ಈ ಹಿಂದೆಯೂ ಕಾರವಾರ ಜಿಲ್ಲಾಧಿಕಾರಿಗಳ ಕಚೇರಿಯ ಎದುರು, ಹೊನ್ನಾವರದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಚೇರಿ ಎದುರು ಪ್ರತಿಭಟನೆ ನಡೆಸಲಾಗಿತ್ತು. ಆ ಸಂದರ್ಭದಲ್ಲಿ ಸೂಕ್ತ ಪರಿಹಾರ ಮತ್ತು ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು. ಆದರೆ ಈಡೇರದೇ ಇರುವುದರಿಂದ ಪ್ರತಿಭಟನೆ ನಡೆಸಬೇಕಾಗಿದೆ.

ಶಿರೂರು ದುರ್ಘಟನೆ ನಡೆದು 1 ವರ್ಷವಾದರೂ ಕೂಡ ಐಆರ್‌ಬಿ ಕಂಪನಿಯಿಂದ ಯಾವುದೇ ಪರಿಹಾರ ನೀಡಿಲ್ಲ. 8 ಅಧಿಕಾರಿಗಳ ಮೇಲೆ ದೂರು ದಾಖಲಾದರೂ ಪೊಲೀಸರು ಅವರನ್ನು ಬಂಧಿಸಿಲ್ಲ. ಸಾಮಾನ್ಯ ಜನರಿಗಾದರೆ ತಕ್ಷಣ ಕ್ರಮ ಕೈಗೊಳ್ಳುವ ಪೊಲೀಸರು ಯಾವ ಜನಪ್ರತಿನಿಧಿಗಳ ಒತ್ತಡಕ್ಕೆ ಸಿಲುಕಿದ್ದಾರೆ. ಹೀಗಾಗಿ ಸಂಬಂಧಪಟ್ಟ ಪೊಲೀಸ್ ನಿರೀಕ್ಷಕರನ್ನು ಅಮಾನತು ಮಾಡಲು ಜು. 24 ರಂದು ಉಪವಾಸ ಸತ್ಯಾಗ್ರಹ ಜಿಲ್ಲಾಧಿಕಾರಿ ಕಚೇರಿ ಎದುರು ಮಾಡಲಾಗುವುದು.

● ಡಾ. ಪ್ರಣವಾನಂದ ಸ್ವಾಮೀಜಿ,
ಶ್ರೀ ನಾರಾಯಣಗುರು ಶಕ್ತಿಪೀಠ

ಗಡ್ಕರಿ ಭೇಟಿ: ಕೇಂದ್ರ ಸಚಿವ ನಿತಿನ ಗಡ್ಕರಿ ಅವರನ್ನು ಭೇಟಿ ಮಾಡಿದ ಪ್ರಣವಾನಂದ ಸ್ವಾಮೀಜಿಯವರು ಕೂಡಲೇ ನೊಂದ ಕುಟುಂಬಕ್ಕೆ ಪರಿಹಾರ ನೀಡಬೇಕು. ಐಆರ್‌ಬಿ ಕಂಪನಿಯ ಅಧಿಕಾರಿಗಳ ವಿರುದ್ಧವೇ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಜು.24 ರಂದು ಕಾರವಾರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಉಪವಾಸ ಸತ್ಯಾಗ್ರಹ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಜುಲೈ 21ರಂದು ರಾಜಗುರು ಪುಣ್ಯಸ್ಮರಣೆ

ಧಾರವಾಡ: ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಸ್ವರಸಾಮ್ರಾಟ ಪಂ.ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ (ರಿ) ಟ್ರಸ್ಟ್, ಧಾರವಾಡ ವತಿಯಿಂದ ಪದ್ಮಭೂಷಣ, ಸ್ವರ ಸಾಮ್ರಾಟ ಪಂ. ಬಸವರಾಜ ರಾಜಗುರು ಅವರ 34ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಜುಲೈ 21, 2025 ರಂದು ಬೆಳಗ್ಗೆ 9.30 ಗಂಟೆಗೆ ಧಾರವಾಡದ ಹೊಸಯಲ್ಲಾಪುರದಲ್ಲಿರುವ ಪಂ. ಬಸವರಾಜ ರಾಜ ಗುರು ಅವರ ಸಮಾಧಿ ಸ್ಮಾರಕ ಸ್ಥಳದಲ್ಲಿ ಏರ್ಪಡಿಸಲಾಗಿದೆ. ಪಂ.ಬಸವರಾಜ ರಾಜಗುರು ಅವರ ಸಮಾಧಿ ಸ್ಮಾರಕದಲ್ಲಿ ಪೂಜಾ ಕಾರ್ಯಕ್ರಮ ಹಾಗೂ ಸಂಗೀತ ನಮನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಬೆಳಗಾವಿ ವಿಭಾಗದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಕೆ.ಹೆಚ್.ಚನ್ನೂರ, ಟ್ರಸ್ಟ್‌ನ ಅಧ್ಯಕ್ಷ ಚಂದ್ರಕಾಂತ ಬೆಲ್ಲದ, ಹಾಗೂ ಟ್ರಸ್ಟ್ ಸದಸ್ಯೆ ಭಾರತಿದೇವಿ ರಾಜ ಗುರು, ಡಾ. ಮುದ್ದುಮೋಹನ್, ಡಾ. ಜಿ.ಎಂ. ಹೆಗಡೆ, ಡಾ. ಉದಯಕುಮಾರ ದೇಸಾಯಿ, ನಿಜ ಗುಣ ರಾಜಗುರು ಭಾಗವಹಿಸುವರು. ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹಾಗೂ ಪಂ.ಬಸವರಾಜ ರಾಜಗುರು ಅವರ ಶಿಷ್ಯರು ಮತ್ತು ಸಂಗೀತ ಅಭಿಮಾನಿಗಳು ಭಾಗವಹಿಸಬೇಕೆಂದು ಟ್ರಸ್ಟ್ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್: ಕುಂದು ಕೊರತೆಗಳ ಸಭೆ

ಧಾರವಾಡ: ಧಾರವಾಡ ಶಹರದ ಉಪ ವಿಭಾಗ-2, ಹೆಸ್ಕಾಂ ಕಛೇರಿಯಲ್ಲಿ ಜುಲೈ 19, 2025 ರಂದು ಮಧ್ಯಾಹ್ನ 3 ಗಂಟೆಗೆ ಗ್ರಾಹಕರ ಕುಂದು ಕೊರತೆಗಳ ಸಭೆಯನ್ನು ಆಯೋಜಿಸಲಾಗಿದೆ. ಸಭೆಯಲ್ಲಿ ಧಾರವಾಡ ಹೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ-2 ರ ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರು (ವಿ) ದೇವರಾಜ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿಸಲಾಗುತ್ತದೆ. ಕಾರಣ ಶಹರ ಉಪ ವಿಭಾಗ-2 ರ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಗ್ರಾಹಕರು ಸಭೆಗೆ ಹಾಜರಾಗಿ ಸದುಪಯೋಗ ಪಡೆದುಕೊಂಡು, ತಮ್ಮ ವಿದ್ಯುತ್ ಬಗ್ಗೆ ಇದ್ದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕೆಂದು ಹೆಸ್ಕಾಂನ ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ತೋಟಪ್ಪ ದತ್ತಿ ಉಪನ್ಯಾಸ

ಗದಗ: ಜಿಲ್ಲಾಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ 2025ರ ಜು.19 ರಂದು ಸಂಜೆ 6.30 ಗಂಟೆಗೆ ತೋಂಟದ ಸಿದ್ದಲಿಂಗ ಶ್ರೀಗಳ ಕನ್ನಡ ಭವನ, ಕಸಾಪ ಕಾರ್ಯಾಲಯ ಗದಗ ಇಲ್ಲಿ ಸ್ವಾತಂತ್ರ್ಯ ಹೋರಾಟಗಾರ ತೋಟಪ್ಪ ರಾಚಪ್ಪ ನಾರಾಯಣಪೂರ ಸ್ಮರಣಾರ್ಥದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಗದಗ ಪರಿಸರದ ಸ್ವಾತಂತ್ರ್ಯ ಹೋರಾಟಕ್ಕೆ ತೋಟಪ್ಪ ನಾರಾಯಣಪೂರ ಅವರ ಕೊಡುಗೆ ಕುರಿತು ಸರಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಎಸ್.ಯು. ಸಜ್ಜನ 'ಶೆಟ್ಟರ ಉಪನ್ಯಾಸ ನೀಡುವರು. ಅಧ್ಯಕ್ಷತೆಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವಿವೇಕಾನಂದಗೌಡ ಪಾಟೀಲ ಅವರು ವಹಿಸುವರು. ದತ್ತಿ ದಾನಿಗಳಾದ ಪ್ರ. ತೋ. ನಾರಾಯಣಪೂರ ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ ಸಾಹಿತ್ಯಾಭಿಮಾನಿಗಳು, ಸಾಹಿತಿಗಳು, ಪರಿಷತ್ತಿನ ಸದಸ್ಯರು ಭಾಗವಹಿಸಬೇಕೆಂದುಕಿಶೋರಬಾಬು ನಾಗರಕಟ್ಟಿ, ದತ್ತಪ್ರಸನ್ನ ಪಾಟೀಲ, ಡಿ.ಎಸ್.ಬಾಪುರಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ನಾಳೆ ಉದಯರಾಗ ಸಂಧ್ಯಾರಾಗ ಕಾರ್ಯಕ್ರಮ

ಗದಗ: ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಉದ್ಯಾನವನದಲ್ಲಿ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮದಲ್ಲಿ 2025ರ ಜು.20ರಂದು ರವಿವಾರ ಬೆಳಗ್ಗೆ 6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ಬೆಟದಯ್ಯ ಮಹಾದೇವಯ್ಯ ಹಿರೇಮಠ ಮತ್ತು ತಂಡ, ಪಂಚಾಕ್ಷರಿ ನಗರ, ಗದಗ ಇವರಿಂದ ಸುಗಮ ಸಂಗೀತ ಹಾಗೂ ಸಾಯಂಕಾಲ 5.30 ರಿಂದ 6.30 ಗಂಟೆಯವರೆಗೆ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಸಿದ್ದೇಶ್ವರಶಾಸ್ತ್ರೀ ಬಾಹೇರಮಠ ಮತ್ತು ತಂಡ, ವಿವೇಕಾನಂದ ನಗರ, ಗದಗ ಇವರಿಂದ ಸುಗಮ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು. ಎಂದು ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತಿಳಿಸಿರುತ್ತಾರೆ.

{ಶೋಭಾ ಕರಂದ್ಲಾಜೆ } ಕೇಂದ್ರ ಸಚಿವೆ

ಈ ಕಾಂಗ್ರೆಸ್ ಸರಕಾರದ ಬಹಳ ಮಂದಿ ಮಾನಸಿಕ ಸ್ಥಿಮಿತತೆ ಕಳೆದುಕೊಂಡಿದ್ದಾರೆ. ಅದಕ್ಕೆ ದಿನಕ್ಕೊಂದು ರೀತಿಯಲ್ಲಿ ಮಾತನಾಡುತ್ತಾರೆ. ಏನು ಮಾತನಾಡ್ತಿದ್ದೇವೆಂದು ಅವರಿಗೇ ಗೊತ್ತಿಲ್ಲ. ನೀವು ಈ ರೀತಿ ಮಾತನಾಡೋದು ಬಿಟ್ಟು, ಟ್ವೀಟ್ ಮಾಡೋದು ಬಿಟ್ಟು, ಹೇಳಿಕೆಗಳನ್ನು ನೀಡೋದು ಬಿಟ್ಟು, ರಾಜ್ಯದ ಅಭಿವೃದ್ಧಿ ಮಾಡಿ ಎಂದು ರಾಜ್ಯದ ಜನ ನಿಮ್ಮನ್ನು ಗೆಲ್ಲಿಸಿರುವುದು.

ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ | ಭುವನೇಶ ಪಾಟೀಲ ಹೇಳಿಕೆ

ಬಾಕಿ ಕರ ವಸೂಲಾತಿಗೆ ಜಿಪಂ ಸಿಇಒ ಸೂಚನೆ

ಧಾರವಾಡ: ಧಾರವಾಡ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಜಿಲ್ಲೆಯಲ್ಲಿ ಅನುಷ್ಠಾನದಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಜರುಗಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಅವರು ಮಾತನಾಡಿ, ಜಿಲ್ಲೆಯಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಯಲ್ಲಿ ವಿದ್ಯುತ್ ಬಿಲ್ ಮರು ಹೊಂದಾಣಿಕೆಗೆ ಹೆಸ್ಕಾಂ ಕಾರ್ಯಪಾಲಕ ಅಭಿಯಂತರರ ಜೊತೆಗೆ ಗ್ರಾಮ ಪಂಚಾಯಿತಿಯಿಂದ ಹಣ ಪಾವತಿ ಆಗುತ್ತಿರುವ ಬಗ್ಗೆ ಚರ್ಚಿಸಿದರು.

ಜಿಲ್ಲೆಯಲ್ಲಿ ಬಾಕಿ ಕರ ವಸೂಲಾತಿ ಮತ್ತು ಗ್ರಂಥಾಲಯ ಉಪಕರ ವಸೂಲಾತಿ ಪ್ರಗತಿ ಕುಂಠಿತವಾಗಿದ್ದು, ಪ್ರತಿ ತಿಂಗಳು ಶೇ.10 ರಷ್ಟು ಗುರಿ ನಿಗದಿಪಡಿಸಿಕೊಂಡು ಪ್ರಗತಿ ಸಾಧಿಸಬೇಕು ಎಂದರು.

ಸ್ವಚ್ಛ ಭಾರತ ಮಿಷನ್ (ಗ್ರಾ) ಯೋಜನೆಯಡಿ ಈಗಾಗಲೇ ವೈಯಕ್ತಿಕ ಶೌಚಾಲಯ ಹಾಗೂ ಸಮುದಾಯ ಶೌಚಾಲಯ ನಿರ್ಮಾಣ ಮಾಡಲು ಕಾರ್ಯಾದೇಶ ಪಡೆದ ಫಲಾನುಭವಿಗಳು ತುರ್ತಾಗಿ ಶೌಚಾಲಯ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ವಹಿಸಬೇಕು. ಮತ್ತು ಹೊಸ ಕೂಸಿನ ಮನೆ ಪ್ರಾರಂಭಿಸಲು ಪಿಡಿಒಗಳಿಗೆ ಅವರು ತಿಳಿಸಿದರು.

ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಭುವನೇಶ ಪಾಟೀಲ ಅವರು ಮಾತನಾಡಿದರು.

ಅಧಿಕಾರಿಗಳಿಗೆ ಸಿಇಒ ಸೂಚನೆ:

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ 2025-26 ನೇ ಸಾಲಿನ ಮೇ-2025 ರ ಪ್ರಗತಿಯನ್ನು ಪರಿಶೀಲಿಸಿದಾಗ ಗುರಿ ಸಾಧನೆಗೆ ಇನ್ನೂ ಬಾಕಿ ಇದೆ. ಮಹಿಳಾ ಭಾಗವಹಿಸುವಿಕೆ ಪ್ರಮಾಣವನ್ನು ಸರಕಾರದಿಂದ ನಿಗದಿಪಡಿಸಿದ ಶೇ.50 ರಷ್ಟು ಗುರಿ ಸಾಧಿಸಲು ಹಾಗೂ ಬೂದು ನೀರು ನಿರ್ವಹಣೆ ಕಾಮಗಾರಿಗಳ ಡಿಪಿಆರ್‌ಗಳನ್ನು ತಯಾರಿಸಿ ಸಲ್ಲಿಸಲು ಮತ್ತು ಜಿಲ್ಲೆಯಲ್ಲಿ ದಾಖಲಾಗಿರುವ ಸಾಮಾಜಿಕ ಲೆಕ್ಕ ಪರಿಶೋಧನಾ ಆಕ್ಷಪಣೆ ಮತ್ತು ವಸೂಲಾತಿ ಮಾಡಿ ಇತ್ಯರ್ಥಪಡಿಸಬೇಕು. ವಸತಿ ಯೋಜನೆ ಪ್ರಧಾನಮಂತ್ರಿ ಆವಾಸ ಯೋಜನೆಯಡಿ ಮಂಜೂರಾದ ಮನೆಗಳಿಗೆ ಎನ್‌ಎಮ್‌ಆರ್ ಸೃಜನೆ ಮಾಡಲು ತುರ್ತಾಗಿ ಕ್ರಮ ವಹಿಸಬೇಕು ಎಂದು ಸಿಇಒ ಭುವನೇಶ ಪಾಟೀಲ ಅವರು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಬಿ.ಎಸ್.ಮೂಗನೂರುಮಠ, ಯೋಜನಾ ನಿರ್ದೇಶಕಿ ರೇಖಾ ಡೊಳ್ಳಿನ, ಮುಖ್ಯ ಯೋಜನಾ ಅಧಿಕಾರಿ ದೀಪಕ ಮಡಿವಾಳ, ಪಿಆರ್ ಇಡಿ ಕಾರ್ಯಪಾಲಕ ಅಭಿಯಂತರ ಆರ್.ಎಮ್. ಸೊಪ್ಪಿಮಠ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರ ಜಗದೀಶ ಪಾಟೀಲ, ಹೆಸ್ಕಾಂ ಕಾರ್ಯಪಾಲಕ ಅಭಿಯಂತರಾದ ಎಮ್.ಟಿ.ದೊಡ್ಡಮನಿ, ಅರವಿಂದ ಗದಗಕರ, ಕೃಷಿ ಇಲಾಖೆಯ ಉಪನಿರ್ದೇಶಕಿ ಜಯಶ್ರೀ ಹಿರೇಮಠ ಹಾಗೂ ಎಲ್ಲ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲೆಯ ಎಲ್ಲ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಪಂಚಾಯತ ವಿವಿಧ ಶಾಖೆಗಳ ಮುಖ್ಯಸ್ಥರು, ಸಿಬ್ಬಂದಿಗಳು ಉಪಸ್ಥಿತರಿದ್ದರು.

> ಐಪಿಜಿಆರ್‌ಎಸ್ ಇ-ಗ್ರಾಮಸ್ವರಾಜ್ ತಂತ್ರಾಂಶದಲ್ಲಿ ಅನುಮೋದಿತ ಕ್ರಿಯಾ ಯೋಜನೆಯನ್ನು ಅಳವಡಿಸಿ, ಇ-ಸ್ವತ್ತು ಕುರಿತು ಹಲವಾರು ಗ್ರಾಮ ಪಂಚಾಯತಿಗಳಲ್ಲಿ ಬಹಳಷ್ಟು ಅರ್ಜಿಗಳು 30 ದಿನಗಳಿಗಿಂತ ಹೆಚ್ಚು ದಿನಗಳಿಂದ ವಿಲೇವಾರಿಯಾಗದೇ ಬಾಕಿ ಉಳಿಸಿಕೊಂಡಿದ್ದು ಈ ಕುರಿತು ಕ್ರಮವಹಿಸಬೇಕು.
> -ಭುವನೇಶ ಪಾಟೀಲ್, ಧಾರವಾಡ ಜಿಪಂ ಸಿಇಒ

ವೃತ್ತಿ ಗೌರವ ಎತ್ತಿಹಿಡಿಯಲು ಎಎಸ್‌ಪಿ ಬರಮನಿ ಸಲಹೆ

ಧಾರವಾಡ: ಕಳೆದ 33 ವರ್ಷಗಳಿಂದ ಖಾಕಿ ನನ್ನ ದೇವರು, ತಾಯಿಯಂತೆ ಗೌರವಿಸಿ, ಬದುಕಿದ್ದೇನೆ. ಯುವ ಅಧಿಕಾರಿಗಳು ವೃತ್ತಿಯ ಘನತೆ, ಗೌರವ ಎತ್ತಿ ಹಿಡಿಯುವಂತೆ ಸದಾ ಕಾಲ ಹೆಮ್ಮೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಎಎಸ್ ಪಿ. ನಾರಾಯಣ ಬರಮನಿ ಅವರು ಹೇಳಿದರು.

ಎಸ್.ಪಿ.ಕಚೇರಿ ಸಭಾಭವನದಲ್ಲಿ ಧಾರವಾಡ ಜಿಲ್ಲಾ ಪೊಲೀಸ ಇಲಾಖೆಯಿಂದ ಬೆಳಗಾವಿ ಪೊಲೀಸ ಅಯುಕ್ತಾಲಯದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ ಆಯುಕ್ತ ಹುದ್ದೆಗೆ ವರ್ಗಾವಣೆ ಅಗಿರುವ ನಿಮಿತ್ತ ಆಯೋಜಿಸಿದ್ದ ಬಿಳ್ಕೋಡುಗೆ ಸಮಾರಂಭದಲ್ಲಿ ಗೌರವ, ಸನ್ಮಾನ ಸ್ವೀಕರಿಸಿ, ಮಾತನಾಡಿದರು. ನಾವು ಕೆಲಸ ಮಾಡುವ ಇಲಾಖೆ, ಹುದ್ದೆಯ ಬಗ್ಗೆ ಯಾವಾಗಲೂ ನಿಷ್ಠೆ, ಹೆಮ್ಮೆ, ಅಭಿಮಾನ ಇರಬೇಕು ಎಂದರು.

ಬೀಳ್ಕೊಡುಗೆ ಸಮಾರಂಭದಲ್ಲಿ ಎಎಸ್ ಪಿ. ನಾರಾಯಣ ಬರಮನಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪೊಲೀಸ ಇಲಾಖೆಯಲ್ಲಿ ಕೆಲಸ ಮಾಡುವಾಗ ನಿಷ್ಠೂರತೆ ಇರಬೇಕು. ಕಾನೂನು ಪ್ರಕಾರ ಆಗುವುದನ್ನು ಮಾಡಲು ಆಗುತ್ತದೆ, ಇಲ್ಲದ್ದನ್ನು ಇಲ್ಲವೆಂದು ನೇರವಾಗಿ ಹೇಳುವ ಸಾಮರ್ಥ್ಯ, ಗುಣ ಬೆಳೆಸಿಕೊಳ್ಳಬೇಕು ಎಂದರು. ಧಾರವಾಡದಿಂದ ನಿಮ್ಮೆಲ್ಲರ ಪ್ರೀತಿ, ವಿಶ್ವಾಸದ ಮೂಟೆ ಹೊತ್ತು ಹೊರಟಿದ್ದೇನೆ. ಧಾರವಾಡ ಜಿಲ್ಲೆ ಶಾಂತ, ಸುಂದರವಾಗಿದೆ. ಸಂಸ್ಕಾರ, ಸಂಸ್ಕೃತಿ ಇನ್ನೂ ಉಳಿದಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಅರ್ಯಾ ಅವರು ಮಾತನಾಡಿ, ನೂರು ಪುಸ್ತಕ ಹೇಳುವ ಸಾರವನ್ನು ಒಬ್ಬ ಹಿರಿಯ ಅಧಿಕಾರಿಯ ಅನುಭವದ ಮಾತುಗಳು ಹೇಳುತ್ತವೆ. ಹಿರಿಯ ಪೊಲೀಸ್ ಅಧಿಕಾರಿ ನಾರಾಯಣ ಬರಮನಿ ನಮ್ಮ ಪೊಲೀಸ ಇಲಾಖೆಯ ಹೆಮ್ಮೆಯ ಪುತ್ರ. ಅವರ ಸೇವೆ, ನಡುವಳಿಕೆ, ಕರ್ತವ್ಯ ನಿಷ್ಠೆ ಮತ್ತು ಕರ್ತವ್ಯ ಪ್ರಜ್ಞೆ ಎಲ್ಲರಿಗೂ ಮಾದರಿಯಾಗಿದೆ ಎಂದರು.

ನಾರಾಯಣ ಬರಮನಿ ಅವರು ನಮ್ಮ ಇಲಾಖೆಯ ಐಕೋನ್. ಅವರ ಸುದೀರ್ಘ ಸೇವೆ, ಇಲಾಖೆಯ ಅಧಿಕಾರಿಗಳಿಗೆ ಸ್ಫೂರ್ತಿ, ಹೆಮ್ಮೆ ಮೂಡಿಸಿದೆ ಎದು ಎಸ್ಪಿ ಗುಂಜನ ಆರ್ಯಾ ಅವರು ಹೇಳಿದರು. ವೇದಿಕೆಯಲ್ಲಿ ಡಿವೈಎಸ್ ಪಿ ವಿನೋದ ಮುಕ್ತೆದಾರ, ನಾರಾಯಣ ಬರಮನಿ ಅವರ ಧರ್ಮಪತ್ನಿ ಕಸ್ತೂರಿ ಬರಮನಿ, ಸೈಬರ್ ಪೊಲೀಸ ಠಾಣೆ ಡಿವೈಎಸ್.ಪಿ.ಶಿವಾನಂದ ಕಟಗಿ, ಡಿಎಸ್ಪಿ ಡಿಎಆರ್ ದೂಳಪ್ಪ ಧನಗರ ಇದ್ದರು. ಕಾರ್ಯಕ್ರಮದಲ್ಲಿ ಪೊಲೀಸ್ ಇನಸ್ಪೆಕ್ಟರ್ ಗಳಾದ ಮುರಗೇಶ ಚಣ್ಣನ್ನವರ, ರವಿ ಕಪ್ಪತ್ತನವರ, ಸಹಾಯಕ ಆಡಳಿತ ಅಧಿಕಾರಿ ಮಹಾಂತೇಶ ಎಸ್.ಹಿರೇಮಠ, ಸೋಕೊ ಅಧಿಕಾರಿ ಸಂಜೀವ ಪಾಟೀಲ ಮತ್ತು ಇತರರು ಮಾತನಾಡಿದರು. ಪಿಐ ಮಹಾಂತೇಶ ನಿರೂಪಿಸಿದರು. ಡಿವೈಎಸ್.ಪಿ ಶಿವಾನಂದ ಕಟಗಿ ವಂದಿಸಿದರು. ಕಾರ್ಯಕ್ರಮದಲ್ಲಿ ದಾರವಾಡ ಗ್ರಾಮೀಣ ಜಿಲ್ಲೆಯ ವಿವಿಧ ಪೊಲೀಸ ಠಾಣೆಯ ಅಧಿಕಾರಿಗಳು, ಸಿಬ್ಬಂದಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

ಸಾಗುವಳಿ ಸಕ್ರಮ: ಡಿಸಿಗೆ ಮನವಿ

ಸಾಗುವಳಿ ಸಕ್ರಮಕ್ಕಾಗಿ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದದ ಮುಖಂಡರು ಡಿಸಿಗೆ ಮನವಿ ಸಲ್ಲಿಸಿದರು.

ಧಾರವಾಡ: ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದದ ಪ್ರಮುಖರು ಧಾರವಾಡ ಜಿಲ್ಲೆಯಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಮೂಲಕ ಸಿಎಂಗೆ ಮನವಿ ಸಲ್ಲಿಸಿದರು.

ಧಾರವಾಡ ಜಿಲ್ಲೆಯಲ್ಲಿ ದಲಿತ ಸಮುದಾಯಗಳು ಬಹಳಷ್ಟು ವರ್ಷಗಳಿಂದ, ಸರಕಾದ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದು, ಅಂತಹ ರೈತರಿಗೆ ಸಿಎಂ ಸಿದ್ದರಾಮಯ್ಯಾನವರು, ಸಾಗುವಳಿ ಚೀಟಿ ಸಕ್ರಮಮಾಡಲು ಅನುಕೂಲ ಮಾಡೊಕೊಡಬೇಕಂದು ಒತ್ತಾಯಿಸಿ, ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಮಾಡಿದರು.

ಈ ಸಂದರ್ಭದಲ್ಲಿ ರಾಜ್ಯ ಸಮಿತಿ ಸದಸ್ಯರಾದ ಲಕ್ಷ್ಮಣ್ ಈ ದೊಡ್ಡಮನಿ, ಧಾರವಾಡ ಅಧ್ಯಕ್ಷರಾದ ಮಂಜುನಾಥ್ ಶರೇವಾಡ ಹಾಗೂ ಸಂಚಾಲಕರು ಶಕ್ತಿರಾ ದಂಡೇಲಿ, ಪ್ರಕಾಶ್ ಸಿದ್ದಪ್ಪನವರ್ , ಭರತ್ ಆರ್ವೇದ, ರಹಿಮಾನ್ ನೀಚನಕಿ, ಶುಭೋದಯ ಮಲ್ಲಿಗೇವಾಡ, ಪ್ರವೀಣ್ ಬೆಳಂಕರ್ ಹಾಗೂ ಶಕುಂತಲಾ ವಾಲಿಕಾರ್, ರಾಜೇಶ್ವರಿ ದೊಡ್ಮನಿ ಮುಂತಾದವರು ಉಪಸ್ಥಿತರಿದ್ದರು.

ಕಾರ್ಮಿಕರ ಜೀವನ ಮಟ್ಟ ಸುಧಾರಣೆಗೆ ಇಲಾಖೆ ಬದ್ಧ: ಸಚಿವ

ಗದಗ: ಶ್ರಮೇವ್ ಜಯತೇ ಎಂಬ ನುಡಿಯಂತೆ ದೇಶದಲ್ಲಿ ಸಣ್ಣ ಸಣ್ಣ ವೃತ್ತಿಯನ್ನು ಮಾಡಿ ಶ್ರಮ ಜೀವಿಯಾಗಿ ವೃತ್ತಿಯನ್ನು ಅವಲಂಬಿಸಿಯೇ ಜೀವನ ನಡೆಸುತ್ತಿರುವ 91 ಅಸಂಘಟಿತ ವರ್ಗಗಳ ಕಾರ್ಮಿಕರಿದ್ದಾರೆ. ಸದರಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಅವರ ಜೀವನ ಮಟ್ಟ ಸುಧಾರಣೆಗೆ ಸ್ಮಾರ್ಟ ಕಾರ್ಡ ವಿತರಿಸಲಾಗುತ್ತಿದ್ದು ಈ ಯೋಜನೆಯ ಸೌಲಭ್ಯ ಅಸಂಘಟಿತ ಕಾರ್ಮಿಕರು ಪಡೆದುಕೊಳ್ಳಬೇಕೆಂದು ಕಾರ್ಮಿಕ ಇಲಾಖೆ ಸಚಿವ ಸಂತೋಷ ಲಾಡ್ ಅವರು ತಿಳಿಸಿದರು.

ನಗರದ ವಿವೇಕಾನಂದ ಸಭಾಂಗಣದಲ್ಲಿ ಶುಕ್ರವಾರ ಕಾರ್ಮಿಕ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಹಾಗೂ ಸಾರಿಗೆ ಇಲಾಖೆ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಗದಗ ಇವರ ಸಂಯುಕ್ತ ಆಶ್ರಯದಲ್ಲಿ ಗದಗ ಜಿಲ್ಲೆಯ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಹಾಗೂ ಯೋಜನೆಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಸಂಘಟಿತ ವಲಯದ ಕಾರ್ಮಿಕರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲರಾಗಿದ್ದು ಸಂಘಟಿತ ಕಾರ್ಮಿಕರಿಗೆ ದೊರಕುವ ಕಾನೂನಾತ್ಮಕ ಸೌಲಭ್ಯಗಳು ಅಸಂಘಟಿತ ಕಾರ್ಮಿಕರಿಗೂ ಒದಗಿಸಬೇಕೆಂಬುದು ಸರ್ಕಾರದ ಧ್ಯೇಯೋದ್ದೇಶವಾಗಿದೆ. ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ 91 ಅಸಂಘಟಿತ ವರ್ಗಗಳ ಕಾರ್ಮಿಕರನ್ನು ಗುರುತಿಸಲಾಗಿದ್ದು ಸುಮಾರು 30 ರಿಂದ 40 ಲಕ್ಷ ಕಾರ್ಮಿಕರು ಒಳಗೊಂಡಿದ್ದು, ಸದರಿ ಕಾರ್ಮಿಕರನ್ನು ಉಚಿತವಾಗಿ ನೊಂದಾಯಿಸಿ ಸ್ಮಾರ್ಟ ಕಾರ್ಡಗಳನ್ನು ನೀಡಲಾಗುತ್ತಿದೆ. ಸರ್ಕಾರದಿಂದ ಜಾರಿಗೊಂಡಿರುವ ವಿವಿಧ ಸೌಲಭ್ಯಗಳು ಕಾರ್ಮಿಕರಿಗೆ ತಲುಪಬೇಕು. ಈ ನಿಟ್ಟಿನಲ್ಲಿ ವ್ಯಾಪಕ ಪ್ರಚಾರವೂ ಅತ್ಯಗತ್ಯವಾಗಿದೆ ಎಂದರು. ಶಾಸಕ ಜಿ.ಎಸ್. ಪಾಟೀಲ ಅವರು ಮಾತನಾಡಿದರು. ಸಾಂಕೇತಿಕವಾಗಿ ಜಿಲ್ಲೆಯ ಅಸಂಘಟಿತ ಕಾರ್ಮಿಕರಿಗೆ 25 ಸ್ಮಾರ್ಟ್ ಕಾರ್ಡಗಳನ್ನು, 4 ಅಪಘಾತ ಪರಿಹಾರ ಚೆಕ್, 1 ಆಶಾ ದೀಪ ಯೋಜನೆ ಚೆಕ್‌ನ್ನು ಕಾರ್ಮಿಕ ಸಚಿವರು ವಿತರಿಸಿದರು.

ಕಾರ್ಯಕ್ರಮವನ್ನು ಸಚಿವ ಸಂತೋಷ ಲಾಡ್ ಅವರು ಉದ್ಘಾಟಿಸಿದರು.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಜಂಟಿ ಕಾರ್ಯದರ್ಶಿಗಳು ಹಾಗೂ ಜಂಟಿ ಕಾರ್ಮಿಕ ಆಯುಕ್ತರಾದ ಡಾ.ಎಸ್.ಬಿ. ರವಿಕುಮಾರ್ ಅವರು ಸಂವಿಧಾನ ಪೀಠಿಕೆಯನ್ನು ಬೋಧಿಸಿದರು ಹಾಗೂ ಪ್ರಾಸ್ತಾವಿಕವಾಗಿ ಮಾತನಾಡಿ ಸರ್ಕಾರದಿಂದ ಕಾರ್ಮಿಕರಿಗೆ ಇರುವ ಸೌಲಭ್ಯಗಳ ಕುರಿತು ವಿವರಿಸಿದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ , ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್, ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ರೋಹನ್ ಜಗದೀಶ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಗ್ಯಾರಂಟಿ ಸಮಿತಿ ಸದಸ್ಯ, ಅಧ್ಯಕ್ಷ ಕೃಷ್ಣಗೌಡ ಎಚ್ ಪಾಟೀಲ, ಬರ್ಕತ್ ಅಲಿ ಮುಲ್ಲಾ, ಗದಗ ಉಪವಿಭಾಗದ ಕಾರ್ಮಿಕ ಅಧಿಕಾರಿ ಶ್ರೀಶೈಲ ಸೋಮನಕಟ್ಟಿ, ಸಹಾಯಕ ಕಾರ್ಮಿಕ ಆಯುಕ್ತರಾದ ಸಚಿನ್ ವೈ ಹಳೇಮನಿ , ಹಿರಿಯ ಕಾರ್ಮಿಕ ನಿರೀಕ್ಷಕರು ಕಾರ್ಮಿಕ ನಿರೀಕ್ಷಕರು, ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರು ಹಾಜರಿದ್ದರು. ನಾಡಗೀತೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಬೆಳಗಾವಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತರಾದ ಡಿ ಜಿ ನಾಗೇಶ ಸರ್ವರನ್ನು ಸ್ವಾಗತಿಸಿದರು. ಬಾಹುಬಲಿ ಜೈನರ್ ಕಾರ್ಯಕ್ರಮ ನಿರೂಪಿಸಿದರು. ಗದಗ ಜಿಲ್ಲೆಯ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ 1548ಕ್ಕೂ ಹೆಚ್ಚು ಸ್ಮಾರ್ಟ ಕಾರ್ಡಗಳನ್ನು ವಿತರಿಸಲಾಯಿತು.

ಮಾರಾಟ ಉತ್ಸವ ಆ.15ರಿಂದ

ಸಭೆಯಲ್ಲಿ ತಾತನಗೌಡ ಎಸ್. ಪಾಟೀಲ ಮಾಹಿತಿ ಪತ್ರವನ್ನು ಬಿಡುಗಡೆ ಮಾಡಿದರು.

ಗದಗ: ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ''50ನೇ ವರ್ಷದ ಸುವರ್ಣ ಮಹೋತ್ಸವದ ಅಂಗವಾಗಿ ಅಖಿಲ ಕರ್ನಾಟಕ ವಾಣಿಜ್ಯೋದ್ಯಮಿಗಳ ಸಮ್ಮೇಳನ ಹಾಗೂ ಕೈಗಾರಿಕಾ ವಸ್ತು ಪ್ರದರ್ಶನ ಹಾಗೂ ಮಾರಾಟ ಗದಗ ಉತ್ಸವ-2025''ನ್ನು ಆಗಸ್ಟ್15 ರಿಂದ 19 ರವರೆಗೆ ಶ್ರೀಸ್ವಾಮಿ ವಿವೇಕಾನಂದ ಸಭಾ ಭವನದಲ್ಲಿ ವಸ್ತು ಪ್ರದರ್ಶನ ಹಾಗೂ ಕಾರ್ಯಕ್ರಮವನ್ನು ಕೆ.ಎಚ್. ಪಾಟೀಲ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದು ಸಂಸ್ಥೆಯ ಅಧ್ಯಕ್ಷರಾದ ತಾತನಗೌಡ ಎಸ್. ಪಾಟೀಲ ತಿಳಿಸಿದರು.

ಅವರು ಸಂಸ್ಥೆಯ ಬನಪ್ಪ ಸಂಕಪ್ಪ ಸಂಕಣ್ಣವರ ಸಭಾ ಭವನದಲ್ಲಿ ಆಯೋಜಿಸಿದ ಸಭೆಯಲ್ಲಿ (ಮಾಹಿತಿ ಪತ್ರ) ಬಿಡುಗಡೆ ಮಾಡಿ ಮಾತನಾಡಿ, ಪ್ರತಿ ವರ್ಷದಂತೆ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರ, ಗದಗ ಜಿಲ್ಲಾ ಕೈಗಾರಿಕಾ ಕೇಂದ್ರ, (ಗ್ರಾಕೈ) ಜಿಲ್ಲಾ ಪಂಚಾಯತ, ಗದಗ ಇವರುಗಳ ಸಂಯುಕ್ತ ಆಶ್ರಯದಲ್ಲಿ ಕೈಗಾರಿಕಾ ವಸ್ತು ಪ್ರದರ್ಶನ ಹಾಗೂ ಮಾರಾಟ ಗದಗ ಉತ್ಸವ -2025ನ್ನು ಆಯೋಜಿಸಲಾಗಿದೆ ಎಂದರು. ಇದೆ ಸಂದರ್ಭದಲ್ಲಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ 50ನೇ ವರ್ಷದ ಸುವರ್ಣ ಮಹೋತ್ಸವ ಅಖಿಲ ಕರ್ನಾಟಕ ವಾಣಿಜ್ಯೋದ್ಯಮಿಗಳ ಸಮ್ಮೇಳನ ಹಾಗೂ ಕೈಗಾರಿಕಾ ವಸ್ತು ಪ್ರದರ್ಶನ ಹಾಗೂ ಮಾರಾಟ ಗದಗ ಉತ್ಸವ-2025ರ ಬ್ರೋಚರ್ (ಮಾಹಿತಿ ಪತ್ರ) ಬಿಡುಗಡೆ ಮಾಡಲಾಯಿತು. ಪ್ರತಿದಿನ ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಈ ವಸ್ತು ಪ್ರದರ್ಶನದಲ್ಲಿ ಭಾಗವಹಿಸಲು ಹಾಗೂ ಮಳಿಗೆಯನ್ನು ಕಾಯ್ದಿರಿಸಲು ಮತ್ತು ಆಸಕ್ತ ಕಲಾವಿದರು ಹೆಸರನ್ನು ನೋಂದಾಯಿ ಸಲು ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಕಚೇರಿ ಸಂಪರ್ಕಿಸಬೇಕೆಂದು ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಉತ್ಸವ ಸಮಿತಿ ಚೇರಮನ್ನರಾದ ಆನಂದ ಎಲ್. ಪೊತ್ನೀಸ ,ಕೋ-ಚೇರಮನ್ನರಾದ ಸದಾಶಿ ವಯ್ಯ ಎಸ್. ಮದರಿಮಠ ಮನವಿ ಮಾಡಿರುತ್ತಾರೆಂದು ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಅಶೋಕಗೌಡ ಕೆ. ಪಾಟೀಲ ಇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಎಂ ಬದಲಾವಣೆ ಬಗ್ಗೆ ಮಾಹಿತಿ ಇಲ್ಲ

ಗದಗ: ರೌಡಿಶೀಟರ ಬಿಕ್ಲ ಕೊಲೆ ಪ್ರಕರಣದಲ್ಲಿ ಬಿಜೆಪಿ ಶಾಸಕ ಬೈರತಿ ಬಸವರಾಜ ಹೆಸರು ಸಹ ಕೇಳಿ ಬಂದಿರೊ ವಿಚಾರವಾಗಿ, ಆ ಬಗ್ಗೆ ನನಗೆ ಗೊತ್ತಿಲ್ಲ, ಕಾನೂನು ಪ್ರಕಾರ ಕ್ರಮ ಆಗಿರುತ್ತೆ. ಇದರ ಬಗ್ಗೆ ಗೃಹ ಸಚಿವರನ್ನು ಕೇಳಿ ಎಂದು ಸಚಿವ ಸಂತೋಷ ಲಾಡ್ ಹೇಳಿದ್ದಾರೆ. ಅವರು ಗದಗನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಶಾಸಕರ ಜೊತೆಗೆ ಸುರ್ಜೆವಾಲಾ ಸಭೆ ನಡೆಸುತ್ತಿರುವ ವಿಚಾರವಾಗಿ, ಪಕ್ಷದಲ್ಲಿ ಶಿಸ್ತು ತರಲು ಶಾಸಕ ಹಾಗೂ ಸಚಿವರ ಜೊತೆಗೆ ಸುರ್ಜೆವಾಲಾ ಸಭೆ ಮಾಡಿದ್ದಾರೆ. ಅದರ ಹೊರತು ಬೇರೆ ಏನಿಲ್ಲ. ಇನ್ನು ಸಿಎಂ ಬದಲಾವಣೆ ಬಗ್ಗೆ ನನಗೆ ಮಾಹಿತಿ ಇಲ್ಲ ನಿಮಗೆ ಇದ್ದರೆ ಹೇಳಿ ಎಂದರು. ಇನ್ನು ಪ್ರತಾಪ್ ಸಿಂಹ ಲಾಡ್ ಬಂಡವಾಳ ಬಯಲು ಮಾಡ್ತೇನೆ ಎಂದು ಹೇಳಿದ ಹೇಳಿಕೆಗೆ ಪ್ರತಿಕ್ರಿಯಿಸಿ, ಅವರಿಗೆ ಒಳ್ಳೆಯದಾಗಲಿ. ಮೊದಲಿನಿಂದಲೂ ನಾನು ಯಾರಿಗೂ ಬೈದಿಲ್ಲ. ನಮ್ಮ ಬಗ್ಗೆ ಎಕ್ಸಪೋಜ್ ಮಾಡ್ತೇನೆಂದ್ರೆ ಒಳ್ಳೆಯದಲ್ವಾ ಎಂದರು. ದಲಿತ ಸಿಎಂ ಚರ್ಚೆ ವಿಚಾರವಾಗಿ ಮಾತನಾಡಿ, ಬಿಜೆಪಿಯವರು ನಾರಾಯಣಸ್ವಾಮಿಯನ್ನ ಮುಂದಿನ ಸಿಎಂ ಆಗಿ ಘೋಷಣೆ ಮಾಡ್ತಾರಾ...? ಅವರೇ ಏನಾದ್ರು ಹುಟ್ಟಿಸಿಕೊಂಡು ಮಾತಾಡ್ತಾರೆ ಎಂದರು. ಕಾನೂನಿನಲ್ಲಿ ಓಬಿಸಿ ಶೈಕ್ಷಣಿಕ, ಆರ್ಥಿಕವಾಗಿ ಹಿಂದುಳಿದವರನ್ನ ಗುರ್ತಿಸಲಾಗ್ತಿದೆ ಎಂದರು

ಮಲಪ್ರಭಾ ಕಾಲುವೆಗೆ ನೀರು ಹರಿಸಲು ಆಗ್ರಹ

ನರಗುಂದ ಮಿನಿ ವಿಧಾನಸೌಧ ಎದುರು ಕಾಲುವೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ರೈತ ಮುಖಂಡರು ಮನವಿ ಸಲ್ಲಿಸಿದರು.

ನರಗುಂದ: ಕಳೆದ ಒಂದು ತಿಂಗಳಿಂದ ತಾಲೂಕಿನಲ್ಲಿ ಮಳೆ ಸುರಿಯದೆ ಬಿತ್ತಿದ ಮುಂಗಾರು ಬೆಳೆಗಳು ತೇವಾಂಶ ಕೊರತೆಯಿಂದ ಕಮರಿಹೋಗುತ್ತಿದ್ದು ಕೂಡಲೆ ಮಲಪ್ರಭಾ ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮನವಿ ಸಲ್ಲಿಸಿದೆ.

ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ಮಳೆ ಕೊರತೆಯಿಂದ ಬಿತ್ತನೆ ಮಾಡಿದ ಗೋವಿನಜೋಳ, ಹತ್ತಿ ಹೆಸರು ಹಾಳಾಗುತ್ತಿದ್ದು ಕೂಡಲೆ ನೀರು ಹರಿಸಿದರೆ ಶೇ.50ರಷ್ಟು ಬೆಳೆಯನ್ನು ಉಳಿಸಿಕೊಳ್ಳಲು ಸಹಾಯವಾಗುತ್ತದೆ. ಕೂಡಲೆ ರೈತರ ಮನವಿಗೆ ಸ್ಪಂಧಿಸಿ ಮಲಪ್ರಭಾ ಕಾಲುವೆಗಳಿಗೆ ನೀರು ಹರಿಸಬೇಕು, ವಿಳಂಭ ಮಾಡಿದರೆ ಬೆಳೆ ಹಾನಿಗೆ ನೀವೆ ಕಾರಣರಾಗುತ್ತೀರಿ ಎಂದು ಎಚ್ಚರಿಸಿ ತಹಸೀಲ್ದಾರ ಅವರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ನೀರಾವರಿ ನಿಗಮದ ಅಧಿಕಾರಿಗಳಿಗೂ ಮನವಿ ಸಲ್ಲಿಸಿ ಒತ್ತಾಯಿಸಿದರು. ಈ ಸಂದರ್ಭದಲ್ಲಿ ರೈತ ಮುಖಂಡ ಶಂಕರ ಅಂಬಲಿ, ರೈತ ಸಂಘದ ಅಧ್ಯಕ್ಷ ಬಸವರಾಜ ಸಾಬಳೆ, ಚನ್ನು ನಂದಿ, ಭಾರತೀಯ ಕಿಸಾನ್ ಸಂಘದ ಎಸ್.ಎನ್ .ಪಾಟೀಲ, ವೀರಣ್ಣ ಸೊಪ್ಪಿನ, ಪ್ರವೀಣ ಯರಗಟ್ಟಿ, ಮನೋಹರ ಹುಯಿಲಗೋಳ, ರವಿ ಒಡೆಯರ, ಡಿ.ಎಸ್.ಗುಡಿಸಾಗರ, ಕೆ. ಕೆ.ಹೂಗಾರ ಸೇರಿದಂತೆ ಮುಂತಾದವರು ಇದ್ದರು. ಇಂದು ಸಮಿತಿ ಸಭೆ: ಮಲಪ್ರಭಾ ಜಲಾಶಯದಿಂದ ಅಚ್ಚುಕಟ್ಟು ಪ್ರದೇಶಕ್ಕೆ ಮುಂಗಾರು ಹಂಗಾಮಿಗೆ ನೀರು ಬಿಡುವ ಕುರಿತು ಶಾಸಕ ಸಿ.ಸಿ.ಪಾಟೀಲ ಅವರು ಪತ್ರ ಬರೆದು ಮನವಿ ಮಾಡಿಕೊಂಡ ಬೆನ್ನಲ್ಲೆ ಜು.18 ರಂದು ಬೆಳಗ್ಗೆ 11.30ಕ್ಕೆ ಬೆಳಗಾಂವ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಸಚಿವರು, ಮಲಪ್ರಭಾ ನೀರಾವರಿ ಸಲಹಾ ಸಮಿತಿ ಅಧ್ಯಕ್ಷೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿದೆ. ಇದರಿಂದ ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ರೈತರಲ್ಲಿ ಆಶಾ ಭಾವನೆ ಮೂಡಿದೆ.

ಬೆಳೆ ವಿಮಾ ಯೋಜನೆ ಜಿಲ್ಲೆಯಲ್ಲಿ ಅನುಷ್ಠಾನ

ಗದಗ: 2025-26ನೇ ಸಾಲಿನಲ್ಲಿ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ (ಆರ್‌ಡಬ್ಲ್ಯುಬಿಸಿಐಎಸ್) ಬೆಳೆ ವಿಮಾ ಯೋಜನೆಯನ್ನು ಗದಗ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಆದೇಶದಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಬೆಳೆ ಸಾಲ ಪಡೆಯುವ ಮತ್ತು ಬೆಳೆ ಸಾಲ ಪಡೆಯದ ದಾಳಿಂಬೆ, ಪಪ್ಪಾಯ, ದ್ರಾಕ್ಷಿ ಹಾಗೂ ಮಾವು ಬೆಳೆಗಳನ್ನು ಬೆಳೆದ ರೈತರು ವಿಮಾ ಕಂತನ್ನು ಪಾವತಿಸಲು 2025ರ ಜು.31ರಂದು ಕೊನೆಯ ದಿನವಾಗಿದ್ದು, ಬೆಳೆ ಸಾಲ ಪಡೆದ ರೈತರು ಸಂಬಂಧಿತ ಬ್ಯಾಂಕ್‌ಗಳ ಮೂಲಕ ಹಾಗೂ ಬೆಳೆ ಸಾಲ ಪಡೆಯದ ರೈತರು ಬ್ಯಾಂಕ್ ಅಥವಾ ಸಾಮಾನ್ಯ ಸೇವಾ ಕೇಂದ್ರ, ಕಾಮನ್ ಸರ್ವಿಸ್ ಸೆಂಟರ್ ಸಿಎಸ್‌ಸಿ ಮೂಲಕ ಕೂಡಾ ಈ ಯೋಜನೆಯಡಿ ನೋಂದಾಯಿಸಬಹುದಾಗಿದೆ. ಬೆಳೆವಾರು ಪ್ರತಿ ಎಕರೆಗೆ ವಿಮಾ ಕಂತು ಮಾವು ರು.1600 ದ್ರಾಕ್ಷಿ ರು.5600 ದಾಳಿಂಬೆ ರು.2540 ಹಾಗೂ ಪಪ್ಪಾಯ ರು.2680 ಗಳನ್ನು ನಿಗದಿಪಡಿಸಲಾಗಿರುತ್ತದೆ. ಪಹಣಿ ಪತ್ರಿಕೆ, ಬ್ಯಾಂಕ್ ಖಾತೆ ಪುಸ್ತಕದ ಪ್ರತಿ ಮತ್ತು ಆಧಾರ ಕಾರ್ಡನ ಪ್ರತಿ ಸೇರಿ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ತೋಟಗಾರಿಕೆ ಕಚೇರಿ ಅಥವಾ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದೆಂದು ಎಂದು ತೋಟಗಾರಿಕೆ ಉಪ ನಿರ್ದೇಶಕರು ತಿಳಿಸಿರುತ್ತಾರೆ.

ಕರ್ಣಾಟಕ ಬ್ಯಾಂಕ್‌ಗೆ ರಾಘವೇಂದ್ರ ಎಸ್. ಭಟ್ ನೂತನ ಎಂಡಿ | ಬ್ಯಾಂಕಿಂಗ್ ನೇಮಕದಲ್ಲಿ ಇತಿಹಾಸ

ಅಂದು ಕ್ಲರ್ಕ್, ಇಂದು ಅದೇ ಬ್ಯಾಂಕ್‌ಗೆ ಎಂಡಿ

ಮಂಗಳೂರು: ಕರ್ಣಾಟಕ ಬ್ಯಾಂಕ್‌ಗೆ ಗುಮಾಸ್ತ ಹುದ್ದೆಗೆ ಸೇರಿ ಅದೇ ಬ್ಯಾಂಕ್‌ನಲ್ಲಿ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹುದ್ದೆ ಅಲಂಕರಿಸಿ ರಾಘು ವೇಂದ್ರ ಎಸ್.ಭಟ್ ಸಾಧನೆ ಮಾಡಿದ್ದಾರೆ. ಕನ್ನಡದ ಹೆಮ್ಮೆಯ ಬ್ಯಾಂಕ್‌ಗೆ ತಳಮಟ್ಟದಿಂದ ಸೇವೆ ಸಲ್ಲಿಸಿದ ಕನ್ನಡಿಗನನ್ನೇ ಆಯ್ಕೆ ಮಾಡುವ ಮೂಲಕ ಮಂಗ ಳೂರು ಮೂಲದ ಬ್ಯಾಂಕ್ ಇತಿಹಾಸ ಬರೆದಿದೆ.

- 101 ವರ್ಷದ ಕರ್ಣಾಟಕ ಬ್ಯಾಂಕ್ ದೇಶದ ಪ್ರಮುಖ ಖಾಸಗಿ ಬ್ಯಾಂಕ್
- 38 ವರ್ಷಗಳ ಕಾಲ ಬ್ಯಾಂಕಿನಲ್ಲಿಯೇ ಸೇವೆ ಸಲ್ಲಿಸಿದ ವ್ಯಕ್ತಿಗೆ ಎಂಡಿ ಹುದ್ದೆ
- ಚೀಫ್ ಮ್ಯಾನೇಜರ್‌ಆಗಿ ನಿವೃತ್ತಿಯಾಗಿ 6 ವರ್ಷದ ಬಳಿಕ ಸಿಇಒ ಸ್ಥಾನ

ಉಡುಪಿಯ ಹಾವಂಜೆ ಮೂಲದ ರಾಘವೇಂದ್ರ ಭಟ್ ಶ್ರೀನಿವಾಸ ಭಟ್ 1981ರಲ್ಲಿ ಕರ್ಣಾಟಕ ಬ್ಯಾಂಕ್‌ಗೆ ಗುಮಾ ಸ್ತನಾಗಿ ಉದ್ಯೋಗ ಗಿಟ್ಟಿಸಿಕೊಂಡಿ ದ್ದರು. ಬಳಿಕ ಮಂಗಳೂರು, ಬೆಂಗಳೂರು, ಮುಂಬಯಿ, ದಿಲ್ಲಿ ಸಹಿತ ವಿವಿಧ ಕಡೆ ಕರ್ತವ್ಯ ನಿರ್ವಹಿಸಿ 2019ರಲ್ಲಿ ಮುಖ್ಯ ಮಹಾಪ್ರಬಂಧಕರಾಗಿ ನಿವೃತ್ತಿ ಹೊಂದಿದ್ದರು.

ನಿವೃತ್ತಿಯಾಗಿ ಆರು ವರ್ಷದ ಬಳಿಕ ರಾಘವೇಂದ್ರ ಭಟ್ ಅವರನ್ನು ಇದೀಗ ಹಂಗಾಮಿ ಮಧ್ಯಂತರ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಿಸಲಾಗಿದೆ. ಮೂರು ತಿಂಗಳೊಳಗೆ ಈ ನೇಮಕಕ್ಕೆ ಬ್ಯಾಂಕ್ ಷೇರುದಾರರ ಅನುಮೋದನೆ ಪಡೆಯಬೇಕಿದೆ. ಇವರ ಮಾರ್ಗದರ್ಶನದಲ್ಲಿ ಬ್ಯಾಂಕ್ ಬೆಳವಣಿಗೆ ಮತ್ತು ಯಶಸ್ಸಿನತ್ತ ಸಾಗಲಿದೆ ಎಂದು ಕರ್ಣಾಟಕ ಬ್ಯಾಂಕ್ ವಿಶ್ವಾಸ ವ್ಯಕ್ತಪಡಿಸಿದೆ.

ಮಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಕರ್ಣಾಟಕ ಬ್ಯಾಂಕ್‌ನ ಹಿಂದಿನ ಎಂಡಿ ಬೆಂಗಳೂರಿ ನಲ್ಲಿಯೇ ಕುಳಿತು ಕಾರ್ಯ ನಿರ್ವಹಿಸುತ್ತಿದ್ದರು. ಇದೀಗ ಮಂಗಳೂರು ಮೂಲದ ಮಂಗಳೂರಿನಲ್ಲಿಯೇ ಇರುವ, ಮಂಗಳೂರಿನ ಬ್ಯಾಂಕಿನಲ್ಲಿಯೇ ಕೆಲಸಕ್ಕೆ ಸೇರಿದ್ದ ಉತ್ತರಾಧಿಕಾರಿಯನ್ನು ನೇಮಿಸಲಾಗಿದೆ.

ಒಂದು ಶತಮಾನದ ಇತಿಹಾಸ ಮತ್ತು ಸದ್ಭಾವನೆಯ ಬಲವಾದ ಅಡಿಪಾಯದ ಮೇಲೆ ನಿಂತ ಕರ್ಣಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆಗಿ ಸೇರಲು ನನಗೆ ಹೆಮ್ಮೆಯಿದೆ. ಬ್ಯಾಂಕ್ ಸೇವೆಯನ್ನು ಮತ್ತಷ್ಟು ಗ್ರಾಹಕ ಸ್ನೇಹಿಯ ನ್ನಾಗಿಸಲು ಪಾಲುದಾರರೊಂದಿಗೆ ಕೆಲಸ ಮಾಡಲಿ ದ್ದೇನೆ ಎಂದು ರಾಘವೇಂದ್ರ ಎಸ್. ಭಟ್ ತಿಳಿಸಿದ್ದಾರೆ.

ಯಾಕಾಗಿ ಈ ಮಧ್ಯಂತರ ನೇಮಕ?: ಮಾಜಿ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಕೃಷ್ಣನ್ ಹರಿ ಹರ ಶರ್ಮಾ ಜೂನ್ 29 ರಂದು ವೈಯಕ್ತಿಕ ಕಾರಣಗಳನ್ನು ಉಲ್ಲೇಖಿಸಿ ರಾಜೀನಾಮೆ ನೀಡಿದ್ದರು. ಇದು ಬ್ಯಾಂಕ್‌ನ ಷೇರುಗಳಲ್ಲಿ ದೊಡ್ಡ ಮಟ್ಟದ ಏರುಪೇರಿಗೆ ಕಾರಣವಾಗಿತ್ತು. ಮೇ ತಿಂಗಳಲ್ಲಿ, ಬ್ಯಾಂಕಿನ ಲೆಕ್ಕಪರಿ ಶೋಧಕರು ಮಂಡಳಿಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಪೂರ್ಣಾವಧಿ ನಿರ್ದೇಶಕರು ಮಾಡಿದ ಕೆಲವು ಖರ್ಚುಗಳನ್ನು ಬ್ಯಾಂಕ್‌ನ ಗಮನಕ್ಕೆ ತಂದಿದ್ದರು. ಇದರ ಬೆನ್ನಿಗೇ ಕಾರ್ಯನಿರ್ವಾಹಕ ನಿರ್ದೇಶಕ ಶೇಖರ್ ರಾವ್ ಅವರು ಮಂಗಳೂರಿಗೆ ಸ್ಥಳಾಂತರ ಗೊಳ್ಳಲು ಸಮಸ್ಯೆ ಮತ್ತು ಇತರ ವೈಯಕ್ತಿಕ ಕಾರಣ ಗಳನ್ನು ಉಲ್ಲೇಖಿಸಿ ರಾಜೀನಾಮೆ ನೀಡಿದರು. ಅವರ ರಾಜೀನಾಮೆ ಜುಲೈ 31 ರಿಂದ ಜಾರಿಗೆ ಬರಲಿದೆ. ಸಿಇಒ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳನ್ನು ಗುರುತಿಸಲು ಬ್ಯಾಂಕ್ ಶೋಧ ಸಮಿತಿಯನ್ನು ರಚಿಸಿದೆ.

ರಾಘವೇಂದ್ರ ಎಸ್. ಭಟ್ ಹೇಳಿದ್ದು

ಖಾಸಗಿ ರಂಗದ ಪ್ರತಿಷ್ಠಿತ ಕರ್ಣಾಟಕ ಬ್ಯಾಂಕ್‌ನ ಪ್ರಧಾನ ಕಚೇರಿಯನ್ನು ಮಂಗಳೂರಿನಿಂದ ಬೆಂಗಳೂರಿಗೆ ಸ್ಥಳಾಂತರಿಸುವ ಯಾವುದೇ ಪ್ರಸ್ತಾವನೆ ಇಲ್ಲ. ಹಿಂದಿನ ಸಿಇಒ ಮತ್ತು ಎಂಡಿ ಅವರ ಅಧಿಕಾರದ ಅವಧಿಯಲ್ಲಿ ಅವರ ಅನುಕೂಲ ಕಾರಣಕ್ಕೆ ಬೆಂಗಳೂರು ಕೇಂದ್ರೀಕರಿಸಿ ಕಾರ್ಯನಿರ್ವಹಿ ಸುತ್ತಿದ್ದಿರಬಹುದು. ಆದರೆ ಬ್ಯಾಂಕಿನ ಪ್ರಧಾನ ಕಚೇರಿ ಇಲ್ಲಿಯೇ ಇದೆ, ಇಲ್ಲಿಯೇ ಇರುತ್ತದೆ. ಕರಾವಳಿಯಲ್ಲಿ ಸ್ಥಾಪನೆಯಾದ ಬ್ಯಾಂಕ್‌ನ ಪ್ರಧಾನ ಕಚೇರಿ ಇಲ್ಲಿಯೇ ಇರಲಿದೆ.

ಬ್ಯಾಂಕಿನಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ, ಬ್ಯಾಂಕ್ ಸದೃಢವಾಗಿದೆ. ಕರ್ಣಾಟಕ ಬ್ಯಾಂಕ್ ಇತರೆ ಖಾಸಗಿ ಬ್ಯಾಂಕ್‌ಗಳ ಜತೆ ವಿಲೀನಗೊಳ್ಳುತ್ತದೆ ಎಂಬ ಸುದ್ದಿಗಳೂ ನಿಜವಲ್ಲ, ಸತ್ಯಕ್ಕೆ ದೂರ. ಈ ಬ್ಯಾಂಕಿಗೆ ಶೇ. 61ರಷ್ಟು ಸಾರ್ವಜನಿಕರ ಪ್ರಾತಿನಿಧ್ಯ ಇದೆ. ಹಾಗಾಗಿ ಇದನ್ನು ವಿಲೀನಗೊಳಿಸುವ ಯಾವುದೇ ಪ್ರಸ್ತಾಪ ಅಥವಾ ಪ್ರಯತ್ನಗಳು. ಈ ಬ್ಯಾಂಕಿನ ಮೂಲ ಬಂಡವಾಳ ಸದೃಢವಾಗಿರುವುದರಿಂದ ವಹಿವಾಟು, ಲಾಭಾಂಶಗಳಿಗೇನೂ ತೊಂದರೆ ಆಗಿಲ್ಲ. ಗ್ರಾಹಕರು ಗಾಬರಿಪಡುವ ಅಗತ್ಯ ಇಲ್ಲ. ಬ್ಯಾಂಕ್‌ನಲ್ಲಿ ಎಂಡಿ, ಸಿಇಒ ಮುಂತಾದ ಆಡಳಿತಾತ್ಮಕ ಬದಲಾವಣೆಗಳು ಸಾಮಾನ್ಯ. ಅದರಂತೆ ಎಂಡಿ, ಸಿಇಒ ನೇಮಕ ನಡೆದಿದೆ. ಸೂಕ್ತ ಕಾಲಕ್ಕೆ ಆಡಳಿತ ಮಂಡಳಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತದೆ. ಹೊರಗಿನವರು ಅಥವಾ ಒಳಗಿನವರ ನೇಮಕ ಎಂಬ ತಾರತಮ್ಯ ಇಲ್ಲ, 1991ರಲ್ಲಿ ಯು.ಎಸ್. ಭಟ್ ಎಂಬವರು ಕೇಂದ್ರ ಆಡಿಟ್ ವಿಭಾಗದಲ್ಲಿದ್ದವರು ಬ್ಯಾಂಕಿನ ಎಂಡಿ ಆಗಿದ್ದರು. ಬಳಿಕ ಹೆಚ್ಚಿನ ಸಂದರ್ಭ ಬ್ಯಾಂಕಿನಲ್ಲಿ ಇದ್ದವರನ್ನೇ ಎಂಡಿ ಆಗಿ ನೇಮಕ ಮಾಡಲಾಗಿತ್ತು. ಇದೆಲ್ಲವೂ ಆಡಳಿತ ಮಂಡಳಿ ತೀರ್ಮಾನ. ಕರ್ಣಾಟಕ ಬ್ಯಾಂಕ್ 102ನೇ ವರ್ಷಕ್ಕೆ ಕಾಲಿಡುತ್ತಿದೆ. ಪ್ರಸಕ್ತ ದೇಶಾದ್ಯಂತ 950 ಶಾಖೆ ಹೊಂದಿದ್ದು, 1.82 ಲಕ್ಷ ಕೋಟಿ ರೂ. ವಹಿವಾಟು ನಡೆಸುತ್ತಿದೆ. ಇದನ್ನು 2 ಲಕ್ಷ ಕೋಟಿ ರು. ವರೆಗೆ ವಹಿವಾಟು ತಲುಪಿಸುವ ಗುರಿ ಹೊಂದಲಾಗಿದೆ. ಇದಲ್ಲದೆ ಕೃಷಿ, ಗೃಹ ಮತ್ತಿತರ ವಲಯಗಳಿಗೂ ಆದ್ಯತೆ ನೀಡುವ ಉದ್ದೇಶ ಹೊಂದಲಾಗಿದೆ. ಆಡಳಿತದ ಜವಾಬ್ದಾರಿ ನನ್ನ ಮೇಲೆ ಇದೆ. ಇದನ್ನು ಅಚ್ಚುಕಟ್ಟಾಗಿ ನಿಭಾಯಿಸುವ ಹೊಣೆಗಾರಿಕೆ, ವಿಶ್ವಾಸ ಹೊಂದಿದ್ದೇನೆ ಎಂದರು.

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ - ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಸಮಂ/ತಾ.ಶಾ./ಸ.ಇ./ಟೆಂಡರ್-07/2025/1860 ದಿ:18.07.2025

ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳಿಗೆ ಸಂಬಂಧಿಸಿದ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂನಲ್ಲಿರುವ/ ಸ್ಟಾಂಡರ್ಡ್ ಕನ್ಸಲ್ಟೆನ್ಸಿ ಡಾಕ್ಯೂಮೆಂಟ್‌ನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://kppp.karnataka.gov.inನಲ್ಲಿ ಅರ್ಹ ಗುತ್ತಿಗೆದಾರರಿಂದ/ ಕನ್ಸಲ್ಟೆನ್ಸಿಯವರಿಂದ ದಿ: 28.07.2025ರ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರನ್ನು ಜಿ.ಎಸ್.ಟಿ. ಹೊರತುಪಡಿಸಿ ಆಹ್ವಾನಿಸಲಾಗಿದ್ದು, ಟೆಂಡರ್‌ದಾರರು ಜಿ.ಎಸ್.ಟಿ.ಯನ್ನು ಹೊರತುಪಡಿಸಿ ದರಗಳನ್ನು ನಮೂದಿಸತಕ್ಕದ್ದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: 0824-2440720)

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR / MNG / 498/ MPL / 25-26

ಪ್ರಭು ಚವ್ಹಾಣ್ ಪುತ್ರನ ವಿರುದ್ಧ ದೂರು

ಬೀದರ್: ಶಾಸಕ ಪ್ರಭು ಚವ್ಹಾಣ್, ಅವರ ಮಗ ಪ್ರತೀಕ್ ಚವ್ಹಾಣ್ ಹಾಗೂ ಕುಟುಂಬ ಸದಸ್ಯರ ವಿರುದ್ಧ ಮದುವೆ ನಿರಾಕರಣೆಯ ಸಂಬಂಧ ಮಹಾರಾಷ್ಟ್ರದ ದೇಗಲೂರ ತಾಲೂಕಿನ ಸೇವಾದಾಸ ನಗರ ತಾಂಡಾದ ಯುವತಿಯೊಬ್ಬರು ರಾಜ್ಯ ಮಹಿಳಾ ಆಯೋಗ ಹಾಗೂ ರಾಜ್ಯದ ಗೃಹ ಸಚಿವರಿಗೆ ದೂರು ನೀಡಿದ್ದಾರೆ. 2023ರ ಡಿಸೆಂಬರ್ 25ರಂದು ಔರಾದ್ ತಾಲೂಕಿನ ಬೋಂತಿಯ ಘಮಸುಬಾಯಿ ತಾಂಡಾದಲ್ಲಿ ಶಾಸಕ ಅವರ ಪುತ್ರ ಪ್ರತೀಕ್ ಚವ್ಹಾಣ್ ಜತೆ ಎಲ್ಲರ ಸಮ್ಮುಖದಲ್ಲಿ ನನ್ನ ನಿಶ್ಚಿತಾರ್ಥವಾಗಿದೆ. ನಿಶ್ಚಿತಾರ್ಥದ ನಂತರ ನಾವಿಬ್ಬರೂ ಮಹಾರಾಷ್ಟ್ರ ದೇವಸ್ಥಾನ ಸೇರಿ ವಿವಿಧೆಡೆ ಸುತ್ತಾಡಲು ಹೋಗಿದ್ದೇವು. ಈ ವೇಳೆ ಪ್ರತೀಕ್ ನನ್ನ ಜತೆ ದೈಹಿಕ ಸಂಬಂಧ ಬೆಳೆಸಿದ್ದಾರೆ. ನನ್ನ ಪಾಲಕರು ಮದುವೆ ಸಂಬಂಧ ಮಾತನಾಡಲು ಹೋದಾಗ ಅವರೊಂದಿಗೆ ಜಗಳವಾಡಿದ್ದಾರೆ. ದೂರು ಕೊಡಲು ಹೋದರೆ ಪೊಲೀಸರು ಸ್ವೀಕರಿಸಿಲ್ಲ. ನನ್ನ ಹಾಗೂ ನನ್ನ ಕುಟುಂಬಕ್ಕೆ ಅನ್ಯಾಯ ಮಾಡಿದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಆಗ್ರಹಿಸಿದ್ದಾರೆ.

ನನ್ನನ್ನು ಚುನಾವಣೆಯಲ್ಲಿ ಸೋಲಿಸಲು ಸಫಲರಾಗದವರು ನನ್ನ ಹಾಗೂ ಕುಟುಂಬದ ವೈಯಕ್ತಿಕ ಮಾನಹಾನಿಗೆ ಷಡ್ಯಂತ್ರ ನಡೆಸಿದ್ದಾರೆ. ನಾನು ನಾಲ್ಕು ಬಾರಿ ಶಾಸಕನಾಗಿರುವುದು ಕೆಲವರಿಗೆ ಅರಗಿಸಿಕೊಳ್ಳಲು ಆಗುತ್ತಿಲ್ಲ. ನಿಶ್ಚಿತಾರ್ಥ ವಿಷಯ ಉಭಯ ಕುಟುಂಬದವರು ಕುಳಿತು ಬಗೆಹರಿಸಿಕೊಂಡಿದ್ದೇವೆ. ಆದರೆ, ಕೆಲವರು ಅವರನ್ನು ಎತ್ತಿ ಕಟ್ಟುತ್ತಿದ್ದಾರೆ.

ಪ್ರಭು ಚವ್ಹಾಣ್ ಶಾಸಕ

ಇಂದು ಮೈಸೂರಿನಲ್ಲಿ ಸಾಧನಾ ಸಮಾವೇಶ

← ಮೊದಲಪುಟದಿಂದ

ಲೋಕೋಪಯೋಗಿ ಇಲಾಖೆಯ 502 ಕೋಟಿ ರೂ., ಜಲ ಸಂಪನ್ಮೂಲ ಇಲಾಖೆಯ 419 ಕೋಟಿ ರೂ., ಸೆಸ್ಕ್ ವ್ಯಾಪ್ತಿಯ 408 ಕೋಟಿ ರೂ., ಮಹಾನಗರ ಪಾಲಿಕೆಯ 320 ಕೋಟಿ ರೂ., ಸಣ್ಣ ಕೈಗಾರಿಕೆಗೆ 198 ಕೋಟಿ ರೂ., ನಗರಾಭಿವೃದ್ಧಿ ಇಲಾಖೆಯ 120 ಕೋಟಿ ರೂ., ವೈದ್ಯಕೀಯ ಶಿಕ್ಷಣ ಇಲಾಖೆ 100 ಕೋಟಿ ರೂ. ಸೇರಿ ಒಟ್ಟು 2,569 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಾಗುತ್ತಿದೆ.

ಸಿಎಂ ಸ್ಪೆಶಲ್ ಎಂಟ್ರಿ: ಕಾಂಗ್ರೆಸ್ ನಾಯಕರ ಶಕ್ತಿ ಪ್ರದರ್ಶನಕ್ಕೆ ಈ ಬಾರಿ ವಿಶೇಷವಾಗಿ ವೇದಿಕೆ ಸಜ್ಜಾಗಿದೆ. ವೇದಿಕೆಯ ಮಧ್ಯದಲ್ಲಿ ಸಿಎಂ ಸಿದ್ದರಾಮಯ್ಯ ನಡೆದುಕೊಂಡು ಹೋಗುವುದಕ್ಕೆ ಸ್ಪೆಷಲ್ ಟ್ರ್ಯಾಕ್ ನಿರ್ಮಿಸಲಾಗಿದ್ದು, ಜನರ ನಡುವೆ ಸುಮಾರು 200 ಮೀಟರ್ ನಡೆದುಕೊಂಡು ಹೋಗಲಿದ್ದಾರೆ. ಐದು ಗ್ಯಾರಂಟಿ ಯೋಜನೆಗಳ ಕುರಿತು ಕಲಾಕೃತಿ ತಯಾರಿ ಮಾಡಲಾಗಿದ್ದು, ಕೃಷಿ ಅಧಿಕಾರಿಗಳಿಂದ ಚಿತ್ತಾಕರ್ಷಕ ರಂಗೋಲಿ ಸಿದ್ಧವಾಗುತ್ತಿದೆ. ಸಮಾವೇಶಕ್ಕೆ ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಬರುವ ನಿರೀಕ್ಷೆ ಇದೆ.

ಮೋದಿ ನಾಯತ್ವಕ್ಕೆ ನಿತಿನ್ ಗಡ್ಕರಿ ವಿರೋಧ

ಕೊಪ್ಪಳ: ಸದ್ಯ ಪ್ರಧಾನಿ ಮೋದಿ ನಾಯಕತ್ವದ ಬಗ್ಗೆ ಆರ್‌ಎಸ್‌ಎಸ್ ಪ್ರಶ್ನೆ ಮಾಡುತ್ತಿದೆ. ಸಚಿವ ನಿತಿನ್ ಗಡ್ಕರಿ ದೇಶದಲ್ಲಿ ಬಡತನ ಹೆಚ್ಚುತ್ತಿದೆ ಎಂದು ಹೇಳುವ ಮೂಲಕ ಪರೋಕ್ಷವಾಗಿ ಮೋದಿ ನಾಯಕತ್ವಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದು, ವಾಸ್ತವದಲ್ಲಿ ಕೇಂದ್ರ ಸರಕಾರವೇ ಐಸಿಯುನಲ್ಲಿ ಇದೆ ಎಂದು ಕಾರ್ಮಿಕ ಸಚಿವ ಸಂತೋಷ ಲಾಡ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾರೇ ಇದ್ದರೂ 75 ವರ್ಷಕ್ಕೆ ಅಧಿಕಾರ ಬಿಟ್ಟು ಕೊಡಬೇಕು ಎಂದು ಸಂಘ ಪರಿವಾರದ ಪ್ರಮುಖರು ಹೇಳಿದ್ದಾರೆ. ಕೇಂದ್ರದಲ್ಲಿ ಸಮ್ಮಿಶ್ರ ಸರಕಾರ ಇದೆ. ಒಂದೊಮ್ಮೆ ಚಂದ್ರಬಾಬು ನಾಯ್ಡು ಕೈ ಎತ್ತಿದರೆ ಕೇಂದ್ರ ಸರಕಾರ ಉರುಳಲಿದೆ. ಯಾಕೆ ಪ್ರಧಾನಿ ಮೋದಿ ಬದಲಾವಣೆ ಆಗಬಾರದು? ಎಂದು ಪ್ರಶ್ನಿಸಿದರು.

ಬಯೋಡಿಗ್ರೇಡೇಬಲ್ ಪ್ಯಾಕ್‌ನಲ್ಲಿ ನಂದಿನಿ ಹಾಲು

ಪರಿಸರಕ್ಕೆ ಮಾರಕವಾಗಿದ್ದ ಪಾಲಿಥಿನ್ ಹಾಲಿನ ಪ್ಯಾಕೆಟ್‌ಗಳ ಬದಲಿಗೆ ಬಳಕೆ

ಬೆಂಗಳೂರು: ಪರಿಸರಕ್ಕೆ ಮಾರಕವಾಗಿದ್ದ ಪಾಲಿಥಿನ್ ಹಾಲಿನ ಪ್ಯಾಕೆಟ್ ಗಳ ಬದಲಾಗಿ ಪರಿಸರ ಸ್ನೇಹಿ ಬಯೋ ಡಿಗ್ರೇಡೇಬಲ್ ಹಾಲಿನ ಕವರ್ ಗಳನ್ನು ಬಳಕೆ ಮಾಡಲು ಕೆಎಂಎಫ್ ಮುಂದಾಗಿದೆ.

ದೇಶದಲ್ಲೇ ಮೊದಲ ಪ್ರಯತ್ನ ಇದಾಗಿದ್ದು, ದೇಶದ ಹಾಲು ಉದ್ಯಮದಲ್ಲಿಯೇ ಇದು ಐತಿಹಾಸಿಕ ಹೆಜ್ಜೆಯಾಗಿದೆ. ಕರ್ನಾಟಕದಲ್ಲಷ್ಟೇ ಅಲ್ಲದೇ ದೇಶ-ವಿದೇಶಗಳಲ್ಲೂ ಜನಮನ್ನಣೆ ಪಡದಿರುವ ನಂದಿನಿ ಹಾಲಿಗೆ ಪಾಲಿಥೀನ್ ಕವರ್ ಪ್ಯಾಕೆಟ್‌ನ ಬದಲಾಗಿ ಪರಿಸರ ಸ್ನೇಹಿ ಪ್ಯಾಕೆಟ್ ಬಳಕೆ ಮಾಡಲು ಕೆಎಂಎಫ್ ಮುಂದಾಗಿದೆ. ಮುಂದಿನ ದಿನಗಳಲ್ಲಿ ಪಾಲಿಥಿನ್ ಪ್ಯಾಕೆಟ್ ಗಳ ಬದಲಾಗಿ ಜೈವಿಕ ಅಂಶಗಳಾಗಿ ವಿಘಟನೆಯಾಗಬಲ್ಲ ಪ್ಯಾಕೆಟ್ ನಲ್ಲಿ ನಂದಿನಿ ಹಾಲು ಸರಬರಾಜಾಗಲಿದ್ದು, ನಗರದಲ್ಲಿ ಪ್ರಾಯೋಗಿಕವಾಗಿ ಜುಲೈನಲ್ಲೇ ಮಾರುಕಟ್ಟೆಗೆ ಈ ಪ್ಯಾಕೆಟ್ ನಲ್ಲಿ ನಂದಿನಿ ಹಾಲು ವಿತರಣೆಯಾಗಿ ಮುಂದಿನ ದಿನಗಳಲ್ಲಿ ಕರ್ನಾಟಕ ದಾದ್ಯಂತ ಬಿಡುಗಡೆಯಾಗಲಿದೆ.

ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್‌ಗೆ ಕಡಿವಾಣ ಹಾಕಲು ರಾಜ್ಯ ಸರಕಾರ ಮುಂದಾಗಿದ್ದರೂ ಹಾಲು ಪೂರೈಕೆಯಲ್ಲಿ ಬಳಸಲಾಗುವ ಪಾಲಿಥಿನ್ ಕವರ್‌ಗಳು ನಿಷೇಧವಾಗಿಲಿಲ್ಲ. ಪ್ರತಿದಿನ ಮುಂಜಾನೆ ಪ್ರತಿಮನೆಗೆ ನಂದಿನಿ ಹಾಲನ್ನು ಪೂರೈಕೆ ಮಾಡಲು ಪಾಲಿಥಿನ್ ಪ್ಯಾಕೆಟ್ ಬದಲಿಗೆ ಪರ್ಯಾಯ ವಸ್ತು ಇರಲಿಲ್ಲ. ಇದೀಗ ಪರಿಸರ ಸ್ನೇಹಿ ಬಯೋಡಿಗ್ರೇಡೇಬಲ್ ಪ್ಯಾಕೆಟ್ ದೊರೆತಿದ್ದು, ಇದರಲ್ಲೇ ಹಾಲು ತುಂಬಿ ಮಾರಾಟ ಮಾಡಲು ಕೆಎಂಎಫ್ ಮುಂದಾಗಿದೆ. ಮೆಕ್ಕೆಜೋಳ ಹಾಗೂ ಕಬ್ಬಿನಿಂದ ಈ ಪ್ಯಾಕೆಟ್‌ಗಳು ತಯಾರಾಗುವುದರಿಂದ ಕೇವಲ 90 ದಿನಗಳಲ್ಲೇ ಮಣ್ಣಿನಲ್ಲಿ ಕರಗುತ್ತವೆ.

ಪ್ರಸ್ತುತ ಹಾಲಿನ ಪ್ಯಾಕೆಟ್‌ಗೆ ಬಳಸುವ ಪಾಲಿಥಿನ್ ಕವರ್ ಮಣ್ಣಿಲ್ಲಿ ಕರಗಿ ಹೋಗಲು ಹಲವು ದಿನಗಳು ಬೇಕಾಗಿದ್ದು, ಒಂದು ದಿನಕ್ಕೆ ಲಕ್ಷಾಂತರ ಕವರ್‌ಗಳನ್ನು ಬಳಸಲಾಗುತ್ತಿರುವುದರಿಂದ ಗಣನೆಗೆ ದೊರೆಯದಷ್ಟು ಕವರ್‌ಗಳ ದುಷ್ಪರಿಣಾಮವನ್ನು ಊಹಿಸುವುದು ಕಷ್ಟಸಾಧ್ಯವಾಗಿದೆ. ಈ ಹಿನ್ನೆಲೆ ಬಮೂಲ್ ಕನಕಪುರದ ಶಿವನಹಳ್ಳಿ ಬಳಿ ಸ್ಥಾಪಿಸಿರುವ ಮೆಗಾಡೇರಿ ಪ್ಲಾಂಟ್‌ನಲ್ಲಿ ಹೊಸದಾಗಿ ಡಿ ಕಂಪೋಸಬಲ್ ಕವರ್‌ಗಳನ್ನು ಬಳಕೆ ಮಾಡಲು ಮುಂದಾಗಿದೆ. ಈ ಕವರ್ಗಳು ಪರಿಸರ ಸ್ನೇಹಿಯಾಗಿದ್ದು, ಹಾಲಿನ ಬಳಕೆ ಬಳಿಕ ಬೇಗನೇ ಮಣ್ಣಲ್ಲಿ ಕರಗುತ್ತೆ ಎನ್ನಲಾಗಿದೆ.

ಏನಿದು ಬಯೋ ಡಿ ಕಾಂಪೋಸಬಲ್ ಕವರ್‌ಗಳು

ವಿದೇಶಿ ತಂತ್ರಜ್ಞಾನದಲ್ಲಿ ತಯಾರಾಗಿರುವ ಬಯೋ ಡಿ ಕಂಪೋಸಬಲ್ ಕವರ್‌ಗಳನ್ನು ಜೋಳದಿಂದ ತಯಾರು ಮಾಡಲಾಗುತ್ತಿದ್ದು, ಇತರೆ ಸಾವಯವ ವಸ್ತುಗಳಂತೆ ವಾತಾವರಣದಲ್ಲಿ ಬಹುಬೇಗ ವಿಘಟನೆ ಹೊಂದುತ್ತವೆ. ಪ್ರಸ್ತುತ ಬಳಕೆ ಮಾಡುತ್ತಿರುವ ಪಾಲಿಥಿನ್ ಮಣ್ಣಿಲ್ಲಿ ಕರಗಲು ವರ್ಷಗಳೇ ಬೇಕು. ಆದರೆ ಬಮೂಲ್ ಬಳಕೆ ಮಾಡಲು ಮುಂದಾಗಿರುವ ಬಯೋ ಡಿ ಕಾಂಪೋಸಬಲ್ ಕೇವಲ ಐದಾರು ತಿಂಗಳಲ್ಲೇ ಮಣ್ಣಲ್ಲಿ ಕರಗಲಿದೆ. ಈ ಹಿನ್ನೆಲೆಯಲ್ಲಿ ಪರಿಸರ ಸ್ನೇಹಿಯಾಗಲಿದೆ.

ದೇಶದಲ್ಲಿಯೇ ಮೊದಲ ಪ್ರಯತ್ನ

ದೇಶದ ಹಾಲು ಉದ್ಯಮದಲ್ಲಿ ಪ್ರಭುತ್ವ ಸ್ಥಾಪಿಸಿರುವ ಅಮೂಲ್ನಿಂದಲೂ ಸಾಧ್ಯವಾಗದ ಕೆಲಸವನ್ನು ಬಮೂಲ್ ಮಾಡುತ್ತಿದ್ದು, ದೇಶದಲ್ಲೆ ಮೊದಲ ಪ್ರಯತ್ನ ಇದಾಗಿದೆ. ಪರಿಸರ ದಿನಾಚರಣೆಯಂದು ಬಮೂಲ್ ನಿರ್ದೇಶಕ ಡಿ.ಕೆ.ಸುರೇಶ್ ಬಯೋ ಡಿ ಕಾಂಪೋಸಬಲ್ ಕವರ್‌ಗಳಲ್ಲಿ ಹಾಲು ಪ್ಯಾಕ್ ಮಾಡುವ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ. ಇದು ಕೇವಲ ಪ್ರಾಯೋಗಿಕವಾಗಿದ್ದು ಪ್ರಾರಂಭದಲ್ಲಿ 2 ಲಕ್ಷ ಬಯೋ ಡಿ ಕಾಂಪೋಸಬಲ್ ಕವರ್‌ಗಳನ್ನು ಬಳಕೆ ಮಾಡಲಿದ್ದು, ಮುಂದಿನ ದಿನಗಳಲ್ಲಿ ಒಕ್ಕೂಟ ವ್ಯಾಪ್ತಿಯ ಎಲ್ಲಾ ಕಡೆಯೂ ಇದನ್ನು ಬಳಕೆ ಮಾಡುವ ನಿರ್ಧಾರ ಮಾಡಲಾಗಿದೆ. ಪರಿಸರ ಸ್ನೇಹಿ ಬಯೋ ಡಿ ಕಾಂಪೋಸಬಲ್ ಕವರ್‌ಗಳ ಬೆಲೆ ಪಾಲಿಥಿನ್‌ಗಿಂತ ಅಧಿಕವಾಗಿದ್ದು, ಇವುಗಳನ್ನು ವಿದೇಶದಿಂದ ಆಮದು ಮಾಡಿಕೊಳ್ಳಬೇಕಿದೆ. ಪಾಲಿಥಿನ್ ಕವರ್ ದರ ಕಡಿಮೆ ಇದ್ದರೂ ಪರಿಸರದ ಮೇಲೆ ಅದು ಉಂಟು ಮಾಡುತ್ತಿರುವ ದುಷ್ಪರಿಣಾಮವನ್ನು ಯೋಚಿಸಿದಾಗ ದರ ಜಾಸ್ತಿಯಾದರೂ ಸರಿ ಇವುಗಳನ್ನೇ ಬಳಸಲು ತೀರ್ಮಾನಿಸಲಾಗಿದೆ.

ಹೆಬ್ಬಾವು ಮಾರಾಟ ಜಾಲ ಪತ್ತೆ: ನಾಲ್ವರ ಸೆರೆ

ಮಂಗಳೂರು: ನಗರದಲ್ಲಿ ಅಪರೂಪದ ಹೆಬ್ಬಾವು ಅಕ್ರಮ ಮಾರಾಟ ಜಾಲವನ್ನು ಪತ್ತೆ ಹಚ್ಚಿರುವ ಅರಣ್ಯ ಇಲಾಖೆ ಅಧಿಕಾರಿಗಳು ಅಪ್ರಾಪ್ತ ಸೇರಿದಂತೆ ನಾಲ್ವರನ್ನು ಬಂಧಿಸಿದ್ದಾರೆ. ಮಂಗಳೂರಿನ ಬಡಗ ಉಳಿಪ್ಪಾಡಿ ನಿವಾಸಿ ವಿಶಾಲ್ ಎಚ್.ಶೆಟ್ಟಿ(18), ಸ್ಟೇಟ್ ಬ್ಯಾಂಕ್ ಬಳಿಯ ಪೆಟ್ ಝೋನ್ ಮಾಲೀಕ ಇಬ್ರಾಹೀಂ ಶಕೀಲ್ ಇಸ್ಮಾಯಿಲ್(35), ಪೆಟ್ ಝೋನ್ ಸಿಬ್ಬಂದಿ ಮೊಹಮ್ಮದ್ ಮುಸ್ತಫಾ(22) ಸೇರಿ ಪಿಯುಸಿ ಓದುತ್ತಿದ್ದ ಅಪ್ರಾಪ್ತನೊಬ್ಬನನ್ನು ಬಂಧಿಸಲಾಗಿದೆ. ಹೆಬ್ಬಾವು ಅಕ್ರಮ ಮಾರಾಟ ಜಾಲ ಸಕ್ರಿಯವಾಗಿದೆ ಎಂಬ ಮಾಹಿತಿ ಲಭ್ಯವಾಗುತ್ತಿದ್ದಂತೆ ಮಂಗಳೂರು ವಲಯ ಅರಣ್ಯಾಧಿಕಾರಿ ರಾಜೇಶ್ ಬಳಿಗಾರ್ ಮತ್ತು ತಂಡ ಕಾರ್ಯಾಚರಣೆಗಿಳಿದಿದೆ. ಮೊದಲಿಗೆ ಇಬ್ಬರನ್ನು ಹೆಬ್ಬಾವು ಖರೀದಿಸುವ ಸೋಗಿ ನಲ್ಲಿ ಕಳುಹಿಸಿದೆ. ನಗರದ ಕದ್ರಿಯ ಅಶ್ವತ್ಥ ಕಟ್ಟೆಯ ಬಳಿ ಆಗಮಿಸಿದ ಆರೋಪಿ ವಿಶಾಲ್ ಎಚ್.ಶೆಟ್ಟಿ ಬಳಿಗೆ ಹೋದ ಅರಣ್ಯ ಇಲಾಖೆಯ ಕಡೆಯ ಇಬ್ಬರು ಹೆಬ್ಬಾವು ಖರೀದಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. 45,000 ರು. ಬೆಲೆಗೆ ಹಾವು ಖರೀದಿ ಮಾಡುವಲ್ಲಿ ವ್ಯವಹಾರ ಕುದುರಿಸಿದ್ದಾನೆ. ಈ ವೇಳೆ ಅಧಿಕಾರಿಗಳು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

ಕೆ.ಎಂ.ಎಫ್ **ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ**
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 25536567/26096832/910/922 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop

ಕಹಾಮ/ಖರೀದಿ/ಟೆಂಡರ್-799/2025-26 ದಿನಾಂಕ: 27.06.2025

ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾಮಂಡಳದ ಘಟಕವಾದ ಮದರ್ ಡೇರಿಯಿಂದ ಬೆಂಗಳೂರು ಮಹಾನಗರದ ಮಾರುಕಟ್ಟೆ ಪ್ರದೇಶದ ವ್ಯಾಪ್ತಿಯಲ್ಲಿ ಹಾಗೂ ವಿವಿಧ ಬಡಾವಣೆಗಳಲ್ಲಿರುವ ಮದರ್ ಡೇರಿಯ ರೀಟೇಲ್/ಏಜೆನ್ಸಿದಾರರಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸಾಗಾಣಿಕೆ ಸೇವೆಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಟೆಂಡರ್ ಡೌನ್‌ಲೋಡ್ ಪ್ರಾರಂಭದ ದಿನಾಂಕ - 17.07.2025, ಟೆಂಡರ್ ಪೂರ್ವಭಾವಿ ಸಭೆ ದಿನಾಂಕ-23.07.2025 ರಂದು ಪೂರ್ವಾಹ್ನ 11.00 ಗಂಟೆಗೆ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ-16.08.2025 ರಂದು ಸಂಜೆ 5.00 ಗಂಟೆಯವರೆಗೆ, ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ-18.08.2025 ರಂದು ಪೂರ್ವಾಹ್ನ 11.00 ಗಂಟೆಗೆ, ಕಮರ್ಷಿಯಲ್ ಟೆಂಡರ್ ತೆರೆಯುವ ದಿನಾಂಕ-ತಾಂತ್ರಿಕ ಟೆಂಡರ್ ಪರಿಶೀಲನೆಯ ನಂತರ.

ಟೆಂಡರ್ ದಾಸ್ತಾವೇಜುಗಳನ್ನು eProcurement website https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಆಸಕ್ತಿಯುಳ್ಳ ಟೆಂಡರ್‌ದಾರರು ಟೆಂಡರ್ ದಾಖಲಾತಿಯಲ್ಲಿ ನಮೂದಿಸಿರುವ ಇ.ಎಂ.ಡಿ ಪಾವತಿಸಿ ಭಾಗವಹಿಸಬಹುದಾಗಿದೆ.

ಕರ್ನಾಟಕ ಹಾಲು ಮಹಾಮಂಡಳದ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.
Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979 &Endst. No.MCI-37(1)(Recog.-18)(UG)/2017-Med./109629,Dt: 06/05/2019
DIRECTOR: 8147796529 PRINCIPAL :8147796527
CAO:8147796526 PA : 8147796539.
e-mail-ids:directorbmcrcballari@gmail.com, website:https://bmcrcballari.karnataka.gov.in principal: bmcrcballari@gmail.com

No:BMCRC/SUP/TENDER/Plastic Sur/11/2025-26,/177
Date: 18.07.2025

ಇ-ಟೆಂಡರ್ ಅಧಿಸೂಚನೆ

ಬಿಎಂಸಿಆರ್ ಸಿ, ಸಂಸ್ಥೆಯ ಟ್ರಾಮಾ ಕೇರ್ ಆಸ್ಪತ್ರೆಯಲ್ಲಿನ ಪ್ಲಾಸ್ಟೀಕ್ ಸರ್ಜರಿ ವಿಭಾಗಕ್ಕೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳನ್ನು ಪೂರೈಸಲು ಕೆ.ಟಿ.ಪಿ.ಪಿ ಅಧಿನಿಯಮ-1999-2000ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ-ಪೋರ್ಟಲ್ https://kppp.karnataka.gov.in ಮೂಲಕ ಇ-ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್‌ದಾರರು ಮೇಲಿನ ಪೋರ್ಟಲ್ ನಲ್ಲಿ ಟೆಂಡರನ್ನು ದಿನಾಂಕ: 02.08.2025 ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ ರೂ.163.66 ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್ ಸೈಟ್ https://bmcrcballari.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/- ಡೀನ್ ಹಾಗು ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/267/ಕೆಎಸ್‌ಎಂಸಿಎ/2025-26

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
ಕಾರ್ಯನಿರ್ವಾಹಕ ಅಭಿಯಂತರ ಕಾರ್ಯಾಲಯ,
ಯೋಜನಾ ವಿಭಾಗ, 171, ಹಾವಣ್ಣವರ ಬಿಲ್ಡಿಂಗ್ ಕ್ಲಬ್ ರೋಡ್, ಬೆಳಗಾವಿ
ದೂರವಾಣಿ 0831-2420728, ಫ್ಯಾಕ್ಸ್: 0831-2420728
ಇ-ಮೇಲ್-

ಯೋವಿಬೆ/ಕೆಆರ್ ಆರ್ ಡಿಎ/ತಾಂ.ಶಾ/ಟೆಂಡರ್/ನ.ಗ್ರಾ.ನ.ರಹಂತ-3&4/2025-26/194 ದಿನಾಂಕ: 17.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ - 5ನೇ ಕರೆ

ಕರ್ನಾಟಕ ಸರ್ಕಾರದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (KPPP) ಮುಖಾಂತರ ಐಟಂ ರೇಟ್ ಅಲ್ಪಾವಧಿ ಟೆಂಡರಗಳನ್ನು ಕರೆಯಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ರಜ್ಯ ಸರ್ಕಾರವು ಅನುದಾನವನ್ನು ಒದಗಿಸುತ್ತದೆ. 2. 1) KRRDA/2024-25/WORK_INDENT192/CALL-5 (Package No.KS-04-15B), 2)KRRDA/2024-25/WORK_INDENT53/CALL-5 (Package No.KS-04-95B), 3)KRRDA/2024-25/WORK_INDENT187/CALL-5 (Package No. KS-04-69A), 4)KRRDA/2024-25/WORK_INDENT154/CALL-5 (Package No.KS-04-42A), 5)KRRDA/2024-25/WORK_INDENT188/CALL-5 (Package No.KS-04-77A)

ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ನೋಡಬಹುದು.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರು,
ಯೋಜನಾ ವಿಭಾಗ ಬೆಳಗಾವಿ.

DIPR/ BGM/ RO-NO- 677- 2025-26

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ- 571401
(Autonomous Medical Institution, Government of Karnataka
Ph: 08232-231003, 222086, 231197, 224040,
Fax: 08232-231001
E-Mail Address: mimsmandyasupply@gmail.com
mimsmandya@gmail.com
ಸಂಖ್ಯೆ: ಮಿಮ್ಸ್/ಸರಬ(D)ಇ-ಟೆಂ/ಪೆಥಾಲಜಿ/14/2024-25 ದಿ: 11.07.2025

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ

(ದ್ವಿಲಕೋಟೆ ಪದ್ಧತಿ)

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪಥಾಲಜಿ ವಿಭಾಗಕ್ಕೆ ಅವಶ್ಯವಿರುವ ವಿವಿಧ Chemicals, Reagents, Kits, Consumables & etc Items ಗಳನ್ನು (ಅಂದಾಜು ಮೊತ್ತ ರೂ.158.00 ಲಕ್ಷಗಳು) ಸರಬರಾಜು ಮಾಡಲು ಉತ್ಪಾದಕರವರಿಂದ/ ನೋಂದಾಯಿಸಲ್ಪಟ್ಟ ಅಧಿಕೃತ ಪ್ರಕ್ರಿಯೆ ಮತ್ತಿತ್ತರ ವಿವರಗಳನ್ನು ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/- ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

DIPR/MDY/300KSMCA/MDY/318/2025-26

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ,
ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ,
ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು - 560070.
ಫೋನ್ ನಂ. 080-26716046 ವೆಬ್‌ಸೈಟ್: http://kppp.karnataka.gov.in

ಸಂಖ್ಯೆ:ಕಾಇಂ/ಪಂರಾಇಂವಿ/ಬೆಂನ/ಎಇ-1/ಟೆಂಡರ್ ಪ್ರಕಟಣೆ ಸಂಖ್ಯೆ:11/2025-26 ದಿನಾಂಕ: 17.07.2025

ಕೆ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ ನೋಟೀಸ್ (ಏಕ-ಲಕೋಟೆ)
ಅಲ್ಪಾವಧಿ ಟೆಂಡರ್ ಪ್ರಕಟಣೆ ನಂ-11/2025-26

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MLA Grant ಅನುಮೋದನೆಯಾಗಿರುವ ಕಾಮಗಾರಿಗೆ ದ್ವಿ-ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 25.07.2025 ರ ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ವೆಬ್ ಸೈಟ್ ಮೂಲಕ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ವೆಬ್ ಸೈಟ್ http://www.KPPP.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು.

ವಾಸಾಸಂಇ/ವಾಪ್ರ/1911/ಎಸ್‌ಎಸ್‌ಸಿ/2025-26

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಟು ಟೀಕೆ

ಸರಕಾರ ಮಾನಸಿಕ ಸ್ಥಿಮಿತತೆ ಕಳೆದುಕೊಂಡಿದೆ

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಮೈಸೂರಿನಲ್ಲಿ ಚಾಮುಂಡಿ ದೇವಿ ದರ್ಶನ ಪಡೆದರು.

ಮೈಸೂರು: ಈ ಸರಕಾರದ ಬಹಳ ಮಂದಿ ಮಾನಸಿಕ ಸ್ಥಿಮಿತತೆ ಕಳೆದುಕೊಂಡಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಟುವಾಗಿ ಟೀಕಿಸಿದರು.

ದಲಿತರೊಬ್ಬರನ್ನು ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ಮಾಡಲಿ ಎಂದು ಸಿಎಂ ಸಿದ್ದರಾಮಯ್ಯ ಟ್ವೀಟ್ ಮಾಡಿರುವ ವಿಚಾರ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಚಾರವನ್ನು ಡೈವರ್ಟ್ ಮಾಡಲು ಏನು ಬೇಕಾದರೂ ಮಾತನಾಡುತ್ತಾರೆ. ಈ ಸರಕಾರದ ಬಹಳ ಮಂದಿ ಮಾನಸಿಕ ಸ್ಥಿಮಿತತೆ ಕಳೆದುಕೊಂಡಿದ್ದಾರೆ. ಅದಕ್ಕೆ ದಿನಕ್ಕೊಂದು ರೀತಿಯಲ್ಲಿ ಮಾತನಾಡುತ್ತಾರೆ. ಏನು ಮಾತನಾಡ್ತಿದ್ದೇವೆಂದು ಅವರಿಗೇ ಗೊತ್ತಿಲ್ಲ. ನೀವು ಈ ರೀತಿ ಮಾತನಾಡೋದು ಬಿಟ್ಟು, ಟ್ವೀಟ್ ಮಾಡೋದು ಬಿಟ್ಟು, ಹೇಳಿಕೆಗಳನ್ನು ನೀಡೋದು ಬಿಟ್ಟು ರಾಜ್ಯದ ಅಭಿವೃದ್ಧಿ ಮಾಡಿ ಎಂದು ಜನರು ನಿಮ್ಮನ್ನು ಗೆಲ್ಲಿಸಿರುವುದು ಎಂದು ಸೂಚ್ಯವಾಗಿ ತಿಳಿಸಿದರು.

ಮೈಸೂರಿನಲ್ಲಿ ಕಾಂಗ್ರೆಸ್ ಸಾಧನಾ ಸಮಾವೇಶ ಆಯೋಜನೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಯಾವ ಸಾಧನೆಯ ಸಮಾವೇಶವನ್ನು ಮಾಡುತ್ತಿದ್ದಾರೆ. ಒಂದು ಕಡೆ ಜನ ಸಾಯುತ್ತಿದಾರೆ. ಜನರಿಗೆ ರಕ್ಷಣೆಯಿಲ್ಲ, ಕೊಲೆಗಳಾಗುತ್ತಿವೆ, ಚಿಕ್ಕ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರಗಳಾಗುತ್ತಿವೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ದೇಶದ್ರೋಹಿ ಚಟುವಟಿಕೆಗಳು ಕರ್ನಾಟಕದಲ್ಲಿ ತಲೆಎತ್ತುತ್ತಿವೆ. ಪೊಲೀಸ್ ಸ್ಟೇಷನ್ ಮೇಲೆ ದಾಳಿಯಾಗುತ್ತಿವೆ. ಯಾವುದೇ ಅಭಿವೃದ್ಧಿ ಕೆಲಸವಾಗುತ್ತಿಲ್ಲ. ಸರಕಾರಿ ನೌಕರರಿಗೆ ವೇತನ ಕೊಡಲು ದುಡ್ಡಿಲ್ಲ. ಯಾವ ಸಾಧನೆ ಸಮಾವೇಶ ಮಾಡ್ತಿದೀವಿ ಎಂದು ರಾಜ್ಯದ ಜನತೆಗೆ ಸಿಎಂ ಹೇಳಬೇಕು ಎಂದು ಹರಿಹಾಯ್ದರು.

ನಿಮ್ಮ ಎಲ್ಲಾ ಗ್ಯಾರಂಟಿಗಳು ಫೇಲ್ಯೂರ್ ಆಗಿವೆ: ನಿಮ್ಮ ಎಲ್ಲಾ ಗ್ಯಾರಂಟಿಗಳು ಫೇಲ್ಯೂರ್ ಆಗಿವೆ. ಯಾವ ಕಡೆಯಿಂದ ತೆರಿಗೆ ಸಂಗ್ರಹ ಆಗುತ್ತಿದೆ, ಆ ಹಣವನ್ನು ಏನು ಮಾಡುತ್ತಿದ್ದೀರಿ ಎಂಬುದು ಗೊತ್ತಾಗ್ತಿಲ್ಲ. ಕೇಂದ್ರದ ಅನುದಾನ ಏನಾಗುತ್ತಿದೆ ಎಂಬುದು ಗೊತ್ತಿಲ್ಲ. ಕೇಂದ್ರ ಕೊಡುವ ಅನುದಾನದಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ಯಾವ ಸಚಿವರು ಮತ್ತು ಶಾಸಕರು ಕ್ಷೇತ್ರ ಪ್ರವಾಸ ಮಾಡುತ್ತಿಲ್ಲ. ಅಭಿವೃದ್ಧಿಗೆ ಹಣವಿಲ್ಲದ ಕಾರಣ ಕ್ಷೇತ್ರಕ್ಕೆ ಹೋಗಲು ಭಯಪಡುತ್ತಿದ್ದಾರೆ. ನಿಮ್ಮ ಶಾಸಕರೇ ನಿಮ್ಮ ವಿರುದ್ಧ ಮಾತನಾಡುವ ಪರಿಸ್ಥಿತಿ ಕೇವಲ ಎರಡು ವರ್ಷದಲ್ಲಿ ಉಂಟಾಗಿದೆ. ಇದು ನಿಮ್ಮ ಸಾಧನೆ ಎಂದು ಕುಟುಕಿದರು.

ಸಮಾಚಾರ ಸಣ್ಣದಲ್ಲ

ಶ್ರೀರಾಮುಲು ಜತೆ 40 ವರ್ಷದ ಸ್ನೇಹ

ಬಳ್ಳಾರಿ: ರಾಮುಲು ನನ್ನ ಮಧ್ಯೆ ಯಾರ ಮಧ್ಯಸ್ಥಿಕೆ ಬೇಕಾಗಿಲ್ಲ. ನನ್ನ ಮತ್ತು ರಾಮುಲು ಸ್ನೇಹದ ಬಗ್ಗೆ ಮಾತನಾಡುವುದು ಬೇಡ ಎಂದು ಶಾಸಕ ಜನಾರ್ದನ ರೆಡ್ಡಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗ ಯಾವುದರ ಬಗ್ಗೆಯೂ ಮಾತನಾಡಲ್ಲ. ನಮ್ಮಿಬ್ಬರ ಮಧ್ಯೆ ಯಾರು ಬೇಕಿಲ್ಲ. ರಾಮುಲು ನಾನು ಇಬ್ಬರು ಒಟ್ಟಿಗೆ ಸಿನಿಮಾ ಜೂನಿಯರ್ ಸಿನಿಮಾ ನೋಡುತ್ತೇವೆ ಎಂದರು. ಯಾವುದೇ ವಿಚಾರದಲ್ಲಿ ಪ್ರೀತಿ – ಅಭಿಮಾನ ಎನ್ನುವುದು ಒಂದು ಘಟನೆಯಿಂದ ಬದಲಾವಣೆಯಾಗದು. ನಮ್ಮದು ಮಾಮೂಲು ಸ್ನೇಹ ಅಲ್ಲ, ಹದಿನೈದನೇ ವರ್ಷದಿಂದ ಸ್ನೇಹ. ನಲವತ್ತು ವರ್ಷದಿಂದ ಜತೆಗಿದ್ದೇವೆ ಎಂದು ಜನಾರ್ದನ ರೆಡ್ಡಿ ಹೇಳಿದರು.

ಸೈಟ್ ವಿಚಾರಕ್ಕೆ ಗಲಾಟೆ: ವ್ಯಕ್ತಿಯ ಬರ್ಬರ ಹತ್ಯೆ

ಬೀದರ್: ಸೈಟ್ ವಿಚಾರಕ್ಕೆ ಗಲಾಟೆಯಾಗಿ ಚಾಕುವಿನಿಂದ ಇರಿದು ವ್ಯಕ್ತಿಯ ಬರ್ಬರ ಹತ್ಯೆ ಮಾಡಿರುವ ಘಟನೆ ಬೀದರ್ ತಾಲೂಕಿನ ಗಾದಗಿ ಗ್ರಾಮದಲ್ಲಿ ನಡೆದಿದೆ. ಮಲ್ಲಿಕಾರ್ಜುನ (50) ಮೃತ ದುರ್ದೈವಿ. ಘಟನೆಯಾದ ದಿನ ಒತ್ತುವರಿ ಮಾಡಿದ್ದ ಸೈಟ್ ಕೇಳಿದ್ದಕ್ಕೆ ಮೃತ ಮಲ್ಲಿಕಾರ್ಜುನ ಹಾಗೂ ಆರೋಪಿಗಳ ನಡುವೆ ಗಲಾಟೆಯಾಗಿದೆ. ಜಗಳ ತಾರಕಕ್ಕೇರಿ ಕೊನೆಗೆ ಆರೋಪಿಗಳು ಚಾಕುವಿನಿಂದ ಇರಿದು ಹತ್ಯೆಗೈದಿದ್ದಾರೆ. ಕೂಡಲೇ ಆತನನ್ನು ಬ್ರಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಸದ್ಯ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಬೀದರ್ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಡ್ ಕಾನ್‌ಸ್ಟೇಬಲ್ ನೇಣಿಗೆ ಶರಣು

ಚಿಕ್ಕಮಗಳೂರು: ಕ್ವಾಟ್ರಸ್ ನಲ್ಲೇ ಹೆಡ್ ಕಾನ್‌ಸ್ಟೇಬಲ್ ಒಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಚಿಕ್ಕ ಮಗಳೂರು

ನಗರದ ಬಾರ್ ಲೈನ್ ರಸ್ತೆಯಲ್ಲಿ ಶುಕ್ರವಾರ (ಜು.18) ನಡೆದಿದೆ. ಕಾಂತ ರಾಜ್ (45) ಆತ್ಮಹತ್ಯೆ ಮಾಡಿಕೊಂಡಿರುವ ದುರ್ದೈವಿ. ತರೀಕೆರೆ ತಾಲೂಕಿನ ಸುಣ್ಣದಹಳ್ಳಿ ಮೂಲದವರಾದ ಕಾಂತರಾಜ್ ಚಿಕ್ಕಮಗಳೂರು ಎಸ್ಪಿ ಕಚೇರಿಯಲ್ಲಿ ಕಂಪ್ಯೂಟರ್ ಸೆಕ್ಷನ್ ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಈ ಹಿಂದೆ ನಡೆದ ಅಪಘಾತವೊಂದರಲ್ಲಿ ಕಾಂತರಾಜು ತನ್ನ ಬಲಗಾಲು ಕಳೆದುಕೊಂಡಿದ್ದು ಕೃತಕ ಕಾಲು ಜೋಡಣೆ ಮೂಲಕ ಕೆಲಸ ಮಾಡುತ್ತಿದ್ದರು. ಅಲ್ಲದೆ ಅಪಘಾತದಲ್ಲಿ ಕಾಲು ಕಳೆದುಕೊಂಡಾಗಿನಿಂದ ಕಾಂತರಾಜ್ ಮಾನಸಿಕ ಖಿನ್ನತೆಗೊಳಗಾಗಿದ್ದರು ಎಂದು ಹೇಳಲಾಗಿದೆ. ಈ ನಡುವೆ ಕುಟುಂಬ ಸದಸ್ಯರು ಊರಿಗೆ ತೆರಳಿದ ವೇಳೆ ಕ್ವಾಟ್ರಸ್‌ನಲ್ಲಿ ಯಾರೂ ಇಲ್ಲದ ವೇಳೆ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಚಿಕ್ಕಮಗಳೂರು ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಹೃದಯಾಘಾತಕ್ಕೆ ಯೋಗ ಶಿಕ್ಷಕ ಬಲಿ

ಕೊಪ್ಪಳ: ಏಕಾಏಕಿ ಎದೆನೋವು ಕಾಣಿಸಿಕೊಂಡು ಯೋಗ ಶಿಕ್ಷಕರೊಬ್ಬರು ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ಕೊಪ್ಪಳ ಜಿಲ್ಲೆ ಗಂಗಾವತಿ

ತಾಲೂಕಿನ ಹಿರೇಬೆನಕಲ್ನಲ್ಲಿ ನಡೆದಿದೆ. ಮೃತರನ್ನು ಬಹದ್ದೂರ ಬಂಡಿ ಗ್ರಾಮದ ಶಾಂತವೀರ ಸ್ವಾಮಿ ಗಂಗಾಧರ ಮಠ (57) ಎನ್ನಲಾಗಿದ್ದು, ಹಿರೇಬೆನಕಲ್ ಸರಕಾರಿ ಶಾಲೆಯ ಮುಖ್ಯೋಪಾಧ್ಯಯ ಹಾಗೂ ಯೋಗ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಶುಕ್ರವಾರ ಬೆಳಗಿನ ಜಾವ ಎದೆನೋವು ಕಾಣಿಸಿಕೊಂಡ ಹಿನ್ನೆಲೆ ಹುಬ್ಬಳ್ಳಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈವರೆಗೂ ಜಿಲ್ಲೆಯಲ್ಲಿ ಹೃದಯಾಘಾತದಿಂದ ಐದು ಜನ ಸಾವನ್ನಪ್ಪಿದ್ದು, ಎರಡೇ ದಿನದಲ್ಲಿ ಮೂವರು ಸಾವನ್ನಪ್ಪಿದ್ದಾರೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಳಗಾವಿ**

ಸಮಸ್ಯೆಯೇನು..?

ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಂದೇ ಶವವಾಹನ ಚಾಲನೆಯಲ್ಲಿರುವ ಬಗ್ಗೆ.

- **ಪರಿಹಾರ:** ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 3 ಶವವಾಹಕ ವಾಹನಗಳಿದ್ದು, ಒಂದು ವಾಹನ ಬ್ಯಾಟರಿ ಸಮಸ್ಯೆಯಿಂದ ದುರಸ್ಥಿಗೆ ಒಳಪಟ್ಟಿದ್ದು, ಸದರಿ ವಾಹನವನ್ನು ಅದೇ ದಿನ ದುರಸ್ಥಿಗೊಳಿಸಿ ಸಾರ್ವಜನಿಕರ ಸೇವೆಗೆ ಒದಗಿಸಲಾಗಿರುತ್ತದೆ. ಪ್ರಸ್ತುತ 2 ಶವವಾಹಕ ವಾಹನಗಳು ಕಾರ್ಯ ನಿರ್ವಹಿಸುತ್ತಿದ್ದು, ಒಂದು ಶವವಾಹಕ ವಾಹನವನ್ನು ದೊಡ್ಡ ಪ್ರಮಾಣದಲ್ಲಿ ದುರಸ್ಥಿಗೆ ಒಳಪಡಿಸಲಾಗಿದ್ದು, ಸದರಿ ವಾಹನವನ್ನು 2 ದಿನಗಳಲ್ಲಿ ದುರಸ್ಥಿಗೊಳಿಸಿ ಸಾರ್ವಜನಿಕರ ಸೇವೆಗೆ ನೀಡಲಾಗುವುದು.

ಸರಕಾರದ ವಿರುದ್ಧ ಸಿ.ಟಿ.ರವಿ, ಅಶೋಕ್ ಆಕ್ರೋಶ | ದೂರುದಾರರು ಹೇಳದಿದ್ದರೂ ಪೊಲೀಸರು ಹೆಸರು ಸೇರಿಸಿರುವುದಕ್ಕೆ ಆಕ್ಷೇಪ | ದೂರುದಾರರ ದೂರಿನನ್ವಯವೇ ದೂರು ದಾಖಲಿಸಲಾಗಿದೆ : ಪರಂ ಸಮರ್ಥನೆ

ಬೈರತಿ ಬೆನ್ನಿಗೆ ನಿಂತ ಬಿಜೆಪಿಗರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಮಾಜಿ ಸಚಿವ ಬೈರತಿ ಬಸವರಾಜ್ ಹೆಸರು ಸೇರಿಸಲು 'ರಾಜ ಕೀಯ' ಪ್ರೇರಣೆಯೇ ಕಾರಣ ವೆಂದು ಆರೋಪಿಸಿರುವ ಬಿಜೆಪಿ ನಾಯಕರು, ಬೈರತಿ ಬಸವರಾಜ್ ಬೆನ್ನಿಗೆ ನಿಂತಿದ್ದಾರೆ.

ಬಿಕ್ಲು ಶಿವನ ತಾಯಿ ಬೈರತಿ ಬಸವರಾಜ್ ಹೆಸರನ್ನು ಪ್ರಸ್ತಾಪಿಸಿಲ್ಲ ಎಂದು ಹೇಳಿದ ಬೆನ್ನಲ್ಲೇ, ಬಿಜೆಪಿ ನಾಯಕರು ರಾಜ್ಯ ಸರಕಾರದ ವಿರುದ್ಧ ತಿರುಗಿಬಿದ್ದಿದ್ದು ರಾಜಕೀಯ ಪ್ರೇರಿತವಾಗಿ ಈ ದೂರು ದಾಖಲಿಸಲಾಗಿದೆ. ಬಿಜೆಪಿ ನಾಯಕರು ಸರಕಾರದ ವಿರುದ್ಧ ತೀವ್ರ ವಾಗ್ದಾಳಿಯ ಹೊರತಾಗಿಯೂ, ಕಾಂಗ್ರೆಸ್ ನಾಯಕರು ಪೊಲೀಸರ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಕಚೇರಿಯಲ್ಲಿ ಶಾಸಕ ಸಿ.ಕೆ. ರಾಮಮೂರ್ತಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಬಿಜೆಪಿ ಹಿಂದುಳಿದ ವರ್ಗಗಳ ನಾಯಕ ಬೈರತಿ ಬಸವರಾಜ್ ಅವರನ್ನು ರಾಜಕೀಯವಾಗಿ ಮುಗಿಸಲು ಕಾಂಗ್ರೆಸ್ ದ್ವೇಷದ ರಾಜಕಾರಣ ಮಾಡುತ್ತಿದೆ. ಕಾಂಗ್ರೆಸ್ ಸರಕಾರದ ವಿರುದ್ಧ ಪ್ರತಿಪಕ್ಷದ ಶಾಸಕರು ಧ್ವನಿ ಎತ್ತಿದರೆ ಅವರನ್ನು ಹುಟ್ಟಡಗಿಸುವ ಪ್ರಯತ್ನ ಮಾಡುತ್ತಿದ್ದಾರೆ. ಬೈರತಿ ಬಸವರಾಜು, ಸಿ.ಟಿ. ರವಿ, ಪ್ರಭು ಚೌಹಾಣ್, ಎನ್. ರವಿಕುಮಾರ್, ಮುನಿರತ್ನ, ಹರೀಶ್ ಪೂಂಜಾ ಇನ್ನು ಹಲವಾರು ಬಿಜೆಪಿ ನಾಯಕರನ್ನು ಯಾವುದೋ ಒಂದು ನೆಪಒಡ್ಡಿ ಸಿಲುಕಿಸುವ ಪ್ರಯತ್ನವನ್ನು ಕಾಂಗ್ರೆಸ್ ಸರಕಾರ ಮಾಡಿದೆ ಎಂದು ಆರೋಪಿಸಿದರು.

ನಾವು ಹೆಚ್ಚುವರಿ ಹೆಸರು ಸೇರಿಸಿಲ್ಲ

ಬಿಜೆಪಿ ಆರೋಪಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಡಾ.ಜಿ. ಪರಮೇಶ್ವರ ಪ್ರತಿಕ್ರಿಯಿಸಿದ್ದು, ದೂರು ನೀಡಿರುವವರು ಶಾಸಕ ಬೈರತಿ ಬಸವರಾಜ್ ಹೆಸರು ಸೇರಿಸಿದ್ದಾರೆ. ಹೆಸರು ಸೇರಿಸಲೇಬೇಕು ಅಂತ ಅವರೇ ಒತ್ತಾಯಿಸಿ ದ್ದಾರೆ. ಕಾನೂನು ಪ್ರಕಾರ ತನಿಖೆ ನಡೆಯಲಿದೆ ಎಂದು ಸ್ಪಷ್ಟಪಡಿಸಿದರು. ಬೈರತಿ ಬಸವರಾಜ್‌ಗೆ ನೋಟಿಸ್ ಕೊಟ್ಟಿದ್ದಾರೆ. ಪೊಲೀಸರು ಅವರ ಹೇಳಿಕೆ ದಾಖಲಿಸಿಕೊಳುತ್ತಾರೆ. ದೂರು ನೀಡಿ ರುವವರು ಶಾಸಕರ ಹೆಸರು ಸೇರಿಸಿದ್ದಾರೆ. ಏನೇ ಇರಲಿ, ಪ್ರೊಸೀಜರ್ ಪ್ರಕಾರವೇ ನಡೆಯಬೇಕು. ನೋಟಿಸ್ ಕೊಟ್ಟ ಬಳಿಕ ಅವರು ಬರಲೇಬೇಕು. ಬಿಜೆಪಿ ಇರೋದೇ ಆರೋಪ ಮಾಡೋಕೆ. ಸ್ವಾಭಾವಿಕವಾಗಿ ಆರೋಪ ಮಾಡ್ತಾರೆ. ಪೊಲೀಸರು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡ್ತಾರೆ. ಅದರಲ್ಲಿ ಉದ್ದೇಶದ ರಾಜಕಾರಣ ಏನಿಲ್ಲ ಎಂದು ತಿಳಿಸಿದರು.

ಎಫ್‌ಐಆರ್ ನಮೂದಿಸಿರುವುದು ಸರಿಯಲ್ಲ

ಕೆ.ಆರ್.ಪುರದಲ್ಲಿ ಒಬ್ಬ ರೌಡಿಶೀಟರ್ ಹತ್ಯೆಯಾಗಿದೆ. ಹತ್ಯೆಯಾದ ಕುಟುಂಬಕ್ಕೆ ನ್ಯಾಯಕೊಡಿಸಲು ತನಿಖೆ ನಡೆಸಿ ಕ್ರಮ ಕೈಗೊಳ್ಳುವುದಕ್ಕೆ ನಮ್ಮ ತಕರಾರು ಇಲ್ಲ. ಹತ್ಯೆಯಾದ ಯುವಕನ ತಾಯಿ ಕೊಲೆಯ ದೃಶ್ಯವನ್ನು ನೋಡಿದ್ದಾರೆ. ಆ ಸಂದರ್ಭದಲ್ಲಿ ಬೈರತಿ ಬಸವರಾಜ್ ಇದ್ದರು ಎಂದು ಹೇಳಿಕೆ ಕೊಟ್ಟ ಆಧಾರದ ಮೇಲೆ ಶಾಸಕರಾದ ಬೈರತಿ ಬಸವರಾಜ್ ಅವರನ್ನು ಕೊಲೆ ಪ್ರಕರಣದ ಎಫ್‌ಐಆರ್‌ನಲ್ಲಿ ಎ-5 ಆಗಿ ನಮೂದು ಮಾಡಿದ್ದಾರೆ. ಆದರೆ ಹತ್ಯೆಯಾದ ತಾಯಿ ನಾನು ಬೈರತಿ ಬಸವರಾಜ್ ಅವರ ಹೆಸರನ್ನು ಹೇಳಲಿಲ್ಲ ಎಂದು ಮಾಧ್ಯಮದವರಿಗೆ ತಿಳಿಸಿದ್ದರು. ಅವರನ್ನು ತನಿಖೆ ನೆಪದಲ್ಲಿ ಐದನೇ ಆರೋಪಿಯಾಗಿ ಎಫ್‌ಐಆರ್ ನಮೂದಿಸಿರುವುದು ಸರಿಯಲ್ಲ ಎಂದು ಶಾಸಕ ಸಿ.ಕೆ. ರಾಮಮೂರ್ತಿ ಆಕ್ಷೇಪಿಸಿದರು.

ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ : ಎಸ್ ಹರೀಶ್: ರಾಜ್ಯ ಸರಕಾರ ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ನೀಡುತ್ತಿದೆ. ವಿರೋಧ ಪಕ್ಷದ ಶಾಸಕರು ಹೆಸರು ಬಂದರೆ ಅವರ ಮೇಲೆ ಎಫ್ ಐಆರ್ ಹಾಕಲು ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ, ಗೃಹ ಸಚಿವರಿಗೆ, ಪೊಲೀಸ್ ಅಧಿಕಾರಿಗಳಿಗೆ, ಅತೀ ಉತ್ಸಾಹ ಎಂದು ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್ ಟೀಕಿಸಿದರು. ಕ್ಯಾಬಿನೆಟ್ ಸ್ಥಾನವನ್ನು ನೀಡಿರುವ ವಿನಯ್ ಕುಲಕರ್ಣಿ ಅವರು ಇಂದು ಕೊಲೆ ಸಂಚಿನ ಆರೋಪದಲ್ಲಿ ಜೈಲು ಸೇರಿದ್ದಾರೆ. ಅವರ ಮೇಲೆ ಮಹಿಳೆಯೊಬ್ಬರು ಅತ್ಯಾಚಾರದ ಆರೋಪ ಮಾಡಿದ್ದರು, ಪೊಲೀಸ್ ಅಧಿಕಾರಿಗಳು ಅವರನ್ನು ಬಂಧಿಸಿದ್ದಾರೆ. ವಿನಯ್ ಕುಲಕರ್ಣಿ ಜೈಲಿಗೆ ಹೋಗಿದ್ದು, ಅವರಿಗೆ ನೀಡಿರುವ ಕ್ಯಾಬಿನೆಟ್ ಸ್ಥಾನವನ್ನು ನೀವು ಹಿಂಪಡೆದಿದ್ದೀರ ಎಂದು ಪ್ರಶ್ನಿಸಿದರು.

ಒಬ್ಬ ಪೊಲೀಸ್ ಅಧಿಕಾರಿ ಕಾಂಗ್ರೆಸ್ಸಿನ ಶಾಸಕ ಮತ್ತು ಅವರ ಮಗನ ಹೆಸರು ಹೇಳಿ ಸತ್ತರು. ಇವತ್ತಿನವರೆಗೂ ಆ ಶಾಸಕ ಮತ್ತು ಮಗನ ಮೇಲೆ ಯಾವ ಕ್ರಮಕ್ಕೆಗೊಂಡಿದ್ದೀರಾ?. ಶಾಸಕ ಮತ್ತು ಮಗನು ಕಾನೂನಿಗೆ ಒಳಪಡುವುದಿಲ್ಲವೇ. ಬೆಳಗಾವಿಯಲ್ಲಿ ಒಬ್ಬ ಸರಕಾರಿ ಅಧಿಕಾರಿ ಲಕ್ಷ್ಮೀ ಹೆಬ್ಬಾಳ್ಕರ್ ಮತ್ತು ಅವರ ತಮ್ಮನ ಹೆಸರು ಬರೆದಿಟ್ಟು ಸತ್ತರು. ಅವರಿಬ್ಬರನ್ನು ಎಫ್‌ಐಆರ್ ಹಾಕಿ ಬಂದಿಸಿದ್ದೀರಾ ಅಥವಾ ಕ್ರಮಕೈಗೊಂಡಿದ್ದೀರಾ ಎಂದು ಪ್ರಶ್ನಿಸಿದರು.

ಬಿಜೆಪಿ ನಾಯಕರಿಗೆ ಬಾಬಾಸಾಹೇಬ್ ಡಾ. ಬಿ. ಆರ್ ಅಂಬೇಡ್ಕರ್ ಅವರು ಬರೆದಿರುವ ಸಂವಿಧಾನದ ಮೇಲೆ ಗೌರವವಿದೆ. ಕಾನೂನು ಎಲ್ಲರಿಗೂ ಒಂದೇ ಎಂದು ತಿಳಿಸಿದರು.

ರಾಜ್ಯದಲ್ಲಿ ಆಡಳಿತ ಯಂತ್ರ ಕುಸಿದಿದೆ: ಬಿ.ವೈ. ವಿಜಯೇಂದ್ರ

ನವೆಂಬರ್‌ನಲ್ಲಿ ರಾಜ್ಯದಲ್ಲಿ ಮಹತ್ವದ ಬೆಳವಣಿಗೆ

ಮೈಸೂರು: ನವೆಂಬರ್‌ನಲ್ಲಿ ರಾಜ್ಯದಲ್ಲಿ ಮಹತ್ವದ ರಾಜಕೀಯ ಬೆಳವಣಿಗೆ ನಡೆಯುವುದು ನಿಶ್ಚಿತ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಭವಿಷ್ಯ ನುಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಂತ್ರ-ಕುತಂತ್ರಗಳಿಗೆ ಅದರದೇ ಆದ ಇತಿಮಿತಿ ಇರುತ್ತದೆ. ಸಿದ್ದರಾಮಯ್ಯ- ಡಿ.ಕೆ.ಶಿವಕುಮಾರ್ ಮಧ್ಯೆ ಕಾಂಗ್ರೆಸ್ಸಿನ ಹೈಕಮಾಂಡ್ ಮಟ್ಟದಲ್ಲಿ ಸಿಎಂ ಕುರ್ಚಿ ವಿಷಯದಲ್ಲಿ ಎರಡೂವರೆ ವರ್ಷ ಎಂಬ ಒಪ್ಪಂದ ಆಗಿದೆ ಎಂದು ಕಾಂಗ್ರೆಸ್ ಮುಖಂಡರೇ ಹೇಳುತ್ತಾರೆ. ಈಗ ರಾಜೀನಾಮೆ ಕೊಡಲೇಬೇಕಾದ ಸನ್ನಿವೇಶ ಬಂದಿದೆ ಎಂದರು. ಸರಕಾರ ಬಂದು ಎರಡೂವರೆ ವರ್ಷ ಆಗಿದೆ. ಇವರೇನು ಸಾಧನೆ ಮಾಡಿದ್ದಾರೆ. ರಾಜ್ಯದ ಜನರು ಹಿಡಿಶಾಪ ಹಾಕುತ್ತಿದ್ದಾರೆ. ಆಡಳಿತ ಯಂತ್ರ ಸಂಪೂರ್ಣ ಕುಸಿದಿದೆ. ಗ್ಯಾರಂಟಿಗಳಿಗೆ ಹಣ ಸಂಗ್ರಹ ವಾಗದೆ ಜಿಎಸ್‌ಟಿ ಮೂಲಕ ಬೀದಿ ವ್ಯಾಪಾರಿಗಳಿಗೂ ಬರೆ ಎಳೆಯುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು.

ಪ್ರಚಾರದ ಹಪಾಹಪಿಯಿಂದ 11 ಸಾವು

ಪ್ರಚಾರದ ಹಪಾಹಪಿಯಿಂದ ಆರ್‌ಸಿಬಿ ವಿಜಯೋತ್ಸವ ವೇಳೆ ಕಾಲ್ತುಳಿತದಲ್ಲಿ 11 ಜನರು ಪ್ರಾಣ ಕಳಕೊಂಡರು. ಅರೆಬೆಂದ ವರದಿಯನ್ನು ಹೈಕೋರ್ಟಿಗೆ ನೀಡಿದ್ದಾರೆ. ಇದು ಮುಖ್ಯಮಂತ್ರಿ ಮಾಡಿದ ಅಕ್ಷಮ್ಯ ಅಪರಾಧ. ಇದರ ಹೊಣೆಯನ್ನು ಸಿಎಂ, ಡಿಸಿಎಂ ಹೊರಬೇಕಿತ್ತು. ಆದರೆ, ಅಮಾಯಕ ಪೊಲೀಸ್ ಅಧಿಕಾರಿಗಳನ್ನು ಬಲಿ ಕೊಟ್ಟು ಮೈಕೆಲ್ ಕುನ್ಹಾ ವರದಿ ಮೂಲಕ ಆರ್‌ಸಿಬಿಯನ್ನು ಬಲಿಪಶು ಮಾಡಿದ್ದಾರೆ. ತಾವು ನಿರಪರಾಧಿ ಎಂದು ಬಿಂಬಿಸಿಕೊಂಡದ್ದಕ್ಕಾಗಿ ನಿಮ್ಮ ಸಾಧನಾ ಸಮಾವೇಶವೇ ಎಂದು ಬಿವೈವಿ ಪ್ರಶ್ನೆ ಮಾಡಿದರು.

ಮೈಸೂರು ಜಿಲ್ಲೆಯಲ್ಲಿ ಏನು ಅಭಿವೃದ್ಧಿ ಮಾಡಿದ್ದೀರೆಂದು ಸಾಧನಾ ಸಮಾವೇಶ ಮಾಡುತ್ತಿದ್ದೀರಿ?. ಅಭಿವೃದ್ಧಿಗೆ ಸಂಬಂಧಿಸಿ ಮುಖ್ಯಮಂತ್ರಿಗಳು ಸಮಾವೇಶ ಮಾಡುತ್ತಿಲ್ಲ. ಬದಲಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ಸಂದರ್ಭ ಸನ್ನಿಹಿತವಾಗಿದ್ದು, ಈಗ ಸಮಾವೇಶದ ಮೂಲಕ ಕಾಂಗ್ರೆಸ್ ಹೈಕಮಾಂಡ್ ಗೆ ಬೆದರಿಸುವ ಷಡ್ಯಂತ್ರ ಇದರ ಹಿಂದಿದೆ. -ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಚಿರತೆ ದಾಳಿ: 13 ಕುರಿಗಳು ಸಾವು

ಕುಕನೂರು: ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ನೆಲಜೇರಿ ಗ್ರಾಮದ ದೇವಪ್ಪ ಬೇವಿನಗಿಡದ ಎಂಬುವರಿಗೆ ಸೇರಿದ 13 ಕುರಿಗಳು ಚಿರತೆ ದಾಳಿಯಿಂದ ಮೃತ ಪಟ್ಟಿದ್ದು, ಪರಿಹಾರ ನೀಡಲು ಸರಕಾರಕ್ಕೆ ಆಗ್ರಹ ಮಾಡಿದ್ದಾರೆ. ನೆಲಜೇರಿ ಬಳಿ ಹಟ್ಟಿಯಲ್ಲಿದ್ದ ಸುಮಾರು 40-50 ಕುರಿಗಳಿದ್ದ ಹಿಂಡಿಗೆ ಏಕಾಏಕಿ ಚಿರತೆ ದಾಳಿ ನಡೆಸಿದ್ದು, 13 ಕುರಿಗಳು ಸಾವನ್ನಪ್ಪಿವೆ. ಆಗಾಗ ಕರಡಿಗಳು ಕಾಣಿಸಿಕೊಳ್ಳುತ್ತಿದ್ದವು, ಚಿರತೆ ಕಾಣಿಸಿಕೊಂಡಿರಲಿಲ್ಲ. ಏಕಾ-ಏಕಿ ಚಿರತೆ ದಾಳಿ ನಡೆಸಿದ್ದು, ಸ್ಥಳೀಯರಲ್ಲಿ ಆತಂಕ ಹುಟ್ಟಿಸಿದೆ. ಸುದ್ದಿ ತಿಳಿದು ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳಾದ ಸ್ವಾತಿ, ಲಿಂಗರಾಜ ಕನ್ನಾಳ, ಪಶು ವೈದ್ಯರು ತೆರಳಿ ಮಾಹಿತಿ ಪಡೆದಿದ್ದಾರೆ. ಸಂಕಷ್ಟದಲ್ಲಿರುವ ಕುರಿಗಳ ಮಾಲೀಕ ದೇವಪ್ಪ ಅವರಿಗೆ ಸರಕಾರ ಪರಿಹಾರ ನೀಡಬೇಕೆಂದು ಸ್ಥಳೀಯರು ಸರಕಾರಕ್ಕೆ ಮನವಿ ಮಾಡಿದ್ದಾರೆ.

ಬಿಲ್ ಬಾಕಿ: ಡಿಸಿ ಕಾರು ಜಪ್ತಿ

ಬೆಳಗಾವಿ: 30 ವರ್ಷಗಳ ಹಿಂದೆ ಗುತ್ತಿಗೆದಾರನಿಗೆ ಸಿಗಬೇಕಿದ್ದ ಬಿಲ್

ಬಾಕಿ ಉಳಿಸಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿ ಜಿಲ್ಲಾಧಿಕಾರಿ ಕಾರು ಜಪ್ತಿ ಮಾಡಿರುವ ಘಟನೆ ನಡೆದಿದೆ. ಚಿಕ್ಕೋಡಿಯ ದೂದಗಂಗಾ ನದಿಗೆ ಬ್ಯಾರೇಜ್ ನಿರ್ಮಿಸುವ ಉದ್ದೇಶದಿಂದ 1992 - 93ರಲ್ಲಿ ಸಣ್ಣ ನೀರಾವರಿ ಇಲಾಖೆ ಅಡಿಯಲ್ಲಿ ದಿ. ನಾರಾಯಣ ಕಾಮತ್ ಎಂಬುವವರು ಗುತ್ತಿಗೆ ಪಡೆದಿದ್ದರು. ಷರತ್ತುಬದ್ಧ ಗುತ್ತಿಗೆಯಲ್ಲಿ ಅನುದಾನ ನೀಡದ ಇಲಾಖೆ ವಿರುದ್ಧ 1995ರಲ್ಲಿ ಗುತ್ತಿಗೆದಾರ ಕೋರ್ಟ್ ಮೆಟ್ಟಿಲೇರಿ ದ್ದರು. ವಿಚಾರಣೆ ನಡೆಸಿದ್ದ ಬೆಳಗಾವಿಯ ಪ್ರಥಮ ಜಿಲ್ಲಾ ಕೋರ್ಟ್ ಸಂಕಷ್ಟಕ್ಕೆ ಒಳಗಾಗಿದ್ದ ಗುತ್ತಿಗೆದಾರನಿಗೆ 34. ಲಕ್ಷ ರು. ಪರಿಹಾರ ನೀಡುವಂತೆ ಆದೇಶಿಸಿತ್ತು. ಈ ಆದೇಶದ ಕುರಿತು ಸಣ್ಣ ನೀರಾವರಿ ಇಲಾಖೆ ಹೈಕೋರ್ಟ್ ಮೆಟ್ಟಿಲೇರಿತ್ತು. ವಿಚಾರಣೆ ಬಳಿಕ 2024ರ ಜೂನ್ ಒಳಗಾಗಿ ಗುತ್ತಿಗೆದಾರ ನಿಗೆ ಬಡ್ಡಿ ಸಮೇತ ಅರ್ಧದಷ್ಟು ಬಿಲ್ ಪಾವತಿಗೆ ಆದೇಶ ನೀಡಿತ್ತು. ಆದೇಶದ ಹೊರತಾಗಿಯೂ ಗುತ್ತಿಗೆದಾರನಿಗೆ ನೀಡಬೇಕಿದ್ದ 1.34 ಕೋಟಿ ಬಾಕಿ ಬಿಲ್ ನೀಡಲು ಇಲಾಖೆ ವಿಫಲವಾದ ಹಿನ್ನೆಲೆ ಕೋರ್ಟ್ ವಾರಂಟ್ ಜಾರಿ ಮಾಡಿದೆ.

ಯಾದಗಿರಿಯ ಅಗತೀರ್ಥದಲ್ಲಿ ಮೂವರು ಬಲಿ

ಕರೆಂಟ್ ಶಾಕ್‌ಗೆ ನಾಲ್ವರು ಸಾವು

ಯಾದಗಿರಿ: ಜಮೀನಯೊಂದರಲ್ಲಿ ಕೆಲಸ ಮಾಡುತ್ತಿದ್ದಾಗ ಏಕಾಏಕಿ ವಿದ್ಯುತ್ ಪ್ರವಹಿಸಿ ಮೂವರು ಸಾವನ್ನಪ್ಪಿರುವ ದಾರುಣ ಘಟನೆ ಜಿಲ್ಲೆಯ ಹುಣಸಗಿ ತಾಲೂಕಿನ ಅಗತೀರ್ಥ ಸೀಮಾಂತರ ಪ್ರದೇಶದಲ್ಲಿ ಶುಕ್ರವಾರ ಜರುಗಿದೆ. ಈರಪ್ಪ (40), ಸುರೇಶ (23) ಹಾಗೂ ದೇವು ಅಗತೀರ್ಥ (30) ಮೃತ ದುರ್ದೈವಿಗಳಾಗಿದ್ದಾರೆ. ಮೃತಪಟ್ಟವರಲ್ಲಿ ಇಬ್ಬರು ಸದಬ ಗ್ರಾಮದವರಾಗಿದ್ದರೆ ಒಬ್ಬ ವ್ಯಕ್ತಿ ಅಗತೀರ್ಥ ಕ್ಯಾಂಪ್ ನಿವಾಸಿ ಎನ್ನಲಾಗಿದೆ. ಜಮೀನೊಂದರಲ್ಲಿ ಕೆಲಸದಲ್ಲಿ ನಿರತರಾಗಿದ್ದಾಗ ವಿದ್ಯುತ್ ಶಾಕ್ ಹೊಡೆದಿದ್ದು, ಇದನ್ನು ಕಂಡ ಮತ್ತೊಬ್ಬ ರಕ್ಷಿಸಲು ಮುಂದೆ ಬಂದಾಗ ಅವನಿಗೂ ವಿದ್ಯುತ್ ಪ್ರವಹಿಸಿದ್ದು ವಿದ್ಯುತ್ ಶಾಕ್‌ನಿಂದ ಒದ್ದಾಟ ನಡೆಸುತ್ತಿದ್ದ ಇಬ್ಬರನ್ನು ನೋಡಿದ ಮತ್ತೊಬ್ಬ ಇವರಿಬ್ಬರ ರಕ್ಷಣೆ ಬಂದಿದ್ದು, ದುರದೃಷ್ಟವಶಾತ್ ಮೂರು ಜನರು ವಿದ್ಯುತ್ ಅವಘಡದಲ್ಲಿ ಸ್ಥಳದಲ್ಲಿಯೆ ಅಸುನೀಗಿದ್ದಾರೆ. ಘಟನಾ ಸ್ಥಳಕ್ಕೆ ಜೆಸ್ಕಾಂ ಹಾಗೂ ಪೊಲೀಸ್ ಅಧಿಕಾರಿಗಳು ಭೇಟಿ ಪರಿಶೀಲನೆ ನಡೆಸಿದ್ದಾರೆ.

ಲೈನ್‌ಮ್ಯಾನ್ ಸಾವು

ಒಂದು ತಿಂಗಳ ಹಿಂದಷ್ಟೇ ಮದುವೆ ಯಾಗಿದ್ದ ಲೈನ್‌ಮ್ಯಾನ್ ವಿದ್ಯುತ್ ಶಾಕ್‌ನಿಂದ ಸಾವನ್ನಪ್ಪಿದ ಘಟನೆ ಚಿಕ್ಕ ಮಗಳೂರು ಜಿಲ್ಲೆಯ ಎನ್.ಆರ್.ಪುರ ತಾಲೂಕಿನ ಹೊನ್ನೆ ಕೊಪ್ಪ ಗ್ರಾಮದಲ್ಲಿ ಶುಕ್ರವಾರ ನಡೆದಿದೆ. ಮೃತರನ್ನು ಪ್ರವೀಣ್ (26) ಎಂದು ಗುರುತಿಸಲಾಗಿದೆ. ಮೂಲತಃ ಬಾಗಲಕೋಟೆಯ ಪ್ರವೀಣ್ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೆಸ್ಕಾಂ ಕಚೇರಿ ಯಲ್ಲಿ ಲೈನ್‌ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದರು. ಹೊನ್ನೆಕೊಪ್ಪ ಗ್ರಾಮದಲ್ಲಿ ಕಂಬ ಹತ್ತಿ ಫ್ಯೂಸ್ ಹಾಕಿ ವಿದ್ಯುತ್ ಲೈನ್ ದುರಸ್ಥಿ ಮಾಡುವ ವೇಳೆ ವಿದ್ಯುತ್ ಶಾಕ್ ನಿಂದ ಮೃತಪಟ್ಟಿದ್ದಾರೆ.

ಬೈದಾಡಿಕೊಂಡ ಸ್ವಪಕ್ಷದ ಶಾಸಕರು | ಸಚಿವ ಶರಣಪ್ರಕಾಶ ಪಾಟೀಲ್‌ಗೆ ಮುಜುಗರ

ರಾಯಚೂರು ಕೆಡಿಪಿ ಸಭೆಯಲ್ಲಿ ಗದ್ದಲ

ರಾಯಚೂರು: ಇಲ್ಲಿಯ ಜಿಲ್ಲಾ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಕೆಡಿಪಿ ಸಭೆಯಲ್ಲಿ ಕಾಂಗ್ರೆಸ್ ಶಾಸಕರೇ ವೈದ್ಯಕೀಯ ಶಿಕ್ಷಣ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ ಪಾಟೀಲ ವಿರುದ್ಧ ಹರಿಹಾಯ್ದರು.

ಜಿಲ್ಲೆಗೆ ಇಬ್ಬರು ಸಚಿವರಿದ್ದರೂ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಅಧಿಕಾರಿಗಳು ಸಭೆಗೆ ಕರೆಯದೇ ಶಾಸಕರನ್ನು ಅವಮಾನಿಸುತ್ತಿದ್ದಾರೆ. ಅಕ್ರಮ ವ್ಯವಹಾರಗಳು ಎಗ್ಗಿಲ್ಲದೇ ನಡೆದಿದೆ. ಪೊಲೀಸ್ ಗೂಂಡಾಗಿರಿ ಹೆಚ್ಚಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು ಶಿಷ್ಟಾಚಾರಕ್ಕೆ ಸಭೆ ನಡೆಸಿ ಹೋಗುತ್ತಿರುವ ಕಾರಣ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂದು ಶರಣಪ್ರಕಾಶ ಪಾಟೀಲ ವಿರುದ್ಧ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಆರ್. ಬಸನಗೌಡ ತುರುವಿಹಾಳ ಆಕ್ರೋಶ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸದಸ್ಯರಾದ ಬಸನಗೌಡ ಬಾದರ್ಲಿ, ಎ.ವಸಂತಕುಮಾರ, ಶರಣಗೌಡ ಪಾಟೀಲ ಬಯ್ಯಾಪುರ ಅವರೂ ತುರುವಿಹಾಳ ಅವರಿಗೆ ಸಾಥ್ ನೀಡಿದರು.

ಸ್ವಪಕ್ಷೀಯ ಶಾಸಕರೇ ಕೆಡಿಪಿ ಸಭೆಯಲ್ಲಿ ಗರಂ ಆದ್ದರಿಂದ ಸಚಿವ ಶರಣಪ್ರಕಾಶ ಪಾಟೀಲ ತೀವ್ರ ಮುಜುಗರಕ್ಕೆ ಒಳಗಾಗಬೇಕಾಯಿತು. ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರು ಸಚಿವರ ಬೆಂಬಲಕ್ಕೆ ನಿಂತು, ಕೇವಲ ನಿಮ್ಮ ಕ್ಷೇತ್ರದ್ದೇ ಮಾತನಾಡಿದರೆ, ನಮ್ಮ ಕ್ಷೇತ್ರದ ಬಗ್ಗೆ ಯಾವಾಗ ಹೇಳಬೇಕು ಎಂದು ಪ್ರಶ್ನಿಸಿದರು. ದದ್ದಲ್ ಒಂದು ಹಂತದಲ್ಲಿ ಏಕವಚನ ಪ್ರಯೋಗ ಮಾಡಿದಾಗ ಬಸನಗೌಡ ಬಾದರ್ಲಿ ಅವರೂ ಏಕವಚನದಲ್ಲೇ ತರಾಟೆಗೆ ತೆಗೆದುಕೊಂಡರು.

ಕೆಡಿಪಿ ಸಭೆಯಲ್ಲಿ ಶಾಸಕಿ ಕರೆಮ್ಮ ನಾಯಕ ನೆಲದ ಮೇಲೆ ಕುಳಿತು ಧರಣಿ ನಡೆಸಿದರು.

ಟೋಲ್ ವಸೂಲಿ ರದ್ದತಿಗೆ ಕ್ರಮ

ದೇವದುರ್ಗ ಕ್ಷೇತ್ರದ ಸಮಸ್ಯೆಗಳಿಗೆ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದರೂ ಪರಿಹಾರ ದೊರಕಿಲ್ಲ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವವರೆಗೂ ನಾನು ಆಸನದ ಮೇಲೆ ಕುಳಿತುಕೊಳ್ಳುವುದಿಲ್ಲ ಎಂದು ಕೆಡಿಪಿ ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ ದೇವದುರ್ಗ ಶಾಸಕಿ ಕರೆಮ್ಮ ನಾಯಕ ನೆಲದ ಮೇಲೆ ಕುಳಿತು ಧರಣಿ ನಡೆಸಿದರು. ದೇವದುರ್ಗ ಕ್ಷೇತ್ರದ ಅಭಿವೃದ್ಧಿಗೆ ಸರಕಾರ ಅನುದಾನ ಕೊಡುತ್ತಿಲ್ಲ. 40 ಕಿ.ಮೀ ಅಂತರದಲ್ಲಿ ಎರಡು ಟೋಲ್ ನಿರ್ಮಿಸಿ ಹಣ ವಸೂಲಿ ಮಾಡಲಾಗುತ್ತಿದೆ. ಇದನ್ನು ಪ್ರಶ್ನಿಸಿದ ಹೋರಾಟಗಾರರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಪೊಲೀಸ್ ದಬ್ಬಾಳಿಕೆ ಹೆಚ್ಚಾಗಿದೆ ಎಂದು ದೂರಿದರು. ಇದನ್ನು ಪ್ರಶ್ನಿಸಿದ ನನ್ನ ಕುಟುಂಬದವರು ಮತ್ತು ಕಾರ್ಯಕರ್ತರ ಮೇಲೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ತಕ್ಷಣ ಟೋಲ್ ಸಂಗ್ರಹ ಕೇಂದ್ರ ರದ್ದಾಗಬೇಕು. ನನಗೆ ನ್ಯಾಯ ಸಿಗದಿದ್ದರೆ ಸಭೆಯಿಂದ ನಿರ್ಗಮಿಸುವುದಿಲ್ಲ ಎಂದರು. ಇದಕ್ಕೆ ಸ್ಪಂದಿಸಿದ ಜಿಲ್ಲಾ ಉಸ್ತುವಾರಿ ಸಚಿವರು ಸ್ಪಂದಿಸಿ ಲೋಕೋಪಯೋಗಿ ಸಚಿವರೊಂದಿಗೆ ಸಭೆ ನಡೆಸುವವರೆಗೂ ತಾತ್ಕಾಲಿಕವಾಗಿ ಟೋಲ್ ಸಂಗ್ರಹ ತಡೆಯಲು ಕ್ರಮಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗೆ ಸೂಚನೆ ನೀಡಿದರು. ನಂತರ ಕರೆಮ್ಮ ಧರಣಿ ಅಂತ್ಯಗೊಳಿಸಿದರು.

ಕೆಪಿಸಿಸಿ ಅಧ್ಯಕ್ಷರ ಆಯ್ಕೆ ಹೈಕಮಾಂಡ್ ನಿರ್ಧಾರ

ಬೆಳಗಾವಿ: ಕೆಪಿಸಿಸಿ ಅಧ್ಯಕ್ಷರನ್ನು ಆಯ್ಕೆ ಮಾಡುವ ನಿರ್ಧಾರವನ್ನು ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುತ್ತದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿ ಹೊಳಿ ಹೇಳಿದರು. ಸುದ್ದಿಗಾರ ರೊಂದಿಗೆ

ಮಾತ ನಾಡಿದ ಸಚಿವರು, ರಣ ದೀಪ ಸಿಂಗ್ ಸುರ್ಜೇ ವಾಲಾ ಅವರೊಂದಿಗೆ ರಾಜ್ಯದ ಅಭಿವೃದ್ಧಿ ವಿಷಯ ಹಾಗೂ ಅಭಿವೃದ್ಧಿಗೆ ಪ್ರತಿ ಶಾಸಕರಿಗೆ ನಿಗದಿಪಡಿಸಿದ ನಿಧಿ ಬಗ್ಗೆ ಚರ್ಚಿಸಲಾಗಿದೆಯೇ ಹೊರತು, ಕೆಪಿಸಿಸಿ ಹೊಸ ಅಧ್ಯಕ್ಷರ ಆಯ್ಕೆ ವಿಷಯವಾಗಿ ಯಾವುದೇ ಚರ್ಚೆಯಾಗಿಲ್ಲ. ಅಧ್ಯಕ್ಷರ ಆಯ್ಕೆ ಪಕ್ಷದ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಲೋಕೋ ಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜ ಯೋತ್ಸವ ವೇಳೆ ನಡೆದ ಘಟನೆಗಳ ವಿವರ ಬಗ್ಗೆ ತನಿಖಾ ವರದಿ ಸಲ್ಲಿಕೆಯಾಗಿದೆ. ಅಧ್ಯಯನ ಮಾಡಿ ಸರ್ಕಾರ ಕ್ರಮ ಕೈಗೊಳ್ಳಿದೆ. ಈ ಕಾರ್ಯಕ್ರಮ ಆಯೋಜನೆಗೆ ಆರ್‌ಸಿಬಿ ತಂಡದವರು ಲೋಕೋ ಪಯೋಗಿ ಸೇರಿದಂತೆ ಯಾವುದೇ ಇಲಾಖೆಯಿಂದ ಯಾವುದೇ ಅನುಮತಿ ಪಡೆದಿಲ್ಲ ಎಂದು ಸಚಿವರು ಉತ್ತರಿಸಿದರು.

ಅನಂತಕುಮಾರ್‌ಗೆ ಜೀವ ಬೆದರಿಕೆ

ಕಾರವಾರ: ಮಾಜಿ ಸಂಸದ ಅನಂತ ಕುಮಾರ್ ಹೆಗಡೆ ಅವರಿಗೆ ಇಮೇಲ್ ಮೂಲಕ ಅಪರಿಚಿತ ವ್ಯಕ್ತಿಯಿಂದ ಜೀವ ಬೆದರಿಕೆ

ಬಂದಿದೆ. ಈ ಸಂಬಂಧ ಶಿರಸಿ ಮಾರುಕಟ್ಟೆ ಪೊಲೀಸ್ ಠಾಣೆಯಲ್ಲಿ ಮಾಜಿ ಸಂಸದ ಆಪ್ತ ಕಾರ್ಯದರ್ಶಿ ಸುರೇಶ್ ಶೆಟ್ಟಿ ದೂರು ದಾಖಲಿಸಿದ್ದಾರೆ. ಜೂನ್ 24ರಂದು ಇಮೇಲ್ ಮೂಲಕ ಜೀವ ಬೆದರಿಕೆ ಬಂದಿದೆ. ನ್ಯಾಯಾಲಯದ ಅನುಮತಿ ಮೇರೆಗೆ ಶುಕ್ರವಾರ ದೂರು ದಾಖಲು ಮಾಡಲಾಗಿದೆ. ಈ ಹಿಂದೆಯೂ ಸಹ ಅನಂತ ಕುಮಾರ್ ಹೆಗಡೆಗೆ ಜೀವ ಬೇದರಿಕೆ ಬಂದಿತ್ತು. ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಶಿರಸಿಯ ಕೆಹೆಚ್ಬಿ ಕಾಲೊನಿಯ ನಿವಾಸದಲ್ಲಿ ಸಂಸದರು ಇದ್ದಾರೆ.

ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ!
ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್
ವಿಸಿಟ್ ಮಾಡಿ
www.pravasiprapancha.com

ವಿಶ್ವವಾಣಿ

ಸಂಪಾದಕೀಯ

ಪಾಕಿಸ್ತಾನ ಪಾಠ ಕಲಿಯಲಿ

ಕಾಲು ಕೆರೆದುಕೊಂಡು ಭಾರತದ ಮೇಲೆ ಜಗಳಕ್ಕೆ ಬರುವುದನ್ನೇ ಚಾಳಿಯಾಗಿಸಿಕೊಂಡಿದ್ದ ಪಾಕಿಸ್ತಾನದ ಆಳುಗರು ಮತ್ತು ಸೇನಾವ್ಯವಸ್ಥೆಗೆ, ಭಾರತದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸುವುದನ್ನೇ ಉಸಿರಾಗಿಸಿಕೊಂಡಿದ್ದ ಅಲ್ಲಿನ ಉಗ್ರಗಾಮಿಗಳಿಗೆ ಇತ್ತೀಚಿನ ದಿನಗಳಲ್ಲಿ ತಕ್ಕ ಶಾಸ್ತಿಯೇ ಆಗುತ್ತಿದೆ. ಕಾಶ್ಮೀರದ ಪಹಲ್ಗಾಮ್‌ನಲ್ಲಿ ವಿಹರಿಸಿಕೊಂಡಿದ್ದ ಅಮಾಯಕ ಪ್ರವಾಸಿಗರ ಮೇಲೆ ಹಲ್ಲೆ ನಡೆಸಿ ಹತ್ಯೆ ಮಾಡಿದ ಪಾಕ್-ಪ್ರೇರಿತ ಉಗ್ರಗಾಮಿಗಳು, ಭಾರತ ಕೈಗೊಂಡ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯಿಂದಾಗಿ ಸರಿಯಾಗೇ ಬರೆ ಹಾಕಿಸಿಕೊಂಡರು. ಇನ್ನು, ರಾಷ್ಟ್ರೀಯ ತನಿಖಾದಳದ (ಎನ್‌ಐಎ) ವಶದಲ್ಲಿರುವ 26/11ರ ಮುಂಬೈ ದಾಳಿಯ ಸಂಚುಕೋರ ಹಾಗೂ ಉಗ್ರ ತಹಾವುರ್ ರಾಣಾ, ಸದರಿ ಸಂಚಿನ ಭಾಗವಾಗಿ ತಾನು ಮುಂಬೈನಲ್ಲೇ ಇದ್ದುದನ್ನೂ, ತಾನು ಪಾಕಿಸ್ತಾನ ಸೇನೆಯ ಏಜೆಂಟ್ ಎಂಬುದನ್ನೂ ಬಾಯಿಬಿಟ್ಟಿದ್ದಾನೆ. ಇಂಥ ಹಲವು ಬೆಳವಣಿಗೆಗಳಿಂದಾಗಿ ಪಾಕಿಸ್ತಾನದ ಮಾನವು ಜಾಗತಿಕ ಸಮುದಾಯದ ಮುಂದೆ ಹರಾಜಾಗಿದೆ. ಮತ್ತೊಂದೆಡೆ, ಬಲೂಚ್ ಲಿಬರೇಷನ್ ಆರ್ಮಿಯು ಪಾಕಿಸ್ತಾನದ ಮಿಲಿಟರಿ ಪೋಸ್ಟ್‌ಗಳನ್ನು ಗುರಿಯಾಗಿಸಿಕೊಂಡು ಇತ್ತೀಚೆಗೆ ದಾಳಿ ನಡೆಸಿದೆ ಎಂದು ತಿಳಿದುಬಂದಿದೆ. ಇನ್ನು ಪಾಕಿಸ್ತಾನದಲ್ಲಿ ಬಹಳ ಕಾಲದಿಂದ ತಾಂಡವವಾಡುತ್ತಿರುವ ರಾಜಕೀಯ ಅರಾಜಕತೆಯನ್ನು ಬಿಡಿಸಿ ಹೇಳಬೇಕಿಲ್ಲ. ಹೀಗೆ ವಿವಿಧ ನೆಲೆಗಳಲ್ಲಿ ಶಾಸ್ತಿಯಾಗುತ್ತಿದ್ದರೂ, ಪಾಕಿಸ್ತಾನದ ಜನನಾಯಕರು ಮತ್ತು ಸೇನಾನಾಯಕರು ಮತ್ತೆ ಮತ್ತೆ ಬಾಲ ಬಿಚ್ಚುವುದಿದೆ, ಭಾರತದ ವಿರುದ್ಧ ಪ್ರಚೋದನಾತ್ಮಕ ಹೇಳಿಕೆಯನ್ನು ನೀಡುವುದಿದೆ. ಇದನ್ನು ಗಮನಿಸಿಯೋ ಏನೋ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮೊನ್ನೆ ಜೈಪುರದಲ್ಲಿ, 'ಭಾರತದ ಗಡಿಗಳು, ರಕ್ಷಣಾ ಪಡೆಗಳು ಅಥವಾ ನಾಗರಿಕರಿಗೆ ಯಾವುದೇ ಬೆದರಿಕೆಯನ್ನು ಒಡ್ಡಿದರೆ ಅದಕ್ಕೆ ತಕ್ಕ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂಬ ಬಲವಾದ ಸಂದೇಶ ಜಗತ್ತಿಗೆ ರವಾನೆಯಾಗಿದೆ' ಎಂದು ಹೇಳಿಕೆ ನೀಡುವ ಮೂಲಕ ಪಾಕಿಸ್ತಾನವನ್ನು ಪರೋಕ್ಷವಾಗಿ ಎಚ್ಚರಿಸಿದ್ದಾರೆ. ಪಾಕಿಸ್ತಾನ ಇನ್ನಾದರೂ ಪಾಠ ಕಲಿತರೆ ಒಳ್ಳೆಯದು.

ಸೊಂಪಾದಕೀಯ

ಎವೆರಿ ಡೇ ಈಸ್ ನಾಟ್ WED-nesday

ಮದುವೆಗಳು ಸ್ವರ್ಗದಲ್ಲಿ ನಿಶ್ಚಯ ಆಗಿರುತ್ತವೆ ಅಂತ ಹೇಳುತ್ತಾರೆ. ಆದರೆ ಇನ್ನು ಕೆಲವರು, 'ಮದುವೆಗಳು ಮನೆಗಳಲ್ಲಿ ನಿಶ್ಚಯ ಆಗುತ್ತವೆ. ಛತ್ರಗಳಲ್ಲಿ ನಡೆಯುತ್ತವೆ' ಅಂತಾರೆ. ಆದರೆ ಇತ್ತೀಚೆಗೆ, ಛತ್ರಗಳಲ್ಲಿ ನಡೆಯಬೇಕಾದ ಮದುವೆಗಳೂ ನಡೆಯೋದು ಕಷ್ಟ ಅನ್ನೋ ಥರ ಆಗಿದೆ. ಯಾಕಂದ್ರೆ, ಎಲ್ಲ ಸುಸೂತ್ರವಾಗಿ ರೆಡಿ ಆದಮೇಲೂ ಕೊನೆಯ ಕ್ಷಣದಲ್ಲಿ ಮದುವೆಗಳು ಕ್ಯಾನ್ಸಲ್ ಆಗುತ್ತಿವೆ. ಕೆಲ ತಿಂಗಳ ಹಿಂದೆ, ಇದೇ ರೀತಿ ಅಂತಿಮ ಕ್ಷಣದಲ್ಲಿ ವಧು ಮನಸ್ಸು ಬದಲಾಯಿಸಿದ್ದರಿಂದ ಮದುವೆಯೊಂದು ನಿಂತುಹೋಗಿದ್ದನ್ನು ನೀವು ಕೇಳಿರಬಹುದು. ಹಿಂದಿನ ದಿನ ರಾತ್ರಿ ಕೂಡಾ ಯಾರಿಗೂ ಲಗ್ನಕ್ಕೆ ವಿಘ್ನ ಬರುತ್ತೆ ಅಂತ ಗೊತ್ತಾಗಿರಲಿಲ್ಲ. ಯಾಕಂದ್ರೆ, ಆರತಕ್ಷತೆಯಲ್ಲೂ ವಧು ನೀಟಾಗಿ ಅಕ್ಷತೆ ಹಾಕಿಸಿಕೊಂಡು ಕಾರ್ಯಕ್ರಮ ಮುಗಿಸಿದ್ದಳು. ಮರುದಿನ ಬೆಳಗ್ಗೆ 9 ಗಂಟೆಗೆ ಹಸೆಮಣೆಯಲ್ಲಿ ವರನಿಂದ ತಾಳಿ ಕಟ್ಟಿಸಿಕೊಳ್ಳುವ ಸಮಯ. ವಧೂ ಅದಕ್ಕೂ ತಯಾರಾಗಿಯೇ ಕುಳಿತಿದ್ದಳು. ಆದರೆ, ಸರಿಯಾಗಿ ತಾಳಿ ಕಟ್ಟೋ ಸಮಯಕ್ಕೆ, 'ತಾಳಿ' ಅಂತ ಹುಡುಗಿಯ ಪ್ರಿಯಕರ ಎಂಟ್ರಿ ಕೊಟ್ಟ. ಅವನನ್ನು ನೋಡಿದ ವಧು, ಕೊನೆಯ ಕ್ಷಣದಲ್ಲಿ ನಂಗೆ ಈ ಮದ್ವೆ ಬೇಡ ಅಂತ ವರಾತ ತೆಗೆದಳು. ಹಳೆಯ ಪ್ರೀತಿ ತಾಳಿ ಕಟ್ಟೋ ಸಮಯದಲ್ಲಿ ಮರುಕಳಿಸಿದ ಕಾರಣಕ್ಕೆ ಮದುವೆ ಆಗೋ ಹುಡುಗನನ್ನು ಹೊರಗೆ ಕಳುಹಿಸಿ, ಪ್ರಿಯಕರನಿಂದಲೇ ತಾಳಿ ಕಟ್ಟಿಸಿಕೊಂಡಳು ಹುಡುಗಿ. ಹುಡುಗನ ಕಡೆಯವರು ಪಾಪ, ನಿಮ್ಮ ಹುಡುಗಿಗಾಗಿ ನಾವು ಮಾಡಿದ ಖರ್ಚನ್ನು ನಮಗೆ ಕೊಡಿ ಅಂತ ಖರ್ಚಿಗೆ ಕಾಸು ತೆಗೆದುಕೊಂಡವರಂತೆ ಅಲ್ಲಿಂದ ಹೊರಬಂದರು. ಒಟ್ಟಿನಲ್ಲಿ ಕೈಗೆ ಬಂದಿದ್ದು ಬಾಯಿಗೆ ಬರಲಿಲ್ಲ ಎನ್ನುವಂತೆ, ನಿಶ್ಚಿತಾರ್ಥದವರೆಗೆ ಬಂದಿದ್ದು, ಮದುವೆವರೆಗೆ ಬಾರದೆ ವರ ನಿರಾಶನಾದ. ಇದನ್ನೆಲ್ಲಾ ನೋಡಿದವರು, 'ಹುಡುಗ, ಹುಡುಗಿ ಜಾತಕ ನೋಡಿ, ನಿಶ್ಚಿತಾರ್ಥ ನಡೆದು, ಬೆಳಗ್ಗೆ ಹಸೆಮಣೆ ಏರೋದು ಅಂತ ಫಿಕ್ಸ್ ಆಗಿದ್ದರೂ, ತಾಳಿ ಕಟ್ಟುವ ಶುಭವೇಳೆ ಮುಗಿಯುವವರೆಗೂ ಮದುವೆ ಆಗೋದು ಗ್ಯಾರಂಟಿ ಇಲ್ಲ, ಯಾಕಂದ್ರೆ, ಎವೆರಿ ಡೇ ಈಸ್ ನಾಟ್ WED-nesday ಎಂದರಂತೆ.

ಸಂಪಾದಕರ ಸದ್ಯಶೋಧನೆ

ಫ್ಲೈಟ್ ಟ್ರ್ಯಾಕಿಂಗ್ ಪ್ರಯೋಜನ

ವಿಮಾನ ಹಾರುವಾಗ ಅದು ಎಲ್ಲಿದೆ, ಯಾವ ಪಥದಲ್ಲಿ ಹಾರುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯ. ವಿಮಾನದ ಟ್ರ್ಯಾಕ್ ಸ್ಥಾನ (Aircraft Track Position) ಎಂದರೆ ವಿಮಾನವು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹಾರುವಾಗ ಅನುಸರಿಸುವ ನಿಖರ ಮಾರ್ಗ. ವಿಮಾನವು ಯಾವುದೇ ಕ್ಷಣದಲ್ಲಿ ಎಲ್ಲಿದೆ ಎಂಬುದನ್ನು ಪೈಲಟ್‌ಗಳು ಮತ್ತು ವಾಯು ಸಂಚಾರ ನಿಯಂತ್ರಕರು (Air Traffic Controllers) ಇದರಿಂದ ತಿಳಿದುಕೊಳ್ಳುತ್ತಾರೆ. ಇದು ಹೇಗೆ ಕಾರ್ಯನಿರ್ವಹಿಸುತ್ತದೆ? ವಿಮಾನದ ಸ್ಥಾನವನ್ನು ವಿಮಾನದಲ್ಲಿ ಅಳವಡಿಸಲಾಗಿರುವ GPS (Global Positioning System), ನ್ಯಾವಿಗೇಷನ್ ಸಿಸ್ಟಮ್‌ಗಳು ಮತ್ತು ನೆಲ-ಆಧಾರಿತ ರಡಾರ್ (Ground-based Radar) ವ್ಯವಸ್ಥೆಗಳನ್ನು ಬಳಸಿ ನಿರ್ಧರಿಸಲಾಗುತ್ತದೆ. ಪೈಲಟ್‌ಗಳು ಪೂರ್ವ-ಯೋಜಿತ ವಾಯುಮಾರ್ಗಗಳು (Airways) ಮತ್ತು ಮಾರ್ಗಗಳನ್ನು ಅನುಸರಿಸುತ್ತಾರೆ. ವಿಮಾನದ ಟ್ರ್ಯಾಕ್ ಸ್ಥಾನವನ್ನು ನಿರಂತರವಾಗಿ ನವೀಕರಿಸಲಾಗುತ್ತದೆ ಮತ್ತು ಕಾಕ್‌ಪಿಟ್‌ನಲ್ಲಿರುವ ಪರದೆಗಳ ಮೇಲೆ ಪ್ರದರ್ಶಿಸಲಾಗುತ್ತದೆ. ರಿಯಲ್-ಟೈಮ್ ವಿಮಾನ ಟ್ರ್ಯಾಕಿಂಗ್‌ನ ಮುಖ್ಯ ಪ್ರಯೋಜನವೇನು? ಇದು ಪ್ರಯಾಣಿಕರ ಸುರಕ್ಷತೆ, ವಿಮಾನದ ದಕ್ಷತೆ (Flight Efficiency) ಮತ್ತು ಹವಾಮಾನವನ್ನು ತಿಳಿದುಕೊಳ್ಳಲು ಸಹಾಯಕ. ಅಷ್ಟೇ ಅಲ್ಲ, ಆಗಮನದ ನಿಖರ ಸಮಯವನ್ನೂ ತಿಳಿದುಕೊಳ್ಳಬಹುದು. ಆಧುನಿಕ ವಿಮಾನಗಳು ADS-B (Automatic Dependent Surveillance-Broadcast) ನಂಥ ವ್ಯವಸ್ಥೆಗಳನ್ನು ಬಳಸಿಕೊಂಡು ಪ್ರತಿ ಕೆಲವು ಸೆಕೆಂಡುಗಳಿಗೆ ತಮ್ಮ ನಿಖರ ಸ್ಥಾನವನ್ನು ಹಂಚಿಕೊಳ್ಳಬಲ್ಲವು. ಇದು ನೆಲದ ಮೇಲಿರುವವರು ಸಹ ವಿಮಾನಗಳ ಹಾರಾಟವನ್ನು ನೈಜ ಸಮಯದಲ್ಲಿ (Real-time) ಟ್ರ್ಯಾಕ್ ಮಾಡಲು ಅನುವು ಮಾಡಿಕೊಡುತ್ತದೆ. ಜಿಪಿಎಸ್ ಬರುವ ಮೊದಲೇ, ಪೈಲಟ್‌ಗಳು ತಮ್ಮ ಟ್ರ್ಯಾಕ್ ಸ್ಥಾನವನ್ನು ತಿಳಿದುಕೊಳ್ಳಲು ಪ್ರಮುಖ ಭೂ ಗುರುತುಗಳು (Landmarks) ಮತ್ತು ರೇಡಿಯೊ ಬೀಕನ್‌ಗಳನ್ನು (Radio Beacons) ಬಳಸುತ್ತಿದ್ದರು. ಇಂದು, ಉಪಗ್ರಹ ಸಂಕೇತಗಳಿಂದ ಅದು ಸಾಧ್ಯವಾಗುತ್ತಿದೆ. ವಿಮಾನಯಾನ ಸಂಸ್ಥೆಗಳು ಇಡೀ ಕಾರ್ಯಾಚರಣಾ ಕೇಂದ್ರಗಳನ್ನು ಹೊಂದಿದ್ದು, ಅಲ್ಲಿ ವಿಮಾನದ ಹಾರಾಟಗಳನ್ನು ಸುರಕ್ಷಿತವಾಗಿ ಮತ್ತು ಸಮಯಕ್ಕೆ ಸರಿಯಾಗಿ ಇರಿಸಿಕೊಳ್ಳಲು Dispatcher ಗಳು ಪ್ರತಿ ವಿಮಾನದ ಟ್ರ್ಯಾಕ್ ಸ್ಥಾನವನ್ನು 24/7 ಮೇಲ್ವಿಚಾರಣೆ ಮಾಡುತ್ತಾರೆ. ವಿಮಾನದ ಚಲನೆ, ವೇಗ ಮತ್ತು ದಿಕ್ಕನ್ನು ನಿಖರವಾಗಿ ಅಳೆಯಲು ಗೈರೊಸ್ಕೋಪ್‌ಗಳು ಮತ್ತು ಅಕ್ಸೆಲೆರೊಮೀಟರ್‌ಗಳನ್ನು ಬಳಸಲಾಗುತ್ತದೆ. ಯಾವುದೇ ಬಾಹ್ಯ ಸಂಕೇತಗಳಿಲ್ಲದೆ ವಿಮಾನದ ಸ್ಥಾನವನ್ನು ಲೆಕ್ಕಹಾಕಲು ಇವು ಸಹಾಯಕ. ಫ್ಲೈಟ್ ಮ್ಯಾನೇಜ್ಮೆಂಟ್ ಸಿಸ್ಟಮ್ (FMS) ಇದೆಯಲ್ಲ, ಅದು ವಿಮಾನದ ಎಲ್ಲ ನ್ಯಾವಿಗೇಷನ್ ಡಾಟಾವನ್ನು ಸಂಯೋಜಿಸುವ ಕಂಪ್ಯೂಟರ್ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯು ಪೈಲಟ್‌ಗಳಿಗೆ ಇಂಧನ ಮಟ್ಟ, ಸೂಕ್ತ ಮಾರ್ಗಗಳನ್ನು ಯೋಜಿಸಲು, ಟ್ರ್ಯಾಕ್ ಸ್ಥಾನವನ್ನು ನಿಖರವಾಗಿ ಮೇಲ್ವಿಚಾರಣೆ ಮಾಡಲು ಮತ್ತು ಯಾವುದೇ ಬದಲಾವಣೆಗಳಿಗೆ ತ್ವರಿತವಾಗಿ ಹೊಂದಿಕೊಳ್ಳಲು ಅನುವು ಮಾಡಿಕೊಡುತ್ತದೆ. ವಿಮಾನಗಳ ನಡುವೆ ಲಂಬ ಮತ್ತು ಅಡ್ಡ ಅಂತರವನ್ನು ಕಾಯ್ದುಕೊಳ್ಳಲು ಎಟಿಸಿಗೆ ಟ್ರ್ಯಾಕ್ ಸ್ಥಾನ ಅತಿ ಮುಖ್ಯ. ಇದು ಆಕಾಶದಲ್ಲಿ ಡಿಕ್ಕಿ ಅಥವಾ ಘರ್ಷಣೆಯನ್ನು ತಡೆಯುತ್ತದೆ. ವಿಮಾನ ನಿಲ್ದಾಣಗಳಲ್ಲಿನ ಟೇಕಾಫ್ ಮತ್ತು ಲ್ಯಾಂಡಿಂಗ್ ನಿರ್ವಹಿಸಲು, ಟ್ರ್ಯಾಕ್ ಸ್ಥಾನದ ಮಾಹಿತಿಯು ನಿರ್ಣಾಯಕ. ಇದು ವಿಳಂಬಗಳನ್ನು ಕಡಿಮೆ ಮಾಡಲು ಕೂಡ ಸಹಾಯ ಮಾಡುತ್ತದೆ. ವಿಮಾನವು ಚಂಡಮಾರುತ, ತೀವ್ರವಾದ ಮಳೆ ಅಥವಾ ಇತರೆ ಅಪಾಯಕಾರಿ ಹವಾಮಾನ ಪ್ರದೇಶಗಳನ್ನು ಸಮೀಪಿಸಿದಾಗ, ಎಟಿಸಿ ಆ ವಿಮಾನಗಳಿಗೆ ಹೊಸ ಮಾರ್ಗವನ್ನು (re-routing) ಸೂಚಿಸಲು ಟ್ರ್ಯಾಕ್ ಸ್ಥಾನವನ್ನು ಬಳಸುತ್ತದೆ. ADS-B ವ್ಯವಸ್ಥೆಯು ವಿಮಾನ ಟ್ರ್ಯಾಕಿಂಗ್‌ನಲ್ಲಿ ಒಂದು ಕ್ರಾಂತಿಕಾರಿ ಬದಲಾವಣೆಯನ್ನು ತಂದಿದೆ. ಇದು ಪೈಲಟ್‌ಗಳಿಗೆ ತಮ್ಮ ಸುತ್ತಮುತ್ತಲಿನ ಇತರ ವಿಮಾನಗಳ ಸ್ಥಾನವನ್ನು ನೇರವಾಗಿ ನೋಡಲು ಅನುವು ಮಾಡಿಕೊಡುತ್ತದೆ, ಹಾರಾಟದ ಅರಿವನ್ನು (situational awareness) ಹೆಚ್ಚಿಸುತ್ತದೆ. FlightRadar24, FlightAware ನಂಥ ಜನಪ್ರಿಯ ಅಪ್ಲಿಕೇಶನ್‌ಗಳು ADS-B ಡೇಟಾವನ್ನು ಬಳಸಿ ಸಾರ್ವಜನಿಕರಿಗೆ ವಿಮಾನಗಳನ್ನು ನೈಜ ಸಮಯದಲ್ಲಿ ಟ್ರ್ಯಾಕ್ ಮಾಡಲು ಅವಕಾಶ ನೀಡುತ್ತವೆ. ಇದು ವಿಮಾನಯಾನ ಪಾರದರ್ಶಕತೆಯನ್ನು ಹೆಚ್ಚಿಸಿದೆ.

ಮತಬ್ಯಾಂಕ್ ರಾಜಕಾರಣಕ್ಕೆ ಆರೆಸ್ಸೆಸ್ ಟೀಕೆ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಹೆಸರನ್ನು ದಿನದಲ್ಲಿ ಒಮ್ಮೆಯಾದರೂ ಹೇಳದಿದ್ದರೆ ಕಾಂಗ್ರೆಸ್ಸಿಗರಿಗೆ ಮುಸಲ್ಮಾನರ ಮತ ಬೀಳುವುದಿಲ್ಲ. ಮುಸಲ್ಮಾನರನ್ನು ಓಲೈಸಲು ಸಂಘದ ಹೆಸರನ್ನು ಮುನ್ನೆಲೆಗೆ ತರುವ ಕೆಲಸವು ಕಾಂಗ್ರೆಸ್ ಮತ್ತು ಎಡಚರರಲ್ಲಿ ಸದಾ ನಡೆಯುತ್ತಿರುತ್ತದೆ. ಒಂದು ದಿನವಾದರೂ ಶಾಖೆಯ ಬಾಗಿಲು ತಟ್ಟದ ಪ್ರಿಯಾಂಕ್ ಖರ್ಗೆ ಮತ್ತು ಹರಿಪ್ರಸಾದ್, ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಮಾತುಮಾತಿಗೂ ಮನುಸ್ಮೃತಿಯನ್ನು ತಮ್ಮ ಭಾಷಣದಲ್ಲಿ ಬಳಸಿಕೊಳ್ಳುವ ಕಾಂಗ್ರೆಸ್ಸಿಗರಿಗೆ ಮನುಸ್ಮೃತಿಯ ಮುನ್ನುಡಿಯೂ ತಿಳಿದಿರಲಿಕ್ಕಿಲ್ಲ. ಹಿಂದೂ ಸಮಾಜದಲ್ಲಿದ್ದಂಥ ಜಾತಿಗಳ ನಡುವಿನ ಅಸಮಾನತೆಯನ್ನು ಹೋಗಲಾಡಿಸಿ ಸಮಸ್ತ ಹಿಂದೂಗಳನ್ನು ಒಂದೆಡೆ ಸೇರಿಸಿ ಬ್ರಿಟಿಷರ ವಿರುದ್ಧ ಹೋರಾಡಲು ಸ್ಥಾಪಿತವಾದಂಥ ಅಪ್ಪಟ ದೇಶಭಕ್ತ ಸಂಘಟನೆ 'ಆರೆಸ್ಸೆಸ್'. ಸ್ವತಃ ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧಿಯವರು ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿನ ಶಿಸ್ತನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದ್ದರು. ನಾಗಪುರದ ಶಿಬಿರದಲ್ಲಿ ಜಾತಿಯನ್ನು ಮೀರಿ ಎಲ್ಲರೂ ಒಟ್ಟುಗೂಡಿ ಕೆಲಸ ಮಾಡುವುದನ್ನು ಕಂಡು ಸ್ವತಃ ಮಹಾತ್ಮ ಗಾಂಧಿ ಸಂತಸ ವ್ಯಕ್ತಪಡಿಸಿದ್ದರು. ಸಂಘದ ಶಾಖೆಗಳಲ್ಲಿ ಇಂದಿಗೂ ಜಾತಿಯೆಂಬ ವಿಷಯ ಚರ್ಚೆಗೆ ಬರುವುದಿಲ್ಲ, ಸಮಾಜಸೇವೆ ಹಾಗು ಸದೃಢ ರಾಷ್ಟ್ರ ನಿರ್ಮಾಣ ಕಾರ್ಯಗಳು ಮಾತ್ರ ಚರ್ಚೆಯಲ್ಲಿರುತ್ತವೆ. ತಮ್ಮ ಮನೆಯ ಮಕ್ಕಳನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆಗೆ ಕಳುಹಿಸಿದರೆ ಶಿಸ್ತಿನ ಸಿಪಾಯಿಗಳಾಗುತ್ತಾರೆಂಬ ಆಲೋಚನೆ ಇಂದಿಗೂ ಪೋಷಕರಲ್ಲಿದೆ.

ಚೆನ್ನೈ ನಗರದಲ್ಲಿ ಹಿಂದೆಂದೂ ಕಂಡರಿಯದ ಜಲಪ್ರವಾಹ ಉಂಟಾದಾಗ ಜನರ ಸೇವೆಗೆಂದು ಮೊದಲು ರಸ್ತೆಗಿಳಿದಿದ್ದು ಆರೆಸ್ಸೆಸ್. ಕೊಡಗಿನಲ್ಲಿ ಮಳೆಯಿಂದ ಉಂಟಾದ ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸಲು ಸರಕಾರಕ್ಕಿಂತಲೂ ಮೊದಲು ಜನರ ಬಳಿ ತಲುಪಿದ್ದು ಆರೆಸ್ಸೆಸ್. ಉತ್ತರ ಕರ್ನಾಟಕ ಭಾಗದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾದ ಸಂದರ್ಭದಲ್ಲಿ ಜನರ ನೆರವಿಗೆ ಮೊದಲು ಹೋದದ್ದು ಆರೆಸ್ಸೆಸ್. ಅಷ್ಟೇ ಯಾಕೆ, ಕರೋನ ಸಂದರ್ಭದಲ್ಲಿ ಜನರ ಮನೆಮನೆಗೆ ಭೇಟಿ ನೀಡಿ ಊಟ, ಪಡಿತರ, ಔಷಧಿಗಳನ್ನು ತಲುಪಿಸುವ ಸಮಾಜಮುಖಿ ಚಟುವಟಿಕೆಗಳನ್ನು ಕೈಗೊಂಡಿದ್ದು ಆರೆಸ್ಸೆಸ್. ವಿಶಾಖಪಟ್ಟಣದಲ್ಲಿ ಉಂಟಾಗಿದ್ದ ಪ್ರವಾಹದಲ್ಲಿ ಸಿಲುಕಿದ್ದ ಜನರ ಮನೆಗೆ ಮೊದಲು ತಲುಪಿದ್ದು ಆರೆಸ್ಸೆಸ್. ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರು ತಮ್ಮ ಮನೆಗಳನ್ನು ತೊರೆದು ಇಂದಿಗೂ ಸಮಾಜದಲ್ಲಿ ಸಾಮರಸ್ಯ ಮೂಡಿಸುವ ಸಲುವಾಗಿ ದೇಶದ ಮೂಲೆಮೂಲೆಗಳಲ್ಲಿ ದಿನನಿತ್ಯ ಸೇವೆ ಸಲ್ಲಿಸುತ್ತಿದ್ದಾರೆ. 1975ರಲ್ಲಿ ಕಾಂಗ್ರೆಸ್ಸಿನ ಇಂದಿರಾ ಗಾಂಧಿ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರುವ ಮೂಲಕ ಸರ್ವನಾಶಗೊಳಿಸಿದ್ದ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವಲ್ಲಿ ಬಹುದೊಡ್ಡ ಪಾತ್ರವಹಿಸಿದ್ದು ಆರೆಸ್ಸೆಸ್. ತುರ್ತು ಪರಿಸ್ಥಿಯ ಸಂದರ್ಭದಲ್ಲಿ ಇಂದಿರಾ ಗಾಂಧಿಯವರ ಅಟ್ಟಹಾಸವನ್ನು ಪ್ರಶ್ನಿಸಿ, ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಲು ದೇಶದಾದ್ಯಂತ ಹೋರಾಟ ನಡೆಸಿದ್ದಕ್ಕಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧ ಮಾಡಲಾಗಿತ್ತು. 1992ರ ಬಾಬ್ರಿ ಮಸೀದಿ ಧ್ವಂಸದ ಸಮಯದಲ್ಲಿ ಆರೆಸ್ಸೆಸ್ ನಿಷೇಧವಾಗಿತ್ತು. ನಂತರ ನ್ಯಾಯಾಲಯ ನೀಡಿದ ತೀರ್ಪಿನನ್ವಯ ಅದೇ ಜಾಗದಲ್ಲಿ ಇಂದು ಭವ್ಯ ರಾಮಮಂದಿರ ನಿರ್ಮಾಣವಾಗಿದೆ. ಕಾಂಗ್ರೆಸ್ ಪಕ್ಷ ತನ್ನ ಸ್ವಾರ್ಥಕ್ಕಾಗಿ ದೇಶದ ಭದ್ರತೆಯ ವಿಷಯದಲ್ಲಿ ರಾಜಿಮಾಡಿಕೊಂಡಿದ್ದನ್ನು ಪ್ರಶ್ನಿಸಿದ್ದಕ್ಕಾಗಿ ಸಂಘವನ್ನು ಈ ಹಿಂದೆ ನಿಷೇಧ ಮಾಡಲಾಗಿತ್ತು.

ರಾಷ್ಟ್ರೀಯ ಸ್ವಯಂಸೇವಕ ಸಂಘವೆಂಬುದು ಆನೆಯಿದ್ದಂತೆ, ಸದೃಢ ರಾಷ್ಟ್ರ ಕಟ್ಟುವ ನಿಟ್ಟಿನಲ್ಲಿ ತನ್ನ ಸಮಾಜಮುಖಿ ಕೆಲಸ ಮಾಡಿಕೊಂಡು ಅದು ಮುನ್ನುಗ್ಗುತ್ತಿರುತ್ತದೆ. ರಸ್ತೆಯಲ್ಲಿ ನಿಂತು ಸಂಘದ ವಿರುದ್ಧ ಮಾತನಾಡುವವರಿಗೆ ಅದು ಎಂದೂ ಪ್ರತಿಕ್ರಿಯಿಸುವುದಿಲ್ಲ. ಕಾಂಗ್ರೆಸ್ ಪಕ್ಷವು ಎಂದಿನಂತೆ ಮುಸಲ್ಮಾನರ ಓಲೈಕೆಯ ರಾಜಕಾರಣದ ಪರಮಾವಧಿಯಾಗಿ ಸಂಘವನ್ನು ದೇಶವಿರೋಧಿ ಸಂಘಟನೆಗಳ ಜತೆ ತಾಳೆಮಾಡುವ ಕೆಲಸವನ್ನು ಮಾಡುತ್ತದೆ. ಸಂಘವನ್ನು ಬೈದರೆ ಮುಸಲ್ಮಾನರು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಮತ ಹಾಕುತ್ತಾರೆ, ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿಯವರ ಮೆಚ್ಚುಗೆಗೆ ತಾವು ಪಾತ್ರರಾಗಬಹುದು ಎಂಬ ತಿಕ್ಕಲು ಯೋಚನೆ ಪ್ರಿಯಾಂಕ್ ಖರ್ಗೆಯವರದ್ದು. ಅಧಿಕಾರಕ್ಕಾಗಿ ಯಾವ ಮಟ್ಟಕ್ಕೆ ಬೇಕಾದರೂ ಇಳಿಯಲು ಸಿದ್ಧವಿರುವ ಕಾಂಗ್ರೆಸ್, ದೇಶವಿರೋಧಿಗಳ ಜತೆ ಕೈಜೋಡಿಸಲು ಸದಾ ಸಿದ್ಧವಾಗಿರುತ್ತದೆ.

ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ಭಾರತೀಯ ಜನತಾ ಪಕ್ಷದ ನಡುವಿನ ಸೈದ್ಧಾಂತಿಕ ಸಂಬಂಧ ಇಡೀ ಜಗತ್ತಿಗೆ ತಿಳಿದಿರುವ ವಿಷಯ. ಸಂಘದ ನೂರಾರು ಕಾರ್ಯಕರ್ತರು ಸಂಸದ-ಶಾಸಕರಾಗಿದ್ದಾರೆ, ಮಂತ್ರಿ-ಮುಖ್ಯಮಂತ್ರಿಗಳಾಗಿದ್ದಾರೆ. ಭಾರತದ ನಾಲ್ಕು ದಿಕ್ಕುಗಳನ್ನು ಸೇರಿಸುವ 'ಸುವರ್ಣ ಚತುಷ್ಪಥ' ರಸ್ತೆಯನ್ನು ನಿರ್ಮಿಸಿ ಭಾರತದ ಆರ್ಥಿಕತೆಯ ದಿಕ್ಕನ್ನೇ ಬದಲಾಯಿಸಿದ ಅಟಲ್ ಬಿಹಾರಿ ವಾಜಪೇಯಿಯವರು ಸಂಘದ ಕಾರ್ಯಕರ್ತರಾಗಿದ್ದವರು. ಜಗಮೆಚ್ಚಿದ ನಾಯಕ ನರೇಂದ್ರ ಮೋದಿಯವರೂ ಸಂಘದ ಕಾರ್ಯಕರ್ತರಾಗಿದ್ದವರು. ಇವರೆಲ್ಲರೂ ಹಗಲು ರಾತ್ರಿಯೆನ್ನದೆ ತಮ್ಮ ಜೀವನವನ್ನು ದೇಶಕ್ಕಾಗಿ ಮುಡುಪಿಟ್ಟಿರುವವರು. ದೇಶಕಟ್ಟುವ ಕೆಲಸ ಮಾಡುವ ಚಿಂತನೆಯ ಸಂಘವೆಲ್ಲಿ, ಮತಬ್ಯಾಂಕಿಗಾಗಿ ದೇಶವಿರೋಧಿಗಳ ಜತೆ ಸೇರಿಕೊಂಡು ರಾಜಕೀಯ ಮಾಡುವ ಕಾಂಗ್ರೆಸ್ ಎಲ್ಲಿ?

ಸದೃಢ ರಾಷ್ಟ್ರ ನಿರ್ಮಾಣ ಮಾಡುವ ನಿಟ್ಟಿನಲ್ಲಿ, ದೇಶಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ ಈ ವರ್ಷದಲ್ಲಿ 100 ವರ್ಷಗಳನ್ನು ಪೂರೈಸುತ್ತದೆ. ಒಂದು ಶತಮಾನದ ಸುದೀರ್ಘ ಪಯಣದಲ್ಲಿ ಆರೆಸ್ಸೆಸ್ ಎಲ್ಲಿಯೂ ದೇಶವಿರೋಧಿ ಕೃತ್ಯಗಳಲ್ಲಿ ಭಾಗಿಯಾದ ಉದಾಹರಣೆಯಿಲ್ಲ. ಸಂಘದಲ್ಲಿ ಸ್ವಯಂ ರಕ್ಷಣೆಯಡಿಯಲ್ಲಿ ದಂಡಗಳನ್ನು ಬಳಸುವ ತರಬೇತಿಯನ್ನು ಬ್ರಿಟಿಷರ ಕಾಲದಿಂದಲೂ ಹೇಳಿಕೊಡಲಾಗುತ್ತದೆ. ಈ ರಕ್ಷಣಾ ತರಬೇತಿಯನ್ನೇ ಅಸ್ತ್ರವನ್ನಾಗಿಸಿಕೊಂಡು ಅಸಂಬದ್ಧ ಪ್ರಶ್ನೆಗಳನ್ನು ಕೇಳುವ ಮೂಲಕ ಕಾಂಗ್ರೆಸ್ ತನ್ನ ಮುಸಲ್ಮಾನ್ ಮತಬ್ಯಾಂಕನ್ನು ಓಲೈಸುವಲ್ಲಿ ನಿರತವಾಗಿರುತ್ತದೆ. ಆಯುಧಪೂಜೆಯೆಂದು ಮನೆಯಲ್ಲಿರುವ ಆಯುಧಗಳನ್ನು ಪೂಜಿಸುವ ಸಂಪ್ರದಾಯ ಇಂದು ನಿನ್ನೆಯದಲ್ಲ, ಮೈಸೂರಿನ ಮಹಾರಾಜರು ಆಯುಧಪೂಜೆಯೆಂದು ತಮ್ಮ ಆಯುಧವನ್ನು ಶತಮಾನಗಳಿಂದ ಪೂಜಿಸುತ್ತಾ ಬಂದಿದ್ದಾರೆ. ಆಯುಧಪೂಜೆಯೆಂದು ನಡೆಸುವ ಕತ್ತಿ, ಗುರಾಣಿ, ಚೂರಿಯ ಪೂಜೆಯನ್ನು ಪ್ರಶ್ನಿಸುವ ಮೂಲಕ ಕಾಂಗ್ರೆಸ್ ಸಾಮಾನ್ಯ ಜನರ ಆಚರಣೆಯನ್ನೂ ಭಯೋತ್ಪಾದನೆಗೆ ಹೋಲಿಸಿ, ಹಿಂದೂಗಳ ಆಚರಣೆಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ತಳುಕು ಹಾಕಿ ಸಮಸ್ತ ಹಿಂದೂಗಳಿಗೆ ಅವಮಾನ ಮಾಡಿದೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಹೆಸರನ್ನು ಮುನ್ನೆಲೆಗೆ ತಂದು ತಮ್ಮ ಮತಬ್ಯಾಂಕನ್ನು ಭದ್ರಪಡಿಸಿಕೊಳ್ಳಲು ಬಾಯಿಗೆ ಬಂದಂತೆ ಮಾತನಾಡುವ ಕಾಂಗ್ರೆಸ್ಸಿನ ನಾಯಕರು ಭಾರತದ ಸಾರ್ವಭೌಮತ್ವದ ವಿಷಯದಲ್ಲಿ ನಡೆದುಕೊಂಡ ರೀತಿಯನ್ನೊಮ್ಮೆ ಜನರಿಗೆ ತಿಳಿಸಲೇ ಬೇಕು. ಬಾಬಾಸಾಹೇಬರು ಭಾರತಕ್ಕೆ ನೀಡಿದ ಸಂವಿಧಾನದ ವಿರುದ್ಧವಾಗಿ, ನೆಹರು ಅವರು ಅಬ್ದುಲ್ಲಾನನ್ನು ಓಲೈಸಲು ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ಪರಿಚ್ಛೇದದ ಮೂಲಕ ಬೇರೆ ಸಂವಿಧಾನವನ್ನು ನೀಡಿದ್ದರು. ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದ ನಂತರ ಪರಿಚ್ಛೇದ 370ನ್ನು ರದ್ದತಿ ಮಾಡಿದಾಗ, ಪಾಕಿಸ್ತಾನಕ್ಕಿಂತಲೂ ಮೊದಲು ವಿರೋಧ ವ್ಯಕ್ತಪಡಿಸಿದವರು ಕಾಂಗ್ರೆಸ್ಸಿನವರು. ನಂತರ, ತಾನು ಅಧಿಕಾರಕ್ಕೆ ಬಂದರೆ ಅದನ್ನು ವಾಪಸ್ ತರುವುದಾಗಿ ಹೇಳಿದ್ದು ಕಾಂಗ್ರೆಸ್ ಪಕ್ಷ. ಪೌರತ್ವ ತಿದ್ದುಪಡಿ ಕಾಯ್ದೆಯ ವಿಚಾರದಲ್ಲಿ ಪಾಕಿಸ್ತಾನದಿಂದ ಬಂದಿದ್ದ ಅಲ್ಪಸಂಖ್ಯಾತ ಹಿಂದೂಗಳಿಗೆ ಭಾರತದಲ್ಲಿ ಆಶ್ರಯ ಕಲ್ಪಿಸುವುದನ್ನು ಮೊದಲು ವಿರೋಧಿಸಿದ್ದು ಪಾಕಿಸ್ತಾನ, ನಂತರ ವಿರೋಧಿಸಿದ್ದು ಕಾಂಗ್ರೆಸ್ ಪಕ್ಷ. ಹಿಜಾಬ್ ಗಲಾಟೆಯ ವಿಷಯದಲ್ಲಿ ಮೊದಲು ವಿರೋಧಿಸಿ ಭಾರತದ ಅಲ್ಪಸಂಖ್ಯಾತರ ಮೇಲೆ ದಾಳಿಯಾಗುತ್ತಿದೆಯೆಂದು ಹೇಳಿದ್ದು ಪಾಕಿಸ್ತಾನ, ನಂತರ ವಿರೋಧಿಸಿದ್ದು ಕಾಂಗ್ರೆಸ್. ಬಾಲಾಕೋಟ್ ವೈಮಾನಿಕ ದಾಳಿಯ ಸಂದರ್ಭದಲ್ಲಿ ದಾಳಿಯೇ ನಡೆದಿಲ್ಲವೆಂದು ಹೇಳಿ ಮೊದಲು ಸಾಕ್ಷ್ಯ ಕೇಳಿದ್ದು ಪಾಕಿಸ್ತಾನ, ನಂತರ ಸಾಕ್ಷ್ಯ ಕೇಳಿ ಭಾರತೀಯ ಸೈನಿಕರಿಗೆ ಅವಮಾನ ಮಾಡಿದ್ದು ಕಾಂಗ್ರೆಸ್ ಪಕ್ಷ. 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ವಿಚಾರವಾಗಿ ನಮ್ಮ ಸೈನಿಕರನ್ನು ಪ್ರಶ್ನೆ ಮಾಡಿ, ಸರಿಯಾದ ದಾಳಿ ನಡೆದಿಲ್ಲವೆಂದು ಹೇಳಿದ್ದು ಕಾಂಗ್ರೆಸ್ ಪಕ್ಷ. ದೇಶವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದ ಪಿಎಫ್‌ಐ ಸಂಘಟನೆ ನಿಷೇಧಕ್ಕೊಳಗಾದಾಗ ಮೊದಲು ಪ್ರತಿಕ್ರಿಯಿಸಿದ್ದು ಪಾಕಿಸ್ತಾನ, ನಂತರ ಕಾಂಗ್ರೆಸ್ ಪಕ್ಷ. ಭಾರತದ ವಿಚಾರದಲ್ಲಿ ಪಾಕಿಸ್ತಾನಕ್ಕೆ ಬೇಕಿರುವುದು ಕಾಂಗ್ರೆಸ್ ಪಕ್ಷಕ್ಕೂ ಬೇಕಾಗಿರುತ್ತದೆ. ಮಗ್ಗುಲ ಮುಳ್ಳು ಪಾಕಿಸ್ತಾನವನ್ನು ಸೃಷ್ಟಿ ಮಾಡಿದ ಕಾಂಗ್ರೆಸ್ ಪಕ್ಷ, ಸ್ವಾತಂತ್ರ್ಯ ನಂತರ ಭಾರತದಲ್ಲಿ ಮುಸಲ್ಮಾನರ ಹೆಸರಿನಲ್ಲಿ ದೊಡ್ಡ ಮಟ್ಟದ ರಾಜಕೀಯ ಮಾಡಿಕೊಂಡು ಬಂದಿದೆ. ಮುಸಲ್ಮಾನರ ಓಲೈಕೆಯ ಪರಮಾವಧಿಯಾಗಿ ಕಾಂಗ್ರೆಸ್, ದೇಶದ ಆಂತರಿಕ ಹಾಗೂ ಬಾಹ್ಯ ಭದ್ರತೆಯ ವಿಷಯದಲ್ಲಿ ಹೊಂದಾಣಿಕೆಯ ರಾಜಕೀಯವನ್ನೇ ಮಾಡಿಕೊಂಡು ಬಂದಿದೆ. 2004ರಿಂದ 2014ರ ನಡುವೆ ತಿಂಗಳಿಗೊಮ್ಮೆ ದೇಶದ ಯಾವುದಾದರೊಂದು ಮೂಲೆಯಲ್ಲಿ ಭಯೋತ್ಪಾದಕರ ದಾಳಿಗಳು ನಡೆಯುತ್ತಿದ್ದವು. ಮುಂಬೈ ನಗರದ ರಸ್ತೆಗಳಲ್ಲಿ ಸಾರ್ವಜನಿಕರ ಮೇಲೆ ಸಿಕ್ಕ ಸಿಕ್ಕಲ್ಲಿ ಗುಂಡಿನ ದಾಳಿ ನಡೆಸಿದ ಪಾಕಿಸ್ತಾನಿ ಪ್ರಚೋದಿತ ಉಗ್ರ ಸಂಘಟನೆಗಳ ಮೇಲೆ ಒಂದು ದಿಟ್ಟ ಕ್ರಮ ಕೈಗೊಳ್ಳದ ಸೈಲೆಂಟ್ ಪ್ರೇಕ್ಷಕ ಪ್ರಧಾನಿಯನ್ನು ಕಾಂಗ್ರೆಸ್ ನೀಡಿತ್ತು.

ಸಮಾಜದಲ್ಲಿ ಸಾಮರಸ್ಯವನ್ನು ಸಾಧಿಸುವ ಪ್ರಮುಖ ಉದ್ದೇಶದಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘ ಹಿಂದೂ ಧರ್ಮದ ಎಲ್ಲಾ ಜಾತಿಗಳನ್ನು ಒಗ್ಗೂಡಿಸುವ ಕೆಲಸ ಮಾಡುತ್ತಾ ಬಂದಿದೆ. ಸಂಘದ ಕಾರ್ಯಕರ್ತರು ಎಂದೂ ಪ್ರಚಾರ ಬಯಸುವುದಿಲ್ಲ. ಕರ್ನಾಟಕದಲ್ಲಿಯೇ ಸಂಘದ ಸಾಮರಸ್ಯ ವೇದಿಕೆಯ ಮೂಲಕ ದಲಿತರ ಪರವಾಗಿ ಹಲವು ಕೆಲಸಗಳನ್ನು ಮಾಡುತ್ತಿರುವ ನೂರಾರು ಕಾರ್ಯಕರ್ತರಿದ್ದಾರೆ. ತಮ್ಮ ಕುಟುಂಬವನ್ನು ತ್ಯಾಗ ಮಾಡಿ ಇಡೀ ಜೀವನವನ್ನೇ ದೇಶಕ್ಕಾಗಿ ಸಮರ್ಪಿಸಿಕೊಂಡಿರುವ ಸಾವಿರಾರು ಪೂರ್ಣ ಪ್ರಮಾಣದ ಪ್ರಚಾರಕರಿದ್ದಾರೆ. ಸಂಘವು ಎಂದೂ ಆನೆಯಂತೆ, ತಾನು ನಡೆದುಹೋಗುತ್ತಿರುವಾಗ ರಸ್ತೆಯಲ್ಲಿ ನಿಂತು ಮಾತನಾಡುವವರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ, ತನ್ನ ಪಾಡಿಗೆ ತಾನು ದೇಶ ಕಟ್ಟುವ ಕೆಲಸದಲ್ಲಿ ನಿರತವಾಗಿರುತ್ತದೆ.

ದೇಗುಲಗಳ ಅಭಿವೃದ್ಧಿಗೆ ಕಾಂಗ್ರೆಸ್ ಸರಕಾರ ಕಟಿಬದ್ಧ

ದೇವಮೂಲೆ

ರಾಮಲಿಂಗಾರೆಡ್ಡಿ
vveditoped@gmail.com

ಸರಕಾರಿ ಕೆಲಸ ದೇವರ ಕೆಲಸ' ಎನ್ನುವ ಮಾತಿದೆ. ಆದರೆ ದೇವರ ಅಥವಾ ದೇವಾಲಯದ ಕೆಲಸವನ್ನು ಮಾಡುವ ಮುಜರಾಯಿ ಇಲಾಖೆಯ ವಿಷಯದಲ್ಲಿ ಮಾತ್ರ ಹಲವು ವರ್ಷಗಳಿಂದ ನಿರ್ಲಕ್ಷ್ಯ ತೋರುತ್ತಲೇ ಬರಲಾಗುತ್ತಿದೆ. ಅದರಲ್ಲಿಯೂ, ಹಿಂದುತ್ವವನ್ನು ಬ್ರ್ಯಾಂಡ್ ಮಾಡಿಕೊಂಡಿರುವ ಬಿಜೆಪಿ ಸರಕಾರದ ಅವಧಿಯಲ್ಲಿ ಮುಜರಾಯಿ ಇಲಾಖೆಯಲ್ಲಿ ನನೆಗುದಿಗೆ ಬಿದ್ದಿರುವ ಕೆಲಸಗಳ ಪಟ್ಟಿಯನ್ನು ನೋಡುತ್ತಾ ಹೋದರೆ, ಅದು ಹನುಮನ ಬಾಲವಾಗುವುದರಲ್ಲಿ ಅನುಮಾನವಿಲ್ಲ. ಇದೀಗ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ, ಬಹುವರ್ಷಗಳಿಂದ ಮರೆತಿದ್ದ 'ಆಗಮ ಘಟಿಕೋತ್ಸವ'ವನ್ನು ಆರಂಭಿಸಲು ತೀರ್ಮಾನಿಸಲಾಗಿದೆ.

ಸಿದ್ದರಾಮಯ್ಯ ನೇತೃತ್ವದ ಸರಕಾರ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಬಳಿಕ ಮುಜರಾಯಿ ಇಲಾಖೆಯ ಜವಾಬ್ದಾರಿಯನ್ನು ನಾನು ವಹಿಸಿಕೊಂಡ ತರುವಾಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯಡಿ ಬರುವ ಕರ್ನಾಟಕ ರಾಜ್ಯ ಆಗಮ ಶಿಕ್ಷಣ ಮತ್ತು ಪರೀಕ್ಷಾ ಸಮಿತಿ ನಡೆಸಿಕೊಂಡು ಬಂದಿರುವ ಪ್ರವರ್ಗ ಪ್ರವೀಣ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಪದವಿ ಪತ್ರ ವಿತರಿಸುವ ಘಟಿಕೋತ್ಸವ ಕಾರ್ಯಕ್ರಮವನ್ನೇ ನಡೆಸದಿರುವುದು ನನ್ನ ಗಮನಕ್ಕೆ ಬಂತು. ಅದರಲ್ಲಿಯೂ ಕಡೆಯ ಬಾರಿಗೆ ಆಗಮ ಘಟಿಕೋತ್ಸವ ನಡೆದಿರುವುದು 2006ರಲ್ಲಿ ಎಂದರೆ ಅದು ನಿಜಕ್ಕೂ ಆಘಾತಕಾರಿ ಸಂಗತಿ.

ಆದ್ದರಿಂದ 2006ರಿಂದ ಬಾಕಿಯಿರುವ ಅಭ್ಯರ್ಥಿಗಳಿಗೆ (800 ಅರ್ಚಕರಿಗೆ), ಕೆಲ ತಿಂಗಳ ಹಿಂದೆ ಮೈಸೂರಿನಲ್ಲಿ ನಡೆದ ಘಟಿಕೋತ್ಸವದಲ್ಲಿ ಪ್ರಮಾಣಪತ್ರ ವಿತರಿಸಲಾಗಿತ್ತು. ಆದರೀಗ, ಅರ್ಚಕ ವೃತ್ತಿಯ ಅಭ್ಯಾಸ ನಡೆಸಿರುವ ಇನ್ನುಳಿದ ಸುಮಾರು ಎರಡೂವರೆ ಸಾವಿರ ಅಭ್ಯರ್ಥಿಗಳಿಗೆ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಪ್ರಮಾಣಪತ್ರ ನೀಡಲು ತೀರ್ಮಾನಿಸಲಾಗಿದೆ. ಈ ಪ್ರಮಾಣಪತ್ರ ಪಡೆಯಲು ಅಭ್ಯರ್ಥಿಗಳು ಶೈವಾಗಮ, ವೈಖಾನಸಾಗಮ, ಪಾಂಚರಾತ್ರಾಗಮ, ತಂತ್ರಸಾರಾಗಮ, ವಾತುಲಾಗಮ, ವೀರಶೈವಾಗಮ ಹಾಗೂ ಜೈನಾಗಮಗಳ ವಿಷಯದಲ್ಲಿ ಐದು ವರ್ಷಗಳ ಕಾಲ ಅಭ್ಯಾಸ ಮಾಡಿ, ಪ್ರವರ್ಗ ಪ್ರವೀಣ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ಈ ಪರೀಕ್ಷೆಯಲ್ಲಿ ತೇರ್ಗಡೆಗೊಂಡಿರುವವರು, ಅರ್ಚಕ ವೃತ್ತಿಯಲ್ಲಿ ತೊಡಗಿಸಿಕೊಳ್ಳಲು ಅರ್ಹರಾಗಿರುತ್ತಾರೆ.

ರಾಜ್ಯದಲ್ಲಿ ಏಳು ಆಗಮ ಶಿಕ್ಷಣವನ್ನು ನೀಡಲಾಗುತ್ತಿದ್ದು, ಅದರಲ್ಲಿ ಶಿವ ದೇವಾಲಯದ ಪೂಜಾ ವಿಧಿ-ವಿಧಾನಕ್ಕೆ ಶೈವಾಗಮ, ವೀರಶೈವಾಗಮ ಹಾಗೂ ವಾತುಲಾಗಮ ಎನ್ನುವ ತರಬೇತಿ ನೀಡಲಾಗುತ್ತದೆ. ಇನ್ನು ವಿಷ್ಣು ಸಂಬಂಧಿತ ದೇವಾಲಯದಲ್ಲಿ ಪೂಜಾ ಕೈಂಕರ್ಯಕ್ಕೆ ಪಾಂಚರಾತ್ರಾಗಮ, ವೈಖಾನಸಾಗಮ ಹಾಗೂ ತಂತ್ರಸಾರಾಗಮ ತರಬೇತಿ ನೀಡಲಾಗುವುದು. ಇವುಗಳೊಂದಿಗೆ ಜೈನಾಗಮ ವಿಧಿ-ವಿಧಾನವನ್ನು ಅವರವರ ಧರ್ಮ-ಮತಕ್ಕನುಗುಣವಾಗಿ ಆಯಾ ಆಗಮದಲ್ಲಿ ಅಧ್ಯಯನ ಪೀಠದಲ್ಲಿ ನೀಡಲಾಗುತ್ತಿದೆ.

ಇಂಥ ಪ್ರಮುಖ ತರಬೇತಿಯನ್ನು ಪ್ರತಿವರ್ಷ ನಡೆಸಿಕೊಂಡು ಬರಬೇಕಿತ್ತು. ಆದರೆ ಕಳೆದ 18 ವರ್ಷಗಳಿಂದ ಈ ವಿಷಯದಲ್ಲಿ ಬಹುತೇಕ ಎಲ್ಲ ಸರಕಾರಗಳು ನಿರ್ಲಕ್ಷ್ಯ ವಹಿಸಿವೆ. ಅದರಲ್ಲಿಯೂ ಎರಡು ಅವಧಿಗೆ ಅಧಿಕಾರ ನಡೆಸಿದ್ದ ಬಿಜೆಪಿ ನಾಯಕರಿಗೆ ಮುಜರಾಯಿ ಇಲಾಖೆಯಲ್ಲಿ ಇಂಥ ಒಂದು ಅಂಗವಿದೆ ಎನ್ನುವುದೇ ಮರೆತುಹೋಗಿತ್ತು. ಹಿಂದುತ್ವದ ವಿಷಯದಲ್ಲಿ ರಾಜಕಾರಣ ಮಾಡುವ ನಾಯಕರು, ಶಾಸ್ತ್ರ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಇಂಥ ವಿಷಯವನ್ನು ನಿರ್ಲಕ್ಷಿಸಿದ್ದೇಕೆ ಎನ್ನುವುದು ನನ್ನ ಮೂಲಪ್ರಶ್ನೆ.

ಹಾಗೆ ನೋಡಿದರೆ, ಕೇವಲ ಆಗಮ ಘಟಿಕೋತ್ಸವ ಅಷ್ಟೇ ಅಲ್ಲದೇ, ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿರುವ ಬಹುತೇಕ ದೇವಾಲಯಗಳ ಅಭಿವೃದ್ಧಿಗೆ ಯಾವುದೇ ಕ್ರಮವಹಿಸಿಲ್ಲ. ದೇವಾಲಯಗಳ ಅಭಿವೃದ್ಧಿ ಎಂದರೆ ಕೇವಲ ಅನುದಾನ ನೀಡುವುದಲ್ಲ. ಬದಲಿಗೆ ದೇವಾಲಯಗಳು ಸ್ವಂತ ಕಾಲಿನ ಮೇಲೆ ನಿಲ್ಲುವಂತೆ ಅಥವಾ ಆಯಾ ವ್ಯಾಪ್ತಿಯಲ್ಲಿರುವ ದೇವಾಲಯಗಳು ಅಲ್ಲಿರುವ ಸಣ್ಣಸಣ್ಣ ದೇವಾಲಯಗಳ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ನೋಡಿಕೊಳ್ಳುವುದು. ಈ ಕಾರಣಕ್ಕಾಗಿಯೇ ನಾನು



ಅಧಿಕಾರ ಸ್ವೀಕರಿಸಿದ ಬಳಿಕ ಮುಜರಾಯಿ ಕಾಯಿದೆಗೆ ತಿದ್ದುಪಡಿ ತರುವ ಮೂಲಕ, 'ಎ' ದರ್ಜೆ ದೇವಾಲಯಗಳ ಆದಾಯದ ಇಂತಿಷ್ಟು ಹಣವನ್ನು ಸ್ಥಳೀಯವಾಗಿರುವ 'ಸಿ' ದರ್ಜೆ ದೇವಾಲಯಗಳ ಅಭಿವೃದ್ಧಿಗೆ ಮೀಸಲಿಡಬೇಕು ಎನ್ನುವ ಕಾನೂನು ತರಲು ವಿಧೇಯಕ ಮಂಡಿಸಿದ್ದೆ. ಆದರೆ ಬಡ ದೇವಾಲಯಗಳ ಅಭಿವೃದ್ಧಿಯನ್ನೂ ವಿರೋಧಿಸಿದ್ದ ಬಿಜೆಪಿಗರು, ಕಾಯಿದೆಗೆ ರಾಜ್ಯಪಾಲರಿಂದ ಸಹಿಯಾಗದಂತೆ ಒತ್ತಡ ಹೇರಿದ್ದರು. ಒಂದು ವೇಳೆ ಈ ಕಾನೂನು ಜಾರಿಯಾಗಿದ್ದರೆ ಪ್ರತಿವರ್ಷ ನೂರಾರು ಕೋಟಿ ರುಪಾಯಿ ಹಣವು 'ಸಿ' ದರ್ಜೆ ದೇವಾಲಯಗಳ ಅಭಿವೃದ್ಧಿಗೆ ಸಿಗುತ್ತಿತ್ತು ಎನ್ನುವುದು ವಾಸ್ತವ.

ಇನ್ನು ನಮ್ಮ ಅವಧಿಯಲ್ಲಿ ದೇವಾಲಯಗಳ ಆಸ್ತಿ ದೇವಾಲಯದಲ್ಲಿಯೇ ಉಳಿಯುವಂತೆ ನೋಡಿಕೊಂಡಿದ್ದೇವೆ. ಮುಜರಾಯಿ ದೇವಾಲಯದ ಸುಪರ್ದಿಯಲ್ಲಿದ್ದ ಸಾವಿರಾರು ಎಕರೆ ಆಸ್ತಿಯು ಭೂ ಕಬಳಿಕೆದಾರರ ಪಾಲಾಗಿತ್ತು. ಆದರೆ ದಾಖಲೆಗಳನ್ನು ಪರಿಶೀಲಿಸಿ, ದೇವಾಲಯಗಳಿಗೆ ಮರಳಿ ಭೂಮಿ ಸಿಗುವಂಥ ಮಹತ್ವದ ಕಾರ್ಯವನ್ನು ರಾಜ್ಯ ಸರಕಾರ ಮಾಡಿದೆ. ಈಗಾಗಲೇ ಒತ್ತುವರಿಯಾಗಿದ್ದ ಶೇ.70ಕ್ಕಿಂತ ಹೆಚ್ಚು ಭೂಮಿಯನ್ನು ದೇವಾಲಯಗಳ ಸ್ವಾಧೀನಕ್ಕೆ ವಾಪಸು ಪಡೆದುಕೊಂಡಿದ್ದೇವೆ. ಒತ್ತುವರಿಯಾಗಿರುವ ಎಲ್ಲ ಭೂಮಿಯನ್ನು ಶೀಘ್ರದಲ್ಲಿಯೇ ಹಿಂಪಡೆಯುವ ಕೆಲಸವನ್ನು ಮಾಡುವ ವಿಶ್ವಾಸವಿದೆ.

ಇದೇ ರೀತಿ, ದೇವಾಲಯಗಳಿಗೆ ಭೇಟಿ ನೀಡುವ ಹಿರಿಯ ನಾಗರಿಕರ ಅನುಕೂಲಕ್ಕಾಗಿ ವಿಶೇಷ ದರ್ಶನ, ಹಸುಳೆಗಳಿಗೆ ಹಾಲುಣಿಸಲು ಪ್ರತ್ಯೇಕ ಬೇಬಿ ಕೇರ್ ಕೊಠಡಿ ಸೇರಿದಂತೆ ಹಲವು ಮೂಲಸೌಕರ್ಯಗಳ ಅಭಿವೃದ್ಧಿಗೆ ಒತ್ತುನೀಡಲಾಗಿದೆ. ಇನ್ನು ರಾಜ್ಯದ ಪ್ರಮುಖ ದೇವಾಲಯಗಳು ಎನಿಸಿರುವ ಹುಲಿಗೆಮ್ಮ ದೇವಾಲಯ, ಮೈಸೂರಿನ ಚಾಮುಂಡಿ ಬೆಟ್ಟದಲ್ಲಿರುವ ಚಾಮುಂಡೇಶ್ವರಿ ದೇವಾಲಯ, ಘಾಟಿ ಸುಬ್ರಮಣ್ಯ ದೇವಾಲಯ ಹಾಗೂ ಯಲ್ಲಮ್ಮ ದೇವಿ ದೇವಾಲಯಗಳಿಗೆ ಪ್ರತ್ಯೇಕ ಪ್ರಾಧಿಕಾರವನ್ನು ರಚಿಸಲಾಗಿದೆ. ಈ ಎಲ್ಲ ಪ್ರಾಧಿಕಾರಗಳ ಮೂಲಕ, ದೇವಾಲಯದ ಸುತ್ತಮುತ್ತಲಿನ ಪ್ರದೇಶದಲ್ಲಿ ಮೂಲ ಸೌಕರ್ಯ ಒದಗಿಸಲು ಮಾಸ್ಟರ್ ಪ್ಲಾನ್‌ಗಳನ್ನು ರೂಪಿಸಲಾಗಿದೆ. ಆಂಜನೇಯನ ಜನ್ಮಸ್ಥಾನ ಅಂಜನಾದ್ರಿ ಬೆಟ್ಟಕ್ಕೆ 200 ಕೋಟಿ ರುಪಾಯಿಗಳನ್ನು ಮಂಜೂರು ಮಾಡುವ ಮೂಲಕ ದೇವಾಲಯದ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಈ ಎಲ್ಲ ದೇವಾಲಯಗಳ ಅಭಿವೃದ್ಧಿಯ ಜತೆಜತೆಗೆ ವಿಧಾನಸಭಾ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ ನೀಡಿದ್ದ ಗ್ಯಾರಂಟಿಗಳಲ್ಲಿ ಒಂದಾಗಿರುವ 'ಶಕ್ತಿ' ಯೋಜನೆಯ ಮೂಲಕ ರಾಜ್ಯದ ಮಹಿಳೆಯರಿಗೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ನೀಡುವ ಮೂಲಕ ಪ್ರವಾಸೋದ್ಯಮಕ್ಕೆ ಒತ್ತು ನೀಡಲಾಗಿದೆ. ಇತ್ತೀಚೆಗಷ್ಟೇ 500ನೇ ಕೋಟಿ ಟಿಕೆಟ್ ಅನ್ನು ವಿತರಿಸಲಾಗಿದೆ. ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ನೀಡಿದ್ದರಿಂದಾಗಿ, ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡುವವರ ಸಂಖ್ಯೆ ತೀವ್ರ ಪ್ರಮಾಣದಲ್ಲಿ ಏರಿಕೆಯಾಗಿರುವುದು ಗಮನಾರ್ಹ.

ದೇವಾಲಯಗಳ ಅಭಿವೃದ್ಧಿ ಒಂದು ಭಾಗವಾದರೆ, ದೇವಾಲಯದಲ್ಲಿ ಪೂಜಾ ಕೈಂಕರ್ಯ ನಡೆಸುವ ಅರ್ಚಕರು ಹಾಗೂ ಅವರ ಕುಟುಂಬಕ್ಕೂ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳುವುದು ಇಲಾಖೆಯ ಜವಾಬ್ದಾರಿಯಾಗಿತ್ತು. ಆದ್ದರಿಂದ ಮುಜರಾಯಿ ಇಲಾಖೆಯಲ್ಲಿ ಅರ್ಚಕರ ತಸ್ತಿಕ್ ಹಣವನ್ನು ಹೆಚ್ಚಿಸುವ ತೀರ್ಮಾನವನ್ನು ಸರಕಾರ ಕೈಗೊಂಡಿತು. ಇದರೊಂದಿಗೆ ಅರ್ಚಕ ಸಮುದಾಯದ ಬಹುದಿನದ ಬೇಡಿಕೆಯಾಗಿದ್ದ, ಅರ್ಚಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನ ಹಾಗೂ ಅರ್ಚಕರು ಮೃತಪಟ್ಟರೆ ಕುಟುಂಬಕ್ಕೆ ಎರಡು ಲಕ್ಷ ರುಪಾಯಿ ಸಹಾಯಧನ ನೀಡುವ ಕಾರ್ಯ ಆರಂಭವಾಗಿದ್ದೂ ಕಾಂಗ್ರೆಸ್ ಸರಕಾರದ ಅವಧಿಯಲ್ಲೇ ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

ನಮ್ಮ ಪಕ್ಷ ಹಿಂದುತ್ವ ಎನ್ನುವುದನ್ನು ಕೇವಲ ಮತ ಬ್ಯಾಂಕ್ ವಿಷಯವಾಗಿ ನೋಡುತ್ತಿಲ್ಲ. ಹಿಂದುತ್ವದ ಪರ ಒಲವು ಎನ್ನುವುದು ಕೇವಲ ಮತಗಳಿಕೆಗೆ ಸೀಮಿತವಾಗದೇ, ಧರ್ಮದ ಉಳಿವಿಗಾಗಿರಬೇಕು. ಈ ಹಿಂದೆ ಅಧಿಕಾರದಲ್ಲಿದ್ದ ಸಮಯದಲ್ಲಿ ಬಿಜೆಪಿಯವರಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಮುಜರಾಯಿ ಇಲಾಖೆ ಹಾಗೂ ದೇವಾಲಯಗಳ ಸರ್ವಾಂಗೀಣ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ರಾಜ್ಯ ಕಾಂಗ್ರೆಸ್ ಸರಕಾರವು ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. 'ಹಿಂದೂ ಪರ' ಎನ್ನುವ ಬಿಜೆಪಿ ನಾಯಕರು, ಇನ್ನಾದರೂ ತಮ್ಮ ಮುಖವಾಡವನ್ನು ಕಳಚಿ ನಮ್ಮ ಸರಕಾರದ ಸಾಧನೆಯನ್ನು ನೋಡಲಿ.

(ಲೇಖಕರು ಮುಜರಾಯಿ ಹಾಗೂ ಸಾರಿಗೆ ಸಚಿವರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಈ ಆಮಿಷ ಸಲ್ಲದು

ಕರ್ನಾಟಕದಲ್ಲಿ ನೆಲೆಯೂರಬಹುದಾದ ಕೈಗಾರಿಕೆಗಳನ್ನು ತನ್ನತ್ತ ಸೆಳೆಯಲು ಆಂಧ್ರಪ್ರದೇಶ ಮಾಡುತ್ತಿರುವ ಯತ್ನಗಳು ಕನ್ನಡಿಗರ ತಾಳ್ಮೆಗೆ ಸವಾಲು ಹಾಕುವಂತಿವೆ. ಕೈಗಾರಿಕೆಗಳು ಕೇವಲ ಜಮೀನಿನ ಮೇಲೆ ಅವಲಂಬಿತವಾಗಿಲ್ಲ ಎಂಬುದನ್ನು ಆಂಧ್ರಪ್ರದೇಶದ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆಯ ಸಚಿವ ನಾರಾ ಲೋಕೇಶ್ ಅವರು ಅರ್ಥಮಾಡಿಕೊಳ್ಳಬೇಕು. ಕೈಗಾರಿಕಾ ಅಭಿವೃದ್ಧಿಗೆ ಪೂರಕವಾದ ಅತ್ಯುತ್ತಮ ಸಂಶೋಧನಾ ಕೇಂದ್ರಗಳು, ಸ್ಥಿರ ಪರಿಸರ ವ್ಯವಸ್ಥೆ, ನಿಪುಣ ಮತ್ತು ಪ್ರತಿಭಾವಂತ ಯುವಜನರ ಪಡೆ ಈ ಎಲ್ಲವೂ ಕರ್ನಾಟಕದಲ್ಲಿವೆ.

ದೇವನಹಳ್ಳಿಯ ಜಮೀನು ಯೋಜನೆ ಕೈಬಿಟ್ಟಿದ್ದು ರೈತಪರ ನಿರ್ಧಾರ. ಇದರಿಂದ ಹೂಡಿಕೆ ಆಕರ್ಷಣೆಗೆ ತೊಡಕು ಉಂಟಾಗಬಾರದು. ರಾಜ್ಯ ಸರಕಾರವು ತಕ್ಷಣವೇ ಪರ್ಯಾಯ ಮಾರ್ಗೋಪಾಯವನ್ನು ರೂಪಿಸಿ, ಕೈಗಾರಿ ಕೆಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕಾರ್ಯಚಟುವಟಿಕೆ ಆರಂಭಿಸಬೇಕು. ಏರೋಸ್ಪೇಸ್ ಪಾರ್ಕ್‌ಗೆ ಆಂಧ್ರಪ್ರದೇಶ ನೀಡುತ್ತಿರುವ ಅವಕಾಶ ತಾತ್ಕಾಲಿಕ ಆಮಿಷವಷ್ಟೇ. ಆದರೆ ಕರ್ನಾಟಕ ನೀಡುತ್ತಿರುವ ವ್ಯವಸ್ಥಿತ ವಾತಾವರಣ ಬಹುಮಟ್ಟಿಗೆ ಶ್ರೇಷ್ಠ. ಏರೋಸ್ಪೇಸ್ ಬಗೆಗಿನ ಸಚಿವ ಎಂ.ಬಿ. ಪಾಟೀಲರ ನಿಲುವು ಸ್ತುತ್ಯರ್ಹ, ಆದರೆ ಜಮೀನಿಲ್ಲದ ಕಾರಣಕ್ಕೆ ಯಾವುದೇ ಕೈಗಾರಿಕೆಯು ಕರ್ನಾಟಕವನ್ನು ಬಿಟ್ಟು ಹೋಗಬಾರದು ಮತ್ತು ಹೆಚ್ಚೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗುವುದನ್ನು ಖಚಿತಪಡಿಸಬೇಕು.

– ಡಾ.ವಿಜಯಕುಮಾರ್ ಎಚ್.ಕೆ., ರಾಯಚೂರು

ಇದು ಜಾಣಮರೆವು..

ಡಾ.ವಿಜಯ್ ದರಡಾ ಅವರು 'ವಯಸ್ಸೆಂಬುದು ಬರೀ ಸಂಖ್ಯೆಯಷ್ಟೇ ಬಿಡಿ!' ಎಂಬ ತಮ್ಮ ಅಂಕಣ ಬರಹದಲ್ಲಿ (ಜು.17), ಸಾಕಷ್ಟು ವಯಸ್ಸಾಗಿದ್ದರೂ ಸಾರ್ವಜನಿಕ ಜೀವನದಲ್ಲಿರುವ ಹಾಗೂ ಚಟುವಟಿಕೆಯಿಂದಿರುವ ಅನೇಕ ಮಹನೀಯರ ಕುರಿತು ಪಕ್ಷಭೇದ ಮರೆತು ಉಲ್ಲೇಖಿಸಿದ್ದಾರೆ. ಆದರೆ ಇದೇ '75ರ ಕಾರಣ' ಮುಂದಿಟ್ಟು ಮಾರ್ಗದರ್ಶಕ ಮಂಡಳಿಗೆ ಸೇರಿಸಿ ಮೂಲೆಗುಂಪು ಮಾಡಲಾದ ಬಿಜೆಪಿಯ ಭೀಷ್ಮ ಎಲ್.ಕೆ.ಆಡ್ವಾಣಿ ಮತ್ತು ಮುರಳಿ ಮನೋಹರ್ ಜೋಷಿ ಅವರ ಬಗ್ಗೆಯೂ ಸಾಕಷ್ಟು ಚರ್ಚೆಗಳಾಗಿವೆಯಲ್ಲವೇ? ಇದರ ಬಗ್ಗೆ ಲೇಖಕರು ಉಲ್ಲೇಖ ಮಾಡದಿದ್ದುದು ಸೋಜಿಗದ ಸಂಗತಿ. ಇದು ಜಾಣಮರೆವು ಎನ್ನುವುದು ಸ್ಪಷ್ಟ.

– ಸೋಮಶೇಖರ್ ಬಿ.ಕೋಳಕೂರ, ಜೇವರ್ಗಿ

ಪರಮಾನಂದವಾಗಿದೆ!

ದೇಶದಾದ್ಯಂತ ಕೊಡು-ತೆಗೆದುಕೊಳ್ಳುವ ವ್ಯವಹಾರಗಳು ಫೋನ್‌ಪೇ ರೀತಿಯ ಡಿಜಿಟಲ್ ಮಾರ್ಗೋಪಾಯಗಳಲ್ಲಿ ನಡೆಯಲಾರಂಭಿಸಿದಾಗ ವ್ಯಾಪಾರಿಗಳು ಖುಷಿಪಟ್ಟರು. ಒಂದನೆಯದಾಗಿ, ಚಿಲ್ಲರೆ ಜೋಡಿಸುವ ಅನಿವಾರ್ಯತೆ ಇಲ್ಲ. ಬಂದ ಹಣವು ಪೂರ್ತಿ ಬ್ಯಾಂಕ್ ಖಾತೆಗೇ ನೇರವಾಗಿ ಜಮೆಯಾಗುತ್ತದೆ. ಪ್ರಯಾಣ ಮಾಡುವಾಗ ಕಳ್ಳರ ಭೀತಿಯಿಲ್ಲ. ಕ್ರಮೇಣ ಗ್ರಾಹಕರು ಈ ವ್ಯವಸ್ಥೆಗೆ ಅದೆಷ್ಟು ಹೊಂದಿಕೊಂಡರೆಂದರೆ, 5 ರುಪಾಯಿಯ ಲಾಲಿಪಾಪ್ ಕೊಂಡರೂ ಫೋನ್ ಪೇ ಮೂಲಕ ಪಾವತಿಸಲು ಶುರುಮಾಡಿದರು. ಪರಿಣಾಮವಾಗಿ ವರ್ತಕರ ಪ್ರತಿ ವ್ಯವಹಾರದ ವಿವರವೂ ದಾಖಲಾಗಿ, ಇದೀಗ ವರ್ಷವೊಂದರಲ್ಲಿ 40 ಲಕ್ಷ ರುಪಾಯಿ ವಹಿವಾಟು ದಾಟಿದವರಿಗೆ ಜಿಎಸ್‌ಟಿ ಪಾವತಿ ಮಾಡುವಂತೆ ತೆರಿಗೆ ಇಲಾಖೆಯಿಂದ ನೋಟಿಸ್ ಬಂದಿದೆ. ಇದರಿಂದಾಗಿ ಸಣ್ಣ ಬೀಡಾ ಅಂಗಡಿಯವರು, ಬೇಕರಿ-ಕಾಂಡಿಮೆಂಟ್ಸ್ ಮಾಲೀಕರು ಗೊಂದಲಗೊಂಡಿದ್ದಾರೆ, ಕೆಲವರು ದಿಗಿಲುಗೊಂಡಿರುವುದೂ ಉಂಟು.

ವಿಪರ್ಯಾಸವೆಂದರೆ, ವೈಯಕ್ತಿಕವಾಗಿ ನನಗೆ ಪರಮಾನಂದವಾಗಿದೆ. ಕಾರಣ, ವ್ಯಾಪಾರಿ ಜೀವನದುದ್ದಕ್ಕೂ ಹೋಟೆಲ್/ಬೇಕರಿಯ ಗಲ್ಲಾ ಪೆಟ್ಟಿಗೆಯ ಬಳಿ ಕುಳಿತಾಗ ಗ್ರಾಹಕರು ಕೊಡುವ ಹಣವನ್ನು ತೆಗೆದುಕೊಳ್ಳುವಾಗ, ಅದನ್ನು ಸ್ಪರ್ಶಿಸಿದಾಗ ಆಗುತ್ತಿದ್ದ ಪುಳಕ. ನಂತರದ ಫೋನ್ ಪೇ ಕಾಲದಲ್ಲಿ ಈ ಪುಳಕ ಮಾಯವಾಗಿ, ಮಹದಾನಂದವನ್ನು ಕಳೆದುಕೊಂಡಂತಾಗಿತ್ತು! ಇದೀಗ ಮತ್ತೆ ನಗದು ವ್ಯವಹಾರ ಮತ್ತೆ ಕೊಂಚ ಮಟ್ಟಿಗಾದರೂ ಶುರುವಾಗಿ, ಮತ್ತೆ ನೋಟು-ನಾಣ್ಯಗಳ ಸ್ಪರ್ಶಾನಂದ ದೊರೆಯಬಹುದೇನೋ ಎಂಬ ಆಶಾಭಾವನೆ ನನ್ನಲ್ಲಿ ಟಿಸಿಲೊಡೆದಿದೆ..!

– ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಜನರ ಹಿತರಕ್ಷಣೆಯಾಗಲಿ

ಬರುವ ಆಗಸ್ಟ್ ತಿಂಗಳಿಂದ, ಬೆಂಗಳೂರು ನಗರದಲ್ಲಿ ಜಾರಿಗೆ ಬರುವಂತೆ ನಗರ ಜಿಲ್ಲಾ ಸಾರಿಗೆ ಪ್ರಾಧಿಕಾರವು ರಿಕ್ಷಾ ಪ್ರಯಾಣ ದರವನ್ನು ಪರಿಷ್ಕರಿಸಿ ಆದೇಶ ಹೊರಡಿಸಿದೆ. ಇದು ಪ್ರಯಾಣಿಕರಿಗೆ ತುಸು ಜಾಸ್ತಿಯೆಂದು ಅನಿಸಿದರೂ, ಪ್ರಾಧಿಕಾರ ಮತ್ತು ಸಂಬಂಧಿಸಿದ ಇಲಾಖೆಯು ಅದಕ್ಕಿಂತ ಹೆಚ್ಚಿನ ದರ ವಸೂಲಿ ಮಾಡುತ್ತ ಲೂಟಿಮಾಡುವ 'ಆಟೋಟೋಪ'ಗಾರರ ಮೇಲೆ ನಿಗಾ ಇಟ್ಟು, ನಿಯಮವನ್ನು ಉಲ್ಲಂಘಿಸುವ ಆಟೋ ಚಾಲಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಅಗತ್ಯವಿದೆ.

ಕರೆದಲ್ಲಿಗೆ ಬಾರದ, ನಿಗದಿಪಡಿಸಿದ ದರಕ್ಕಿಂತ ನಾಲ್ಕಾರು ಪಟ್ಟು ಹೆಚ್ಚು ವಸೂಲುಮಾಡುವ ಸಾಕಷ್ಟು ಆಟೋ ಚಾಲಕರ ವಿರುದ್ಧ ಸಾರಿಗೆ ಮತ್ತು ಆರಕ್ಷಕ ಸಿಬ್ಬಂದಿಗಳು ಇತ್ತೀಚೆಗೆ ಪ್ರಕರಣ ದಾಖಲಿಸಿ ಕ್ರಮ ಕೈಗೊಂಡಿರುವುದು ಶ್ಲಾಘನೀಯ ಹೌದಾದರೂ, ಅದು ನಿರಂತರವಾಗಿ ನಡೆಯಬೇಕು. ಪ್ರತ್ಯೇಕ 'ಸಂಚಾರಿ ಜಾಗ್ರತದಳ'ವು ನಗರದೆಲ್ಲೆಡೆ ಕಾರ್ಯನಿರ್ವಹಿಸುವಂತಾಗಬೇಕು. ಉದಾಹರಣೆಗೆ, ಮುಂಜಾನೆ 4-7 ಗಂಟೆಯ ಸಮಯದಲ್ಲಿ ಪರವೂರಿನಿಂದ ಬಂದು ಯಶವಂತಪುರ/ನವರಂಗ್ ಚಿತ್ರಮಂದಿರದ ಸಮೀಪ ಇಳಿಯುವ ಪ್ರಯಾಣಿಕರನ್ನು ಬಂದು ಮುತ್ತಿಕೊಳ್ಳುವ ಒಂದಿಷ್ಟು ರಿಕ್ಷಾ ಚಾಲಕರು ಇನ್ನಿಲ್ಲದಂತೆ ಲೂಟಿ ಮಾಡುವುದಿದೆ. 1-2 ಕಿ.ಮೀ. ಪ್ರಯಾಣಕ್ಕೂ 150-200 ರು. ದರಕ್ಕಿಂತ ಕಡಿಮೆಗೆ ಒಪ್ಪುವುದಿಲ್ಲ. ಇವರಿಗೊಬ್ಬ ದೊಣೆನಾಯಕನೂ ಇರುತ್ತಾನೆ. ಪೊಲೀಸರಿಗೆ ದೂರು ನೀಡುತ್ತೇವೆ ಎಂದರೆ, 'ಕೊಡಿ, ನಮಗೇನೂ ಭಯವಿಲ್ಲ' ಎನ್ನುವಷ್ಟು ದುರ್ವರ್ತನೆ ಇವರದ್ದು.

ಆದ್ದರಿಂದ, ಇಂಥ ಸ್ಥಳಗಳಲ್ಲಿ ಜಾಗ್ರತದಳ ಹಾಗೂ ಪೊಲೀಸ್ ಸಿಬ್ಬಂದಿಗಳು ನಿಗಾವಹಿಸಬೇಕಲ್ಲದೆ, 'ಪೂರ್ವಪಾವತಿ ಆಟೋ' ಸೇವೆಗೂ ವ್ಯವಸ್ಥೆ ಮಾಡಬೇಕು. ಜನಪ್ರತಿನಿಧಿಗಳೂ ಇದನ್ನು ಪ್ರತ್ಯಕ್ಷವಾಗಿ ಕಂಡು ತಮ್ಮ ಮತದಾರರನ್ನು ಕಾಪಾಡಬೇಕು.

– ಬೆಳ್ಳಿ ಚಂದಶೇಖರಶೆಟ್ಟಿ, ಬೆಂಗಳೂರು

ಭೇಷ್ ಪೌರಕಾರ್ಮಿಕರೇ!

ಸ್ವಚ್ಛತೆಯನ್ನು ಕಾಯ್ದುಕೊಳ್ಳುವ ವಿಷಯದಲ್ಲಿ ಮೈಸೂರು ನಗರವು ಈ ಸಲ ದೇಶದಲ್ಲೇ ಮೂರನೇ ಸ್ಥಾನವನ್ನು ಪಡೆದಿರುವುದು ಸಂತಸದ ಸಂಗತಿ. ಇದರಿಂದಾಗಿ 'ಮೈಸೂರು-ಕೇಂದ್ರಿತ' ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ಸಿಗಬಹುದು. ಇಂಥದೊಂದು ಹೆಗ್ಗಳಿಕೆ ದಕ್ಕುವಂತಾಗಲು ಶ್ರಮಿಸಿದ ಎಲ್ಲ ಅಧಿಕಾರಿಗಳನ್ನು, ಮುಖ್ಯವಾಗಿ ಪೌರಕಾರ್ಮಿಕರನ್ನು ಅಭಿನಂದಿಸಬೇಕು. ದೆಹಲಿಯಲ್ಲಿ ನಡೆಯುವ ಅದ್ದೂರಿ ಸಮಾರಂಭದಲ್ಲಿ ನಗರಪಾಲಿಕೆಯ ಆಯುಕ್ತರು/ಮೇಯರ್‌ರವರು ರಾಷ್ಟ್ರಪತಿಗಳಿಂದ ಈ ಪ್ರಶಸ್ತಿಯನ್ನು ಸ್ವೀಕರಿಸುವುದು ವಾಡಿಕೆ. ಹಗಲಿರುಳೂ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುವ ಪೌರಕಾರ್ಮಿಕರಲ್ಲಿ ಒಬ್ಬರು ಇನ್ನು ಮುಂದೆ ಇವರ ಜತೆ ಪ್ರಶಸ್ತಿಯನ್ನು ಸ್ವೀಕರಿಸುವಂತಾಗಲಿ.

– ಬೂಕನಕೆರೆ ವಿಜೇಂದ್ರ, ಮೈಸೂರು

ಭಟ್ಟರ್ ಸ್ಕಾಚ್

- **ಸುದರ್ಶನ ಬಾವಿಕಟ್ಟೆ, ಧಾರವಾಡ**
ಭಟ್ರೇ, ಕೆಲವರು ಬಹಳ ಕ್ರೇಜಿ ಆಗಿರುತ್ತಾರಲ್ಲ?
– **ಅದು ಸ್ಟುಪಿಡ್ ಆಗಿರುವುದಕ್ಕಿಂತ ವಾಸಿ!**

- **ನವೀನ ಶೆಟ್ಟಿ, ಸಾಗರ**
ಭಟ್ರೇ, ನನಗೆ ವ್ಯಂಗ್ಯದ ಉತ್ತರ ಇಷ್ಟ ಇಲ್ಲ ಅಂದ್ರೆ ಏನು ಮಾಡಬೇಕು?
– **ಮೂರ್ಖತನದ ಪ್ರಶ್ನೆಗಳನ್ನು ಕೇಳಬಾರದು!**

- **ರಾಜಿ, ಬೆಂಗಳೂರು**
ಭಟ್ರೇ, ಮನೆಯ ಕೆಲಸದಾಕೆ ಕ್ಲೀನಿಂಗ್ ಮಾಡುವುದಿಲ್ಲವಲ್ಲ?
– **ಕಂಪ್ಲೇನಿಂಗ್ ಮಾಡದಿದ್ದರೆ ಅದೇ ದೊಡ್ಡ ಉಪಕಾರ!**

- **ನಾಗೇಶ ಬಡಗಾವಿ, ಧಾರವಾಡ**
ಭಟ್ರೇ, ಆಸ್ಮಾನ್ ಮೇ ಉಡ್ತಾ ಹೈ ಪ್ಲೇನ್... ಮುಂದ?
– **ಆಪ್ ಕೆ ಪಾಸ್ ನಹಿ ಹೈ ಬ್ರೇನ್!**

- **ರುಕ್ಕು, ಚಾಮರಾಜಪೇಟೆ**
ಭಟ್ರೇ, ಆಮೆ ಮೊಟ್ಟೆ ಇಡೋದನ್ನು ನೋಡಲು ಹೋಗಿದ್ದ ದೊಡ್ಡ ಭಟ್ರು ಈಗ ಟೋಪಿ ಮೇಲೆ ಆಮೆ ಚಿತ್ರ ಹೊತ್ತಿಕೊಂಡು ತಿರುಗುವುದು ಯಾವ ಅವತಾರ?
– **ಕೂರ್ಮಾವತಾರ ಅಂತ ಅಂದುಕೊಳ್ಳಬಹುದು, ರುಕ್ಕು!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಸಂಬಂಧ ಬೆಸೆಯುವ ಸೇತುವೆ ಬಿರುಕು ಉಂಟುಮಾಡಿತಲ್ಲ?
– **ಸೇತುವೆ ಕುಸಿದು ಹೋಗಲಿಲ್ಲವಲ್ಲ?!**

- **ರಾಜು ಪಠಾಣ, ಚಿತ್ರದುರ್ಗ**
ಭಟ್ರೇ, ನಾವೆಲ್ಲರೂ ದ್ವೇಷಿಸುವ ನೇಷನ್ ಯಾವುದು?
– **ಎಗ್ಸಾಮಿ-ನೇಷನ್!**

- **ಸೌಮ್ಯ ಪಾಟೀಲ, ಬೆಂಗಳೂರು**
ಭಟ್ರೇ, ನಂಗೆ ಗೊತ್ತಿಲ್ಲದಿರುವ ಪ್ರಶ್ನೆಗಳನ್ನು ಕೇಳುತ್ತಾರಲ್ಲ?
– **ಅವರಿಗೆ ಗೊತ್ತಿಲ್ಲದಿರುವ ಉತ್ತರವನ್ನು ನೀಡಬಾರದೇ?!**

- **ನೂತನ ರಂಗಸ್ವಾಮಿ, (ಇಮೇಲ್ ಮೂಲಕ)**
ಭಟ್ರೇ, ಕೊನೆಯಲ್ಲಿ Etc ಅಂತ ಬರೆಯುತ್ತಾರಲ್ಲ, ಏಕೆ?
– **ಹಾಗಂದ್ರೆ End of Thinking Capacity ಎಂದರ್ಥ!**

ಕೃಷ್ಣನ ಬೆಣ್ಣೆ ಕಳ್ಳತನದ ಹಿಂದಿರುವ ಗುಟ್ಟು, ಆಯುರ್ವೇದದಲ್ಲಿ ರಟ್ಟು

ಶ್ರೀಕೃಷ್ಣ ಪರಮಾತ್ಮನದ್ದು ಆದರ್ಶ ವ್ಯಕ್ತಿತ್ವ. ಸಮಗ್ರವಾದ ಜೀವನವನ್ನು ಹೇಗೆ ನಡೆಸಬೇಕೆಂಬ ದಾರಿಯನ್ನು ಹಲವಾರು ಉದಾಹರಣೆಗಳೊಂದಿಗೆ ಮಾನವಕುಲಕ್ಕೆ ತೋರಿಸಿರುವ ಚತುರ ಶ್ರೀಕೃಷ್ಣ. ಅವನು ಹಾಕಿಕೊಟ್ಟ ಮಾರ್ಗದಲ್ಲಿ, ನಿತ್ಯ ನವನೀತ ಸೇವನೆಯೂ ಒಂದು. ಅವನ ಭಗವದ್ಗೀತೆಯು ಆತ್ಮದ ಉದ್ಧಾರ ಮಾಡುವಂತೆ, ಅವನಂತೆ ಬಳಸುವ ಬೆಣ್ಣೆಯು ನಮ್ಮ ಆರೋಗ್ಯದ ಉನ್ನತಿಗೆ ಕಾರಣವಾಗುವುದು ನಿಸ್ಸಂಶಯ.

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ನನ್ನ ಮಗಳಿಗೆ ಈಗ ಇನ್ನೇನು ಐದು ವರ್ಷ. ಯುಟ್ಯೂಬ್‌ನಲ್ಲಿ ಕೃಷ್ಣನನ್ನು ನೋಡುವುದೆಂದರೆ ಅವಳಿಗೆ ಬಹಳ ಪ್ರೀತಿ. ಕೃಷ್ಣನ ಕಥೆಗಳನ್ನು ಬಹಳ ಏಕಾಗ್ರತೆಯಿಂದ ಗಮನಿಸುತ್ತಾಳೆ. ಹೀಗೆ, ಅವನ ಬಾಲಲೀಲೆಗಳನ್ನು ಮತ್ತು ಚೇಷ್ಟೆಗಳನ್ನು ನೋಡುತ್ತಾ ಅವಳ ಮನಸ್ಸಿಗೆ ಒಂದು ಪ್ರಶ್ನೆ ಬಂತು. ''ಅಮ್ಮ, ಕೃಷ್ಣ ಯಾವಾಗಲೂ ಬರೀ ಬೆಣ್ಣೆಯನ್ನೇ ಏಕೆ ಕದಿಯುತ್ತಾನೆ? ಬೇರೆ ಬೇರೆ ಎಷ್ಟೊಂದು ವಿಧದ ತಿಂಡಿಗಳು ಇವೆಯಲ್ಲ? ಆದರೆ, ಕೃಷ್ಣನಿಗೆ ಬೆಣ್ಣೆ ಮಾತ್ರ ಏಕೆ ಅಷ್ಟೊಂದು ಇಷ್ಟ?'' ಎಂದು ಮುಗ್ಧವಾಗಿ ಪ್ರಶ್ನಿಸಿದಳು. ಅವಳು ಕೇಳಿದ ಪ್ರಶ್ನೆಯು ನನಗೂ ಸರಿ ಎಂದೆನಿಸಿತು. ಹೌದಲ್ವಾ, ಕೃಷ್ಣನಿಗೆ ಬೆಣ್ಣೆಯ ಮೇಲೆ ಯಾಕೆ ಅಷ್ಟೊಂದು ಒಲವು? ಅವನಿಗೆ ಊಟ ತಿಂಡಿ ಇಲ್ಲದಿದ್ದರೂ ಬೆಣ್ಣೆ ಒಂದೇ ಸಾಕಾಗುತ್ತಿತ್ತಂತೆ. ಇದರ ಹಿಂದಿರುವ ಗುಟ್ಟೇನು? ಎಂಬ ಪ್ರಶ್ನೆಗೆ ಆಯುರ್ವೇದದಲ್ಲಿ ಉತ್ತರವನ್ನು ಹುಡುಕಲು ಹೊರಟೆ. ಆಗ ಸಿಕ್ಕ ಕೆಲವು ಸ್ವಾರಸ್ಯಕರ ವಿಷಯಗಳನ್ನು ನಿಮ್ಮ ಜತೆ ಈ ಸಂಚಿಕೆಯಲ್ಲಿ ಹಂಚಿಕೊಳ್ಳುತ್ತೇನೆ. ಬನ್ನಿ, ಬೆಣ್ಣೆಯ ಮಹತ್ವ ಮತ್ತು ಉಪಯೋಗಗಳ ಬಗ್ಗೆ ಆಯುರ್ವೇದದ ಶಾಸ್ತ್ರಗಳಲ್ಲಿ ಉಲ್ಲೇಖಿಸಿರುವುದನ್ನು ತಿಳಿದುಕೊಳ್ಳೋಣ.

ಅಮೃತಕ್ಕಾಗಿ ದೇವತೆಗಳು ಮತ್ತು ರಾಕ್ಷಸರು ಮಂಥನ ಮಾಡಿದ್ದು ಕ್ಷೀರ ಸಮುದ್ರವನ್ನು. ಅಲ್ಲಿ ಹುಟ್ಟಿದವನೇ ಮೋಹಿನಿ ರೂಪದ, ನಂತರ ಧನ್ವಂತರಿ ಎಂದು ಹೆಸರುವಾಸಿಯಾದ ಅಬ್ಜ ನಾರಾಯಣ. ಅಮೃತ ಹುಟ್ಟಿದ್ದು ಅಲ್ಲಿಯೇ. ಈ ಹಿನ್ನೆಲೆಯಲ್ಲಿ ಗಮನಿಸಿದರೂ ಬೆಣ್ಣೆ ಹಾಲಿನ ಉತ್ತಮ ಉತ್ಪನ್ನ. ಬೆಣ್ಣೆಯು ಹಾಲಿನ ಪುತ್ರ ಮತ್ತು ಮಜ್ಜಿಗೆಯ ಸಹೋದರ. ಆದರೂ ಹಾಲಿಗೂ, ಬೆಣ್ಣೆಗೂ ಮತ್ತು ಮಜ್ಜಿಗೆಗೂ ಬಹಳ ವ್ಯತ್ಯಾಸವಿದೆ. ಹಾಲಿಗಿಂತ ವಿಶಿಷ್ಟ ಗುಣವನ್ನು ಬೆಣ್ಣೆ ಹೊಂದಿರುತ್ತದೆ.

ಆಯುರ್ವೇದದಲ್ಲಿ, 'ಸ್ನೇಹ ಸಾರೋಽಯಂ ಪುರುಷಃ' ಎಂದು ಪುರುಷನನ್ನು ವರ್ಣಿಸಲಾಗಿದೆ. ಕಾರಣ ನಮ್ಮ ಇಡೀ ಅಸ್ತಿತ್ವವನ್ನು ಹಿಡಿದಿಟ್ಟಿರುವ ಮುಖ್ಯವಾದ ವಸ್ತುವೇ 'ಸ್ನೇಹ'. ಸಂಸ್ಕೃತದಲ್ಲಿ ಸ್ನೇಹ ಶಬ್ದಕ್ಕೆ 'ಸ್ನಿಹ್-ಬಂಧನೇ' ಎಂಬ ವ್ಯುತ್ಪತ್ತಿಯನ್ನು ಕಾಣಬಹುದು. ಅಂದರೆ, ವಸ್ತುತಃ ಯಾವುದು ನಮ್ಮನ್ನು ಬಂಧಿಸುವುದೋ ಅದೇ ಸ್ನೇಹ. ತಂದೆ-ತಾಯಿ, ಗಂಡ-ಹೆಂಡತಿ, ಗೆಳೆಯ-ಗೆಳತಿ, ಗುರು-ಶಿಷ್ಯ ಹೀಗೆ ಎಲ್ಲಾ ಸಂಬಂಧಗಳ ನಡುವೆ ಇರುವ ಕೊಂಡಿ ಯಾವುದು ಎಂದು ನೋಡಿದರೆ ಅದು ಸ್ನೇಹದ ಬಂಧನವೇ ಆಗಿದೆ. ಆಯುರ್ವೇದದಲ್ಲಿ ಹೆಚ್ಚಿನ ಎಲ್ಲಾ ಜಿಡ್ಡಿನ ಪದಾರ್ಥಗಳಿಗೂ ಸ್ನೇಹ ಎಂದು ಕರೆಯುತ್ತಾರೆ. ಕಾರಣ, ನಮ್ಮ ದೇಹದಲ್ಲಿನ ಚಿಕ್ಕ ಚಿಕ್ಕ ಅಣುಗಳಿಂದ ಹಿಡಿದು ದೊಡ್ಡ ದೊಡ್ಡ ಅವಯವಗಳವರೆಗೂ ಎಲ್ಲವನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಒಗ್ಗೂಡಿಸುವ, ಬಂಧಿಸುವ ಪದಾರ್ಥವೇ ಸ್ನೇಹ. ಹಾಗೆಯೇ, ದೇಹದಲ್ಲಿ ಧಾತುಗಳ ಪರಸ್ಪರ ಜೋಡಣೆಗೆ ಕಾರಣವೂ ಈ ಸ್ನೇಹವೇ. ಶರೀರದ ಬೆಳವಣಿಗೆಗೆ, ವೃದ್ಧಿಗೆ, ಪೋಷಣೆಗೆ, ಸ್ಥಿರತೆಗೆ ಮತ್ತು ಬಲಕ್ಕೆ ಈ ಸ್ನೇಹ ಅತ್ಯಗತ್ಯ. ಈ ಜಗತ್ತಿನಲ್ಲಿ ಲಭ್ಯವಿರುವ ಹಲವಾರು ವಿಧಗಳ ಸ್ನೇಹಗಳಲ್ಲಿ 'ನವನೀತ' ಅಂದರೆ ಬೆಣ್ಣೆಯು ಬಹಳ ಮುಖ್ಯವಾದದ್ದು ಮತ್ತು ಉತ್ಕೃಷ್ಟವಾದದ್ದು. ಗರ್ಭಧಾರಣೆಯಿಂದ ಹಿಡಿದು ಮಗುವಿನ ಬೆಳವಣಿಗೆ ಮತ್ತು ಪೋಷಣೆಯ ತನಕ ಇದರ ಉಪಯುಕ್ತತೆ ಅಗಾಧ.

ಬೆಣ್ಣೆಯನ್ನು ಆಯುರ್ವೇದ ಶಾಸ್ತ್ರಗಳಲ್ಲಿ 'ನವನೀತ' ಎಂದು ಕರೆಯುತ್ತಾರೆ. ಈ ಹೆಸರೇ ಸೂಚಿಸುವಂತೆ ಅದೇ ದಿನ ಕಡೆದು ತೆಗೆದ ಬೆಣ್ಣೆಯನ್ನು ಅಂದೇ ಉಪಯೋಗಿಸತಕ್ಕದ್ದು. ಆಗಲೇ ಅದರ ಸಂಪೂರ್ಣ ಗುಣಲಾಭಗಳು ಲಭ್ಯ. ಬೆಣ್ಣೆಯನ್ನು ನಾವು ಹಾಲಿನಿಂದ ಅಥವಾ ಮೊಸರಿನಿಂದ ತಯಾರಿಸಿದ್ದೆ ಆದರೂ, ಇದರ ಗುಣ-ಧರ್ಮಗಳು ಹಾಲು ಮತ್ತು ಮೊಸರುಗಳಿಗಿಂತ ಅಪೂರ್ವವಾಗಿವೆ.

ಬೆಣ್ಣೆಯನ್ನು ಸಾಮಾನ್ಯವಾಗಿ ಎರಡು ರೀತಿಯಲ್ಲಿ ತಯಾರಿಸುತ್ತೇವೆ. ಮೊದಲಿಗೆ ಮೊಸರನ್ನು ತಯಾರಿಸಿ ಅದನ್ನು ಕಡೆದು, ನಂತರ ಬೆಣ್ಣೆಯನ್ನು ಬೇರ್ಪಡಿಸುವುದು. ಇದು ಒಂದು ವಿಧಾನ. ಇನ್ನೊಂದು ವಿಧಾನದಲ್ಲಿ, ನೇರವಾಗಿ ಹಾಲಿನಿಂದಲೇ ಬೆಣ್ಣೆಯನ್ನು ಪ್ರತ್ಯೇಕಿಸುವುದು. ಈ ವಿಧಾನದ ಬೆಣ್ಣೆಗೆ 'ಕೆನೆ' ಎಂದು ಸಾಮಾನ್ಯವಾಗಿ ಕರೆಯುತ್ತಾರೆ.

ಸಾಮಾನ್ಯವಾಗಿ ಮೊಸರಿನಿಂದ ಆಗ ತಾನೆ ತೆಗೆದ ಬೆಣ್ಣೆಯು ಸಿಹಿ ರುಚಿ ಮತ್ತು ಸ್ವಲ್ಪ ಒಗರು ರುಚಿಯನ್ನು ಹೊಂದಿರುತ್ತದೆ. ಜತೆಗೆ ಇದು ಸ್ವಲ್ಪ ಆಮ್ಲ ಗುಣವುಳ್ಳದ್ದು. ಇದು ಹೆಚ್ಚಿನ ಪ್ರಮಾಣದಲ್ಲಿ ಜಿಡ್ಡಿನಿಂದ ಕೂಡಿರುತ್ತದೆ. ಆದರೆ ಇದು ಬಹಳ ಸುಲಭವಾಗಿ ಜೀರ್ಣಗೊಳ್ಳುತ್ತದೆ. ಜೀರ್ಣವಾದ ನಂತರ ಇದು ದೇಹದಲ್ಲಿ ಶೀತದ ಪರಿಣಾಮವನ್ನು ಬೀರುತ್ತದೆ. ಇದರ ವಿಶೇಷತೆ ಏನೆಂದರೆ ಇದು ಮೇಧಾಶಕ್ತಿಯನ್ನು ಹೆಚ್ಚು ಮಾಡುತ್ತದೆ. ಅಂತೆಯೇ ಇದು ಹೃದಯಕ್ಕೆ ಹಿತ. ದೇಹದಲ್ಲಿ ಆಗುತ್ತಿರುವ ಹೆಚ್ಚಿನ ರಕ್ತಸ್ರಾವವನ್ನು ನಿಲ್ಲಿಸುತ್ತದೆ. ಜೀರ್ಣಶಕ್ತಿಯನ್ನು ಹೆಚ್ಚು ಮಾಡುತ್ತದೆ. ದೋಷಗಳಲ್ಲಿ ಇದು ವಾತ-ಪಿತ್ತಗಳನ್ನು ಪ್ರಶಮನಗೊಳಿಸುತ್ತದೆ. ಕರುಳಿನ ಕಾರ್ಯವು ನಿಯತವಾಗಿ ನಡೆಯಲು ಸಹಾಯಕಾರಿ. ಶರೀರಕ್ಕೆ ಜಿಡ್ಡನ್ನು ಪೂರೈಸುವುದಲ್ಲದೆ ದೇಹದೊಳಗಿನ ಕ್ರಿಯೆಗಳನ್ನು ಸಕಾಲದಲ್ಲಿ ಆಗುವಂತೆ ವಾತವನ್ನು ಸರಿಪಡಿಸುತ್ತದೆ. ಜೀರ್ಣಶಕ್ತಿಗೆ ಉತ್ತೇಜನ, ಪೋಷಕಾಂಶಗಳ ಹೀರುವಿಕೆ, ಉರಿ, ದಾಹಗಳ ಶಮನದಿಂದ ಪಿತ್ತವನ್ನು ಸಮಸ್ಥಿತಿಗೆ ತರುತ್ತದೆ. ಜೀವನಕ್ಕೆ ಮೂಲಾಧಾರವಾದ ಶುಕ್ರದ ಉತ್ಪತ್ತಿಯಲ್ಲಿ ಬೆಣ್ಣೆಯ ಸಾಮರ್ಥ್ಯ ಅಸದೃಶ. ದೇಹದ ಕಾಂತಿಯನ್ನು ಮತ್ತು ಬಲವನ್ನು ಇದು ಹೆಚ್ಚು ಮಾಡುತ್ತದೆ.

ಇನ್ನು ಪುರಾಣ ನವನೀತದ ಬಗ್ಗೆ ಹೇಳಬೇಕಾದರೆ ಹಳೆಯ ಬೆಣ್ಣೆಯೂ ದೇಹದಲ್ಲಿ ಕಫ ಮತ್ತು ಮೇದಸ್ಸು ಅಂದರೆ ಕೊಬ್ಬನ್ನು ಹೆಚ್ಚಿಸುತ್ತದೆ. ಇದು ಬಲಕರ ಮತ್ತು ಬೃಂಹಣ- ಅಂದರೆ ಶರೀರದ ಬೆಳವಣಿಗೆಗೆ ಸಹಾಯಕಾರಿ. ಇದು ಶೋಷವನ್ನು ನಿವಾರಿಸಿ, ಶಕ್ತಿಯನ್ನು ನೀಡುತ್ತದೆ. ಇದು ವಿಶೇಷವಾಗಿ ಬಾಲಕರಿಗೆ ಅತ್ಯುತ್ತಮ.

ಇನ್ನು ಕ್ಷೀರೋತ್ಥ ನವನೀತ- ಅಂದರೆ ಹಾಲಿನಿಂದ ತೆಗೆದ ಬೆಣ್ಣೆಯ ಗುಣಗಳನ್ನು ನೋಡೋಣ. ಈ ರೀತಿಯ ಬೆಣ್ಣೆಯೂ ಸ್ನಿಗ್ಧವಾಗಿದ್ದು, ಸಿಹಿ ಗುಣ ಹೊಂದಿದೆ. ಇದು ದೇಹಕ್ಕೆ ಅತಿಯಾದ ತಂಪನ್ನೆರೆಯುತ್ತದೆ, ದೇಹವನ್ನು ಮೃದುಗೊಳಿಸುತ್ತದೆ. ಈ ರೀತಿ ನೇರವಾಗಿ ಹಾಲಿನಿಂದ ತಯಾರಾದ ಬೆಣ್ಣೆಯು ನೇತ್ರರೋಗೋಪಚಾರದಲ್ಲಿ ಎತ್ತಿದ ಕೈ.

ಸಾಮಾನ್ಯವಾಗಿ ಗರ್ಭಿಣಿಯರಿಗೆ, ಗರ್ಭಧಾರಣೆಯಾದ ಮೇಲೆ ಒಂಬತ್ತು ತಿಂಗಳೂ ಬೆಣ್ಣೆಯನ್ನು ಸೇವಿಸುವಂತೆ ನಿರ್ದೇಶಿಸುತ್ತೇವೆ. ಕಾರಣ, ಇದು ಗರ್ಭದ ಸ್ಥಾಪನೆಗೆ ಮತ್ತು ಬೆಳವಣಿಗೆಗೆ ಬಹಳ ಅವಶ್ಯಕ. ಅಂತೆಯೇ, ಗರ್ಭಿಣಿಯ ಧಾತುಗಳನ್ನು ಸಹ ಇದು ಪೋಷಿಸಿ, ಮೂಳೆ ಮತ್ತು ಮಾಂಸ ಪೇಷಿಗಳಿಗೆ ಬಲವನ್ನು ನೀಡುತ್ತದೆ. ಚರ್ಮನ್ನು ಕಾಂತಿಯುಕ್ತವಾಗಿಸಿ, ಕೂದಲನ್ನು ಸದೃಢಗೊಳಿಸಿ, ಸಂಪೂರ್ಣ ರಕ್ಷಣೆಯನ್ನು ತಾಯಿಗೆ ಮತ್ತು ಮಗು- ಇಬ್ಬರಿಗೂ ಧಾರೆಯೆರೆಯುತ್ತದೆ. ಅಂತೆಯೇ, ಆಗ ತಾನೇ ಹುಟ್ಟಿದ ಮಗುವಿಗೂ ನವನೀತಪ್ರಾಶನ ಬಹಳ ಲಾಭಕಾರಿ. ತಾಯಿಯ ಹಾಲು ಕಡಿಮೆಯಾಗಿದ್ದ ಸಂದರ್ಭದಲ್ಲಿ ಹಾಲಿನ ಬದಲಿಗೆ, ಮಗುವಿನ ತುಟಿಗೆ ಸ್ವಲ್ಪ ಸ್ವಲ್ಪ ಬೆಣ್ಣೆಯನ್ನು ಸವರಿ ನೆಕ್ಕಿಸಿಬಹುದು. ಬಾಲ್ಯಾವಸ್ಥೆಯ ಪರಿಪೂರ್ಣ ಅವಧಿಯಲ್ಲಿ ಮಕ್ಕಳಿಗೆ ಬೆಣ್ಣೆಯನ್ನು ಆಹಾರದೊಂದಿಗೆ ನೀಡುವುದು ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿ. ನವನೀತವು ಶರೀರವನ್ನು ಪೋಷಿಸುವುದರ ಜತೆಗೆ ಮಗುವಿನ ಬುದ್ಧಿ, ಮೇಧಾಶಕ್ತಿಗಳನ್ನು ವರ್ಧಿಸಿ ಮನಸ್ಸನ್ನು ಸಹ ಪುಷ್ಟಿಗೊಳಿಸುತ್ತದೆ. ಅಷ್ಟೆಲ್ಲಾ ಇಲ್ಲದೆ ಸುಮ್ಮನೆ ಕೃಷ್ಣ ಬೆಣ್ಣೆಯನ್ನು ಕದೀತಾನಾ, ಹೇಳಿ?

ಸಾಮಾನ್ಯವಾಗಿ ಸಸ್ತನಿಗಳ ಹಾಲು ಬೆಣ್ಣೆಯ ಮೂಲ. ಹಸು, ಎಮ್ಮೆ, ಆಡು, ಕುರಿ, ಮೇಕೆ, ಒಂಟೆಗಳ ಹಾಲು ಬೆಣ್ಣೆ ಉತ್ಪತ್ತಿಯ ಮೂಲ. ಆಯಾ ಹಾಲಿನ ಗುಣವೇ ಬೆಣ್ಣೆಯಲ್ಲೂ ಇರುತ್ತದೆ. ಆದರೆ ನಿತ್ಯೋಪಯೋಗಕ್ಕೆ ಹಸುವಿನ ಬೆಣ್ಣೆಯೇ ಹಿತಕರ.

ಇನ್ನು ಕೆಲವು ಚಿಕಿತ್ಸೋಪಯೋಗಗಳನ್ನು ಹೇಳಬೇಕಾದರೆ- ನವನೀತವು ಮೂಲವ್ಯಾಧಿ ಮತ್ತು ರಕ್ತಬೇಧಿಗಳಲ್ಲಿ ಪರಿಣಾಮಕಾರಿ. ಸ್ವಲ್ಪ ಬೆಣ್ಣೆ, ಜೇನುತುಪ್ಪ, ಕೆಂಪುಕಲ್ಲುಸಕ್ಕರೆ ಪುಡಿಮಿಶ್ರಣವನ್ನು ಆಹಾರಕ್ಕೆ ಮೊದಲು ದಿನದಲ್ಲಿ ಒಂದೆರಡು ಬಾರಿ ನೆಕ್ಕುವುದರಿಂದ ರಕ್ತಸ್ರಾವ ನಿಲ್ಲುತ್ತದೆ. ಕ್ರಮೇಣ ರೋಗವೂ ನಿವಾರಣೆಯಾಗುತ್ತದೆ. 50 ಮಿಲಿ ಆಡಿನ ಹಾಲಿಗೆ ಒಂದು ಚಮಚ ಬೆಣ್ಣೆಯನ್ನು ಸೇರಿಸಿ ಸವಿಯುವುದು ಸಹ ಒಳ್ಳೆಯದು.

ಪದೇಪದೆ ಬಾಯಿಹುಣ್ಣು ಕಾಡುವವರಿಗೆ ಮತ್ತು ಬಿಸಿ ಮೈಯುಳ್ಳವರಿಗೆ ಪ್ರತಿದಿನ ಆಹಾರದಲ್ಲಿ ಬೆಣ್ಣೆಯನ್ನು ನೀಡುವುದರಿಂದ ಈ ತೊಂದರೆ ಪದೇಪದೆ ಕಾಡುವುದಿಲ್ಲ.

ಮೈ ಕೈ ನೋವು, ಕಣ್ಣು ಉರಿ, ವಿಪರೀತ ತಾಪದ ಜ್ವರ ಇದ್ದಾಗ ಹಸಿವಿಗೆ ತಕ್ಕಷ್ಟೇ ಬೆಣ್ಣೆಯನ್ನು ಕಲ್ಲು ಸಕ್ಕರೆಯೊಂದಿಗೆ ಮಿಶ್ರಣ ಮಾಡಿ ಎರಡು-ಮೂರು ತಾಸಿಗೊಮ್ಮೆ ನೆಕ್ಕುವುದು ಪರಿಣಾಮಕಾರಿ.

ಸದಾ ಮೈ ತೂಕ ಹೆಚ್ಚದೇ ಇರುವ ಮಕ್ಕಳಿಗೆ ಮತ್ತು ಮೈಮೇಲೆ ಸದಾ ಅಲ್ಲಲ್ಲಿ ಕೆಂಪುವರ್ಣದ ಗಂಧೆಗಳಿರುವ ಮಕ್ಕಳಿಗೆ ಬೆಣ್ಣೆ ಹಚ್ಚಿ ಸ್ನಾನ ಮಾಡಿಸುವ ಅಭ್ಯಾಸವು ಬಹಳ ಪ್ರಯೋಜನಗಳನ್ನು ನೀಡುತ್ತದೆ.

ತೂಕ ಕಡಿಮೆ ಇರುವ ಮಕ್ಕಳಿಗೆ ಬೆಳಗ್ಗೆ ಎದ್ದ ಕೂಡಲೇ ಕಡಲೆಕಾಳು ಗಾತ್ರದಷ್ಟು ಬೆಣ್ಣೆಯನ್ನು ನೆಕ್ಕಿಸಬೇಕು. ಇದು ಸಂಪೂರ್ಣವಾಗಿ ಜೀರ್ಣವಾದ ನಂತರ ಮುಂದಿನ ಆಹಾರವನ್ನು ನೀಡಬೇಕು. ಹೀಗೆ ಪ್ರತಿದಿನ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಿಸುತ್ತಾ ಒಂದು ವರ್ಷದಲ್ಲಿ ಒಂದು ಚಮಚದಷ್ಟು ಬೆಣ್ಣೆ ನೆಕ್ಕಿಸಿ ಜೀರ್ಣಿಸಿಕೊಳ್ಳುವಂತಾಗಬೇಕು. ಹೀಗೆ ಮಾಡಿದ್ದೇ ಆದರೆ ಮಕ್ಕಳ ತೂಕ ಸಹಜವಾಗಿ ಹೆಚ್ಚುತ್ತದೆ. ದೇಹದ ಬಲವೂ ವೃದ್ಧಿಸುತ್ತದೆ.

ಕುರುವಿನ ತೊಂದರೆ ಇದ್ದಾಗ ಬೆಣ್ಣೆ ಮತ್ತು ಅರಿಶಿಣದ ಜತೆಗೆ ಸುಣ್ಣವನ್ನು ಬೆರೆಸಿ ಲೇಪನ ಮಾಡಿಕೊಂಡರೆ ಕುರುವಿನ ಅಸಹನೀಯ ನೋವು ಕಡಿಮೆಯಾಗುತ್ತದೆ.

ಕರ್ಣಶೂಲದಲ್ಲಿ ಬಿಸಿ ಮಾಡಿದ ಚಮಚಕ್ಕೆ, ಸ್ವಲ್ಪ ಬೆಣ್ಣೆ ಹಾಕಿದಾಗ ಅದು ಕರಗುತ್ತದೆ. ಕರಗಿದ ಆ ಬೆಣ್ಣೆಯನ್ನು ನಾಲ್ಕರಿಂದ ಆರು ತೊಟ್ಟು ಕಿವಿಗೆ ಬಿಡುವುದರಿಂದ ಕಿವಿನೋವು ತಕ್ಷಣವೇ ನಿವಾರಣೆ ಆಗುತ್ತದೆ. ಹಾಕಿದ ಈ ಬೆಣ್ಣೆಯನ್ನು ಅರ್ಧ ಗಂಟೆ ಬಿಟ್ಟು ತೆಗೆದು ಕಿವಿಯನ್ನು ಒಣಗಿಸಿಕೊಳ್ಳಬೇಕು.

ಅರೆ ತಲೆನೋವಿನಲ್ಲಿಯೂ ಬೆಣ್ಣೆ ಪರಿಣಾಮಕಾರಿ. ಕರಗಿಸಿದ ಬೆಣ್ಣೆಯನ್ನು ಮೂರರಿಂದ ನಾಲ್ಕು ಹನಿಗಳಂತೆ ಒಂದೊಂದು ಮೂಗಿನ ಹೊಳ್ಳೆಗಳಿಗೂ ನಿತ್ಯ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಹಾಕುವುದರಿಂದ ಅರ್ಧ ತಲೆನೋವು ನಿವಾರಣೆ ಆಗುತ್ತದೆ.

ಅತಿಯಾದ ಮೈ ಉರಿ ಮತ್ತು ನವೆ ಇದ್ದಾಗ ಬೆಣ್ಣೆಯೊಡನೆ ಶ್ರೀಗಂಧದ ಪುಡಿಯನ್ನು ಬೆರೆಸಿ ಹಚ್ಚುವುದರಿಂದ ಮೈನವೆ ಮತ್ತು ಉರಿಗಳು ಕಡಿಮೆಯಾಗುತ್ತವೆ. ಇದೇ ಮಿಶ್ರಣವನ್ನು ಜ್ವರದಲ್ಲಿಯೂ ಹಣೆಗೆ ಲೇಪಿಸಬಹುದು.

ಬಜೆಯನ್ನು ಬೆಣ್ಣೆಯಲ್ಲಿ ಪ್ರತಿದಿನ ಮೂರರಿಂದ ನಾಲ್ಕು ಸುತ್ತು ತೇಯ್ದು ನೆಕ್ಕಿಸುವುದು ಎಳೆ ಮಕ್ಕಳಲ್ಲಿ ಬುದ್ಧಿ ವರ್ಧಕವಾಗುತ್ತದೆ ಮತ್ತು ರೋಗ ಪ್ರತಿರೋಧ ಶಕ್ತಿಯನ್ನು ಹೆಚ್ಚಿಸುತ್ತದೆ.

ಬೆಣ್ಣೆಯು ಮಕ್ಕಳಿಗೆ ಎಷ್ಟು ಪ್ರಯೋಜಕಾರಿಯೋ ವೃದ್ಧರಿಗೂ ಅಷ್ಟೇ ಒಳ್ಳೆಯದು. ವೃದ್ಧರಿಗೆ ಜೀವಕೋಶಗಳ ಪದರಗಳ ಸವಕಳಿಯನ್ನು ತಡೆಯಲು ನವನೀತವು ಅತ್ಯುತ್ತಮ ಆಹಾರವಾಗಿದೆ.

ಸ್ವರಭೇದವಾಗಿ ಗಂಟಲು ಉರಿಯುತ್ತಿದ್ದಲ್ಲಿ, ಸ್ವಲ್ಪ ಬೆಚ್ಚಗಿನ ಹಾಲಿನ ಜತೆ ಬೆಣ್ಣೆ ಹಾಕಿ ಕುಡಿಯುವುದು ಒಳ್ಳೆಯದು.

ದೇಹಧಾತುಗಳು ಕ್ಷೀಣಿಸಿ ಬರುತ್ತಿರುವ ಕೆಮ್ಮಿನಲ್ಲಿ, ಅರ್ದಿತ ರೋಗದಲ್ಲಿ ಬೆಣ್ಣೆಯ ಸೇವನೆ ಅಮೃತಸಮಾನ.

ಹೀಗೆ, ಬೆಣ್ಣೆಯ ಪ್ರಯೋಗದ ಪ್ರಯೋಜನಗಳ ಪಟ್ಟಿ ಬಹಳ ದೊಡ್ಡದಾಗಿದೆ. ಆದರೆ ಇದು ಕೊಬ್ಬನ್ನು ಹೆಚ್ಚಿಸಿ ಹೃದಯ ಸಂಬಂಧಿ ಕಾಯಿಲೆಗಳಿಗೆ ಕಾರಣವಾಗುತ್ತದೆ ಎಂದು ಯಾರೋ ಹೊರಿಸಿದ ಅಪವಾದದಿಂದ ನಾವು ಬೆಣ್ಣೆಯ ಶ್ರೇಷ್ಠ ಗುಣಗಳನ್ನು ಮರೆತು, ಅದರಿಂದ ದೂರ ಉಳಿದುಬಿಟ್ಟಿದ್ದೇವೆ. ಅದಕ್ಕೆ ಬೆಲೆಯನ್ನೂ ನಾವೇ ತೆರಬೇಕಾಗಿದೆ. ಬೆಣ್ಣೆಯ ಮೇಲೆ ಹಾಗೆ ಸುಮ್ಮನೆ ಆಪಾದನೆ ಹೊರಿಸುವ ಮೊದಲು, ಅದರ ಗುಣ-ಧರ್ಮಗಳನ್ನು ತಿಳಿದು, ಉಪಯೋಗಿಸುವ ಸರಿಯಾದ ಕ್ರಮವನ್ನು ಕಲಿತು, ವಿವೇಚನೆಯಿಂದ ನಿರ್ಧಾರವನ್ನು ತೆಗೆದುಕೊಳ್ಳುವುದು ಬುದ್ಧಿವಂತರ ಲಕ್ಷಣ. ಶ್ರೀಕೃಷ್ಣ ಪರಮಾತ್ಮನದ್ದು ಆದರ್ಶ ವ್ಯಕ್ತಿತ್ವ. ಸಮಗ್ರವಾದ ಜೀವನವನ್ನು ಹೇಗೆ ನಡೆಸಬೇಕೆಂಬ ದಾರಿಯನ್ನು ಹಲವಾರು ಉದಾಹರಣೆಗಳೊಂದಿಗೆ ಮಾನವಕುಲಕ್ಕೆ ತೋರಿಸಿರುವ ಚತುರ ಶ್ರೀಕೃಷ್ಣ. ಅವನು ಹಾಕಿಕೊಟ್ಟ ಮಾರ್ಗದಲ್ಲಿ, ನಿತ್ಯ ನವನೀತ ಸೇವನೆಯೂ ಒಂದು. ಅವನ ಭಗವದ್ಗೀತೆಯು ಆತ್ಮದ ಉದ್ಧಾರ ಮಾಡುವಂತೆ, ಅವನಂತೆ ಬಳಸುವ ಬೆಣ್ಣೆಯು ನಮ್ಮ ಆರೋಗ್ಯದ ಉನ್ನತಿಗೆ ಕಾರಣವಾಗುವುದು ನಿಸ್ಸಂಶಯ..!

ಗ್ಯಾರಂಟಿ ಯುಗದಲ್ಲಿ ಜನಕಲ್ಯಾಣ ಸಾಕಾರವಾದೀತೇ?

ವರ್ಷಗಳ ಹಿಂದೆ, ಆಮ್ ಆದ್ಮಿ ಪಕ್ಷದ ಅರವಿಂದ ಕೇಜ್ರಿವಾಲರು ದೆಹಲಿಯ ವಿಧಾನಸಭಾ ಚುನಾವಣೆಯನ್ನು ಗೆಲ್ಲಲು 'ಗ್ಯಾರಂಟಿ' ಹೆಸರಿನಲ್ಲಿ ಹಲವು ಉಚಿತ ಯೋಜನೆಗಳನ್ನು ಘೋಷಿಸಿದರು. ಅಣ್ಣಾ ಹಜಾರೆಯವರ 'ಭ್ರಷ್ಟಾಚಾರ ವಿರೋಧಿ ಆಂದೋಲನ'ದ ಪ್ರಯೋಜನ ಪಡೆದು ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿದ್ದ ಕೇಜ್ರಿವಾಲರು 'ಗ್ಯಾರಂಟಿ' ಯೋಜನೆಯ ಪರಿಕಲ್ಪನೆ ತಮಗೆ ಮತ್ತೊಮ್ಮೆ ಅಧಿಕಾರವನ್ನು ತಂದುಕೊಡಬಹುದು ಎಂದು ಸ್ವತಃ ನಿರೀಕ್ಷಿಸಿರಲಿಲ್ಲವೇನೋ?!



ವಸ್ತುಸ್ಥಿತಿ
ರವೀ ಸಜಂಗದ್ದೆ
vveditoped@gmail.com

ಉಚಿತವಾದರೆ ನನಗೂ ಇರಲಿ, ನನ್ನ ತಂದೆಗೂ ಒಂದಿರಲಿ' ಎನ್ನುವ ಅರ್ಥ ಬರುವ ಒಂದು ಗಾದೆಮಾತಿದೆ. ಉಡುಗೊರೆಯಾಗಿ ಏನಾದರೊಂದು ಸಿಕ್ಕರೆ ಅಥವಾ ಕಡಿಮೆ ದರದಲ್ಲಿ ಇಲ್ಲವೇ ಉಚಿತವಾಗಿ ಯಾವುದೇ ಸೇವೆ, ವಸ್ತು ದಕ್ಕಿಬಿಟ್ಟರೆ ನಮಗಾಗುವ ಸಂತೋಷವೇ ಬೇರೆ! ಬಹುತೇಕ ರಾಜಕೀಯ ಪಕ್ಷಗಳು ಮನುಷ್ಯನ ಇಂಥಾ ಮಾನಸಿಕ ಸ್ಥಿತಿಯನ್ನು ಎನ್‌ಕ್ಯಾಶ್ ಮಾಡಿಕೊಂಡು, ಆ ಮನಸ್ಥಿತಿಯ ಮೇಲೆ ನಿರಂತರ ಸವಾರಿ ಮಾಡಿಕೊಂಡೇ ಕಾಲಕಾಲಕ್ಕೆ 'ರಾಜಕಾರಣ'ವನ್ನು ಮಾಡಿಕೊಂಡು ಬಂದಿವೆ. ಜನರಿಗೆ ವಿವಿಧ ಉಚಿತ ಸೌಲಭ್ಯಗಳ (ಫ್ರೀಬೀಸ್) ಆಮಿಷವನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಮತ್ತು ಭಾಷಣದಲ್ಲಿ ಒಡ್ಡಿ, ಆ ಮೂಲಕ ಅಧಿಕಾರ ಹಿಡಿಯುವುದು, ಅಧಿಕಾರಕ್ಕೆ ಬಂದ ನಂತರ ಬಹುತೇಕ ಭರವಸೆಗಳನ್ನು ಮರೆಯುವುದು, ಮುಂದಿನ ಚುನಾವಣೆಯ ವೇಳೆಗೆ ಈ ಹಿಂದೆ ನೀಡಲಾಗಿದ್ದ ಭರವಸೆಗಳನ್ನೇ ಒಂದಿಷ್ಟು ಬದಲಾಯಿಸಿ ಜನರ ಮುಂದೆ ಮಂಡಿಸಿ, ಮತ್ತೆ ಮತಭಿಕ್ಷೆಯೆತ್ತಿ ಅಧಿಕಾರಕ್ಕೆ ಬರಲು ಯತ್ನಿಸುವುದು- ಇದು ಭಾರತದ ಏಳೂವರೆ ದಶಕಗಳ ರಾಜಕೀಯ ಇತಿಹಾಸದಲ್ಲಿ ಕಂಡುಬಂದಿರುವ ನಿರಂತರ ಪ್ರಕ್ರಿಯೆ. ದಶಕಗಳ ಹಿಂದೆ 'ಗರೀಬಿ ಹಟಾವೊ' ಎಂಬ ಘೋಷವಾಕ್ಯವನ್ನು ಮುಂದುಮಾಡಿಕೊಂಡು ಚುನಾವಣೆಗಳು ನಡೆದಿದ್ದೇನೋ ಹೌದು. ಆದರೆ ಅದಾಗಿ ಇಷ್ಟೂ ವರ್ಷಗಳಿಂದ ನಡೆಯುತ್ತಿರುವ ಪ್ರತಿಯೊಂದು ಚುನಾವಣೆಯಲ್ಲೂ, 'ಬಡತನವನ್ನು ನಿರ್ಮೂಲಗೊಳಿಸುವ' ಆ ಆಶಯವನ್ನು ಹೇಳಿಕೊಂಡೇ ಜನರನ್ನು ಮೂರ್ಖರನ್ನಾಗಿಸಿಕೊಂಡು ಬರಲಾಗಿದೆ ಎಂಬುದು ವಿಷಾದನೀಯ.

'ಮೂರ್ಖರಾಗುವವರು ಇರುವವರೆಗೂ, ಮೂರ್ಖರನ್ನಾಗಿಸುವವರೂ ಇರುತ್ತಾರೆ' ಎಂಬುದು ಸಾರ್ವಕಾಲಿಕ ಸತ್ಯ! 'ಉಚಿತಗಳು', 'ಗ್ಯಾರಂಟಿಗಳು', 'ಭಾಗ್ಯಗಳು' ಹೀಗೆ ಹೆಸರುಗಳು ಬೇರೆಬೇರೆಯಾಗಿದ್ದರೂ ಅವುಗಳ ಆಧಾರದ ಮೇಲೆ ದೇಶದಲ್ಲಿ ಕಳೆದೊಂದು ದಶಕದಿಂದ ಚುನಾವಣೆಗಳು ನಡೆಯುತ್ತಿರುವುದನ್ನು ನಾವೆಲ್ಲ ನೋಡುತ್ತಿದ್ದೇವೆ. ನಿಜ, ಈಗಿನ ರಾಜಕೀಯ ಮತ್ತು ಆಡಳಿತದ ಕಾಲಘಟ್ಟವು 'ಗ್ಯಾರಂಟಿ ಯುಗ'ವಾಗಿ ಬದಲಾಗಿಬಿಟ್ಟಿದೆ. ವರ್ಷಗಳ ಹಿಂದೆ, ಆಮ್ ಆದ್ಮಿ ಪಕ್ಷದ ಸಂಸ್ಥಾಪಕ ಅರವಿಂದ ಕೇಜ್ರಿವಾಲ್ ಅವರು ದೆಹಲಿಯ ವಿಧಾನಸಭಾ ಚುನಾವಣೆಯನ್ನು ಗೆಲ್ಲಲು 'ಗ್ಯಾರಂಟಿ' ಹೆಸರಿನಲ್ಲಿ ಹಲವು ಉಚಿತ ಯೋಜನೆಗಳನ್ನು ಘೋಷಿಸಿದರು. ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆಯವರ 'ಭ್ರಷ್ಟಾಚಾರ ವಿರೋಧಿ ಆಂದೋಲನ'ದ ಪ್ರಯೋಜನ ಪಡೆದು ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿದ್ದ ಕೇಜ್ರಿವಾಲರಿಗೆ ಎರಡನೆಯ ಬಾರಿಗೆ, ಅಂದರೆ 2020ರ ಫೆಬ್ರವರಿಯಲ್ಲಿ ಅಧಿಕಾರಕ್ಕೆ ಬರಲು ಗ್ಯಾರಂಟಿ ಘೋಷಣೆಗಳು ಸಹಕಾರಿಯಾದವು. 'ಗ್ಯಾರಂಟಿ' ಯೋಜನೆಯ ಪರಿಕಲ್ಪನೆ ತಮಗೆ ಇಷ್ಟು ದೊಡ್ಡ ಮಟ್ಟದಲ್ಲಿ ಮತ್ತೊಮ್ಮೆ ಅಧಿಕಾರವನ್ನು ತಂದುಕೊಡಬಹುದು ಎಂದು ಸ್ವತಃ ಕೇಜ್ರಿವಾಲರೇ ನಿರೀಕ್ಷಿಸಿರಲಿಲ್ಲವೇನೋ?! ಆದರೆ ಅದು ದೇಶದ ಬಹುತೇಕ ರಾಜಕೀಯ ಪಕ್ಷಗಳ 'ಹಾಟ್ ಪಿಕ್' ಆಗಿಬಿಟ್ಟಿತು! ನಂತರದಲ್ಲಿ ನಡೆದ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಬಹುತೇಕ ಪಕ್ಷಗಳವರು ಪೈಪೋಟಿಗೆ ಬಿದ್ದವರಂತೆ ಗ್ಯಾರಂಟಿ ಯೋಜನೆಗಳ ಘೋಷಣೆ ಮಾಡಿ ಅಧಿಕಾರ ಪಡೆಯಲು ಯತ್ನಿಸುತ್ತಿದ್ದಾರೆ. ಪರಿಣಾಮವಾಗಿ, ಯಾವುದೇ ವಿಶಿಷ್ಟ ಅಥವಾ ಉತ್ಕೃಷ್ಟ 'ಗ್ಯಾರಂಟಿ ಯೋಜನೆ'ಯು ಅಧಿಕಾರವನ್ನು ತಂದುಕೊಡುವುದು 'ಗ್ಯಾರಂಟಿ' ಎನ್ನುವ ಹಂತಕ್ಕೆ ದೇಶದ ರಾಜಕಾರಣ ಬಂದು ನಿಂತಿದೆ!



ಗ್ಯಾರಂಟಿ ಯೋಜನೆಗಳು ತೀವ್ರವಾಗಿ ಅನುಷ್ಠಾನಕ್ಕೆ ಬಂದಿರುವ ರಾಜ್ಯಗಳ ಪೈಕಿ ಹೆಚ್ಚಿನವುಗಳಲ್ಲಿ ಆರ್ಥಿಕ ಪರಿಸ್ಥಿತಿಯು 'ಐಸಿಯು'ನಲ್ಲಿರುವುದು ಖರೆ; ಇದು ಗ್ಯಾರಂಟಿ ಯೋಜನೆಗಳು ಆಯಾ ರಾಜ್ಯಗಳ ಆರ್ಥಿಕ ಶಿಸ್ತನ್ನು ಕೆಡಿಸಿ ಉಂಟುಮಾಡಿದ ಅಸ್ತವ್ಯಸ್ತ ಸ್ಥಿತಿಗೆ ಹಿಡಿದ ಕೈಗನ್ನಡಿ. ಇಂಥ ಬಹುತೇಕ ರಾಜ್ಯಗಳಲ್ಲಿ ಗ್ಯಾರಂಟಿ ಯೋಜನೆಗಳು 'ಬಿಳಿ ಆನೆ'ಗಳಂತಾಗಿವೆ. ಈ ಗ್ಯಾರಂಟಿಗಳು ಪ್ರಜಾಪ್ರಭುತ್ವದ ಸಿದ್ಧಾಂತಗಳ ಮತ್ತು ಆರ್ಥಿಕ ಸ್ಥಿತಿಗತಿಯ ಬುಡವನ್ನೇ ಅಲುಗಾಡಿಸುತ್ತಿರುವುದು ಈ ಶತಮಾನದ ದೊಡ್ಡ ದುರಂತ. ಜನರು ಕಟ್ಟುವ ನೇರ ಮತ್ತು ಪರೋಕ್ಷ ತೆರಿಗೆಯ ಹಣದಿಂದಲೇ ಸರಕಾರಗಳು ತಮ್ಮ ವಿವಿಧ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಬೇಕು. ಹೀಗೆ ಸಂಗ್ರಹವಾದ ತೆರಿಗೆ ಹಣವು ಗ್ಯಾರಂಟಿ ಯೋಜನೆಗಳಂಥ ಅನುತ್ಪಾದಕ, ಅಭಿವೃದ್ಧಿರಹಿತ ಬಾಬತ್ತುಗಳಿಗೆ ಬಹುಪಾಲು ವ್ಯಯವಾದರೆ, ಆಯಾ ರಾಜ್ಯಕ್ಕೆ ಲಾಭಕ್ಕಿಂತ ನಷ್ಟವೇ ಹೆಚ್ಚು.

ಕಡುಬಡವರ, ಸಾಮಾಜಿಕವಾಗಿ-ಆರ್ಥಿಕವಾಗಿ ಸಬಲರಲ್ಲದವರ ಏಳಿಗೆ ಆಗಲೇಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಸದ್ಯದ ಯಾವುದೇ ಗ್ಯಾರಂಟಿ ಯೋಜನೆಯೂ ಅಂಥವರನ್ನು ಮಾತ್ರವೇ ಉದ್ದೇಶಿಸಿ ರೂಪುಗೊಂಡಂತೆ ಕಾಣುತ್ತಿಲ್ಲ. ಹಸಿದವನಿಗೆ ಉಚಿತ ಊಟ ನೀಡುವುದಕ್ಕೂ, ಮನೆಯಲ್ಲಿ ಊಟವಿದ್ದರೂ ಉಚಿತ ಊಟಕ್ಕೆ ಹಾತೊರೆಯುವವನಿಗೂ ವ್ಯತ್ಯಾಸವಿದೆ. ಮನೆಯಲ್ಲಿ ಊಟದ ಲಭ್ಯತೆಯಿದ್ದರೂ ಹೀಗೆ ಹಾತೊರೆಯುವುದು ನ್ಯಾಯಯುತವಲ್ಲ. ಸಂಗ್ರಹವಾದ ಒಟ್ಟು ತೆರಿಗೆಯಲ್ಲಿ ತಮಗೆ ನ್ಯಾಯಯುತವಾಗಿ ಸಿಗಬೇಕಾದ ಪಾಲನ್ನು ರಾಜ್ಯ ಸರಕಾರಗಳು ಕೇಂದ್ರವನ್ನು ಕೇಳುವುದು ಸಮಂಜಸ ಎನ್ನುವುದಾದರೆ, 'ವಿವಿಧ ರೂಪಗಳಲ್ಲಿ ಜನರು ತೆರಿಗೆಯಾಗಿ ಕಟ್ಟಿದ ಹಣವು ಜನಪರ ಕಾರ್ಯಕ್ಕೆ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಉಪಯೋಗಿಸಲ್ಪಡಬೇಕು' ಎಂಬ ಬೇಡಿಕೆಯೂ ತಾರ್ಕಿಕ ಮತ್ತು ಸಮಂಜಸವಲ್ಲವೇ? ಆದರೆ ಅನುತ್ಪಾದಕ ಬಾಬತ್ತುಗಳಿಗೆ ಸಾವಿರಾರು

ಕೋಟಿ ರುಪಾಯಿ ಹಣವು ವ್ಯಯವಾದರೆ, ಇತರೆ ಯೋಜನೆಗಳಿಗೆ ಗರಬಡಿದು ಅಭಿವೃದ್ಧಿ ಕುಂಠಿತ ಅಥವಾ ಸ್ಥಗಿತವಾಗುವುದು ನಿಶ್ಚಿತ. ಗ್ಯಾರಂಟಿ ಯೋಜನೆಗೆ ಮೊರೆಹೋದ ಬಹುತೇಕ ರಾಜ್ಯಗಳಲ್ಲಿ ಈಗಾಗುತ್ತಿರುವುದು ಅದೇ.

ರಾಜ್ಯವೊಂದರ ಅಭಿವೃದ್ಧಿ ಚಟುವಟಿಕೆಗಳು ಮತ್ತು ಆರ್ಥಿಕತೆಯ ಮೇಲೆ ಈ ಗ್ಯಾರಂಟಿ ಕೊಡುಗೆಗಳು ಹೇಗೆ ಮತ್ತು ಎಷ್ಟು ಪ್ರಭಾವ ಬೀರುತ್ತಿವೆ? ಸಂಗ್ರಹವಾದ ಒಟ್ಟಾರೆ ಮೊತ್ತದ ಗರಿಷ್ಠ ಎಷ್ಟು ಪ್ರತಿಶತ ಮೊತ್ತವನ್ನು ಸರಕಾರಗಳು 'ಜನಾನುರಾಗಿ' ಸೋಗಿನ ಆದರೆ 'ಮತಬೇಟೆಯ ಉದ್ದೇಶ'ದ ಇಂಥ ಅನುತ್ಪಾದಕ ಯೋಜನೆಗಳಿಗೆ ಬಳಸಬಹುದು? ಎಂಬೆಲ್ಲಾ ಪ್ರಶ್ನೆಗಳಿಗೆ ಆರ್ಥಿಕ ತಜ್ಞರು ನಿಖರವಾದ ಆರ್ಥಿಕ ಮತ್ತು ವೈಜ್ಞಾನಿಕ ವಿಶ್ಲೇಷಣೆಯನ್ನು ಮಾಡಿದಂತೆ ಕಾಣುತ್ತಿಲ್ಲ. ರಾಜಕೀಯ ಪಕ್ಷಗಳ ಆರ್ಥಿಕ ಸಲಹೆಗಾರರೂ ಈ ಕುರಿತು ಹೆಚ್ಚು ತಲೆಕೆಡಿಸಿಕೊಂಡಿಲ್ಲ. ಸರಕಾರದ ಆಯಕಟ್ಟಿನ ಜಾಗಗಳಲ್ಲಿರುವ ಆರ್ಥಿಕ ಪರಿಣತರೂ ಈ ಕುರಿತು ಸರಕಾರಕ್ಕೆ ತಿಳಿಹೇಳಿ, ಆರ್ಥಿಕ ಶಿಸ್ತು ಉಳಿಸಿಕೊಳ್ಳಲು ನಿಜಪ್ರಯತ್ನ ಮಾಡಿದ್ದು ಎಲ್ಲೂ ಸುದ್ದಿಯಾಗಲಿಲ್ಲ!

ದೇಶದ ಉಳಿದ ರಾಜ್ಯಗಳಿಗೆ ಹೋಲಿಸಿದಾಗ ಆರ್ಥಿಕವಾಗಿ ಬಲಿಷ್ಠವಾಗಿರುವ ದೆಹಲಿ ಸರಕಾರವೇ ಗ್ಯಾರಂಟಿ ಯೋಜನೆಗಳಿಗೆ ನಿರಂತರವಾಗಿ ಹಣವನ್ನು ಪೂರೈಸಲು ಹೆಣಗಾಡುತ್ತಿದೆ. ಪಂಜಾಬ್, ಹರಿಯಾಣ ಮತ್ತು ಆಂಧ್ರಪ್ರದೇಶದ ಸರಕಾರಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗೇನಿಲ್ಲ! ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವುದಕ್ಕೆ ಏದುಸಿರು ಬಿಡುತ್ತಿರುವ ಈ ಸರಕಾರಗಳು, ಅಭಿವೃದ್ಧಿ ಚಟುವಟಿಕೆಗಳಿಗೆ ಹಣ ನೀಡಲಾಗದೆ ಬಹುತೇಕ ಯೋಜನೆಗಳು ನನೆಗುದಿಗೆ ಬಿದ್ದಿವೆ. ಈ ಆರ್ಥಿಕ ಸಂಕಷ್ಟವನ್ನು ಒಂದಷ್ಟು ಸರಿದೂಗಿಸಲು ಸರಕಾರಗಳು ದರ ಹೆಚ್ಚಳದ ಮೊರೆಹೋಗಿರುವುದು ಮತ್ತೊಂದು ದುರಂತ!

ಸಾರ್ವಜನಿಕ ಪ್ರಯಾಣದರ, ಡೀಸೆಲ್-ಪೆಟ್ರೋಲ್ ಮೇಲಿನ ಸುಂಕ, ಹಾಲು-ನೀರು-ವಿದ್ಯುತ್-ಆಸ್ತಿನೋಂದಣಿ ದರ ಹೀಗೆ ಎಲ್ಲವನ್ನೂ ಹೆಚ್ಚಿಸಿ ಕರ್ನಾಟಕ ಸರಕಾರವೂ ತನ್ನ ಆದಾಯ ಹೆಚ್ಚಿಸಿಕೊಂಡು ಧನ ಸಂಗ್ರಹಿಸಲು ಹೆಣಗಾಡುತ್ತಿದೆ. ತಾವು ಪ್ರತಿನಿಧಿಸುವ ಕ್ಷೇತ್ರಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಮರ್ಪಕವಾಗಿ ಅನುದಾನ ಸಿಗದೇ, ಆಡಳಿತ ಪಕ್ಷದ ಶಾಸಕರೇ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಮಿಕ್ಕಂತೆ, ಹಲವು ಯೋಜನೆಗಳಿಗೆ ಅನುದಾನ ಬಿಡುಗಡೆಯಾಗದೆ ಅರ್ಧಕ್ಕೇ ನಿಂತು/ಕುಂಟುತ್ತಾ ಸಾಗಿ ಗುತ್ತಿಗೆದಾರರು ಚಡಪಡಿಸುತ್ತಿದ್ದಾರೆ.

ಕೂಲಂಕಷವಾಗಿ ನೋಡಿದರೆ, ಆರ್ಥಿಕ ವಿಷಯದ ಕುರಿತು ಕನಿಷ್ಠ ಜ್ಞಾನವಿರುವ ಯಾರೇ ಒಂದಷ್ಟು ಅವಲೋಕಿಸಿದರೂ ಸತ್ಯವು ಕಹಿಯಾಗಿದೆ, ಅಪಥ್ಯವಾಗಿದೆ. ಆದರೆ ಆಳುವ ವರ್ಗದವರು ಅದನ್ನು ಬಿಟ್ಟುಕೊಡುತ್ತಿಲ್ಲ. 'ಹಲವು ವರ್ಷಗಳಿಂದ ದರವನ್ನು ಏರಿಸಿಲ್ಲ, ಈಗ ವಿಧಿಯಿಲ್ಲದೆ ಏರಿಸುತ್ತಾ ಇದ್ದೇವೆ' ಎಂಬ ಅವರ ಹೇಳಿಕೆಗಳು ಬಾಲಿಶ ಮತ್ತು ರಾಜಕೀಯ ಪ್ರೇರಿತ. ಹೆಚ್ಚುವರಿ ತೆರಿಗೆ ಮತ್ತು ಶುಲ್ಕ ಕಟ್ಟುವ ಪ್ರಜೆಗಳೂ ಮತದಾರರೇ; ಆ ವರ್ಗಕ್ಕೆ ಏನೇನೂ ನೀಡದ/ಮಾಡದ ಈ ಅವಜ್ಞೆ ಮತ್ತು ನಿರ್ಲಕ್ಷ್ಯ ಏಕೆ? ಈ ಕುರಿತು ಹೇಳುವವರಾರು, ಕೇಳುವವರಾರು? ರಾಜ್ಯ ಸರಕಾರಗಳು ಕೇಂದ್ರ ಸರಕಾರದ ಎದುರು ನಡೆಸುವ 'ನಮ್ಮ ತೆರಿಗೆ, ನಮ್ಮ ಹಕ್ಕು' ಆಂದೋಲನದ ಮಾದರಿಯಲ್ಲೇ, ತೆರಿಗೆ ಕಟ್ಟುವ ಜನಸಾಮಾನ್ಯರೂ 'ನಮ್ಮ ತೆರಿಗೆಯ ಹಣವನ್ನು ನಮಗೇ ವಿನಿಯೋಗಿಸಿ' ಮಾದರಿಯ ಆಂದೋಲನವನ್ನು ಆರಂಭಿಸುವ ಕಾಲ ಸನ್ನಿಹಿತವಾಗಿದೆಯೇ ಎನಿಸುತ್ತದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಸ್ವಲ್ಪ ಕಾಯಬೇಕು, ಅಷ್ಟೇ!

ಪ್ರತಿಸ್ಪಂದನ
ಶಂಕರನಾರಾಯಣ ಭಟ್

ವಯಸ್ಸೆಂಬುದು ಬರೀ ಸಂಖ್ಯೆಯಷ್ಟೇ, ಬಿಡಿ!' ಎಂಬ ವಿಜಯ್ ದರಡಾ ಅವರ ಅಂಕಣಬರಹ (ಜು.17) ಚಿಂತನ-ಮಂಥನಕ್ಕೆ ಎಡೆಮಾಡಿಕೊಡುವಂಥದ್ದೇ. ಹೌದು, ಯಾರಿಗೋ ವಯಸ್ಸಾಗುತ್ತಿದೆ, ಶರೀರದಲ್ಲಿ ಶಕ್ತಿಯಿಲ್ಲ, ಮನಸ್ಸು ಸ್ಥಿಮಿತದಲ್ಲಿಲ್ಲ ಎಂಬ ಕಾರಣಕ್ಕೆ ಅಂಥವರಿಗೆ ಜವಾಬ್ದಾರಿ ಕೊಡದಿರುವುದನ್ನು ಸಮರ್ಥಿಸಿಕೊಳ್ಳಬಹುದು. ಆದರೆ ಪ್ರಧಾನಿ ನರೇಂದ್ರ ಮೋದಿ ಮತ್ತು ಆರೆಸ್ಸೆಸ್‌ನ ಮೋಹನ್ ಭಾಗ್ವತ್ ಅಂಥವರ ವಿಷಯದಲ್ಲಿ ಇದು ಕೆಲವರು ತಿಳಿದಷ್ಟು ಸರಳ ಮತ್ತು ಸಹಜವಲ್ಲ.

ಬಿಜೆಪಿಯಲ್ಲಿ ಅದು ಹೇಗೋ, ಅದ್ಯಾಕೋ ಈ ಅಲಿಖಿತ ನಿಯಮ ತೂರಿಕೊಂಡುಬಿಟ್ಟಿತು, ಅದು ಜಾರಿಯೂ ಆಗಿದೆ. ಅದನ್ನು 'ಕಾನೂನು' ಅನ್ನಲೂ ಆಗದು, 'ಪದ್ಧತಿ' ಅನ್ನಲೂ ಆಗದು. ರಾಜಕೀಯ ಕ್ಷೇತ್ರದಲ್ಲಿರುವವರೂ ನಿವೃತ್ತಿ ಹೊಂದಬೇಕು, ಹೊಸಬರಿಗೆ ಅವಕಾಶ ಕಲ್ಪಿಸಿ ಕೊಡಬೇಕು. ಇದಕ್ಕೆ ಮಾನದಂಡವೇ ವಯಸ್ಸು. ವಯಸ್ಸಾದಂತೆ ಜನ ಎಂದಿನ ಶಕ್ತಿಯನ್ನು ಕಳೆದುಕೊಳ್ಳುತ್ತ ಬರುವುದರಿಂದ, 75 ವಯಸ್ಸು ಆಗಿಬಿಟ್ಟಿತೆಂದರೆ





'ಏನೂ ಮಾಡಲಾಗದವರು' ಎಂಬ ಸಾಮೂಹಿಕ ತೀರ್ಮಾನಕ್ಕೆ ಬಂದು ಈ ರೀತಿ ಆಗಿದ್ದಿರಬಹುದು. ಯಾವುದೇ ಕ್ಷೇತ್ರವಾಗಲಿ ಕೆಲ ಅಪವಾದಗಳು ಇದ್ದೇ ಇರುತ್ತವೆ. ಎಪ್ಪತ್ತೈದರ ವಯಸ್ಸಿನಲ್ಲೂ ಇಪ್ಪತ್ತೈದರ ಯುವಕರಂತೆ ಕ್ರಿಯಾಶೀಲರಾಗಿರುವವರೂ ಇರಬಹುದು. ಆದರೆ ಅಂಥವರ ಸಂಖ್ಯೆ ಎಷ್ಟಿದ್ದೀತು? ಹೀಗಾಗಿ ಅಂಥ ಯಾರಾದರೂ ಸಿಕ್ಕಾಗ ಸಾಮಾನ್ಯ ಪದ್ಧತಿಯನ್ನು ಗಾಳಿಗೆ ತೂರಲು ಸಾಧ್ಯವೇ?

ಈ ಹಿಂದೆ, ಎಲ್.ಕೆ.ಆಡ್ವಾಣಿ, ಮುರಳಿ ಮನೋಹರ ಜೋಷಿ, ಅಷ್ಟೇಕೆ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನವರೂ ಎಷ್ಟೊಂದು ಚುರುಕಾಗಿದ್ದರು, ಯಾವುದೇ ಜವಾಬ್ದಾರಿಯನ್ನು ಹೊತ್ತುಕೊಳ್ಳುವ ಕ್ಷಮತೆ ಉಳ್ಳವರಾಗಿದ್ದರು. ಆದರೂ ಅವರನ್ನೆಲ್ಲ ಬದಿಗೆ ಸರಿಸಲು ಕಾರಣವಾಗಿದ್ದು 'ಅವರಿಗೆ ವಯಸ್ಸಾಗಿದೆ' ಎಂಬ ಅಂಶ! ಹೌದು, ಲೇಖಕರು ಹೇಳಿದಂತೆ ವಯಸ್ಸು ಎಪ್ಪತ್ತೈದಾಗುತ್ತಿದ್ದರೂ ನರೇಂದ್ರ ಮೋದಿ, ಮೋಹನ್ ಭಾಗ್ವತ್ ಅವರು ಬಸವಳಿದಿಲ್ಲ, ಅವರ ಮುಖ ಸ್ವಲ್ಪವೂ ಬಾಡಿಲ್ಲ. ದೇಶಕ್ಕಾಗಿ ಇನ್ನೂ ಏನೇನೋ ಮಾಡಬೇಕೆಂಬ ತುಡಿತ ಅವರಲ್ಲಿ ಇನ್ನೂ ಜೀವಂತವಾಗಿದೆ. ಇದು ಸಾಮಾನ್ಯರಿಗೂ ತಿಳಿದ ವಿಷಯವೇ. ಆದರೇನು, ತನ್ನನ್ನು 'ಶಿಸ್ತಿನ ಪಕ್ಷ' ಎಂದು ಕರೆದುಕೊಳ್ಳುವ ಬಿಜೆಪಿಯಂಥ ರಾಷ್ಟ್ರೀಯ ಪಕ್ಷವು ತಾನು ಮಾಡಿದ ಕಾನೂನನ್ನು ತಾನೇ ಮುರಿದರೆ ಜನಾಭಿಪ್ರಾಯ ಹೇಗಿದ್ದೀತು? ಇದು ಮುಖ್ಯವಾಗಿ ಯೋಚಿಸಬೇಕಾದ ಸಂಗತಿ. ಏಕೆಂದರೆ, ತಮಗೆ ಬೇಡವಾದವರನ್ನು ದೂರವಿಡಲು ಏನೇನೋ ಕುತಂತ್ರ ನಡೆದಿತ್ತು ಎಂಬ ಅಪವಾದಕ್ಕೆ ಕೆಲವರು ಗುರಿಯಾಗಲೇಬೇಕಾಗುತ್ತದೆ. ಇದು ಪ್ರಧಾನಿಯಾಗಲಿ, ಆರೆಸ್ಸೆಸ್ ಮುಖ್ಯಸ್ಥರಾಗಲಿ ಅಥವಾ ಆಯಕಟ್ಟಿನ ಹುದ್ದೆಯನ್ನು ಹೊಂದಿರುವ ಇನ್ನಾರೇ ಆಗಿರಲಿ ಅವರಿಗೆ ಅನ್ವಯವಾಗುವಂತಿರಬೇಕು. ತಮಗೆ ಬೇಕಾದ ಹಾಗೆ ಬದಲು ಮಾಡುವ ಪದ್ಧತಿಯು ನಗೆಪಾಟಲಿಗೆ ದಾರಿಯಾದೀತು.

ಇಲ್ಲಿ ಇನ್ನೊಂದು ವಿಚಾರವನ್ನು ಹೇಳಬೇಕು. ನರೇಂದ್ರ ಮೋದಿಯವರ ಕಾರ್ಯವೈಖರಿಯ ಬಗ್ಗೆ ಯಾರೂ ಪ್ರಶ್ನಿಸುವಂತಿಲ್ಲ. ಇಷ್ಟೊಂದು ದಕ್ಷತೆಯಿಂದ ದೇಶವನ್ನು ಮುನ್ನಡೆಸಿಕೊಂಡು ಹೋಗಬಲ್ಲ ಇನ್ನೊಬ್ಬ ನಾಯಕ ಇರಬಹುದೇ? ಎಂಬ ಸಂಶಯ ಬರುವುದೂ ಸಹಜವೇ. ಆದರೆ ಕಾಲಚಕ್ರ ಉರುಳಿದಂತೆ, ಅವಕ್ಕೆಲ್ಲ ಸೂಕ್ತ ಪರಿಹಾರ ಬಂದೊದಗಿದ್ದನ್ನು ನಾವೇ ಕಂಡಿಲ್ಲವೇ? ಇಂದಿರಾ ಗಾಂಧಿ ನಂತರ ಯಾರು? ಗೋಳ್ವಲ್ಕರ್ ನಂತರ ಯಾರು? ವಾಜಪೇಯಿ ನಂತರ ಯಾರು? ಹೀಗೆ ಹಲವು ಬಾರಿ ಪ್ರಶ್ನೆಗಳು ಎದುರಾದಾಗಲೂ ಪರಿಹಾರಗಳು ಒದಗಿದ್ದಿದೆ. ಅಷ್ಟೇಕೆ, ಒಂದು ಕುಟುಂಬದ ಯಜಮಾನನಿಗೆ ವಯಸ್ಸಾದಾಗಲೂ ಇಂಥದೇ ಪ್ರಶ್ನೆ ಆ ಕುಟುಂಬದಲ್ಲಿ ಏಳುತ್ತದೆ. ಇವಕ್ಕೆಲ್ಲ ಪರಿಹಾರ ಸಿಗುತ್ತಿದೆಯಲ್ಲಾ...

ಇದು ಜಗದ ಅಥವಾ ಪ್ರಕೃತಿಯ ನಿಯಮ. ಈಗಲೂ ಹಾಗೆಯೇ, ಇನ್ನೊಬ್ಬ ವ್ಯಕ್ತಿ ಎಲ್ಲೋ, ಯಾವುದೋ ರೂಪದಲ್ಲಿ ತಯಾರಾಗಿಯೇ ಇರುತ್ತಾನೆ. ಮೋದಿಯವರ ನಂತರ ಯಾರು ಎಂಬ ಪ್ರಶ್ನೆಗೆ ಅವನು ಉತ್ತರವಾಗಿ ನಿಲ್ಲುತ್ತಾನೆ. ಸ್ವಲ್ಪ ಕುತೂಹಲ, ಊಹೆ, ಚರ್ಚೆ, ಸಂಶಯ, ಹೆದರಿಕೆ ಇದ್ದೇ ಇರುತ್ತವೆ. ಒಂದು ದಿನ ಅವೆಲ್ಲ ಅರಿಯದಂತೆ ಮಾಯವಾಗಿಬಿಡುತ್ತವೆ! ಇಲ್ಲಿ ಅವಶ್ಯವಿರುವುದು- ಸ್ವಲ್ಪ ಕಾಯುವಿಕೆ, ತಾಳ್ಮೆ, ಅಷ್ಟೇ!

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 75

ಸಮಾಚಾರ ಸಣ್ಣದಲ್ಲ

ಬಿಹಾರ ಮಳೆ, ಸಿಡಿಲಿಗೆ 33 ಮಂದಿ ಸಾವು

ಪಾಟ್ನಾ: ಈ ವಾರ ಬಿಹಾರದಲ್ಲಿ ಭಾರಿ ಮಳೆಯಾಗುತ್ತಿದ್ದು, ಸಿಡಿಲು ಬಡಿದು ಕನಿಷ್ಠ 33 ಜನ ಸಾವನ್ನಪ್ಪಿದ್ದಾರೆ ಮತ್ತು ಹಲವಾರು ಮಂದಿ ಗಾಯಗೊಂಡಿದ್ದಾರೆ ಎಂದು ಸರಕಾರದ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ಬಿಹಾರದಲ್ಲಿ ಬುಧವಾರ ಮತ್ತು ಗುರುವಾರದ ನಡುವೆ ಬಿರುಗಾಳಿ ಸಹಿತ ಭೀಕರ ಮಳೆಯಲ್ಲಿ ಈ ಸಾವುಗಳು ಸಂಭವಿಸಿವೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಇಲಾಖೆಯ ಪ್ರಕಟಣೆ ತಿಳಿಸಿದೆ. ಸಿಡಿಲು ಬಡಿದು ಮೃತಪಟ್ಟವರಲ್ಲಿ ಹೆಚ್ಚಿನವರು ರೈತರು ಮತ್ತು ಕಾರ್ಮಿಕರಾಗಿದ್ದು, ರಾಜ್ಯದ ಕೆಲವು ಭಾಗಗಳಲ್ಲಿ ಭಾರಿ ಮಳೆ ಮತ್ತು ಮಿಂಚಿನ ಮುನ್ಸೂಚನೆ ನೀಡಲಾಗಿದೆ. ಈ ಕುರಿತು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಜಾಗೃತಿ ಮೂಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ ಎಂದು ಬಿಹಾರ ರಾಜ್ಯ ವಿಪತ್ತು ನಿರ್ವಹಣಾ ಸಚಿವ ವಿಜಯ್ ಕುಮಾರ್ ಮಂಡಲ್ ತಿಳಿಸಿದ್ದಾರೆ.

ನಿಮಿಷಾ ರಕ್ಷಣೆ ಯತ್ನ: ಸುಪ್ರೀಂಗೆ ಕೇಂದ್ರ ಮಾಹಿತಿ

ದೆಹಲಿ: ಯೆಮೆನ್‌ನಲ್ಲಿ ಸ್ಥಳೀಯ ಪ್ರಜೆಯನ್ನು ಕೊಲೆ ಮಾಡಿದ ಆರೋಪದಲ್ಲಿ ಶಿಕ್ಷೆಗೆ ಗುರಿಯಾಗಿರುವ ಕೇರಳದ ನರ್ಸ್ ನಿಮಿಷಾ ಪ್ರಿಯಾ ಅವರ ಮರಣದಂಡನೆಯನ್ನು ಮುಂದೂಡಲಾಗಿದೆ ಎಂದು ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಲಾಗಿದೆ. ಯೆಮನ್‌ನಲ್ಲಿ ಮರಣದಂಡನೆ ಶಿಕ್ಷೆಗೆ ಗುರಿಯಾಗಿರುವ ಕೇರಳ ಮೂಲದ 38 ವರ್ಷದ ನಿಮಿಷಾಪ್ರಿಯಾ ಅವರನ್ನು ರಕ್ಷಿಸಲು ಕೇಂದ್ರ ಸರಕಾರವು ರಾಜತಾಂತ್ರಿಕ ಮಾರ್ಗಗಳನ್ನು ಬಳಸುವಂತೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಲಾದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿತು. ಕೇಂದ್ರದ ಪರವಾಗಿ ಹಾಜರಾದ ಅಟಾರ್ನಿ ಜನರಲ್ ಆರ್ ವೆಂಕಟರಮಣಿ, ನಿಮಿಷ ಅವರನ್ನು ಕರೆತರಲು 'ಎಲ್ಲ ರೀತಿಯ ಪ್ರಯತ್ನಗಳು ನಡೆಯುತ್ತಿವೆ' ಎಂದು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠಕ್ಕೆ ತಿಳಿಸಿದರು.

ಗೋಲ್ಡನ್ ಟೆಂಪಲ್‌ಗೆ ಬಾಂಬ್ ಬೆದರಿಕೆ

ಅಮೃತಸರ: ಅಮೃತಸರದ ಗೋಲ್ಡನ್ ಟೆಂಪಲ್‌ಗೆ ಬಾಂಬ್ ಬೆದರಿಕೆ ಇ-ಮೇಲ್ ಕಳುಹಿಸಿದ ಆರೋಪದಲ್ಲಿ ಪಂಜಾಬ್ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಶಿರೋಮಣಿ ಗುರುದ್ವಾರ ಪರಬಂಧಕ ಸಮಿತಿಗೆ ಈ ಇಬ್ಬರು ಬೆದರಿಕೆ ಇಮೇಲ್‌ಗಳನ್ನು ಕಳುಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಜುಲೈ 14ರಿಂದ ಐದು ಬಾಂಬ್ ಬೆದರಿಕೆ ಇಮೇಲ್‌ಗಳು ಬಂದಿವೆ ಎಂದು ಮುಖ್ಯಸ್ಥ ಹರ್ಜಿಂದರ್ ಸಿಂಗ್ ಧಾಮಿ ತಿಳಿಸಿದ್ದಾರೆ. ಶುಕ್ರವಾರ ಮತ್ತೊಮ್ಮೆ ಗೋಲ್ಡನ್ ಟೆಂಪಲ್ ಸಂಕೀರ್ಣಕ್ಕೆ ಬೆದರಿಕೆ ಸಂದೇಶ ಬಂದಿದ್ದರಿಂದ, ಭದ್ರತಾ ತಪಾಸಣೆಗಾಗಿ ಶ್ವಾನದಳ ವನ್ನು ದೇವಾಲಯದ ಆವರಣದಲ್ಲಿ ನಿಯೋಜಿಸಲಾಯಿತು.

ಬಿಹಾರದಲ್ಲಿ ಮೋದಿ ಟೀಕಾ ಪ್ರಹಾರ | ಭರಪೂರ ಯೋಜನೆಗಳ ಘೋಷಣೆ

ಬಡವರ ಭೂಮಿ ಕಸಿದ ಆರ್‌ಜೆಡಿ

ಮೋತಿಹಾರಿ (ಬಿಹಾರ): ಬಡವರಿಗೆ ಉದ್ಯೋಗ ನೀಡುವ ಮೊದಲೇ ಬಡವರಿಂದ ಭೂಮಿಯನ್ನು ಕಸಿದುಕೊಂಡ ಆರ್‌ಜೆಡಿ, ಎಂದಿಗೂ ಯುವ ಜನತೆಗೆ ಉದ್ಯೋಗ ನೀಡುವ ಬಗ್ಗೆ ತನ್ನ ಅಧಿಕಾರಾವಧಿಯಲ್ಲಿ ಯೋಚಿಸಲೇ ಇಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದಾರೆ.

ಇಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡುತ್ತಾ, ಆರ್‌ಜೆಡಿ ಮತ್ತು ಕಾಂಗ್ರೆಸ್ ಪಕ್ಷಗಳೆರಡೂ ಬಡವರು ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಹೆಸರಿನಲ್ಲಿ ರಾಜಕೀಯ ಮಾಡಿದರು. ಎರಡೂ ರಾಜಕೀಯ ಪಕ್ಷಗಳು ರಾಜ್ಯವನ್ನು ನಿರ್ಲಕ್ಷ್ಯ ಮತ್ತು ಅಭಿವೃದ್ಧಿ ಕಾಣದಂತೆ ಮಾಡಿದರು ಎಂದರು. ಇದೇ ವೇಳೆ ಹೊಸ ಬಿಹಾರವನ್ನು ನಿರ್ಮಾಣ ಮಡೋಣ, ಮತ್ತೊಮ್ಮೆ ಎನ್‌ಡಿಎಯನ್ನು ಅಧಿಕಾರಕ್ಕೆ ತರೋಣ ಎನ್ನುವ ಘೋಷಣೆಯೊಂದಿಗೆ ವಿಧಾನಸಭಾ ಚುನಾವಣೆಗೆ ಸಜ್ಜಾಗಿರುವ ಬಿಹಾರದಲ್ಲಿ ಇದೇ ವೇಳೆ, ತಮ್ಮ ಹೊಸ ಜನಪ್ರಿಯ ಘೋಷಣೆಯ ಮೂಲಕ ಜನರ ಸೆಳೆದರು. ಪಹಲ್ಗಾಮ್ ದಾಳಿಗೆ ಪ್ರತ್ಯುತ್ತರ ನೀಡಿರುವ ಆಪರೇಷನ್ ಸಿಂದೂರ್‌ನ ಸಂಕಲ್ಪವನ್ನು ಬಿಹಾರದ ನೆಲದಿಂದ ತೆಗೆದುಕೊಂಡೆ, ಅದರ ಯಶಸ್ಸಿಗೆ ಜಗತ್ತು ಸಾಕ್ಷಿಯಾಗಿದೆ. ರಾಜ್ಯದಲ್ಲಿ ಆರ್‌ಜೆಡಿ-ಕಾಂಗ್ರೆಸ್ ಅಧಿಕಾರದಲ್ಲಿರುವಾಗ ಯಾವುದೇ ಅಭಿವೃದ್ಧಿ ನಡೆದಿಲ್ಲ. ಅವರು ಎಂದಿಗೂ ಬಡವರ ಸ್ಥಿತಿಯನ್ನು ಉತ್ತಮಗೊಳಿಸಬೇಕು ಎಂದು ಬಯಸಲಿಲ್ಲ ಎಂದರು. ರಾಜ್ಯದ ಯುವಜನರಿಗೆ ಅವಕಾಶದ ಭರವಸೆ ನೀಡಿದ

ಪ್ರಧಾನಿ ಮೋದಿ, ದೇಶಾದ್ಯಂತ ಉದ್ಯೋಗ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸಲು ಕೇಂದ್ರವು 1 ಲಕ್ಷ ಕೋಟಿ ರು.ಗಳನ್ನು ಹೂಡಿಕೆ ಮಾಡಲಿದೆ, ಭಾರತದ ಅಭಿವೃದ್ಧಿಗೆ ವಿಕಸಿತ್‌ಗೆ ಬಿಹಾರ ಮುಖ್ಯ ರಾಜ್ಯವಾಗಿದೆ. ಒಟ್ಟಾರೆ ಅಭಿವೃದ್ಧಿಯ ಬಗ್ಗೆ ಎನ್‌ಡಿಎ ಕಾಳಜಿಯನ್ನು ವಹಿಸಿದೆ. ದೇಶದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಚಂಪಾರಣಗೆ ಮಹಾತ್ಮ ಗಾಂಧಿಯವರು ಚಳವಳಿ ಮೂಲಕ ಹೊಸ ದಿಕ್ಕನ್ನು ನೀಡಿದರು, ನಾವು ಮುಂಬೈನಂತೆ ಮೋತಿಹಾರಿಯನ್ನು ಅಭಿವೃದ್ಧಿಪಡಿಸಬೇಕು ಎಂದರು.

ಕಳೆದ 45 ದಿನಗಳಲ್ಲಿ ಕೇಂದ್ರ ಸರಕಾರವು ಬಿಹಾರದ 24,000 ಸ್ವಸಹಾಯ ಗುಂಪುಗಳಿಗೆ 1,000 ಕೋಟಿ ರು.ಗಳನ್ನು ಬಿಡುಗಡೆ ಮಾಡಿದೆ, ದೇಶದಲ್ಲಿರುವ ಒಟ್ಟು 1.5 ಕೋಟಿ ಲಕ್‌ಪತಿ ದೀದಿಗಳಲ್ಲಿ 20 ಲಕ್ಷ ಜನರು ಬಿಹಾರ ರಾಜ್ಯದವರು ಎಂದು ಮೋದಿ ಹೇಳಿದರು.

ಮೋದಿ ಸಲಹೆಯಂತೆ ಉಚಿತ ವಿದ್ಯುತ್ ಘೋಷಣೆ

ಪ್ರಧಾನಿ ನರೇಂದ್ರ ಮೋದಿ ಸಲಹೆಯಂತೆ ರಾಜ್ಯದಲ್ಲಿ 125 ಯೂನಿಟ್ ಉಚಿತ ವಿದ್ಯುತ್ ನೀಡುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಬಿಹಾರ ಮುಖ್ಯಮಂತ್ರಿ

ನಿತೀಶ್ ಕುಮಾರ್ ತಿಳಿಸಿದ್ದಾರೆ. ಪ್ರಧಾನಿ ಮೋದಿಯೊಂದಿಗೆ ವೇದಿಕೆ ಹಂಚಿಕೊಂಡಿದ್ದ ಸಂದರ್ಭದಲ್ಲೇ ತಮ್ಮ ಭಾಷಣದಲ್ಲಿ ಅವರು ಈ ವಿಚಾರವನ್ನು ತಿಳಿಸಿದರು. ಪ್ರಧಾನಿ ಆಗಮನದ ಹಿನ್ನೆಲೆಯಲ್ಲಿ ಸಂಪುಟದಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಿಲ್ಲ. ಪ್ರಧಾನಿ ಹೊರಡುತ್ತಿದ್ದಂತೆ, ಪಾಟ್ನಾಗೆ ಮರಳಿ ಅಗತ್ಯ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಮೋದಿ ಅವರ ವರ್ಚಸ್ಸಿನಿಂದಾಗಿ ಮುಂದಿನ ಬಿಹಾರ ಚುನಾವಣೆಯಲ್ಲಿ ಗೆಲುವು ಸಾಧಿಸುವ ವಿಶ್ವಾಸ ವ್ಯಕ್ತಪಡಿಸಿ ಮಾತನಾಡಿದ ಅವರು, ನಾವು ಮೋದಿಯನ್ನು ತುಂಬಾ ಗೌರವಿಸುವ ಜೊತೆಗೆ ಅವರ ಸಲಹೆಯನ್ನು ಗಮನದಲ್ಲಿರಿಸಿಕೊಂಡು ಕೆಲಸ ಮಾಡುತ್ತಿದ್ದೇವೆ ಎಂದರು.

ಅಭಿವೃದ್ಧಿ ಯೋಜನೆಗಳಿಗೆ ಚಾಲನೆ

ಪ್ರಧಾನಿ ಮೋದಿ ಅವರು ಶುಕ್ರವಾರ ಬಿಹಾರದ ಪೂರ್ವ ಚಂಪಾರಣ್ ಜಿಲ್ಲೆಯ ಮೋತಿಹಾರಿನಲ್ಲಿ 7,200 ಕೋಟಿ ರು.ಯ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು. ಸ್ಟಾರ್ಟ್‌ಅಪ್‌ಗಳನ್ನು ಉತ್ತೇಜಿಸಲು ದರ್ಭಾಂಗ್‌ನಲ್ಲಿ ಹೊಸ ಸಾಫ್ಟ್‌ವೇರ್ ತಂತ್ರಜ್ಞಾನ ಪಾರ್ಕ್ಸ್ ಆಫ್ ಇಂಡಿಯಾ (ಎಸ್‌ಟಿಪಿಐ) ಮತ್ತು ಪಾಟ್ನಾದಲ್ಲಿ ಇನ್‌ಕ್ಯುಬೇಶನ್ ಕೇಂದ್ರವನ್ನು ಉದ್ಘಾಟಿಸಿದರು. ರೈಲ್ವೆ ಜಾಲವನ್ನು ವಿಸ್ತರಿಸುವ ಉದ್ದೇಶದೊಂದಿಗೆ, ನಾಲ್ಕು ಹೊಸ ಅಮೃತ್ ಭಾರತ್ ರೈಲು ಸೇರಿದಂತೆ ಹಲವು ರೈಲು ಯೋಜನೆಗಳನ್ನು ದೇಶಕ್ಕೆ ಸಮರ್ಪಿಸಿದರು. ರಸ್ತೆ ಸೌಕರ್ಯದ ಅಭಿವೃದ್ಧಿಗಾಗಿ ಪಾಟ್ನಾ-ಬಕ್ಸಾರ್ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ-319ರ ಅರಾ ಬೈಪಾಸ್‌ನ ನಾಲ್ಕು ಪಥಗಳ ಕಾಮಗಾರಿಗೆ ಮೋದಿ ಶಂಕುಸ್ಥಾಪನೆ ನೆರವೇರಿಸಿದರು.

ದೀನದಯಾಳ್ ಅಂತ್ಯೋದಯ ಯೋಜನೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಅಡಿಯಲ್ಲಿ ಬಿಹಾರದ ಸುಮಾರು 61,500 ಸ್ವ-ಸಹಾಯ ಗುಂಪುಗಳಿಗೆ 400 ಕೋಟಿ ರು. ಗಳನ್ನು ಬಿಡುಗಡೆ ಮಾಡಿದರು. ಮಹಿಳೆಯರ ಅಭಿವೃದ್ಧಿ ಗುರಿಯಾಗಿಟ್ಟುಕೊಂಡು ಸ್ವ-ಸಹಾಯ ಗುಂಪುಗಳಿಗೆ 10 ಕೋಟಿ ರು.

ಬಿಡುಗಡೆಗೊಳಿಸಿದರು. ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಗ್ರಾಮೀಣ ಪ್ರದೇಶದ 40,000 ಫಲಾನುಭವಿಗಳಿಗೆ 160 ಕೋಟಿ ರು.ಗಳಿಗೂ ಹೆಚ್ಚು ಹಣವನ್ನು ಬಿಡುಗಡೆಗೊಳಿಸಿದರಲ್ಲದೆ, 12,000 ಮನೆ ಮಾಲೀಕರ ಗೃಹಪ್ರವೇಶದ ಅಂಗವಾಗಿ ಕೆಲವು ಫಲಾನುಭವಿಗಳಿಗೆ ಕೀಲಿಗಳನ್ನು ಹಸ್ತಾಂತರಿಸಿದರು.

ಅಮೆರಿಕ ನಿರ್ಧಾರಕ್ಕೆ ಭಾರತ ಸ್ವಾಗತ

ಟಿಆರ್‌ಎಫ್‌ಗೆ ಉಗ್ರ ಪಟ್ಟ

ದೆಹಲಿ: ಪಾಕಿಸ್ತಾನ ಮೂಲದ ಉಗ್ರ ಸಂಘಟನೆ ಲಷ್ಕರ್-ಎ-ತೊಯ್ಬಾದ ಅಂಗ ಸಂಘಟನೆ ದಿ ರೆಸಿಸ್ಟೆಂಟ್ಸ್ ಫ್ರಂಟ್(ಟಿಆರ್‌ಎಫ್) ಅನ್ನು ಅಮೆರಿಕ ಜಾಗತಿಕ ಉಗ್ರ ಸಂಘಟನೆ ಎಂದು ಘೋಷಣೆ ಮಾಡಿದ್ದು,

ವೈಟ್ ಹೌಸ್ ನಿರ್ಧಾರವನ್ನು ಭಾರತ ಸರಕಾರ ಸ್ವಾಗತಿಸಿದೆ. ಈ ಕುರಿತು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಮಾಹಿತಿ ನೀಡಿದ್ದಾರೆ.

ಏಪ್ರಿಲ್ 22ರಂದು ಕಾಶ್ಮೀರದ ಪಹಲ್ಗಾಮ್‌ನ ಬೈಸರನ್ ಕಣಿವೆಯಲ್ಲಿ ಪಾಕಿಸ್ತಾನ ಬೆಂಬಲಿತ ಭಯೋತ್ಪಾದಕರು 26 ಪ್ರವಾಸಿಗರನ್ನು ಗುಂಡಿಕ್ಕಿ ಕೊಂದಿದ್ದರು. ಈ ಭಯೋತ್ಪಾದಕ ದಾಳಿಯ ಜವಾಬ್ದಾರಿಯನ್ನು ಟಿಆರ್‌ಎಫ್ ಸಂಘಟನೆ ಹೊತ್ತುಕೊಂಡಿತ್ತು. ಟಿಆರ್‌ಎಫ್ ಅನ್ನು ವಿದೇಶಿ ಭಯೋತ್ಪಾದನಾ ಸಂಘಟನೆ ಎಂದು ಅಮೆರಿಕ ಹೆಸರಿಸುವುದರಿಂದ ಅದರ ಸದಸ್ಯರ ಮೇಲೆ ಕಠಿಣ ಆರ್ಥಿಕ ಮತ್ತು ಪ್ರಯಾಣ ನಿರ್ಬಂಧಗಳನ್ನು ವಿಧಿಸುತ್ತದೆ. ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಅಮೆರಿಕ ಭಾರತದ ಜೊತೆ ನಿಲ್ಲುತ್ತದೆ ಮತ್ತು ಭಾರತಕ್ಕೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುತ್ತದೆ ಎಂದು ಅವರು ಹೇಳಿದರು. ಈ ಕ್ರಮವು ಅಮೆರಿಕದ ರಾಷ್ಟ್ರೀಯ ಭದ್ರತೆ, ಭಯೋತ್ಪಾದನೆ ವಿರುದ್ಧದ ಹೋರಾಟ ಮತ್ತು ಭಾರತದೊಂದಿಗಿನ ಸಹಕಾರಕ್ಕೆ ಪುರಾವೆಯಾಗಿದೆ ಎಂದೂ ಅವರು ಹೇಳಿದರು.

ಭಾರತ ಸ್ವಾಗತ: ದಿ ರೆಸಿಸ್ಟೆಂಟ್ಸ್ ಫ್ರಂಟ್ ಅನ್ನು ವಿದೇಶಿ ಭಯೋತ್ಪಾದನಾ ಸಂಘಟನೆ ಎಂದು ಅಮೆರಿಕ ಘೋಷಣೆ ಮಾಡಿದ ಕ್ರಮವನ್ನು ಭಾರತ ಸ್ವಾಗತಿಸಿದ್ದು, ಭಾರತದ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರು ಅಮೆರಿಕವನ್ನು ಶ್ಲಾಘಿಸಿದ್ದಾರೆ. ಈ ಕುರಿತು ಎಕ್ಸ್ ನಲ್ಲಿ ಟ್ವೀಟ್ ಮಾಡಿರುವ ಎಸ್ ಜೈಶಂಕರ್, 'ಭಾರತ-ಅಮೆರಿಕ ಭಯೋತ್ಪಾದನಾ ನಿಗ್ರಹ ಸಹಕಾರದ ಬಲವಾದ ದೃಢೀಕರಣ ಎಂದಿದ್ದಾರೆ.

ರಾಜತಾಂತ್ರಿಕ ಗೆಲುವು

ಪಹಲ್ಗಾಮ್ ಉಗ್ರ ದಾಳಿಯಲ್ಲಿ ಪಾಕಿಸ್ತಾನದ ಕೈವಾಡವಿದೆ ಎಂದು ಭಾರತ ಸರಕಾರ ಮೊದಲಿನಿಂದಲೂ ಆರೋಪ ಮಾಡುತ್ತಲೇ ಬಂದಿತ್ತು. ಇದೀಗ ಸ್ವತಃ ಅಮೆರಿಕ ಸರಕಾರವು ಟಿಆರ್ ಎಫ್ ಅನ್ನು ಜಾಗತಿಕ ಉಗ್ರ ಸಂಘಟನೆ ಎಂದು ಘೋಷಿಸಿರುವುದು ಭಾರತಕ್ಕೆ ಸಿಕ್ಕ ಅತಿದೊಡ್ಡ ರಾಜತಾಂತ್ರಿಕ ಗೆಲುವಾಗಿದೆ. ಟಿಆರ್‌ಎಫ್ ದೊರೆಯುತ್ತಿದ್ದ ಹಣಕಾಸು ನೆರವಿಗೂ ಈ ಮೂಲಕ ನಿಷೇಧ ಹೇರಿದಂತಾಗಿದೆ.

ಇ.ಡಿ.ಯಿಂದ ಚೈತನ್ಯ ಭಘೇಲ್ ಸೆರೆ

ರಾಯ್‌ಪುರ: ಅಬಕಾರಿ ಹಗರಣ ಸಂಬಂಧಿತ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಛತ್ತೀಸಗಢದ ಮಾಜಿ ಮುಖ್ಯಮಂತ್ರಿ ಭೂಪೇಶ್ ಭಘೇಲ್ ಅವರ ಪುತ್ರ

ಚೈತನ್ಯ ಭಘೇಲ್ ಅವರನ್ನು ಜಾರಿ ನಿರ್ದೇಶನಾಲಯ (ಇಡಿ)ದ ಅಧಿಕಾರಿಗಳು ಶುಕ್ರವಾರ ಬಂಧನಕ್ಕೊಳಪಡಿಸಿದ್ದಾರೆ.

ಇಡಿ ಅಧಿಕಾರಿಗಳು ಶುಕ್ರವಾರ ಬೆಳಗಿನ ಜಾವ ರಾಯ್ಪುರದ ಭಿಲಾಯಿ ಪಟ್ಟಣದಲ್ಲಿರುವ ಭೂಪೇಶ್ ಭಘೇಲ್ ಅವರ ನಿವಾಸದ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿತು.

ಪ್ರಕರಣ ಸಂಬಂಧ ದಾಖಲೆಗಳು ಲಭ್ಯವಾದ ಬೆನ್ನಲ್ಲೇ ಜಾರಿ ನಿರ್ದೇಶಾನಲಯದ ಅಧಿಕಾರಿಗಳು, ಜಾರಿ ನಿರ್ದೇಶನಾಲಯ (ಇ.ಡಿ) ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ ಅಡಿಯಲ್ಲಿ ದಾಳಿ ನಡೆಸಿ, ಪರಿಶೀಲನೆ ನಡೆಸಿದೆ. ಪರಿಶೀಲನೆ ಬಳಿಕ ಇ.ಡಿ ಅಧಿಕಾರಿಗಳು ಚೈತನ್ಯ ಭಘೇಲ್ ಅವರನ್ನು ಬಂಧನಕ್ಕೊಳಪಡಿಸಿದ್ದಾರೆ.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಅಜರ್ ವಾಸ್ತವ್ಯ ಶಂಕೆ

ಇಸ್ಲಾಮಾಬಾದ್: ಭಾರತದ ಭಯೋತ್ಪಾದಕ, ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮಸೂದ್ ಅಜರ್, ಪಾಕ್ ಆಕ್ರಮಿತ ಕಾಶ್ಮೀರದ ಗಿಲ್ಗಿಟ್-ಬಾಲ್ಟಿಸ್ತಾನ್ ಪ್ರದೇಶದ ಆತನ ಬಹಾವಲ್ಪುರ್ ಭದ್ರಕೋಟೆಯಿಂದ 1,000 ಕಿ.ಮೀ ದೂರದಲ್ಲಿ ಕಾಣಿಸಿಕೊಂಡಿದ್ದಾನೆ ಎಂದು ವರದಿಯಾಗಿದೆ. ಅಜರ್ ಇತ್ತೀಚೆಗೆ ಸ್ಕಾರ್ದುವಿನಲ್ಲಿ, ವಿಶೇಷವಾಗಿ ಸದ್ಪರಾ ರಸ್ತೆ ಪ್ರದೇಶದ ಸುತ್ತಮುತ್ತ ಕಾಣಿಸಿಕೊಂಡಿದ್ದಾನೆ. ಈ ಪ್ರದೇಶವು ಕನಿಷ್ಠ ಎರಡು ಮಸೀದಿಗಳು, ಅಂಗಸಂಸ್ಥೆ ಮದರಸಾಗಳು ಮತ್ತು ಹಲವಾರು ಖಾಸಗಿ ಮತ್ತು ಸರಕಾರಿ ಅತಿಥಿಗೃಹಗಳನ್ನು ಹೊಂದಿದೆ. ಇತ್ತೀಚೆಗೆ ಪಾಕಿಸ್ತಾನದ ಮಾಜಿ ವಿದೇಶಾಂಗ ಸಚಿವ ಅಜರ್ ಹಾಗೂ ಇತರರ ಉಗ್ರರನ್ನು ಭಾರತಕ್ಕೆ ಒಪ್ಪಿಸಲು ಪಾಕಿಸ್ತಾನದಿಂದ

ಯಾವುದೇ ತಕರಾರು ಇಲ್ಲ ಎಂದು ಹೇಳಿದ್ದರು. ಅಲ್ ಜಜೀರಾಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಭುಟ್ಟೊ ಅಫ್ಘಾನ್ ಜಿಹಾದಿಯಲ್ಲಿ ಅಜಾರ್ ತೊಡಗಿಸಿಕೊಂಡಿರುವುದನ್ನು ಗಮನಿಸಿದರೆ, ಆತ ಅಫ್ಘಾನಿಸ್ತಾನದಲ್ಲಿರಬಹುದು ಎಂಬುದು ಪಾಕಿಸ್ತಾನದ ನಂಬಿಕೆಯಾಗಿದೆ ಎಂದಿದ್ದರು. ಅಜಾರ್ ಪಾಕಿಸ್ತಾನದ ನೆಲದಲ್ಲಿದ್ದಾನೆ ಎಂಬುದಕ್ಕೆ ಭಾರತ ಸರಕಾರ ಸೂಕ್ತ ಮಾಹಿತಿಯನ್ನು ನಮ್ಮೊಂದಿಗೆ ಹಂಚಿಕೊಂಡರೆ ಆತನನ್ನು ಬಂಧಿಸಲು ನಮಗೆ ಹೆಚ್ಚಿನ ಸಂತೋಷವಾಗುತ್ತದೆ ಎಂದು ಹೇಳಿದ್ದರು.

ಭಾರತಕ್ಕೆ ಬೇಕಾಗಿರುವ ಉಗ್ರರಲ್ಲಿ ಒಬ್ಬನಾದ ಅಜರ್, 2001ರ ಸಂಸತ್ ದಾಳಿ, 26/11 ಮುಂಬೈ ದಾಳಿ, 2016ರ ಪಠಾಣ್‌ಕೋಟ್ ವಾಯುನೆಲೆ ದಾಳಿ ಮತ್ತು 2019ರ ಪುಲ್ವಾಮಾ ಆತ್ಮಾಹುತಿ ಬಾಂಬ್ ದಾಳಿ ಸೇರಿದಂತೆ ಭಾರತದಲ್ಲಿ ನಡೆದ ಹಲವಾರು ಪ್ರಮುಖ ದಾಳಿಗಳೊಂದಿಗೆ ಸಂಬಂಧ ಹೊಂದಿದ್ದಾನೆ. 2019ರಲ್ಲಿ ಆತನನ್ನು ಜಾಗತಿಕ ಉಗ್ರನೆಂದು ವಿಶ್ವಸಂಸ್ಥೆ ಘೋಷಿಸಿತ್ತು. ಕಂದಹಾರ್ ವಿಮಾನ ಅಪಹರಣದ ಭಾಗವಾಗಿ 1999ರಲ್ಲಿ ಆತನನ್ನು ಭಾರತದ ಬಂಧನದಿಂದ ಬಿಡುಗಡೆ ಮಾಡಲಾಗಿತ್ತು.

ಅಕ್ರಮ ನಗದು ಪ್ರಕರಣದ ತನಿಖಾ ವರದಿ ಪ್ರಶ್ನಿಸಿ ಅರ್ಜಿ

ಸುಪ್ರೀಂ ಮೊರೆ ಹೋದ ವರ್ಮಾ

ದೆಹಲಿ: ಅಲಹಾಬಾದ್ ಹೈಕೋರ್ಟ್ ನ್ಯಾಯಾಧೀಶ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರು ತಮ್ಮ ವಿರುದ್ಧದ ಅಕ್ರಮ ನಗದು ಸಂಗ್ರಹ ಪ್ರಕರಣದಲ್ಲಿ ಆರೋಪ ಹೊರಿಸಲಾದ ಆಂತರಿಕ ತನಿಖಾ ಸಮಿತಿಯ

ವರದಿಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ದೋಷಾರೋಪಣೆ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಮಾಡಿದ ಶಿಫಾರಸನ್ನು ರದ್ದುಗೊಳಿಸುವಂತೆ ಕೂಡ ಕೋರಿದ್ದು, ಶಾಸಕಾಂಗ ಅಧಿಕಾರಗಳ ಮೇಲೆ ನ್ಯಾಯಾಂಗದ ಅತಿಕ್ರಮಣ ಕ್ರಮವೆಂದು ಆರೋಪಿಸಿದ್ದಾರೆ.

ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾದ ತಮ್ಮ ರಿಟ್ ಅರ್ಜಿಯಲ್ಲಿ, ಆಂತರಿಕ ಸಮಿತಿಯು ಪೂರ್ವನಿರ್ಧರಿತ ರೀತಿಯಲ್ಲಿ ವರ್ತಿಸಿದೆ. ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು ನ್ಯಾಯಯುತ ಅವಕಾಶವನ್ನು ನಿರಾಕರಿಸಿದೆ ಎಂದು ನ್ಯಾಯಮೂರ್ತಿ ಯಶವಂತ್ ವರ್ಮಾ ವಾದಿಸಿದ್ದಾರೆ.

ಸತ್ಯಶೋಧನಾ ತನಿಖೆ ಎಂಬ ಸಮಿತಿಯ ಆದೇಶವನ್ನು ಅಸಮರ್ಥನೀಯವಾಗಿ ಮೊಟಕುಗೊಳಿಸಲಾಗಿದೆ. ಕೇವಲ ಹಣ ಪತ್ತೆಯ ಯಾವುದೇ ನಿರ್ಣಾಯಕ ಪರಿಹಾರವನ್ನು ಒದಗಿಸುವುದಿಲ್ಲ. ಯಾರ ಹಣ ಮತ್ತು ಎಷ್ಟು ಪತ್ತೆಯಾಗಿದೆ ಎಂಬುದನ್ನು ನಿರ್ಧರಿಸುವುದು ಅತ್ಯಗತ್ಯವಾಗಿದೆ ಎಂದು ಒತ್ತಾಯಿಸಿದ್ದಾರೆ. ಸಮಿತಿಯು ಅಂತಿಮ ವರದಿಯಲ್ಲಿ ನೀಡಿರುವ ಪ್ರಮುಖ ತನಿಖೆಗಳು ಅಸಮರ್ಥನೀಯ ತೀರ್ಮಾನಗಳ ಆಧಾರದ ಮೇಲೆ ಆಗಿದ್ದು, ಸಾಕ್ಷ್ಯಗಳ ಆಧಾರದ ಮೇಲೆ ಅಲ್ಲ ಎಂದು ನ್ಯಾಯಮೂರ್ತಿ ವರ್ಮಾ ಪ್ರತಿಪಾದಿಸಿದ್ದಾರೆ.

ತಮ್ಮ ಪ್ರತಿವಾದದಲ್ಲಿ, ಹೋಲಿಸಬಹುದಾದ ಯಾವುದೇ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳದ ಆಂತರಿಕ ಕಾರ್ಯವಿಧಾನವು, ಸಂವಿಧಾನಾತ್ಮಕವಾಗಿ ಹೊಂದಿರುವ ಹುದ್ದೆಗಳಿಂದ ನ್ಯಾಯಾಧೀಶರನ್ನು ತೆಗೆದುಹಾಕುವ ಬಗ್ಗೆ ಶಿಫಾರಸು ಮಾಡಲು ಅಥವಾ ಅಭಿಪ್ರಾಯ ವ್ಯಕ್ತಪಡಿಸಲು ನ್ಯಾಯಾಂಗಕ್ಕೆ ಅಧಿಕಾರ ನೀಡುವ ಮಟ್ಟಿಗೆ ಸಂಸದೀಯ ಅಧಿಕಾರವನ್ನು ಕಸಿದುಕೊಳ್ಳುತ್ತದೆ. ಇದು ಸಂವಿಧಾನದ ಮೂಲ ರಚನೆಯ ಭಾಗವಾಗಿರುವ ಅಧಿಕಾರಗಳ ಪ್ರತ್ಯೇಕತೆಯ ಸಿದ್ಧಾಂತವನ್ನು ಉಲ್ಲಂಘಿಸುತ್ತದೆ ಎಂದಿದ್ದಾರೆ.

ಡಿಜಿಟಲ್ ಅರೆಸ್ಟ್ ಪ್ರಕರಣ: ಶಿಕ್ಷೆ ಪ್ರಕಟ

ದೆಹಲಿ: ನಿವೃತ್ತ ಕೃಷಿ ವಿಜ್ಞಾನಿಯೊಬ್ಬರಿಗೆ ಸುಮಾರು 1 ಕೋಟಿ ರು. ವಂಚಿಸಿದ ಆರೋಪದಲ್ಲಿ ಇದೇ ಮೊದಲ ಬಾರಿಗೆ 9 ಮಂದಿಗೆ ಪಶ್ಚಿಮ ಬಂಗಾಳ ನ್ಯಾಯಾಲಯವು ಶಿಕ್ಷೆ ವಿಧಿಸಿದೆ. ಮಹಾರಾಷ್ಟ್ರದ ನಾಲ್ವರು, ಹರಿಯಾಣದ

ಮೂವರು ಮತ್ತು ಗುಜರಾತ್‌ನ ಇಬ್ಬರ ವಿರುದ್ಧ ಸೈಬರ್ ವಂಚನೆ ಅಪರಾಧದಡಿಯಲ್ಲಿ ಪ್ರಕರಣ ದಾಖಲಾಗಿದೆ. ಅಂತರ್‌ರಾಜ್ಯ ಗ್ಯಾಂಗ್‌ನ ಒಂಬತ್ತು ಮಂದಿಗೆ ಪಶ್ಚಿಮ ಬಂಗಾಳದ ಕಲ್ಯಾಣಿಯ ಉಪ-ವಿಭಾಗೀಯ ನ್ಯಾಯಾಲಯವು ಸೈಬರ್ ವಂಚನೆ ಪ್ರಕರಣದಲ್ಲಿ ಶಿಕ್ಷೆ ವಿಧಿಸಲಾಗಿದೆ.

ಈ ಕುರಿತು ಮಾಹಿತಿ ನೀಡಿದ ರಣಘಾಟ್ ಪೊಲೀಸ್ ಜಿಲ್ಲೆಯ ಹೆಚ್ಚುವರಿ ಎಸ್.ಪಿ (ಪ್ರಧಾನ ಕಚೇರಿ) ಸಿದ್ಧಾರ್ಥ್ ಧಾಪೋಲಾ, ನಿವೃತ್ತ ಕೃಷಿ ವಿಜ್ಞಾನಿ ನೀಡಿದ ದೂರಿನ ಹಿನ್ನೆಲೆಯಲ್ಲಿ ಸೈಬರ್ ವಂಚನೆ ಪ್ರಕರಣದಡಿಯಲ್ಲಿ 2024ರಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಈ ಕುರಿತು ಪೊಲೀಸರು ಒಂದು ತಿಂಗಳ ಕಾಲ ಕಾರ್ಯಾಚರಣೆ ನಡೆಸಿ ವಿವಿಧ ರಾಜ್ಯಗಳಿಂದ ಅಪರಾಧಿಗಳನ್ನು ಬಂಧಿಸಿದ್ದಾರೆ. 2024ರಲ್ಲಿ ಮಹಾರಾಷ್ಟ್ರ, ಹರಿಯಾಣ, ಗುಜರಾತ್ ಮತ್ತು ರಾಜಸ್ಥಾನದ ಸೈಬರ್ ಅಪರಾಧ ದಳಗಳು ಒಬ್ಬ ಮಹಿಳೆ ಸೇರಿದಂತೆ 13 ಜನರನ್ನು ಬಂಧಿಸಿವೆ ಎಂದರು. ತನಿಖೆಯ ವೇಳೆ ಆರೋಪಿಗಳಿಂದ ಮೊಬೈಲ್ ಫೋನ್‌ಗಳು, ಬ್ಯಾಂಕ್ ಪಾಸ್‌ಬುಕ್‌ಗಳು, ಚೆಕ್ ಪುಸ್ತಕಗಳು ಮತ್ತು ಪ್ಯಾನ್ ಕಾರ್ಡ್‌ಗಳಂತಹ ಹಲವಾರು ದಾಖಲೆ ಮತ್ತು ಸಾಧನಗಳನ್ನು ಹಾಗೂ 100 ಬ್ಯಾಂಕ್ ಖಾತೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಗ್ಯಾಂಗ್‌ನ ನಾಯಕ ಆಗ್ನೇಯ ಏಷ್ಯಾದ ದೇಶದಲ್ಲಿ ನೆಲೆಸಿದ್ದಾನೆ ಎನ್ನಲಾಗಿದೆ ಎಂದು ಧಾಪೋಲಾ ತಿಳಿಸಿದ್ದಾರೆ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೋಲಾರ.
ಸರ್ಕಾರಿ ಬಾಲಕರ ಬಾಲ ಮಂದಿರ, ಮಸ್ಕಂ,
ಕೆ.ಜಿ.ಎಫ್, ಕೋಲಾರ ಜಿಲ್ಲೆ-563 113 ದೂರವಾಣಿ
ಸಂಖ್ಯೆ: 08153-274017, Email:dcpuklr@gmail.com
ಸಂಖ್ಯೆ:DCPUKLR/ವಾ.ಟೆ.ಪ್ರ/2025-26 ದಿನಾಂಕ: 14.07.2025

ಟೆಂಡರ್ ಪ್ರಕಟಣೆ

ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೋಲಾರ ಕಛೇರಿಯ ಉಪಯೋಗಕ್ಕಾಗಿ 2025-26ನೇ ಸಾಲಿಗೆ/ಮುಂದಿನ ಒಂದು ವರ್ಷದ ಅವಧಿಗೆ ವಾಹನವನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ದ್ವಿ-ಲಕೋಟೆ ಪ್ರತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಯವರು ಹೆಚ್ಚಿನ ಮಾಹಿತಿಗಾಗಿ ಮೇಲಿನ ವಿಳಾಸವನ್ನು ಸಂಪರ್ಕಿಸಬಹುದು.

(1) ಟೆಂಡರ್ ಅರ್ಜಿ ಸ್ವೀಕರಿಸುವ ಪ್ರಾರಂಭ ದಿನಾಂಕ: 14.07.2025 (2) ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 24.07.2025 ಸಂಜೆ 4:00 ಗಂಟೆಗೆ. (3) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:28.07.2025 ರಂದು ಬೆಳಗ್ಗೆ 11:00 ಗಂಟೆಗೆ. (4) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 30.07.2025 ರಂದು ಸಂಜೆ 4:00 ಗಂಟೆಗೆ. (5) ಸಲ್ಲಿಸಬೇಕಾದ ಇ.ಎಂ.ಡಿ. ಮೊತ್ತ: ರೂ.10,000/- (ಹತ್ತು ಸಾವಿರದ ರೂಪಾಯಿಗಳು ಮಾತ್ರ). (6) ಟೆಂಡರ್‌ನ ಅಂದಾಜು ಮೊತ್ತ: ರೂ. 4,80,000/- (ನಾಲ್ಕು ಲಕ್ಷ ಎಂಭತ್ತು ಸಾವಿರ ರೂಪಾಯಿಗಳು ಮಾತ್ರ).

ಸಹಿ/-
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:190/ಕೆಎಸ್‌ಎಂಸಿಎ/2025-26

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಸಂಖ್ಯೆ: ಶಿಮನಪಾ/ಆ.ವಿ/ಸಿಆರ್/109/2025-26 ದಿನಾಂಕ: 17.07.2025

ಟೆಂಡರ್ ಪ್ರಕಟಣೆ

ಶಿವಮೊಗ್ಗ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿನ ಸ್ವಚ್ಛ ಸರ್ವೇಕ್ಷಣ್-2025, SBM (U)2.0, ಬಯಲು ಮುಕ್ತ ನಗರ (ODF, ODF+, ODF++, Water: plus), Garbage free city star rating, RRR, ಸಫಾಯಿ ಮಿತ್ರ ಸುರಕ್ಷಾ ಚಾಲೆಂಜ್ ಮುಂತಾದ ಘನತ್ಯಾಜ್ಯ ವಸ್ತು ನಿರ್ವಹಣೆಗೆ (Solid Waste Managerment) ಹಾಗೂ ಸ್ವಚ್ಛ ಭಾರತ್ ಮಿಷನ್ ನ ಹಲವು ಚಟುವಟಿಕೆಗಳನ್ನು ನಿರ್ವಹಿಸಲು Agency/NGO ಗಳನ್ನು ನೇಮಿಸಲು ಮಾನ್ಯ ಆಯುಕ್ತರು ಮಹಾನಗರ ಪಾಲಿಕೆ ಶಿವಮೊಗ್ಗ ಇವರಿಂದ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ (https://kppp.karnataka gov.in) ಟೆಂಡರ್ ಸಲ್ಲಿಸುವುದು.

ಕ್ರ. ಸಂ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ ರೂ.	ಲೆಕ್ಕ ಶೀರ್ಷಿಕೆ
1.	Provide consultancy services to Shivamogga City Corporation for Swachh Survekshan 2025, SBM (U) 2.0, ODF and Star Rating of Garbage free cities projects and safai mitra suraksha challenge and related works.	47.50	95,000/-	2025-26ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿ.

1) ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: 18.07.2025 2) ಪೂರ್ವಭಾವಿ ಸಭೆ (PRE-BID MEETING) :21.07.2025 ರ ಪೂರ್ವಾಹ್ನ 11:00 ಗಂಟೆಗೆ ಮಹಾನಗರಪಾಲಿಕೆ ಶಿವಮೊಗ್ಗ. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25.07.2025 ಸಂಜೆ 05.00 ಗಂಟೆಗೆ.

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯ ಆರೋಗ್ಯ ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆಪಿಪಿ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ವಾ.ಸಾ.ಸಂ.ಇ./ಶಿ/ನಂ.118.07/
ಝೇಂಕಾರ್/2025-26

ಸಹಿ/-
ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ಶಿವಮೊಗ್ಗ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಕೃಭಾಜನಿನಿ ಅರಣ್ಯ ವಿಭಾಗ, ಆಲಮಟ್ಟಿ
ಕಛೇರಿ ದೂರವಾಣಿ ಸಂಖ್ಯೆ: 08426-281410

ಸಂ.ಕೃಭಾಜನಿನಿ/ಅರಣ್ಯ/ಬಿಯುಡಿ/ಡಿಟಿಪಿ/ಕ್ಯಾಟ್‌ಟೆಂಡರ/ಇ-ಟೆಂಡರ್/2025-26/390 ದಿನಾಂಕ:15-07-2025

ಅಲ್ಪಾವಧಿ ಟೆಂಡರ್ ಪ್ರಕಟಣೆ [ಕೆಪಿಪಿಪಿ ಮುಖಾಂತರ]

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ರವರ ಪರವಾಗಿ ಈ ಕೆಳಗೆ ನಮೂದಿಸಿದ ಕ್ಯಾಟ್ ಯೋಜನೆಯ ವರ್ಕ ಇಂಡೆಂಟ್ ನಂ.KBJNL/2025-26/OW/WORK_INDENT No.1739 to 1743, 1745 to 1752, 1763 to 1774, 1781 to 1794 Total (39) ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ, ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು ಈ ಕಛೇರಿಯಿಂದ ಹಾಗೂ https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದು. ಕೆಪಿಪಿಪಿ ನಿಗದಿಪಡಿಸಿದಂತೆ ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕವನ್ನು ಇ-ಪೇಮೆಂಟ್ ಮುಖಾಂತರ ಪಾವತಿಸತಕ್ಕದ್ದು.

ಟೆಂಡರ್‌ಗಳನ್ನು ಪಬ್ಲಿಶ್ ಮಾಡುವ, ಸ್ವೀಕರಿಸುವ ಮತ್ತು ತೆರೆಯುವ ದಿನಾಂಕಗಳು ಈ ಕೆಳಗಿನಂತಿವೆ.

ಕ್ರ.ಸಂ	ವಿವರಗಳು	ದಿನಾಂಕ ಮತ್ತು ಸಮಯ
1)	ಟೆಂಡರ್‌ಗಳನ್ನು ಪಬ್ಲಿಶ್ ಮಾಡುವ ದಿನಾಂಕ	14-07-2025 ಸಂಜೆ 5-00 ಘಂಟೆ
2)	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	30-07-2025 ಸಂಜೆ 5-00 ಘಂಟೆವರೆಗೆ
3)	ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ	02-08-2025 ಬೆಳಿಗ್ಗೆ 11-00 ಘಂಟೆಗೆ
4)	ಆರ್ಥಿಕ ಬಿಡ್ ತೆರೆಯುವ ದಿನಾಂಕ	05-08-2025 ಬೆಳಿಗ್ಗೆ 11-00 ಘಂಟೆಗೆ

ಸಹಿ/-ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಕೃಭಾಜನಿನಿ ಅರಣ್ಯ ವಿಭಾಗ ಆಲಮಟ್ಟಿ

DIPR/BGK/RO-NO-173/KSMCA/2025-26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಯಾದಗಿರಿ
ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಯಾದಗಿರಿ
'ಸಿ' ಬ್ಲಾಕ್ ಕೊಠಡಿ ಸಂಖ್ಯೆ ಸಿ-1,2ನೇ ಮಹಡಿ ಜಿಲ್ಲಾ ಆಡಳಿತ ಭವನ ಯಾದಗಿರಿ
ದೂರವಾಣಿ ಸಂಖ್ಯೆ: 08473-253741 Email ID:- dswoyadgiri@gmail.com

ಸಂ:ಉನಿಸಕಇಯಾ/ಲೆಕ್ಕ/ಸಿ.ಆರ್-/2025-26 ದಿನಾಂಕ: 11-07-2025

:: ಟೆಂಡರ್ ಪ್ರಕಟಣೆ ::

2025-26ನೇ ಸಾಲಿಗೆ ಯಾದಗಿರಿ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ / ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ನಿರ್ವಹಿಸಲಾಗುತ್ತಿರುವ ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ / ಡಾ॥ ಬಿ.ಆರ್.ಅಂಬೇಡ್ಕರ ವಸತಿ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್ ಡಿ ಸಿಬ್ಬಂದಿಯನ್ನು ಭರ್ತಿ ಮಾಡಿಕೊಳ್ಳಲು ಹುದ್ದೆಗಳಿಗೆ ಮಾನವ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ.

Calendar Of Events: 1) **ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ:** ಉನಿಸಕಇಯಾ/ಲೆಕ್ಕ/ಸಿ.ಆರ್-/2025-26 ದಿನಾಂಕ 11-07-2025 2) **ಟೆಂಡರ್‌ಗಿಟ್ಟ ಅಂದಾಜು ಮೊತ್ತ:** ರೂ. 190.00 ಲಕ್ಷ 3) **ಇ-ಟೆಂಡರ್ ಫಾರಂ ಬೆಲೆ:** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ 4) **ಇ-ಟೆಂಡರ್ ಅರ್ಜಿ ಹಾಕುವ ದಿನಾಂಕ:** 11-07-2025 5) **ಇ-ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ:** 09-08-2025 ರಂದು ಸಾಯಂಕಾಲ 5.30 ಗಂಟೆವರೆಗೆ 6) **ಬಿಡ್ ಪೂರ್ವ ಭಾವಿ ಸಭೆ (Pre-Bid-Meeting) ದಿನಾಂಕ ಮತ್ತು ಸ್ಥಳ:** 19-07-2025 ರಂದು ಬೆಳಿಗ್ಗೆ 11.00 ಗಂಟೆಗೆ ಉಪ ನಿರ್ದೇಶಕರ ಕಛೇರಿ ಸಮಾಜ ಕಲ್ಯಾಣ ಇಲಾಖೆ ಯಾದಗಿರಿ 7) **ತಾಂತ್ರಿಕ ಲಕೋಟೆ ತೆರೆಯುವ ಸ್ಥಳ ಮತ್ತು ದಿನಾಂಕ:** 12-08-2025 ರಂದು ಬೆಳಿಗ್ಗೆ 11.00 ಗಂಟೆಗೆ ಉಪ ನಿರ್ದೇಶಕರ ಕಛೇರಿ ಸಮಾಜ ಕಲ್ಯಾಣ ಇಲಾಖೆ ಯಾದಗಿರಿ 8) **ಆರ್ಥಿಕ ಲಕೋಟೆ ತೆರೆಯುವ ಸ್ಥಳ ಮತ್ತು ದಿನಾಂಕ:** 14-08-2025 ರಂದು ಬೆಳಿಗ್ಗೆ 11.00 ಗಂಟೆಗೆ, ಉಪ ನಿರ್ದೇಶಕರ ಕಛೇರಿ ಸಮಾಜ ಕಲ್ಯಾಣ ಇಲಾಖೆ ಯಾದಗಿರಿ 9) **ಟೆಂಡರ್‌ನಲ್ಲಿ ಪಾವತಿಸಬೇಕಾದ ಇ.ಎಮ್.ಡಿ ಮೊತ್ತ:** ರೂ. 3.80 ಲಕ್ಷ 10) **ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ:** ಉಪ ನಿರ್ದೇಶಕರ ಕಛೇರಿ ಸಮಾಜ ಕಲ್ಯಾಣ ಇಲಾಖೆ "ಸಿ" ಬ್ಲಾಕ್ 2ನೇ ಮಹಡಿ ಜಿಲ್ಲಾಡಳಿತ ಭವನ ಯಾದಗಿರಿ ದೂರವಾಣಿ ಸಂಖ್ಯೆ: 08473-200741 11) **ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವೆಬ್‌ಸೈಟ್ ವಿಳಾಸ:** www.kppp. karnataka.gov.in

ಸಹಿ/- ಉಪ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ, ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/159/ಕೆ.ಎಸ್.ಎಂ.ಸಿ.ಎ/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 14/2025-26 ದಿನಾಂಕ: 16.07.2025 (2ನೇ ಕರೆ)
ಉಲ್ಲೇಖ: ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 09/2025-26 ದಿನಾಂಕ: 16.06.2025
(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ KPWD Class-III & above ದರ್ಜೆಯ ಗುತ್ತಿಗೆದಾರರಿಂದ (ಕ್ರಮ ಸಂಖ್ಯೆ 02 ಕಾಮಗಾರಿಗೆ Category II A ಗುತ್ತಿಗೆದಾರರು ಮಾತ್ರ ಭಾಗವಹಿಸತಕ್ಕದ್ದು) ಕೆ.ಪಿ.ಪಿ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.
ಸೊರಬ ತಾಲ್ಲೂಕು ವ್ಯಾಪ್ತಿಯಲ್ಲಿ ಕಾಲುಸಂಕ ಅಭಿವೃದ್ಧಿ ಕಾಮಗಾರಿಗಳ (02 ಸಂಖ್ಯೆ) ಟೆಂಡರಿಗಿಟ್ಟ ಮೊತ್ತ ರೂ. 99.95 ಲಕ್ಷಗಳಿಂದ ರೂ. 99.89 ಲಕ್ಷಗಳು. & ಇ.ಎಂ.ಡಿ ಮೊತ್ತ ರೂ. 1.69 ಲಕ್ಷಗಳಿಂದ ರೂ. 0.85 ಲಕ್ಷಗಳು.
1)ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ:18.07.2025 ರಿಂದ 25.07.2025 ಸಂಜೆ 5.30 ರವರೆಗೆ 2) ಟೆಂಡರ್ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 24.07.2025 ಸಂಜೆ 5.30 ಗಂಟೆಗೆ 2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:28-07-2025 ಬೆಳಿಗ್ಗೆ 11.00 ಗಂಟೆಗೆ 3)ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು. ಬಿಡ್
ಹೆಚ್ಚಿನ ಮಾಹಿತಿಗಾಗಿ (www.kppp.karnataka.gov.in) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ಶಿ/ನಂ.119-07/
ಝೇಂಕಾರ್/2025-26

ಸಹಿ/- ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ.

ಜಾತಿ ಪ್ರಮಾಣ ಪತ್ರ ವಂಚನೆಗೆ ಮಹಾ ಕ್ರಮ

ಮುಂಬೈ: ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಹಿಂದೂ, ಬೌದ್ಧ ಮತ್ತು ಸಿಖ್ ಧರ್ಮವನ್ನು ಹೊರತುಪಡಿಸಿ ಬೇರೆ ಧರ್ಮಕ್ಕೆ ಸೇರಿದ ವ್ಯಕ್ತಿಯೊಬ್ಬರು ಪರಿಶಿಷ್ಟ ಜಾತಿ ಪ್ರಮಾಣಪತ್ರವನ್ನು ವಂಚನೆಯಿಂದ ಪಡೆದಿದ್ದರೆ, ಅವುಗಳನ್ನು ರದ್ದುಗೊಳಿಸಲಾಗುವುದು ಎಂದು ಹೇಳಿದ್ದಾರೆ. ಸರಕಾರಿ ಉದ್ಯೋಗ ಗಳಂತಹ ಮೀಸಲಾತಿ ಸೌಲಭ್ಯಗಳನ್ನು ಪಡೆದಿದ್ದರೆ ಅಂತಹ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ವ್ಯಕ್ತಿ ವಂಚನೆಯಿಂದ ಪಡೆದ ಎಸ್.ಸಿ ಪ್ರಮಾಣಪತ್ರವನ್ನು ಬಳಸಿಕೊಂಡು ಚುನಾವಣೆಯಲ್ಲಿ ಗೆದ್ದಿದ್ದರೆ, ಅವರ ಆಯ್ಕೆಯನ್ನು ಅನೂರ್ಜಿತವೆಂದು ಘೋಷಿಸಲಾಗುತ್ತದೆ ಎಂದು ಫಡ್ನವೀಸ್ ವಿಧಾನ ಪರಿಷತ್ತಿನಲ್ಲಿ ಭರವಸೆ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

50 ಹೊಸ ಬಸ್ ಕೇಳಿ ಮಾಜಿ ಶಾಸಕ ಪತ್ರ

ಲಿಂಗಸುಗೂರು: ತಾಲೂಕಿಗೆ 50 ಹೊಸ ಬಸ್ ಹಾಗೂ 5 ಸ್ಲೀಪರ್ ಬಸ್‌ಗಳನ್ನು ನೀಡುವಂತೆ ಸಾರಿಗೆ ಸಚಿವ ರಾಮಲಿಂಗ ರೆಡ್ಡಿಗೆ ಮಾಜಿ ಶಾಸಕ ಡಿ ಎಸ್ ಹೂಲಗೇರಿ

ಪತ್ರ ಬರೆದು ಮನವಿ ಮಾಡಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಲಿಂಗಸೂಗೂರು ಘಟಕ ಅತೀ ದೊಡ್ಡ ಘಟಕವಾಗಿದ್ದು, 131 ಮಾರ್ಗಗಳು ಹೊಂದಿದೆ. ನಗರ ಪ್ರದೇಶಗಳಿಗೆ ಪ್ರಯಾಣಿಸುವ ಮಾರ್ಗ ರಾಷ್ಟ್ರೀಯ ಹೆದ್ದಾರಿ ಹೊಂದಿದ್ದು. ಲಿಂಗಸುಗೂರು, ಹಟ್ಟಿ ಚಿನ್ನದಗಣಿ, ಮುದಗಲ್ 3 ದೊಡ್ಡ ಪಟ್ಟಣಗಳಿದ್ದು, ಹಳ್ಳಿಗಳ ಪ್ರದೇಶ ಜಾಸ್ತಿ ಹೊಂದಿದೆ. ಲಿಂಗಸುಗೂರು ಘಟಕವು ಉತ್ತಮ ರೀತಿಯಲ್ಲಿ ಸಾರ್ವಜನಿಕರಿಗೆ, ಬಸ್ಸಿನ ಸೌಲಭ್ಯ ನೀಡುತ್ತಾ ಬರುತ್ತಿದ್ದು, ಈಗಾಗಲೇ ಸುಮಾರು ಬಸ್ಸುಗಳು ಹಳೆಯದಾಗಿದ್ದು ಸರಿಯಾದ ರೀತಿ ಸಾರ್ವಜನಿಕರಿಗೆ ಬಸ್ಸು ಒದಗಿಸಲು ಆಗುತ್ತಿಲ್ಲ. ಈಗ ಜಾಸ್ತಿ ಮಾರ್ಗಗಳು ಇರುವ ಕಾರಣ ಹೊಸ ಬಸ್ಸುಗಳು ಅವಶ್ಯಕತೆ ಇದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಲಿಂಗಸುಗೂರು ಘಟಕಕ್ಕೆ 50 ಹೊಸ ಬಸ್ಸುಗಳು ಹಾಗೂ 5 ಸ್ಲೀಪರ್ ಬಸ್ಸುಗಳನ್ನು ನೀಡಬೇಕೆಂದು ಕೋರಿದ್ದಾರೆ.

ಗ್ರಾಮದ ಮಕ್ಕಳಿಗೆ ಆರೋಗ್ಯ ತಪಾಸಣೆ

ಮುದಗಲ್: ಆರೋಗ್ಯ ಮತ್ತು ಕುಟುಂಬ ಇಲಾಖೆ ವತಿಯಿಂದ ಪಟ್ಟಣ ಸಮೀಪದ ನಾಗಲಾಪೂರು ಗ್ರಾಮದ ಡಾ ಬಿ,ಆರ್, ಅಂಬೇಡ್ಕರ್ ಬಾಲಕರ ವಸತಿ ನಿಲಯದ ಮಕ್ಕಳಿಗೆ ಸಮುದಾಯ ಆರೋಗ್ಯ ಅಧಿಕಾರಿ ರವಿರಾಜ ಎಂ ರವರು ಆರೋಗ್ಯ ತಪಾಸಣೆ ಮಾಡಿದರು. ಮೊದಲು ಸ್ವಚ್ಛತೆಯ ಬಗ್ಗೆ ಮತ್ತು ಮಲೇರಿಯಾ, ಡೆಂಘೀ, ಚಿಕನ್‌ಗುನ್ಯಾ ಕ್ಷಯರೋಗ ಮತ್ತು ರಕ್ತ ಹೀನತೆ ಬಗ್ಗೆ ಸಮುದಾಯದ ಆರೋಗ್ಯ ಅಧಿಕಾರಿ ಮಾಹಿತಿ ನೀಡಿ ಮಕ್ಕಳಿಗೆ ಆರೋಗ್ಯ ತಪಾಸಣೆ ಸ್ವಚ್ಛತೆ ಮತ್ತು ಫಾಗಿಂಗ್ ಮಾಡಿಸಬೇಕು ಮತ್ತು ನೀರಿನ ಮೂಲಗಳ ಮಾದರಿ ಪರೀಕ್ಷೆಗೆ ತಗೆದುಕೊಂಡರು. ಈ ಸಂದರ್ಭದಲ್ಲಿ ವಸತಿ ನಿಲಯದ ಮೇಲ್ವಿಚಾರಕ ರಾಮಕೃಷ್ಣ, ಆರೋಗ್ಯ ನಿರೀಕ್ಷಣಾಧಿಕಾರಿ ಕೋರಿ ಸಿದ್ದಯ್ಯ, ವಸತಿ ನಿಲಯದ ಸಿಬ್ಬಂದಿಗಳಾದ ಜಗದೀಶ್, ಬಸವರಾಜ, ಗೋಪಾಲ ಮುಂತಾದವರು ಉಪಸ್ಥಿತರಿದ್ದರು.

ವೀರಶೈವ ಸಮಾಜಕ್ಕೆ ತಿಪ್ಪಣ್ಣರ ಕೊಡುಗೆ ಅಪಾರ

ಹೂವಿನಹಡಗಲಿ: ವೀ.ವಿ.ಸಂಘಕ್ಕೂ ಮತ್ತು ವೀರಶೈವ ಸಮಾಜಕ್ಕೆ ಡಾ.ಎನ್.ತಿಪ್ಪಣ್ಣನವರ ಕೊಡುಗೆ ಅಪಾರ ಎಂದು ಜಿಬಿಆರ್ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಸಿ.ಮೋಹನರೆಡ್ಡಿ ಹೇಳಿದರು. ಪಟ್ಟಣದ ಜಿಬಿಆರ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಡಾ.ಎನ್.ತಿಪ್ಪಣ್ಣನವರ ನುಡಿ ನಮನ ಕಾರ್ಯಕ್ರಮದ ಅಧ ಯಕ್ಷತೆವಹಿಸಿ ಅವರು ಮಾತನಾಡಿದರು. ಹಿರಿಯ ನ್ಯಾಯವಾದಿಗಳಾಗಿದ್ದ ಡಾ.ಎನ್.ತಿಪ್ಪಣ್ಣನವರು ವಿವಿ ಸಂಘದ ಕಾರ್ಯದರ್ಶಿಗಳಾಗಿ, ಅಧ್ಯಕ್ಷರಾಗಿ, ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯದ ಕ್ಷರಾಗಿ, ವಿಧಾನಪರಿಷತ್ ಸದಸ್ಯರಾಗಿ, ಹೀಗೆ ವಿವಿಧ ಹುದ್ದೆಗಳನ್ನು ಅಲಂಕರಿಸಿ ಸೇವೆ ಸಲ್ಲಿಸಿದ್ದಾರೆ ಎಂದರು. ಜಿಬಿಆರ್ ಕಾಲೇಜ್ ಆಡಳಿತ ಮಂಡಳಿ ಸದಸ್ಯರಾದ ಕೆ.ಎಂ.ಉದಾಸಿ, ಮಲ್ಕಿಯಡೆಯರ್ ಮಲ್ಲಿಕಾರ್ಜುನ, ಆಜೀವ ಸದಸ್ಯರಾದ ಓಲಿ.ಈಶಪ್ಪ, ಕೆ.ಮುದುಕಪ್ಪ, ಸೊಪ್ಪಿನ ವೀರಪ್ಪ, ವಿಜಯಕುಮಾರ್, ಡಾ.ಅಟವಾಳಿಗಿ ಪ್ರಕಾಶ್ ಉಪಸ್ಥಿತರಿದ್ದರು.

ಸರಕಾರಿ ಜಾಗವನ್ನ ಕಬಳಿಸುವ ಹುನ್ನಾರ

ಮಸ್ಕಿ: ತಾಲೂಕಿನ ಮಲ್ಲದ ಗುಡ್ಡ ಗ್ರಾ.ಪಂ. ವ್ಯಾಪ್ತಿಯ ಮರಕಂದಿನ್ನಿ ಗ್ರಾಮ ಬಳಿಯ ಸರ್ವೆ ನಂ. 108 ರಲ್ಲಿಯ 56 ನೇ ಸಂಖ್ಯೆಯ ಸರಕಾರಿ ನಿವೇಶನದಲ್ಲಿ ಅಕ್ರಮವಾಗಿ ಶೆಡ್ ಹಾಕಿ ಸರಕಾರಿ ಜಾಗ ಕಬಳಿಸುವ ಹುನ್ನಾರ ನಡೆದಿದೆ ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ತುರುಮಂದೆಪ್ಪ ಕಟ್ಟಿಮನಿ ಆರೋಪಿಸಿದರು. ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಈ ಜಾಗದಲ್ಲಿ 97 ಜನ ನಿವೇಶ ರಹಿತರಿಗೆ ಜಾಗ ನೀಡಲಾಗಿದೆ. ಅಕ್ರಮ ಶೆಡ್ ತೆರವು ಗೊಳಿಸಲು ಅಗತ್ಯ ಕ್ರಮ ಕೈ ಗೊಳ್ಳುವಂತೆ ಶಾಸಕ ಬಸನಗೌಡ ತುರುವಿಹಾಳ ಅವರ ಗಮನಕ್ಕೆ ತಂದಿದ್ದರೂ ಪ್ರಯೋಜನವಾಗಿಲ್ಲ. ಈ ಸಂದರ್ಭದಲ್ಲಿ ರೆಡ್ಡೆಪ್ಪ ಕುಣಿಕೆಲ್ಲೂರು, ಶಂಭು ಲಿಂಗ ಇರಕಲ್, ಸಿದ್ದಪ್ಪ ದೋಣ ಮರಡಿ, ವಿಜಯ ಕುಮಾರ ಸಾಗರ್ ಕ್ಯಾಂಪ್ ಇದ್ದರು.

ಜಿಲ್ಲಾ ತ್ರೈಮಾಸಿಕ ಕೆಡಿಪಿ ಸಭೆ | ಸುಧಾರಣೆ ಹೊಣೆ ಡಿಸಿ/ ಸಿಇಒಗೆ |ಸಚಿವ ಡಾ.ಶರಣ ಪ್ರಕಾಶ ಪಾಟೀಲ್

ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆ ಹೊಣೆ ನಿಭಾಯಿಸಿ

ರಾಯಚೂರು: ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಈ ಬಾರಿ ಜಿಲ್ಲೆಯು ಉತ್ತಮ ಸ್ಥಾನ ಕಾಯ್ದುಕೊಳ್ಳುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿ ಮತ್ತು ಜಿಪಂ ಸಿಇಒ ಅವರು ತೆಗೆದುಕೊಂಡು ಕಾರ್ಯಪ್ರವೃತ್ತರಾಗಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣ ಪ್ರಕಾಶ ಪಾಟೀಲ್ ಸೂಚಿಸಿದರು.

ನಗರದ ಜಿಪಂ ಸಭಾಂಗಣದಲ್ಲಿ ನಡೆದ ಜಿಲ್ಲಾ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಜಿಲ್ಲೆಯು ಪ್ರತಿ ಬಾರಿ ಕೆಳಗಿನ ಸ್ಥಾನ ಪಡೆಯುವುದು ಆರೋಗ್ಯಕರ ಬೆಳವಣಿಗೆಯಲ್ಲ. ಕಳಪೆ ಫಲಿತಾಂಶ ಪಡೆಯುವುದು ಕಳಂಕದ ಸಂಗತಿಯಾಗಿದೆ. ಹೀಗಾಗಿ ವಿಶೇಷವಾಗಿ ಜಿಲ್ಲಾಧಿಕಾರಿ ಮತ್ತು ಜಿಪಂ ಸಿಇಒ ಅವರು ಇದರ ಜವಾಬ್ದಾರಿ ತೆಗೆದುಕೊಂಡು ಫಲಿತಾಂಶ ಸುಧಾರಣೆಗಾಗಿ ಸರಕಾರಿ ಶಾಲೆಗಳಲ್ಲಿ ಏನು ಮಾಡಬಹುದು ಎಂಬುದರ ಬಗ್ಗೆ ಯೋಚಿಸಿ, ಸುವ್ಯವಸ್ಥಿತ ಕಾರ್ಯದ ಯೋಜನೆ ರೂಪಿಸಿ ಕಾರ್ಯಶೀಲರಾಗಬೇಕು.

ಶಿಕ್ಷಣದಲ್ಲಿ ಹತ್ತನೆ ಮತ್ತು ಪಿಯುಸಿ ಮಹತ್ವದ ಹಂತಗಳಾಗಿವೆ. ಬಹಳಷ್ಟು ಮಕ್ಕಳಲ್ಲಿ ಪರೀಕ್ಷಾ ಭಯ ಇರುತ್ತದೆ. ಹಾಗಾಗಿ ಮೇಲಿಂದ ಮೇಲೆ ಕಿರು ಪರೀಕ್ಷೆ ಮತ್ತು ವಿಶೇಷ ತರಗತಿಗಳನ್ನು ನಡೆಸಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು. ಒಟ್ಟಾರೆ ಫಲಿತಾಂಶ ಸುಧಾರಣೆಗೆ ಶಾಲಾ ಶಿಕ್ಷಣ ಇಲಾಖೆ ಮತ್ತು ಪಿಯು ಶಿಕ್ಷಣ ಇಲಾಖೆಗಳು ಈಗಿಂದಲೇ ಸನ್ನದ್ದವಾಗಬೇಕು ಎಂದರು.

ಉತ್ತಮವಾದ ಪರಿಸರ ಸಿಗುವ ನಿಟ್ಟಿನಲ್ಲಿ ನಗರದಲ್ಲಿ ಪ್ರತಿ ವರ್ಷ ಹತ್ತು ಸಾವಿರ ಸಸಿ ನೆಟ್ಟು ಪೋಷಣೆ ಮಾಡಬೇಕು. ಎಲ್ಲ ತಾಲೂಕುಗಳಲ್ಲಿ ಸಹ ಗರಿಷ್ಟ ಮಟ್ಟದಲ್ಲಿ ಸಸಿ ನೆಡಲು ಕ್ರಮವಹಿಸಬೇಕು ಎಂದು ಸಚಿವರು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ಗ್ರಾಮೀಣ ಶಾಸಕ ಬಸನಗೌಡ ದದ್ದಲ್, ಎಂಎಲ್ಸಿ ಎ.ವಸಂತಕುಮಾರ, ಶರಣಗೌಡ ಪಾಟೀಲ ಬಯ್ಯಾಪುರ, ಪಾಮಯ್ಯ ಮುರಾರಿ, ಜಿಲ್ಲಾಧಿಕಾರಿ ನಿತೀಶ್ ಕೆ., ಎಸ್ಪಿ ಎಂ.ಪುಟ್ಟಮಾದಯ್ಯ,ಜಿಪಂ ಸಿಇಓ ಈಶ್ವರ ಕುಮಾರ ಕಾಂದೂ, ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಾಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ ಸೇರಿ ಅನೇಕ ಅಧಿಕಾರಿಗಳು ಭಾಗಿಯಾಗಿದ್ದರು.

ನಗರದ ಜಿಪಂ ಸಭಾಂಗಣದಲ್ಲಿ ನಡೆದ ಜಿಲ್ಲಾ ತ್ರೈಮಾಸಿಕ ಕೆಡಿಪಿ ಸಭೆ ನಡೆಯಿತು.

ನಮ್ಮಲ್ಲಿ ಶಿಕ್ಷಕರ ಕೊರತೆ ಇಲ್ಲ

ಫಲಿತಾಂಶ ಕುಸಿಯಲು ಶಿಕ್ಷಕರ ಕೊರತೆ ಕಾರಣ ಎಂಬುದರಲ್ಲಿ ಹುರುಳಿಲ್ಲ. ನಮ್ಮಲ್ಲಿ ಶಿಕ್ಷಕರ ಕೊರತೆ ಇಲ್ಲ. ಶಾಲಾ ಕಾಲೇಜುಗಳಿಗೆ ನಿಯಮಿತ ಭೇಟಿ ನೀಡಿ, ಶಿಕ್ಷಕರ ಮತ್ತು ಮಕ್ಕಳ ಹಾಜರಾತಿ ಮತ್ತು ಕಲಿಕೆಯ ಗುಣಮಟ್ಟ ಪರಿಶೀಲಿಸದೇ ಮಾನಿಟರಿಂಗ್ ಮಾಡುವಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಿಂದೆ ಬಿದ್ದಿರುವುದೇ ಫಲಿತಾಂಶ ಕುಸಿಯಲು ಕಾರಣವಾಗಿದೆ. ಇದು ಸರಿಯಲ್ಲ ಎಂದು ಸಚಿವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ ಮೇ ತಿಂಗಳಲ್ಲಿ ಶೇ.69 ರಷ್ಟು ಹೆಚ್ಚಿನ ಮಳೆಯಾಗಿದೆ. ಜೂನ್ ಮತ್ತು ಜುಲೈನಲ್ಲಿ ಶೇ.32ರಷ್ಟು ಮಳೆ ಕೊರತೆಯಿಂದ ತೊಗರಿ ಮತ್ತು ಹತ್ತಿ ಬೆಳೆಗಳು ನಲುಗುತ್ತಿವೆ. ಜಿಲ್ಲೆಯಲ್ಲಿ 5.53 ಲಕ್ಷ ಹೆಕ್ಟೇರನಲ್ಲಿ ಬಿತ್ತನೆ ಪೈಕಿ ಇದುವರೆಗೆ ಶೇ.48 ಹೆಕ್ಟೇರ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಇದುವರೆಗೆ 37 ರೈತ ಸಂಪರ್ಕ ಕೇಂದ್ರಗಳಿಂದ 4856.23 ಕ್ವಿಂಟಲ್ ನಷ್ಟುವ ಭತ್ತ, ತೊಗರಿ, ಸಜ್ಜೆ, ಹೆಸರು, ಮೆಕ್ಕೆಜೋಳ ಹಾಗೂ ಸೂರ್ಯಕಾಂತಿ ಬಿತ್ತನೆ ಬೀಜ ದಾಸ್ತಾನು ಮಾಡಿ ಇದುವರೆಗೆ ರಿಯಾಯಿತಿ ದರದಲ್ಲಿ 3245.21 ಕ್ವಿಂಟಲ್ ಬೀಜ ವಿತರಣೆ ಮಾಡಲಾಗಿದೆಂದು.

-ಪ್ರಕಾಶ ಚೌಹಣ,
ಕೃಷಿ ಇಲಾಖೆಯ ಜಂಟಿ ನಿರ್ದೇಶಕ

ರೈತರಿಗೆ ರಸಗೊಬ್ಬರ ಸರಿಯಾಗಿ ತಲುಪುತ್ತಿಲ್ಲ. ಯಾರಿಗೆ ಕೊಡುತ್ತಿದ್ದಾರೆ ಎಂಬುದು ತಿಳಿಯುತ್ತಿಲ್ಲ . ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು ಸಹಕಾರಿ ಸಂಘಗಳು ಮತ್ತು ಖಾಸಗಿ ಮಳಿಗೆಗಳಲ್ಲಿ ಗೊಬ್ಬರ ದಾಸ್ತಾನು ಇರುವ ಬಗ್ಗೆ ಪ್ರತಿದಿನ ಫಲಕ ಹಾಕಿ, ಮಾಹಿತಿ ನೀಡಬೇಕು. ಸರಿಯಾಗಿ ಮಾಹಿತಿ ನೀಡದ ಖಾಸಗಿ ಮಾರಾಟಗಾರರನ್ನು ಬ್ಲಾಕ್ ಲೀಸ್ಟಗೆ ಸೇರ್ಪಡೆ ಮಾಡಬೇಕು. ಪ್ರಸಕ್ತ ಸಾಲಿನಲ್ಲಿ ಸಹ ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಗೊಬ್ಬರ ಪೂರೈಕೆ ಆಗಬೇಕು.

-ಬಸನಗೌಡ ತುರ್ವಿಹಾಳ, ಶಾಸಕ

ತಾಲೂಕಿನ ಬಹುತೇಕ ಶಾಲೆಗಳಿಗೆ ಶೌಚಾಲಯಗಳಿಲ್ಲ. ಬಹುತೇಕ ಶಾಲೆಗಳಲ್ಲಿ ಕಂಪ್ಯೂಟರ್ ತುಕ್ಕು ಹಿಡಿಯುತ್ತಿದ್ದು, ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ ಕಲಿಸುವವರು ಇಲ್ಲದಂತಾಗಿದೆ.

-ಬಸನಗೌಡ ಬಾದರ್ಲಿ, ಎಂಎಲ್ಸಿ

ಸದ್ಯಕ್ಕೆ ಕೇಂದ್ರ ಸರಕಾರ ಐಸಿಯುನಲ್ಲಿದೆ: ಲಾಡ್

ಕೊಪ್ಪಳ: ಸದ್ಯ ಪ್ರಧಾನಿ ಮೋದಿ ನಾಯಕತ್ವದ ಬಗ್ಗೆ ಆರ್ ಎಸ್‌ಎಸ್ ಪ್ರಶ್ನೆ ಮಾಡುತ್ತಿದೆ. ಸಚಿವ ನಿತಿನ್ ಗಡ್ಕರಿ ದೇಶದಲ್ಲಿ ಬಡತನ ಹೆಚ್ಚುತ್ತಿದೆ ಎಂದು ಹೇಳುವ ಮೂಲಕ ಪರೋಕ್ಷವಾಗಿ ಮೋದಿ ನಾಯಕತ್ವಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದು, ವಾಸ್ತವದಲ್ಲಿ ಕೇಂದ್ರ ಸರಕಾರವೇ ಐಸಿಯುನಲ್ಲಿ ಇದೆ ಎಂದು ಕಾರ್ಮಿಕ ಸಚಿವ ಸಂತೋಷ ಲಾಡ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾರೇ ಇದ್ದರೂ 75 ವರ್ಷಕ್ಕೆ ಅಧಿಕಾರ ಬಿಟ್ಟು ಕೊಡಬೇಕು ಎಂದು ಸಂಘ ಪರಿವಾರದ ಪ್ರಮುಖರು ಹೇಳಿದ್ದಾರೆ. ಕೇಂದ್ರದಲ್ಲಿ ಸಮ್ಮಿಶ್ರ ಸರಕಾರ ಇದೆ. ಒಂದೊಮ್ಮೆ ಚಂದ್ರಬಾಬು ನಾಯ್ಡು ಕೈ ಎತ್ತಿದರೆ ಕೇಂದ್ರ ಸರಕಾರ ಉರುಳಲಿದೆ. ಯಾಕೆ ಪ್ರಧಾನಿ ಮೋದಿ ಬದಲಾವಣೆ ಆಗಬಾರದು? ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಸಿಎಂ ಬದಲಾವಣೆ ಆಗಲ್ಲ. ನಾವು 137 ಶಾಸಕರಿದ್ದೇವೆ. ನಮ್ಮ ಸರಕಾರ ಭದ್ರವಾಗಿದೆ. ಸಿಎಂ ಬದಲಾವಣೆ ಆಗುವುದಿಲ್ಲ. ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಈ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ, ಏನೂ ಆಗುವುದಿಲ್ಲ. ನಿಜವಾಗಿ ಕೇಂದ್ರದಲ್ಲಿ ಬಿಜೆಪಿ ಐಸಿಯುನಲ್ಲಿದೆ. ಬಿಜೆಪಿಗೆ ಬಹುಮತ ಇಲ್ಲ. ಆಂಧ್ರದ ಚಂದ್ರಬಾಬು ನಾಯ್ಡು ಬೆಂಬಲ ವಾಪಾಸ್ ಪಡೆದರೆ, ಸರಕಾರ ಉರುಳುತ್ತದೆ. ಸಿಎಂ ಬದಲಾವಣೆ ವಿಷಯ ಬಂದಾಗಲೆಲ್ಲ ನಾವು ಸಮರ್ಪಕ ಉತ್ತರ ಕೊಟ್ಟಿದ್ದೇವೆ. ಗ್ರಾಪಂನಿಂದ ಲೋಕಸಭೆ ಚುನಾವಣೆವರೆಗೂ ಬಿಜೆಪಿಗರು ಬರಿ ಮೋದಿ ಎನ್ನುತ್ತಾರೆ. ಹೀಗಾಗಿ ಮೋದಿ ಅವರ ಬಗ್ಗೆ ನಾವೇಕೆ ಮಾತನಾಡಬಾರದು? ಸಮ್ಮಿಶ್ರ ಸರಕಾರವಿದ್ದು, ಮೋದಿಗೂ 75 ವರ್ಷ ವಯಸ್ಸಾಗಿದೆ. ಬದಲಾವಣೆ ಆದರೆ ತಪ್ಪೇನು? ಈ ಬಗ್ಗೆಯೂ ಮಾತನಾಡಬೇಕಾಗುತ್ತದೆ ಎಂದರು.

ರಣದೀಪ್ ಸಿಂಗ್ ಸುರ್ಜೇವಾಲಾ ನಮ್ಮ ಎಐಸಿಸಿ ಕಾರ್ಯದರ್ಶಿ. ಕೆಲ ಶಾಸಕರು ಆಡಳಿತ ಬಗ್ಗೆ ಆರೋಪ ಮಾಡಿದ್ದಾರೆ. ಅದರ ಭಾಗವಾಗಿ ಅವರು ರಾಜ್ಯಕ್ಕೆ ಬಂದಿದ್ದಾರೆ. ಅವರೇನೂ ಸೂಪರ್ ಸಿಎಂ ಅಲ್ಲ. ಪಿಎಂ ಮೋದಿ ಅನೇಕ ಬಾರಿ ವಿದೇಶಕ್ಕೆ ಹೋಗುತ್ತಾರೆ. ಹಾಗಂತ ಅವರೇ ಆ ದೇಶದ ಸೂಪರ್ ಪ್ರಧಾನಿ ಆಗುತ್ತಾರಾ ಎಂದು ವಿಪಕ್ಷದವರಿಗೆ ತಿರುಗೇಟು ನೀಡಿದರು.

ಗ್ಯಾರಂಟಿ ಯೋಜನೆಗಳು ಜನರಿಗೆ ವರವಾಗಿವೆ. ಗೃಹಲಕ್ಷ್ಮೀ ಯೋಜನೆಯಡಿ ಹಣ ಬರುವುದು ಕೆಲ ತಿಂಗಳು ತಡ ಆಗಿರಬಹುದು. ಆದರೆ, ಎಲ್ಲರಿಗೂ ಬರುತ್ತಿದೆ. ಚುನಾವಣೆ ವೇಳೆ ಮಾತ್ರ ಹಾಕುವುದಿಲ್ಲ. ಬಿಜೆಪಿಯವರಿಗೆ ಅಂಥ ಕೆಲಸ ಮಾಡಿ ಅಭ್ಯಾಸ ಇದೆ. ಅತ್ಯಾಚಾರ ಕೇಸ್ ಆರೋಪಿ ಬಾಬಾ ನೀಮ್ ಅವರನ್ನು ಚುನಾವಣೆ ಸಮಯದಲ್ಲೆಲ್ಲ 21 ಬಾರಿ ಪೆರೋಲ್ ಮೇಲೆ ಹೊರಗೆ ತಂದಿದ್ದರು. ಹೀಗಾಗಿ ಚುನಾವಣೆಗೆ ಯಾರನ್ನು, ಹೇಗೆ ಬಳಸಿಕೊಳ್ಳಬೇಕು ಎಂದು ಅವರಿಗೆ ಅಭ್ಯಾಸವಿದೆ ಎಂದು ಲೇವಡಿ ಮಾಡಿದರು.

ಪೆಟ್ರೋಲ್, ಡಿಸೇಲ್ ಮೇಲೆ ಸೆಸ್ ರಾಜ್ಯದಲ್ಲಿ ಸುಮಾರು ಶೇ.80 ರಷ್ಟು ಅಸಂಘಟಿತ ಕಾರ್ಮಿಕರಿದ್ದಾರೆ. ಅವರಿಗಾಗಿ ಪ್ರತ್ಯೇಕ ಮಂಡಳಿ ರಚಿಸಲಾಗಿದೆ. ಈ ಎಲ್ಲ ಅಸಂಘಟಿತ ಕಾರ್ಮಿಕರ ಅಭಿವೃದ್ಧಿಗೆ ಮೂರು ಹೊಸ ಕಾಯ್ದೆ ತಂದಿದ್ದೇವೆ. ಇಂಧನ ಮೇಲಿನ ಸೆಸ್ ಹೆಚ್ಚಳ ಮಾಡಿ. ಆ ಹಣವನ್ನು ಕಾರ್ಮಿಕರ ಅಭಿವೃದ್ಧಿಗೆ ಕೊಡುವಂತೆ ಸಿಎಂಗೆ ಮನವಿ ಮಾಡಿರುವೆ. ಇದರಿಂದ ವಾರ್ಷಿಕ 1200 ಕೋಟಿ ರು. ಇಲಾಖೆಗೆ ಸಿಗಲಿದ್ದು, ಕಲ್ಯಾಣ ಯೋಜನೆಗೆ ನೆರವಾಗಲಿದೆ. ಕೇಂದ್ರ ಸರಕಾರರ ಎಗ್ ರೈಸ್ ಮಾಡುವವನಿಂದ ಹಿಡಿದು ಎಲ್ಲ ಸಣ್ಣ ಸಣ್ಣ ವ್ಯಾಪಾರಿಗಳಿಗೆ, ಸತ್ತಾಗ ಸುಡುಗಾಡಿ ಕೊಂಡೊಯ್ಯುವ ತೆಂಗಿನಕಾಯಿ ಮೇಲೆಯೂ ಜಿಎಸ್ ಟಿ ಹಾಕುತ್ತಿದೆ. ಆದರೆ, 16.5 ಲಕ್ಷ ಕೋಟಿ. ರು. ಉದ್ಯಮಿಗಳ ಸಾಲ ಮನ್ನಾ ಮಾಡಿದೆ.

- ಸಂತೋಷ ಲಾಡ್, ಕಾರ್ಮಿಕ ಸಚಿವ

ಐತಿಹಾಸಿಕ ಕೆರೆ, ಉದ್ಯಾನ ಸಂರಕ್ಷಣೆಗೆ ಒತ್ತಾಯ

ಲಿಂಗಸೂಗೂರು: ಪಟ್ಟಣದ ಐತಿಹಾಸಿಕ ಕೆರೆಯದಡದಲ್ಲಿ ಬೆಳೆದಿರುವ ಮುಳ್ಳುಪೊದೆ ಗಿಡಗಂಟೆಗಳ ತೆರವುಗೊಳಿಸಿ, ಉದ್ಯಾನ ವನವನ್ನು ಸಂರಕ್ಷಣೆ ಮಾಡಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಕುಮಾರ್ ಶೆಟ್ಟಿ ಬಣದ ತಾಲೂಕು ಘಟಕ ಪದಾಧಿಕಾರಿಗಳು ಪುರಸಭೆ ಅಧ್ಯಕ್ಷರಿಗೆ ಮನವಿ ಸಲ್ಲಿಸಿದರು.

ನೂರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಐತಿಹಾಸಿಕ ಕೆರೆ ಮುಳ್ಳುಪೊದೆ ಗಿಡ ಗಂಟಿಗಳಿಂದ ತುಂಬಿ ಕೆರೆಯ ನೀರು ಕಲುಷಿತವಾಗುತ್ತಿದೆ. ನೂರಾರು ಎಕರೆ ವಿಸ್ತಾರವಾದ ಕೆರೆಯಲ್ಲಿ ಹೂಳು ತುಂಬಿಕೊಂಡಿದೆ. ಸುತ್ತಲಿನ ಭೂಮಿ ಒತ್ತುವರಿಯಾಗಿ ಕೆರೆಯ ಆವರಣ ಕಡಿಮೆಯಾಗುತ್ತಿದೆ. ಸ್ವಚ್ಛತೆ ಇಲ್ಲದ ಕಾರಣ ಕೆರೆಯ ಪರಿಸರ ಹಾಳಾಗಿದೆ. ಬ್ರಿಟಿಷರ ಕಾಲದಲ್ಲಿ ಈ ಕೆರೆಯ ನೀರನ್ನು ಜನರು ಕುಡಿಯುವುದಕ್ಕೆ ಬಳಸುತ್ತಿದ್ದರು. ಆದರೆ ಈಗ ಜಾನುವಾರುಗಳು ಕೂಡ ನೀರು ಕುಡಿಯಲು ಹಿಂದೇಟು ಹಾಕುವಂತಾಗಿದೆ.

ಕೆರೆಯ ದಡದಲ್ಲಿ ಲಕ್ಷಾಂತರ ವೆಚ್ಚದಲ್ಲಿ ನಿರ್ಮಿಸಿರುವ ಪಟ್ಟಣದ ಏಕೈಕ ಉದ್ಯಾನವನ ನಿರ್ವಹಣೆಯ ಕೊರತೆಯಿಂದ ದಿನೇ ದಿನೇ ಹಾಳುಗುವ ಪರಿಸ್ಥಿತಿಗೆ ಬಂದಿದೆ. ಐತಿಹಾಸಿಕ ಕೆರೆಯ ಸುತ್ತಮುತ್ತಾ ಬೆಳೆದಿರುವ ಮುಳ್ಳಿನ ಪೊದೆ ಗಿಡ ಗಂಟಿಗಳನ್ನು ತೆರವುಗೊಳಿಸಿ ಕೆರೆಯನ್ನು ಸ್ವಚ್ಛಗೊಳಿಸಿ ಕೆರೆಯ ಒತ್ತುವರಿಯನ್ನು ತೆರವುಗೊಳಿಸಬೇಕು. ಪಟ್ಟಣದ ಏಕೈಕ ಉದ್ಯಾನವನ್ನು ಸಂರಕ್ಷಿಸಲು ಪ್ರತ್ಯೇಕ ಅನುದಾನ ಮೀಸಲಿಡಬೇಕೆಂದು ಮನವಿ ಸಲ್ಲಿಸಿ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಅಧ್ಯಕ್ಷರು ಆಂಜನೇಯ ಭಂಡಾರಿ, ಭೀಮೇಶ್ ನಾಯಕ, ಅಶೋಕ ನಾಯಕ, ಶಿವು ಪತ್ತಾರ್ ,ವರುಣ ಕುಮಾರ, ದೇವರಾಜ ಶಾಸ್ತ್ರೀ,ಸಲೀಮ್, ರವಿ, ಶಿವು ಗೊತ್ತೇದಾರ್ ಸೇರಿದಂತೆ ಇತರರು ಇದ್ದರು.

ಆಸುಸ್ ಇಂಡಿಯಾ ಪ್ರತ್ಯೇಕ ಅಂಗಡಿಯ ಶುಭಾರಂಭ

ಆಸುಸ್ ಇಂಡಿಯಾ, ತೈವಾನೀಸ್ ಟೆಕ್ ದೈತ್ಯ ಇಂದು ಹೊಸಪೇಟೆ ಯಲ್ಲಿ ಪ್ರತ್ಯೇಕ ಅಂಗಡಿ ಪ್ರಾರಂಭ

ಹೊಸಪೇಟೆ: ದೇಶಾದ್ಯಂತ ಬ್ರ್ಯಾಂಡ್‌ನ ರಿಟೇಲ್ ಹೆಜ್ಜೆಗುರುತನ್ನು ಬಲಪಡಿಸುವ ಯೋಚನೆಯ ಒಂದು ಹೆಜ್ಜೆಯಾಗಿ, ಆಸುಸ್ ಇಂಡಿಯಾ, ತೈವಾನೀಸ್ ಟೆಕ್ ದೈತ್ಯ ಇಂದು ಹೊಸಪೇಟೆಯಲ್ಲಿ ಪ್ರತ್ಯೇಕ ಅಂಗಡಿಯೊಂದನ್ನು ಪ್ರಾರಂಭಿಸುವುದಾಗಿ ಪ್ರಕಟಿಸಿದೆ.

ಹೊಸ ವಿಶೇಷ ಅಂಗಡಿಯು 390 ಚದರ ಅಡಿಗಳಲ್ಲಿ ವಿಸ್ತಾರವಾಗಿ ಮತ್ತು ಈ ಹೊಸ ವಿಶೇಷ ಮಳಿಗೆಯು 390 ಚದರ ಅಡಿ ವಿಸ್ತೀರ್ಣದಲ್ಲಿ ಹರಡಿಕೊಂಡಿದ್ದು, ವಿವೋಬುಕ್, ಝೆನ್‌ಬುಕ್, ರಿಪಬ್ಲಿಕ್ ಆಫ್ ಗೇಮರ್ಸ್ (ಆರೋಜಿ) ಲ್ಯಾಪ್‌ಟಾಪ್‌ಗಳು, ಗೇಮಿಂಗ್ ಡೆಸ್ಕ್‌ಟಾಪ್‌ಗಳು, ಆಲ್-ಇನ್-ಒನ್ ಡೆಸ್ಕ್‌ಟಾಪ್‌ಗಳು ಮತ್ತು ಆಸುಸ್ ಪ್ರಮುಖ ಉತ್ಪನ್ನಗಳಾದ ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಹಾರ್ಡ್‌ವೇರ್‌ಗಳ ವ್ಯಾಪಕ ಶ್ರೇಣಿಯನ್ನು ಆಯೋಜಿಸಲು ಸಜ್ಜಾಗಿದೆ.

ಇದು ಹೊಸಪೇಟೆಯಲ್ಲಿ ಬ್ರ್ಯಾಂಡ್‌ನ ಮೊದಲನೇ ಅಂಗಡಿಯಾಗಿದ್ದು, ಒಟ್ಟು ಕರ್ನಾಟಕದಲ್ಲಿ ಇದರ ಜೊತೆಗೆ ಸರಿ ಸುಮಾರು 28 ಮಳಿಗೆಯನ್ನು ಈ ದೈತ್ಯ ಆಸುಸ್ ಕಂಪನಿ ಹೊಂದಿದೆ.

ಆಸುಸ್ ರಾಷ್ಟ್ರೀಯ ಮಾರಾಟ ನಿರ್ವಾಹಕ ಪಿಸಿ ಮತ್ತು ಗೇಮಿಂಗ್ ವ್ಯವಹಾರದ ಜಿಗ್ನೇಶ್ ಭವಸಾರ್ ವಿಸ್ತರಣೆಯ ಬಗ್ಗೆ ಮಾತನಾಡಿ, ಮಾರಾಟ ನಿರ್ವಾಹಕ ಪಿಸಿ ಮತ್ತು ಗೇಮಿಂಗ್ ವ್ಯವಹಾರ, ಅವರು, ಭಾರತದಲ್ಲಿ ನಮ್ಮ ರೀಟೇಲ್ ಹೆಜ್ಜೆ ಗುರುತನ್ನು ವಿಸ್ತರಿಸುವುದನ್ನು ಘೋಷಿಸಲು ನಾವು ಸಂತೋಷಪಡುತ್ತೇವೆ. ಕರ್ನಾಟಕ ನಮ್ಮ ಪ್ರಮುಖ ಮಾರುಕಟ್ಟೆಯಾಗಿರುವುದರಿಂದ, ಭರವಸೆಯ ನಗರದಲ್ಲಿ ಹೊಸ ಬ್ರ್ಯಾಂಡ್ ಸ್ಟೋರ್ ಉದ್ಘಾಟನೆ ಆಗಿದೆ ಎಂದು ಹೇಳಿದರು.

ಹೊಸಪೇಟೆ ದೇಶದ ವಿವಿಧ ಭಾಗಗಳ ಗ್ರಾಹಕರಿಗೆ ನಮ್ಮ ಆಧುನಿಕ ಆವಿಷ್ಕಾರದ ವಿಶಿಷ್ಟ ಅನುಭವವನ್ನು ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದು. ಸಮರಚನಾತ್ಮಕ ರಿಟೇಲ್ ವಿಸ್ತರಣೆ ಯುಕ್ತಿಯನ್ನು ಅನುಸರಿಸಿ, ನಾವು ನಮ್ಮ ಬಳಕೆದಾರರೊಂದಿಗೆ ಹೆಚ್ಚು ಸಂವಹನ ಮತ್ತು ಹೊಸ ಸಂಪರ್ಕಬಿಂದುಗಳನ್ನು ಸೃಷ್ಟಿಸಲು ಮುಂದುವರಿಯುತ್ತೇವೆ ಎಂದು ಹೇಳಿದರು.

ಬಾಲಕಿ ಮನೆಗೆ ಆಯೋಗ ಭೇಟಿ, ಪಾಲಕರಿಗೆ ಸಾಂತ್ವನ

ಕೊಪ್ಪಳ: ಪಾಲಕರು ಕೂಲಿ ಕೆಲಸಕ್ಕೆ ಹೋಗಿದ್ದಾಗ ಬೆಂಗಳೂರಿನಲ್ಲಿ ಅತ್ಯಾಚಾರಕ್ಕೆ ಒಳಗಾಗಿ ಕೊಲೆ ಆಗಿರುವ ಬಾಲಕಿಯ, ಕೊಪ್ಪಳ ತಾಲೂಕು ಹೊಸಬಂಡಿ ಹರ್ಲಾಪುರ ಗ್ರಾಮಕ್ಕೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ರಾಮತ್ನಾಳ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ ಭೇಟಿ ನೀಡಿ ಪಾಲಕರಿಗೆ ಸಾಂತ್ವನ ಹೇಳಿದರು.

ಆಯೋಗದ ಸದಸ್ಯ ಮಾತನಾಡಿ, ಕಳೆದ ಜುಲೈ 9 ರಂದು ಯಾರೋ ಅಪರಿಚಿತರು ಲೈಂಗಿಕ ಅಪರಾಧ ಎಸಗಿ ಕೊಲೆ ಮಾಡಿದ ಬಗ್ಗೆ ಬೆಂಗಳೂರು ದಕ್ಷಿಣ ಜಿಲ್ಲೆ ತಾವರಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಲೈಂಗಿಕ ಅಪರಾಧದಿಂದ ಮಕ್ಕಳ ಸಂರಕ್ಷಣ ಕಾಯ್ದೆ 2012ರಲ್ಲಿ ಅವಕಾಶ ಇರುವಂತೆ ಮಧ್ಯಂತರ ಪರಿಹಾರಕ್ಕೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬೇಕು. ಘಟಕದಿಂದ ಲಭ್ಯ ಯೋಜನೆಯಲ್ಲಿ ಕುಟುಂಬಕ್ಕೆ ಆರ್ಥಿಕ ಸಹಾಯ ಲಭ್ಯವಿದ್ದಲ್ಲಿ ನೀಡುವಂತೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗೆ ಹಾಗೂ ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ ಇವರಿಗೆ ಸೂಚಿಸಿದರು.

ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ-2012 ತಿದ್ದುಪಡಿ -2019ರ ಕಲಂ 23 (4)ರಡಿಯಲ್ಲಿ ಸಂತ್ರಸ್ತ ಮಗುವಿನ ಮಾಹಿತಿ ಯಾವುದೇ ಮಾಧ್ಯಮದಲ್ಲಿ ಪ್ರಕಟಿಸುವುದು, ಪ್ರಚುರ ಪಡಿಸುವುದು ಶಿಕ್ಷಾರ್ಹ ಅಪರಾಧ. ಇದಕ್ಕೆ 6 ತಿಂಗಳಿಂದ 1 ವರ್ಷ ಜೈಲು ಶಿಕ್ಷೆ ಮತ್ತು ದಂಡ ವಿಧಿಸಬಹುದಾಗಿರುತ್ತದೆ. ಈ ಕುರಿತು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರಿನಲ್ಲಿ ಪ್ರಕರಣ ಸೋ-ಮೋಟೊ ದಾಖಲಿಸಿಕೊಳ್ಳಲಾಗುವುದು ಎಂದು ಆಯೋಗದ ಸದಸ್ಯರು ತಿಳಿಸಿದರು.

ಸಮಾಜಿಕ ಕಾರ್ಯಕರ್ತ ರವಿಕುಮಾರ ಪವಾರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಔಟ್‌ರೀಚ್ ವರ್ಕರ್ ಪ್ರತಿಭಾ ಕಾಶಿಮಠ, ಅಂಗನವಾಡಿ ಮೇಲ್ವಿಚಾರಕರಾದ ಸುಮಂಗಲಾ ಸಜ್ಜನ, ಮುನಿರಾಬಾದ್ ಪೊಲೀಸ್‌ಠಾಣೆಯ ಮಹಿಳಾ ಪೊಲೀಸ್ ಸುಧಾ ಉಪಸ್ಥಿತರಿದ್ದರು.

ತಾಲೂಕಿನ ಹೊಸಬಂಡಿ ಹರ್ಲಾಪುರ ಗ್ರಾಮಕ್ಕೆ ಶೇಖರಗೌಡ ರಾಮತ್ನಾಳ ಅವರು ಭೇಟಿ ನೀಡಿ ಪಾಲಕರಿಗೆ ಸಾಂತ್ವನ ಹೇಳಿದರು.

ಯಲಬುರ್ಗಾ: ಉತ್ತಮ ಮಳೆಗೆ ರೈತರಲ್ಲಿ ಹರ್ಷ

ಯಲಬುರ್ಗಾ ತಾಲೂಕಿನಲ್ಲಿ ವರುಣ ದೇವನ ಆಗಮನಕ್ಕಾಗಿ ಕುದ್ರಿಮೋತಿಯ ಮೈಸೂರ ಸಂಸ್ಥಾನ ಮಠದಲ್ಲಿ ಗ್ರಾಮದ ಗುರು ಹಿರಿಯರು, ಯುವಕರು ಜೋತೆಗೂಡಿ ವರುಣನಿಗಾಗಿ ವಿಶೇಷ ಪೂಜೆ ಸಲ್ಲಿಸಿದ್ದರು.

ಯಲಬುರ್ಗಾ: ತಾಲೂಕಿನಾದ್ಯಂತ ಗುರುವಾರ ರಾತ್ರಿ ಉತ್ತಮ ಮಳೆಯಾಗಿದ್ದು, ಮಳೆ ಕೊರತೆ ಹಿನ್ನೆಲೆ ತಾಲೂಕಿನ ರೈತರಲ್ಲಿ ಮೂಡಿದ್ದ ಆತಂಕ ದೂರವಾಗಿದೆ. ಮಳೆರಾಯನ ಆಗಮನದಿಂದ ತಾಲೂಕಿನಲ್ಲಿ ಕೃಷಿ ಚಟುವಟಿಕೆ ಆರಂಭವಾಗಿವೆ. ಈ ಬಾರಿಯ ಆರಂಭದಿಂದ ಇಲ್ಲಿಯ ವರೆಗೆ ಸಕಾಲಕ್ಕೆ ಮಳೆಯಾಗದೇ ರೈತರು ಸಂಕಷ್ಟಕ್ಕಿಡಾಗಿದ್ದು, ಬಿತ್ತನೆ ಮಾಡಿದ ಬೆಳೆ ಕಮರಿ ಹೋಗಿದ್ದವು. ಇದರಿಂದ ರೈತರು ಮಳೆಗಾಗಿ ವಿವಿಧ ಪೂಜೆ, ಪುನಸ್ಕಾರಗಳ ಮೊರೆ ಹೊಗಿದ್ದರು.

ಈ ಮೊದಲು ವರುಣ ದೇವನ ಆಗಮನಕ್ಕಾಗಿ ಕುದ್ರಿಮೋತಿಯ ಮೈಸೂರ ಸಂಸ್ಥಾನ ಮಠದಲ್ಲಿ ಗ್ರಾಮದ ಗುರು ಹಿರಿಯರು, ಯುವಕರು ಜೋತೆಗೂಡಿ ವರುಣನಿಗಾಗಿ ವಿಶೇಷ ಅಭಿಷೇಕ ಪೂಜೆ ಸಲ್ಲಿಸಿದ್ದರು. ಸಕಾಲದಲ್ಲಿ ಆಗಮಿಸಿದ ವರುಣದೇವನಿಗೆ ಮಠದ ಅಧಿಪತಿಗಳಾದ ಶ್ರೀ ವಿಜಯ ಮಹಾಂತ ಸ್ವಾಮಿಗಳ ನೇತೃತ್ವದಲ್ಲಿ ಗೌರವವನ್ನು ಅರ್ಪಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಬಸಣ್ಣ ದೊಡ್ಡಮನಿ, ಮುದಕಪ್ಪ ರೇವಣಿಕಿ, ಮಹಾಂತಪ್ಪ ಸಿಡ್ನೇಹಳ್ಳಿ, ಶಿವಪ್ಪ ಬೇವಿನಗಿಡದ, ಮಂಜುನಾಥ ಗಟ್ಟೆಪ್ಪನವರ್, ಅಮರೇಶ ತಲ್ಲೂರು, ಹಂಪಯ್ಯ ಕಲ್ಮಠ, ಗ್ರಾ.ಪಂ.ಸದಸ್ಯರಾದ ಮಾಬುಸಾಬ ಮಕಾಂದರ್, ರವಿ ಕಟಗಿ, ಖಾಸೀಮ್ ಸಾಬ ಮಕಾಂದರ್, ದಾನನಗೌಡ ಮಾ.ಪಾಟೀಲ್, ದೇವಪ್ಪ ಬೊಮ್ಮನಾಳ, ಸೇರಿದಂತೆ ಇತರರು ಇದ್ದರು.

ಗ್ರಾಮೀಣ ಬಡ ಮಕ್ಕಳಿಗೆ ಶಿಕ್ಷಣ ನೀಡಿ

ಹೊಸಪೇಟೆ: ಗ್ರಾಮೀಣ ಭಾಗದಲ್ಲಿ ಆರೋಗ್ಯ ಎಟಿಎಂ , ಮಿಯವಾಕಿ ಕಾಡು ಬೆಳೆಸುವುದು, ಎಐ ತಂತ್ರಜ್ಞಾನದ ಮೂಲಕ ಶಿಕ್ಷಣ ನೀಡುವ ಮೂಲಕ ಪ್ರತಿ ಶಾಲೆಯನ್ನು ಹ್ಯಾಪಿ ಶಾಲೆಯನ್ನಾಗಿ ಮಾಡಿ ಎಂದು ಇನ್ನರ್ ವೀಲ್‌ನ ರಾಷ್ಟ್ರೀಯ ಅಧ್ಯಕ್ಷೆ ಜ್ಯೋತಿ ಮಹಿಪಾಲ್ ಸಲಹೆ ನೀಡಿದರು.

ನಗರದ ಪ್ರಿಯದರ್ಶಿನಿ ಪೈಡ್‌ನಲ್ಲಿ ಇನ್ನರ್ ವೀಲ್ 316ರ ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಭಾಗಿಯಾಗಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಶುದ್ಧ ಕುಡಿಯುವ ನೀರು ಆರೋಗ್ಯ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸಬೇಕು. ಇದರೊಂದಿಗೆ ಶೈಕ್ಷಣಿಕ ಕ್ಷೇತ್ರದಲ್ಲಿಯೂ ಹೆಚ್ಚಿನ ಕಾಳಜಿ ವಹಿಸುವ ಅತ್ಯಗತ್ಯವಿದೆ ಎಂದರು. ಬಡ ಮಕ್ಕಳಿಗೆ ಶಿಕ್ಷಣ ನೀಡಿ, ಹೊಸ ಯೋಜನೆಗಳನ್ನು ಅಳವಡಿಸಿಕೊಳ್ಳಿ, ನಾವು ಸಮಾಜದಿಂದ ಏನು ಪಡೆದೆವು ಎಂಬುದಕ್ಕಿಂತ ಏನು ಕೊಡುಗೆ ನೀಡಿದ್ದೇವೆ ಎಂಬುದು ಮುಖ್ಯ, ಎಲ್ಲರನ್ನೂ ವಿಶ್ವಾಸದಿಂದ ಕೊಂಡೊಯ್ಯುವುದೇ ನಾಯಕತ್ವ ಇದನ್ನು ಮನಗಂಡು, ಉತ್ತಮ ಕೆಲಸ ಮಾಡಿದಾಗ ಸಾರ್ವಜನಿಕವಾಗಿ ಹೊಗಳಿ ಪ್ರೋತ್ಸಾಹಿಸಿ ಎಂದು ಕಿವಿ ಮಾತು ಹೇಳಿದರು. ಈ ವರ್ಷ ಹಲವು ವಿಶಿಷ್ಟ, ವೈಶಿಷ್ಟ್ಯ ಪೂರ್ಣ ಯೋಜನೆಗಳ ಬಗ್ಗೆ ಈಗಾಗಲೇ ತಿಳಿದಿದ್ದು ಅದನ್ನು ಕಾರ್ಯರೂಪಕ್ಕೆ ತರುವುದು ಎಲ್ಲರ ಹೊಣೆ ಎಂದು ಕರೆ ನೀಡಿದರು.

ಇನ್ನರ್ ವೀಲ್ ಡಿಸ್ಟ್ರಕ್ಟ್ 316 ರ ನಿಕಟಪೂರ್ವ ಅಧ್ಯಕ್ಷೆ ಸುಷ್ಮಾ ಪತಂಗೆ ನೂತನ ಅಧ್ಯಕ್ಷೆ ಜಯಶ್ರೀ ರಾಜಗೋಪಾಲ್‌ಗೆ ಅಧಿಕಾರ ಹಸ್ತಾಂತರಿಸಿದರು. ಅಧಿಕಾರ ಸ್ವೀಕರಿಸಿದ ಜಯಶ್ರೀ ಮಾತನಾಡಿ, ಸಮಾಜದ ಸಕಾರಾತ್ಮಕ ಬದಲಾವಣೆ ತರುಬೇಕಿದೆ ಆದ್ದರಿಂದ ಹೇಳುವುದಕ್ಕಿಂತ ಕಾರ್ಯರೂಪಕ್ಕೆ ಇಳಿದು ಸುಂದರ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಮಹಿಳಾ ಸಬಲೀಕರಣ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಉತ್ತೇಜನ ನೀಡುವೆ ಎಂಬ ಆಶ್ವಾಸನೆ ನೀಡಿದರು.

ಈ ಸಂದರ್ಭದಲ್ಲಿ ರೋಟರಿ ಗವರ್ನರ್ ರವೀಂದ್ರನಾಥ್, ಮಾಜಿ ಗವರ್ನರ್ ಗಳಾದ ಗೋಪಿನಾಥ್, ತಿರುಪತಿ ನಾಯ್ಡು, ಚಿತ್ರಾದೇವಿ ಬಲ್ದೋಡಾ, ಯಶೋಧರ ದೇವಿ ಘೋರ್ಪಡೆ, ರತ್ನಶ್ರೀ ಕೆ ರಾಯ, ಮಾಜಿ ಜಿಲ್ಲಾಧ್ಯಕ್ಷರಾದ ಗೀತಾ, ಸವಿತಾ ಶಿವಕುಮಾರ್, ಜ್ಯೋತಿ, ಜಯತ್ರೀ ಛೇರ್ಮನ್ ಮೇಘನಾ ಹಿರೇಮಠ, ಕ್ಲಬ್ ಅಧ್ಯಕ್ಷೆ ನೈಮಿಷಾ, ಹಿರಿಯ ಸದಸ್ಯರು ಉಪಸ್ಥಿತರಿದ್ದರು.



ನಗರದ ಪ್ರಿಯದರ್ಶಿನಿ ಪೈಡ್‌ನಲ್ಲಿ ಇನ್ನರ್ ವೀಲ್ 316ರ ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಭಾಗಿಯಾಗಿ ಮಾತನಾಡಿದರು.

ಹುಲಗಿಯಲ್ಲಿ ಧಾರ್ಮಿಕ ಶಾಲೆ ಪ್ರಾರಂಭ ಶೀಘ್ರ

ಕೊಪ್ಪಳ: ಜೈನ ಕಾಶಿ ಕೊಪ್ಪಳ ತಾಲೂಕಿನ ಹುಲಗಿಯಲ್ಲಿ ಜೈನ ಧರ್ಮದ ತತ್ವಗಳನ್ನು ತಿಳಿಸುವ, ಮುಂದಿನ ಪೀಳಿಗೆಯು ಜೈನ ಧರ್ಮದ ಅಸ್ತಿತ್ವವನ್ನು ಉಳಿಸುವ ಉದ್ದೇಶದಿಂದ ಧಾರ್ಮಿಕ ಪಾಠಶಾಲೆ ಮಾಡಲು ಪ್ರಕ್ರಿಯೆ

ಪ್ರಾರಂಭವಾಗಿದ್ದು, ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ನಿರ್ದೇಶಕರ ನೇಮಕವನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಿ ಅದನ್ನು ಪ್ರಾರಂಭ ಮಾಡಲಾಗುವುದು ಎಂದು ಶ್ರಾವಕ ಸುಹಾಸ ಇಜಾರೆ ಹುಲಗಿ ಅವರು ತಿಳಿಸಿದ್ದಾರೆ. ಕೊಪ್ಪಳದಲ್ಲಿ ಸುಮಾರು ಏಳು ನೂರು ಜೈನ ಬಸದಿಗಳು ಅಸ್ತಿತ್ವದಲ್ಲಿದ್ದವು, ಕಾಲಕ್ರಮೇಣ ಅವು ಇತಿಹಾಸದ ಪುಟ ಸೇರಿದವು. ಮೂಲ ಇದು ಜೈನ ಸ್ಥಳವಾಗಿದ್ದು, ಅದರ ಪುನರ್ ಸ್ಥಾಪನೆ ಇದರ ಉದ್ದೇಶವಾಗಿದೆ ಎಂದು ಅವರು ತಿಳಿಸಿದ್ದಾರೆ. ಕೊಪ್ಪಳ ಜಿಲ್ಲೆಯ ಕಟ್ಟ ಕಡೆಯ ಗ್ರಾಮ ಅಂತರಗಾಣದಲ್ಲಿ ಆದಿನಾಥರ ವಿಗ್ರಹವಿದ್ದು, ಅಲ್ಲಿನ ಜೈನರ ಉಪಸ್ಥಿತಿ ಇಲ್ಲದ ಕಾರಣ ಗ್ರಾಮಸ್ಥರು ಅದರ ಪೂಜೆ ಪುನಸ್ಕಾರ ಮಾಡುತ್ತಿದ್ದಾರೆ. ಅದನ್ನು ಕೊಪ್ಪಳ ಜೈನ ಬಸದಿಗೆ ಹಸ್ತಾಂತರ ಮಾಡಬೇಕು. ಹಾಗೇಯೇ ತಾಲೂಕಿನ ಜಬ್ಬಲಗುಡ್ಡದಲ್ಲಿ ಜೈನ ಬಸದಿಯ ಜೀರ್ಣೋದ್ಧಾರ ಕಾರ್ಯಕ್ಕೆ ಜಿಲ್ಲಾಡಳಿತ ಮುಂದಾಗಬೇಕು ಎಂದು ಅವರು ತಿಳಿಸಿದ್ದಾರೆ. ಧಾರ್ಮಿಕ ಪಾಠಶಾಲೆಗೆ ಅಭಿನಂದನ ಗೋಗಿ, ಸಮೇದ ಜೈನ ಪದ್ಮ ಗೌಡ ಹೀರೆಗೌಡ್ರ, ಭುಜಬಲಿ ಪಾಟೀಲ್, ಉದಯರಾಜ ಕಾರಟಗಿ, ಉದಯಕುಮಾರ್ ಕಂಪಸಾಗರ, ಪಾಯಸಾಗರ, ಪದ್ಮಾವತಿ ಆನಂದ ಬಸ್ತಿ ನಿಲೋಗಲ್, ಶ್ರಾವಕಿಯರು ಇದರ ಸದಸ್ಯತ್ವ ಪಡೆಯಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿ ನಡೆಗೆ ಸಂಘಟನೆ ಖಂಡನೆ

ಹರಪನಹಳ್ಳಿ: ಬಿ.ಇಡಿ ಶಿಕ್ಷಣಾರ್ಥಿಗಳಿಗೆ ಯುಸಿಸಿಎಂಎಸ್ ದಾಖಲಾತಿ ದತ್ತಾಂಶ ಸರಿಪಡಿಸದೆ ಇದೇ ತಿಂಗಳು ವಿದ್ಯಾರ್ಥಿಗಳಿಗೆ ಪರೀಕ್ಷೆ ನಿಗದಿ ಮಾಡಿರುವ ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯದ ನಡೆ ಖಂಡಿಸಿ ತಾಲೂಕು ಅಖಿಲ ಭಾರತ ಕಿಸಾನ್ ಸಭಾದ ಮುಖಂಡರು ಪ್ರತಿಭಟಿಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೋರಾಟ ಪ್ರತಿಭಟನಕಾರರಾದ ಹರಪನಹಳ್ಳಿ ನಗರದ ತಾಲೂಕು ಆಡಳಿತ ಕಚೇರಿಯಲ್ಲಿ ಟಿಎಂಎಇ ಸಂಸ್ಥೆಯ ಬಿಇಡಿ ವಿದ್ಯಾರ್ಥಿಗಳು ಹಾಗೂ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಮತ್ತು ಅಖಿಲ ಭಾರತ ಕಿಸಾನ್ ಸಭಾದ ಸಹಯೋಗದಲ್ಲಿ ಯುಸಿಸಿಎಂಎಸ್ ದಾಖಲಾತಿ ದತ್ತಾಂಶದಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸುವಂತೆ ಒತ್ತಾಯಿಸಿ ತಹಸೀಲ್ದಾರ್ ಬಿ ವಿ ಗಿರೀಶ್ ಬಾಬು ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಯುಸಿಸಿಎಂಎಸ್ ದತ್ತಾಂಶದ ಲೋಪದೋಷದಿಂದ ವಿದ್ಯಾರ್ಥಿಗಳಲ್ಲಿ ಸಾಕಷ್ಟು ಗೊಂದಲ ಹಾಗೂ ಆತಂಕ ಉಂಟಾಗಿದ್ದು ವಿವಿ ಇದನ್ನು ಗಂಭಿರವಾಗಿ ಪರಿಗಣಿಸಿ ಸಮಸ್ಯೆಯನ್ನು ಸರಿಪಡಿಸಿ. ನಂತರ ಪರೀಕ್ಷೆಗಳನ್ನು ನಡೆಸಬೇಕು ಇಲ್ಲವಾದರೆ ವಿದ್ಯಾರ್ಥಿ ಸಂಘಟನೆಗಳು ಅನಿರ್ಧಿಷ್ಟ ಮುಷ್ಕರ ಮಾಡಲು ಮುಂದಾಗ ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಟಿಎಂಎಇ ಸಂಸ್ಥೆಯ ಡೀನ್ ಟಿ ಎಂ ರಾಜಶೇಖರ್ ಪ್ರಾಚಾರ್ಯ ಸಿ ಎಂ ವೀರೇಶ್, ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಸಂಘಟನೆಯ ಮುಖಂಡರಾದ ಗುಡಿಹಾಲೇಶ್, ರಾಜ್ಯ ಕಾರ್ಯದರ್ಶಿ ದೊಡ್ಮನಿ ಬಸವ ರಾಜ್, ಗುಳದಟ್ಟಿ ಸಂತೋಷ್ ,ಬಳಿಗನೂರು ಕೊಟ್ರೇಶ್, ಕರಿಬಸವರಾಜ, ಪ್ರಥಮ ಹಾಗೂ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಸೇರಿದಂತೆ ಇತರರಿದ್ದರು.



ಯುಸಿಸಿಎಂಎಸ್ ತಂತ್ರಾಂಶವನ್ನು ಸರಿಪಡಿಸಿ ತಾಲೂಕಿನ ಅಖಿಲ ಭಾರತ ಕಿಸಾನ್ ಸಬಾ ಸಂಘಟನೆ ಪ್ರತಿಭಟನೆ.

ನೇಣಿನ ಕುಣಿಕೆಯಿಂದ ಪಾರಾಗಿ ತವರಿಗೆ ಮರಳುವರೇ ನಿಮಿಷಾ | ತಲಾಲ್ ಅಬ್ದೊ ಮೆಹ್ದಿ ಕುಟುಂಬ ಸಂಧಾನಕ್ಕೆ ಒಪ್ಪುವುದೇ

ನಿಮಿಷಾಗೆ ಪ್ರತಿ ನಿಮಿಷಕ್ಕೂ ಸಾವಿನ ತಲ್ಲಣ

ನಿಮಿಷಾ ಪ್ರಿಯಾ ಕುರಿತ ಪ್ರಕರಣವು ಇದೀಗ ವಿಶ್ವಾದ್ಯಂತ ಸದ್ದು ಮಾಡುತ್ತಿದೆ. ಉದ್ಯೋಗ ಅರಸಿ ಯೆಮೆನ್‌ಗೆ ಹೋದ ಮಹಿಳೆಯೊಬ್ಬಳು ಕೊಲೆ ಪ್ರಕರಣವೊಂದರಲ್ಲಿ ಇದೀಗ ಸಾವಿನ ಕುಣಿಕೆಗೆ ಕೊರಳೊಡ್ಡುವ ಪರಿಸ್ಥಿತಿ ಬಂದಿದೆ. ಸಾವನ್ನು ಎದುರು ನೋಡುತ್ತಲೇ ಎಂಟು ವರ್ಷಗಳಿಂದ ಜೈಲಿನಲ್ಲಿ ಕಳೆದಿದ್ದಾಳೆ. ಹಾಗಾದರೆ ಏನಿದು ಪ್ರಕರಣ? ಯಾರು ಈ ನಿಮಿಷಾ? ಈ ಪ್ರಕರಣ ಮುಂದೇನಾಗಬಹುದು? ನಿಮಿಷಾಗೆ ಸಾವೋ, ಬದುಕೋ? ಎಂಬ ಕುರಿತು ಸಂಪೂರ್ಣ ವಿಶ್ಲೇಷಣೆ ಇಲ್ಲಿದೆ.

ಕೇರಳದ ಪಾಲಕ್ಕಾಡ್ ಬಳಿಯ ಕೊಲ್ಲಂಗೋಡು ಪಟ್ಟಣದ ನಿಮಿಷಾ ಪ್ರಿಯಾ ಎಂಬ ಹುಡುಗಿ ಉತ್ತಮವಾದ ಬದುಕು ಅರಸಿಕೊಂಡು 2008ರಲ್ಲಿ ತನ್ನ ಗಂಡನ ಜತೆಗೆ ಯೆಮನ್‌ಗೆ ಹೋಗಿದ್ದರು. ಒಂದಷ್ಟು ವರ್ಷ ಯೆಮನ್ ರಾಜಧಾನಿ ಸನಾ ನಗರದ ವಿವಿಧ ಆಸ್ಪತ್ರೆಗಳಲ್ಲಿ ನರ್ಸ್ ಆಗಿ ಕೆಲಸ ಮಾಡಿದರು. ಅಲ್ಲಿ ಅವರಿಗೆ ಒಂದು ಹೆಣ್ಣುಮಗುವೂ ಜನಿಸಿತು. ಆದರೆ, ನಿರೀಕ್ಷಿಸಿದಂತೆ ವೃತ್ತಿ ಜೀವನದಲ್ಲಿ ಪ್ರಗತಿ ಸಾಧಿಸಲಿಲ್ಲ ಎಂದು ಗಂಡ ಮತ್ತು ಮಗಳು ಕೇರಳಕ್ಕೆ ವಾಪಸ್ಸಾದರು. ಏಕಾಂಗಿಯಾಗಿ ಸನಾ ನಗರದಲ್ಲಿ ವಾಸ ಮಾಡುತ್ತಾ ನರ್ಸ್ ಆಗಿ ಕೆಲಸ ಮಾಡುತ್ತಿದ್ದ ಅವರಿಗೆ ತಾವೇ ಏಕೆ ಒಂದು ಕ್ಲಿನಿಕ್ ನಡೆಸಬಾರದು ಎನ್ನುವ ಆಲೋಚನೆ ಬಂತು. ಆ ದೇಶದ ನಿಯಮದ ಪ್ರಕಾರ, ಅಲ್ಲಿನ ಪ್ರಜೆಯೊಬ್ಬರನ್ನು ಪಾಲುದಾರರನ್ನಾಗಿ ಮಾಡಿಕೊಂಡರೆ ಮಾತ್ರ ಅದು ಸಾಧ್ಯವಿತ್ತು. ಆ ವೇಳೆ ನಿಮಿಷಾ ಅವರಿಗೆ ಜತೆಯಾದವರು ಯೆಮನ್ ಪ್ರಜೆ ತಲಾಲ್ ಅಬ್ದೊ ಮೆಹ್ದಿ.

ತನ್ನ ಉದ್ಯೋಗಕ್ಕೆ ಸಹಾಯಕನಾಗಬಲ್ಲನೆಂದು ನಂಬಿದ್ದ ವ್ಯಕ್ತಿಯೇ ನಿಮಿಷಾ ಪ್ರಿಯಾಗೆ ಮುಳುವಾಗಿಬಿಟ್ಟ. 'ನಿಮಿಷಾ ನನ್ನ ಹೆಂಡತಿ' ಎಂದು ಮೆಹ್ದಿ ಹೇಳಿಕೊಂಡು ಓಡಾಡತೊಡಗಿದ. ಜತೆಗೆ, ಅವಳಿಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಲಾರಂಭಿಸಿದ. ಅವಳ ಬಳಿ ಇದ್ದ ಹಣ ಮತ್ತು ಪಾಸ್‌ಪೋರ್ಟ್ ಕೂಡ ಕಸಿದುಕೊಂಡುಬಿಟ್ಟ. ಇದರಿಂದ ಕಂಗೆಟ್ಟಿದ್ದ ನಿಮಿಷಾ , ಹೇಗಾದರೂ ಮಾಡಿ ಅವುಗಳನ್ನು ಮರಳಿ ಪಡೆದು, ತನ್ನ ದೇಶಕ್ಕೆ ಮರಳಬೇಕು ಎಂದು ನಿರ್ಧರಿಸಿದಳು. ಮೆಹ್ದಿಗೆ ಮತ್ತು ಬರಿಸುವ ಚುಚ್ಚು ಮದ್ದು ನೀಡಿದಳು. ಆದರೆ, ಅದರ ಡೋಸ್ ಹೆಚ್ಚಾಗಿ ಮೆಹ್ದಿ ಅಸುನೀಗಿದ. ಪ್ರಕರಣವನ್ನು ಮುಚ್ಚಿ ಹಾಕಲು ನಿಮಿಷಾ ಮೆಹ್ದಿಯ ಮೃತದೇಹವನ್ನು ತುಂಡು ತುಂಡಾಗಿ ಕತ್ತರಿಸಿ, ಟ್ಯಾಂಕ್‌ಗೆ ಎಸೆದಿದ್ದಾಳೆ ಎನ್ನಲಾಗುತ್ತಿದೆ.

ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿ ಜೈಲು ಸೇರಿದ ಪ್ರಿಯಾ ಅವರಿಗೆ ಅಲ್ಲಿನ ಸ್ಥಳೀಯ ನ್ಯಾಯಾಲಯವು ಮರಣ ದಂಡನೆ ವಿಧಿಸಿತು. ಅಲ್ಲಿನ ಸುಪ್ರೀಂಕೋರ್ಟ್ ಶಿಕ್ಷೆಯನ್ನು ಎತ್ತಿ ಹಿಡಿಯಿತು. ಯೆಮನ್‌ನ ಅಧ್ಯಕ್ಷ ರಷದ್ ಅಲ್-ಅಲಿಮಿ ಕೂಡ ಮರಣ ದಂಡನೆಯನ್ನು ಅನುಮೋದಿಸಿದರು. ಅಲ್ಲಿಗೆ ಎಲ್ಲ ದಾರಿಗಳೂ ಮುಚ್ಚಿಹೋದವು.

ಇಂತಹ ಸ್ಥಿತಿಯಲ್ಲಿ ನಿಮಿಷಾ ಕುಟುಂಬಕ್ಕೆ ಇರುವ ಕೊನೆಯ ದಾರಿ 'ಬ್ಲಡ್ ಮನಿ'. ಆದರೆ, ಅದಕ್ಕೆ ಕೊಲೆಗೀಡಾದ ಮೆಹ್ದಿ ಕುಟುಂಬಸ್ಥರ ಅನುಮತಿ ಬೇಕು. ಈ ದಿಸೆಯಲ್ಲಿ ನಿಮಿಷಾ ಅವರ ತಾಯಿ ಪ್ರೇಮಾಕುಮಾರಿ ಮತ್ತು ಪತಿ ಟೋಮಿ ಥಾಮಸ್ ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ನಿಮಿಷಾ ಅವರ ರಕ್ಷಣೆಗಾಗಿಯೇ ವಕೀಲರು ಮತ್ತು ಇತರರು ಇರುವ ಅಂತಾರಾಷ್ಟ್ರೀಯ ಕಾರ್ಯಪಡೆಯೊಂದು ರಚನೆಯಾಗಿದ್ದು, ಭಾರತ ಸರಕಾರದ ಮೇಲೆ ಒತ್ತಡ ಹೇರಲಾಗುತ್ತಿದೆ. 2024ರ ಏಪ್ರಿಲ್‌ನಂದಲೂ ನಿಮಿಷಾ ಅವರ ತಾಯಿ ಯೆಮನ್ನಲ್ಲಿದ್ದು, ಮಗಳ ಬಿಡುಗಡೆಗಾಗಿ ಶ್ರಮಿಸುತ್ತಿದ್ದಾರೆ. ಮಗಳನ್ನು ಕ್ಷಮಿಸುವುದಾದರೆ, ಅದಕ್ಕಾಗಿ ದುಬಾರಿ ಮೊತ್ತದ ಪರಿಹಾರ ನೀಡುವುದಾಗಿ ಅವರು ಪ್ರತಿಪಾದಿಸು ತ್ತಿದ್ದಾರೆ. ವಕೀಲರ ಮೂಲಕ ಮೆಹ್ದಿ ಕುಟುಂಬದೊಂದಿಗೆ ಮಾತುಕತೆಗೆ ಪ್ರಯತ್ನ ನಡೆಸುತ್ತಿದ್ದಾರೆ.

ಯೆಮನ್‌ನಲ್ಲಿ ಆಂತರಿಕ ಕಲಹದ ಸ್ಥಿತಿಯಿದ್ದು, ರಾಜಧಾನಿ ಸನಾವು ಹುತಿ ಬಂಡುಕೋರರ ಹಿಡಿತದಲ್ಲಿದೆ. ಅವರೊಂದಿಗೆ ಭಾರತವು ಯಾವುದೇ ರೀತಿಯ ರಾಜತಾಂತ್ರಿಕ ಸಂಬಂಧ ಹೊಂದಿಲ್ಲ. ಹೀಗಾಗಿ ಭಾರತ ಸರಕಾರವು ಯೆಮನ್‌ನೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸುವ ಸಾಧ್ಯತೆ ಇಲ್ಲ. ಆದರೂ ರಾಜತಾಂತ್ರಿಕ ಅಧಿಕಾರಿಗಳು ನಿಮಿಷಾ ಅವರ ಕುಟುಂಬಸ್ಥರೊಂದಿಗೆ ಕೈಜೋಡಿಸಿದ್ದು, ನಿಮಿಷಾ ಅವರ ಬಿಡುಗಡೆಗೆ ಇರುವ ದಾರಿಗಳ ಹುಡುಕಾಟದಲ್ಲಿದ್ದಾರೆ.

ನಿಮಿಷಾ ಅವರ ಗಂಡ ಟೋಮಿ ಥಾಮಸ್ ಕಾರು ಚಾಲಕ. ತಾಯಿ ಪ್ರೇಮಾಕುಮಾರಿ ಮನೆಗೆಲಸ ಮಾಡಿಕೊಂಡು ಬದುಕು ನಡೆಸುವವರು. ವಕೀಲರ ವೆಚ್ಚ ಮತ್ತು ಇತರ ಖರ್ಚುಗಳಿಗಾಗಿ ಅವರ ಕೇರಳದಲ್ಲಿದ್ದ ತಮ್ಮ ಮನೆ, ಕಾರು ಸೇರಿದಂತೆ ಎಲ್ಲ ಆಸ್ತಿಯನ್ನೂ ಮಾರಿದ್ದಾರೆ. ಅವರ ಮಗಳು ವಸತಿ ಶಾಲೆಯಲ್ಲಿದ್ದು, 7ನೇ ತರಗತಿ ಓದುತ್ತಿದ್ದಾಳೆ. ಇದು ಸಾಲದು ಎನ್ನುವಂತೆ ಯೆಮನ್‌ನಲ್ಲಿ ಕ್ಲಿನಿಕ್ ಆರಂಭಿಸಲು ಅವರು ಮಾಡಿದ್ದ ₹60 ಲಕ್ಷ ರು. ಸಾಲವೂ ಇದೆ. ಆದರೂ ಈ ಕುಟುಂಬ ಭರವಸೆ ಕಳೆದುಕೊಂಡಿಲ್ಲ. ನಿಮಿಷಾ ಅವರು ಬಿಡುಗಡೆಯಾಗು ತ್ತಾರೆ ಎನ್ನುವ ವಿಶ್ವಾಸದಿಂದಿದೆ. ಅದಕ್ಕಾಗಿ ದಾನಿಗಳು ಮತ್ತಿತರರಿಂದ ಹಣ ಸಂಗ್ರಹ ಮಾಡಲಾಗುತ್ತಿದೆ. ನಿಮಿಷಾ ಅವರ ತಾಯಿಯು ಯೆಮನ್‌ನಿಂದ ವಿಡಿಯೊ ಮೂಲಕ ಕೇಂದ್ರ ಸರಕಾರ ಮತ್ತು ಅಧಿಕಾರಿಗಳು ಮಧ್ಯಪ್ರವೇಶ ಮಾಡಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ. ಸ್ಯಾಮ್ಯುಯೆಲ್ ಜೆರೋಮ್ ರೀತಿಯ ಹಲವು ಸಮಾಜ ಸೇವಕರು, ವಕೀಲರು ನಿಮಿಷಾ ಅವರ ಕುಟುಂಬದ ನೆರವಿಗೆ ನಿಂತಿದ್ದು, ಪ್ರಯತ್ನಗಳನ್ನು ಮುಂದುವರಿಸಿದ್ದಾರೆ. ಇರಾನ್ ಕೂಡ ಪ್ರಯತ್ನ ಪಡುತ್ತಿರುವುದಾಗಿ ಹೇಳಿದೆ.

ಏನಿದು ಬ್ಲಡ್ ಮನಿ?

ಮಾಡಿದ ತಪ್ಪನ್ನು ಕ್ಷಮಿಸುವುದಕ್ಕಾಗಿ ಸಂತ್ರಸ್ತರು ಅಥವಾ ಅವರ ಕುಟುಂಬದವರಿಗೆ ಪ್ರಕರಣದ ತಪ್ಪಿತಸ್ಥರು/ಆರೋಪಿಗಳು ಪರಿಹಾರದ ರೂಪದಲ್ಲಿ ನೀಡುವ ಮೊತ್ತವೇ ಬ್ಲಡ್ ಮನಿ. ಅರಬ್ಬಿ ಭಾಷೆಯಲ್ಲಿ 'ದಿಯಾ' ಎನ್ನಲಾಗುತ್ತದೆ. ಇಸ್ಲಾಂ ಷರಿಯಾ ಕಾನೂನು ಅನುಸರಿಸುವ ರಾಷ್ಟ್ರಗಳಲ್ಲಿ ಕ್ಷಮೆಗಾಗಿ ಪರಿಹಾರದ ಮೊತ್ತ ನೀಡುವ ಪದ್ಧತಿ ಅನುಸರಿಸಲಾಗುತ್ತದೆ. ಈ ನಿಯಮದ ಅಡಿಯಲ್ಲಿ ಅಪರಾಧ ಕೃತ್ಯ ಎಸಗಿದ ವ್ಯಕ್ತಿಯು ಪ್ರಕರಣದ ಸಂತ್ರಸ್ತ ಅಥವಾ ಅವರ ಕುಟುಂಬದವರಿಗೆ ನಿರ್ದಿಷ್ಟ ಪ್ರಮಾಣದ ಬೆಲೆಬಾಳುವ ವಸ್ತುವನ್ನು ನೀಡಬೇಕಾಗುತ್ತದೆ. ಹತ್ಯೆ ಪ್ರಕರಣಗಳಲ್ಲಿ ಪ್ರಮುಖವಾಗಿ ಈ ಪದ್ಧತಿಯನ್ನು ಬಳಸಲಾಗುತ್ತದೆ.

ನಿಮಿಷಾಳನ್ನು ಕ್ಷಮಿಸಲ್ಲ

ನಿಮಿಷಾಳ ಅಪರಾಧವನ್ನು ನಮ್ಮ ಕುಟುಂಬವು ಕ್ಷಮಿಸುವುದಿಲ್ಲ ಮತ್ತು ಯಾವುದೇ ಕಾರಣಕ್ಕೂ ಕ್ಷಮಾ ಪರಿಹಾರವನ್ನು (ಬ್ಲಡ್ ಮನಿ) ಸ್ವೀಕರಿಸುವುದಿಲ್ಲ ಎಂದು ನಿಮಿಷಾಳಿಂದ ಹತ್ಯೆಯಾದ ಯೆಮನ್ ಪ್ರಜೆ ತಲಾಲ್ ಅಬ್ದು ಮೆಹಿ ಸಹೋದರ ಅಬ್ದುಲ್ ಫತ್ತಾಹ್ ಹೇಳಿದ್ದಾರೆ. ಬಿಬಿಸಿ ಅರೇಬಿಕ್ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಫತ್ತಾಹ್, ತಡ ಮಾಡದೇ ನಿಮಿಷಾ ಳನ್ನು ಗಲ್ಲಿಗೇರಿ ಸಬೇಕು ಎಂದು ಒತ್ತಾಯಿಸಿದ್ದಾರೆ. ಭಾರತದ ಮಾಧ್ಯಮಗಳು ಅಪರಾಧಿಯನ್ನು ಸಂತ್ರಸ್ತೆ ಎನ್ನುವ ರೀತಿ ಬಿಂಬಿಸುತ್ತಿವೆ. ನಿಮಿಷಾಳಿಗೆ ಮೆಟ್ಟಿ ಕಿರುಕುಳ ನೀಡಿದ್ದನು ಮತ್ತು ಆಕೆಯ ಪಾಸ್‌ಪೋರ್ಟ್ ಇಟ್ಟುಕೊಂಡಿದ್ದನು ಎಂಬ ಸುಳ್ಳನ್ನು ಹರಡುತ್ತಿವೆ. ಈ ಸುಳ್ಳುಗಳಿಂದ ನಮ್ಮ ಕುಟುಂಬಕ್ಕೆ ಇನ್ನಷ್ಟು ನೋವಾಗಿದೆ ಎಂದು ಹೇಳಿದ್ದಾರೆ.

ಗಲ್ಲಿನ ಕುಣಿಕೆಯಿಂದ ಪಾರಾದವರು

ಮುಸ್ಲಿಂ ರಾಷ್ಟ್ರದಲ್ಲಿರುವ ದಿಯಾ ಪದ್ಧತಿಯಲ್ಲಿ ಪರಿಹಾರ ನೀಡಿ ಕೆಲ ಭಾರತೀಯರು ಮರಣದಂಡನೆ ಶಿಕ್ಷೆಯಿಂದ ಪಾರಾಗಿದ್ದಾರೆ. ಇಂತಹ ಪ್ರಕರಣದಲ್ಲಿ ಅಬ್ದುಲ್ ರಹೀಂ ಎನ್ನುವವರು ಗಲ್ಲು ಶಿಕ್ಷೆಯಿಂದ ಪಾರಾಗಿ ಬಂದಿದ್ದಾರೆ.

ಅಬ್ದುಲ್ ರಹೀಂ: ಕೇರಳದ ಕೋಯಿಕ್ಕೋಡ್‌ನಲ್ಲಿ ಆಟೋರಿಕ್ಷಾ ಚಾಲಕ ಆಗಿದ್ದ ಅಬ್ದುಲ್ ರಹೀಂ, ಸೌದಿ ಅರೇಬಿಯಾದಲ್ಲಿ ಕೊಲೆ ಆರೋಪ ಎದುರಿಸುತ್ತಿದ್ದರು. ಮರಣದಂಡನೆ ಶಿಕ್ಷೆಗೆ ಗುರಿಯಾಗಿದ್ದ ಇವರು ಕ್ಷಮಾದಾನ ಪಡೆದು 20 ವರ್ಷಗಳ ಸೆರೆವಾಸಕ್ಕೆ ಗುರಿಯಾದರು. ಅನುಭವಿಸಿದರು. ಇವರಿಗಾಗಿ ನೀಡಿದ ದಿಯಾ ಮೊತ್ತ ಬರೋಬ್ಬರಿ ₹34 ಕೋಟಿ. 2006ರಲ್ಲಿ ಸೌದಿ ಅರೇಬಿಯಾದಲ್ಲಿ ಕುಟುಂಬವೊಂದರ ಚಾಲಕನಾಗಿ ಕೆಲಸ ಮಾಡುತ್ತಿದ್ದ ಅಬ್ದುಲ್ ರಹೀಂ, ಕೆಲಸಕ್ಕೆ ಸೇರಿದ ಮೊದಲ ತಿಂಗಳೇ ಆ ಕುಟುಂಬದ ಬಾಲಕನೊಬ್ಬನನ್ನು ಚಿಕಿತ್ಸೆ ನೀಡುವ ನೆಪದಲ್ಲಿ ಕೊಲೆ ಮಾಡಿದ್ದರು ಎನ್ನಲಾಗಿದೆ. ಪಾರ್ಶವಾಯು ಪೀಡಿತ ಬಾಲಕನಿಗೆ ಚಿಕಿತ್ಸೆ ನೀಡುತ್ತೇನೆ ಎಂದು ವೈದ್ಯಕೀಯ ಉಪಕರಣವನ್ನು ಕುತ್ತಿಗೆಗೆ ಚುಚ್ಚಿದಾಗ ಬಾಲಕ ಮೃತಪಟ್ಟಿದ್ದ. ಮೃತ ಬಾಲಕನ ಕುಟುಂಬ ಅಬ್ದುಲ್ ರಹೀಂ ಮೇಲೆ ಪ್ರಕರಣ ದಾಖಲು ಮಾಡಿದ್ದರು. ಮರಣದಂಡನೆಗೆ ಗುರಿ ಮಾಡಲಾಗಿತ್ತು. ನಂತರ ಆ ಕುಟುಂಬದ ಜತೆ ಸಂಧಾನ ನಡೆಸಿ ಅಬ್ದುಲ್‌ನನ್ನು ಮರಣದಂಡೆನೆಯಿಂದ ಪಾರು ಮಾಡಲಾಯತಿತು. ಪರಿಹಾರ ಮೊತ್ತ ನೀಡಿದ್ದರಿಂದ, ಕುಟುಂಬದ ಕ್ಷಮಾದಾನ ಅಬ್ದುಲ್ ರಹೀಂಗೆ ಸಿಕ್ಕಿತು. 20 ವರ್ಷಗಳ ಜೈಲು ಶಿಕ್ಷೆ ಡಿಸೆಂಬರ್ 2026ರಕ್ಕೆ ಅಂತ್ಯವಾಗಲಿದೆ.

ಎ.ಎಸ್. ಶಂಕರನಾರಾಯಣನ್: ತನ್ನ ಸಹೋದ್ಯೋಗಿಯಾಗಿದ್ದ ಬಾಂಗ್ಲಾದೇಶದ ವ್ಯಕ್ತಿಯನ್ನು 2009ರಲ್ಲಿ ಶೌಚಾಲಯದಲ್ಲಿ ವಿದ್ಯುತ್ ಆಘಾತ ನೀಡಿ ಸಾವಿಗೆ ಕಾರಣನಾದ ಪ್ರಕರಣದಲ್ಲಿ ಸಂಯುಕ್ತ ಅರಬ್ ಸಂಸ್ಥಾನದಲ್ಲಿ ಜೈಲು ಶಿಕ್ಷೆ ಅನುಭವಿಸಿ ಇತ್ತೀಚೆಗೆ ಕೇರಳಕ್ಕೆ ಮರಳಿದ್ದಾರೆ. ಸಂತ್ರಸ್ತ ಕುಟುಂಬಕ್ಕೆ ₹47 ಲಕ್ಷ ಪರಿಹಾರ ಮೊತ್ತ ನೀಡಿದ ಶಂಕರನಾರಾಯಣನ್ ಬಿಡುಗಡೆಯಾಗಿ ತವರಿಗೆ ಮರಳಿದರು.

ಸಿ.ಎಚ್.ಲಿಂಬಾದ್ರಿ: ತೆಲಂಗಾಣದ ತೋಟದ ಕೆಲಸಗಾರ ಸಿ.ಎಚ್. ಲಿಂಬಾದ್ರಿ ಎಂಬುವವರು 82 ವರ್ಷದ ವ್ಯಕ್ತಿಯನ್ನು ತಳ್ಳಿ ಸಾಯಿಸಿದ ಪ್ರಕರಣದಲ್ಲಿ ಮರಣದಂಡನೆಗೆ ಗುರಿಯಾಗಿದ್ದರು. ಸೌದಿ ಅರೇಬಿಯಾದಲ್ಲಿ ಈ ಪ್ರಕರಣ ನಡೆದಿದ್ದು, ಕಳ್ಳತನಕ್ಕೆ ಬಂದಿದ್ದ 82 ವರ್ಷದ ವ್ಯಕ್ತಿಯನ್ನು ಲಿಂಬಾದ್ರಿ ತಳ್ಳಿದ್ದರು. ಕೆಳಗೆ ಬಿದ್ದ ಅವರು ಗಾಯಗೊಂಡು ಮೃತಪಟ್ಟಿದ್ದರು. ಈ ಪ್ರಕರಣದಲ್ಲಿ ಲಿಂಬಾದ್ರಿಗೆ ಮರಣದಂಡನೆ ಶಿಕ್ಷೆ ಪ್ರಕಟಗೊಂಡಿತ್ತು. ಇವರನ್ನು ಕೆಲಸಕ್ಕೆ ನೇಮಿಸಿಕೊಂಡ ಸಂಸ್ಥೆಯು ಸಂತ್ರಸ್ತ ಕುಟುಂಬಕ್ಕೆ ₹1.80 ಲಕ್ಷ ಪರಿಹಾರ ಮೊತ್ತ ನೀಡಿತು. 2017ರ ಮಾರ್ಚ್‌ನಲ್ಲಿ ಲಿಂಬಾದ್ರಿ ಬಿಡುಗಡೆಗೊಂಡು ಮನೆಗೆ ಮರಳಿದರು.

ಬೆಂಗಳೂರಿನ ಚಾಲಕನ ಉಳಿಸಿದ ಸೌದಿ ದೊರೆ: ಬೆಂಗಳೂರಿನ ಸಲೀಂ ಬಾಷಾ ಅವರು ಸೌದಿ ಅರೇಬಿಯಾದಲ್ಲಿ ಚಾಲಕರಾಗಿ ಕೆಲಸ ಮಾಡುತ್ತಿದ್ದರು. 2006ರಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಒಂಬತ್ತು ಜನರ ಸಾವಿಗೆ ಇವರು ಕಾರಣರಾಗಿದ್ದರು. 2013ರಲ್ಲಿ ಇವರಿಗೆ ಮರಣದಂಡನೆ ಶಿಕ್ಷೆ ಘೋಷಣೆಯಾಗಿತ್ತು. ಈ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಸೌದಿ ಅರೇಬಿಯಾದ ಆಗಿನ ದೊರೆ ₹1.5 ಕೋಟಿ ಪರಿಹಾರ ಮೊತ್ತವನ್ನು ಸಂತ್ರಸ್ತ ಕುಟುಂಬಗಳಿಗೆ ನೀಡಿ ಇವರನ್ನು ಮರಣದಂಡನೆಯಿಂದ ಪಾರು ಮಾಡಿದ್ದರು. ಇದೀಗ ನಿಮಿಷಾ ಪ್ರಿಯಾ ಪ್ರಕರಣದಲ್ಲೂ ಬ್ಲಡ್ ಮನಿ ಕುರಿತಂತೆ ಮಾತುಕತೆ ನಡೆಯುತ್ತಿದೆ.

ಶೇಕ್ ಅಬೂಬಕರ್ ಮಾಡಿದ್ದೇನು?

ತನ್ನ ಧಾರ್ಮಿಕ ಸಂಪರ್ಕದ ಮೂಲಕ ಯೆಮನ್‌ನ ಸೂಫಿ ವಿದ್ವಾಂಸರನ್ನು ಸಂಪರ್ಕಿಸಿದ ಎ.ಪಿ ಅಬೂಬಕರ್ ಮುಸ್ಲಿಯಾರ್, ನಿಮಿಷಾ ಗಲ್ಲು ಶಿಕ್ಷೆ ಮುಂದೂಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಯೆಮನ್‌ನಲ್ಲಿರುವ ಸೂಫಿ ವಿದ್ವಾಂಸರೊಂದಿಗೆ, ಅದರಲ್ಲೂ ಪ್ರಮುಖ ನೇತಾರ ಶೇಕ್ ಹಬೀಬ್ ಉಮರ್ ಬಿನ್ ಹಫೀಜ್ ಅವರೊಂದಿಗೆ ಇರುವ ತನ್ನ ಸಂಬಂಧ ಬಳಸಿ, ಸಂತ್ರಸ್ತ ಕುಟುಂಬಕ್ಕೆ ಆಪ್ತವಾಗಿರುವ ಪ್ರಮುಖ ಧರ್ಮಗುರುವನ್ನು ಸಂಪರ್ಕಿಸಿದ್ದಾರೆ ಎನ್ನಲಾಗಿದೆ. ಈ ಹಿಂದೆ ಈ ಸಂಪರ್ಕ ಯಾರಿಂದಲೂ ಸಾಧ್ಯವಾಗಿಲ್ಲ ಎನ್ನುವುದು ಗಮನಾರ್ಹ. ನನಗೆ ಸಂತ್ರಸ್ತ ಕುಟುಂಬದ ಬಗ್ಗೆ ಗೊತ್ತಿಲ್ಲ. ಆದರೆ ಯೆಮನ್ ನಲ್ಲಿರುವ ವಿದ್ವಾಂಸರನ್ನು ನಾನು ಸಂಪರ್ಕಿಸಿದೆ. ಅವರು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡರು. ಇಸ್ಲಾಂ ಶಾಂತಿಯ ಧರ್ಮ, ಮಾನವೀಯತೆಗೆ ಇಸ್ಲಾಂ ಪ್ರಾಮುಖ್ಯತೆ ನೀಡುತ್ತದೆ ಎಂದು ಅಬೂಬಕರ್ ತಿಳಿಸಿದ್ದಾರೆ. ಅವರ ಸಂಧಾನಕ್ಕೆ ಮೆಹ್ದಿ ಕುಟುಂಬ ಒಪ್ಪುವುದೇ ಎಂದು ಕಾದು ನೋಡಬೇಕಾಗಿದೆ.

₹8.57 ಕೋಟಿ ಪರಿಹಾರದ ಪ್ರಸ್ತಾಪ

ನಿಮಿಷಾ ಪ್ರಿಯಾ ಪ್ರಕರಣದಲ್ಲಿ ಅವರ ಕುಟುಂಬದವರು ಮೆಹ್ದಿಯ ಕುಟುಂಬದವರಿಗೆ 10 ಲಕ್ಷ ಡಾಲರ್ (ಸುಮಾರು ₹8.57 ಕೋಟಿ) ಹಣವನ್ನು ಕ್ಷಮಾದಾನ ಪರಿಹಾರವನ್ನಾಗಿ ನೀಡಲು ಮುಂದೆ ಬಂದಿದ್ದಾರೆ. ಆದರೆ, ಇದನ್ನು ಮೆಹ್ದಿ ಕುಟುಂಬ ಇನ್ನೂ ಒಪ್ಪಿಲ್ಲ. ಯೆಮನ್‌ನಲ್ಲಿ ಅಶಾಂತಿ ನೆಲಸಿರುವುದರಿಂದ ರಾಜಿ ಸಂಧಾನ ಮಾತುಕತೆಯನ್ನು ಪರಿಣಾಮಕಾರಿಯಾಗಿ ನಡೆಸಲು ಸಾಧ್ಯವಾಗಿಲ್ಲ ಎಂದೂ ಹೇಳಲಾಗುತ್ತಿದೆ.

ಶೇಕ್ ಅಬೂಬಕರ್ ಮಧ್ಯಸ್ಥಿಕೆ

ನಿಮಿಷಾ ಪ್ರಿಯಾರನ್ನು ಗಲ್ಲಿಗೇರಿಸಲು ಇನ್ನೇನು ಕೆಲವೇ ಗಂಟೆಗಳು ಬಾಕಿ ಇತ್ತು. ಎಲ್ಲ ಪ್ರಯತ್ನಗಳು ಮಾಡಿದರೂ ಪ್ರಯೋಜನವಾಗಿಲ್ಲ ಎಂದು ಕೇಂದ್ರ ಸರಕಾರ ಕೈಚೆಲ್ಲಿ ಕುಳಿತಿತ್ತು. ಎಲ್ಲ ಭರವಸೆಗಳು ಮುಗಿದಿವೆ, ಪ್ರಾರ್ಥನೆಯೊಂದೇ ದಾರಿ ಎಂದು ಎಲ್ಲರೂ ನಂಬಿದ್ದರು. ನಾವು ಕ್ರಮಿಸಲು ಸಾಧ್ಯವಾದಷ್ಟು ದೂರ ಸಾಗಿದ್ದೇವೆ ಎಂದು ಕೇಂದ್ರ ಸರಕಾರವು ಕೂಡ ಸುಪ್ರೀಂಕೋರ್ಟ್‌ಗೆ ತಿಳಿಸಿತ್ತು. ನಿಮಿಷಾ ಪ್ರಿಯಾಗೆ ಗಲ್ಲು ಶಿಕ್ಷೆ ಖಾತರಿಯಾಗಿತ್ತು. ಈ ವೇಳೆ ಈ ಪ್ರಕರಣಕ್ಕೆ ಕೇರಳದ ಮುಸ್ಲಿಂ ಧಾರ್ಮಿಕ ಗುರು, ಸುನ್ನಿ ನಾಯಕ ಭಾರತದ ಮುಖ್ಯ ಮುಫ್ತಿ ಶೇಕ್ ಕಾಂತಪುರಂ ಎ.ಪಿ.ಅಬೂಬಕರ್ ಮುಸ್ಲಿಯಾರ್ ಅವರ ಮಧ್ಯಪ್ರವೇಶ ಮಾಡಿದರು. ಅಬೂಬಕರ್ ಯೆಮನ್‌ನ ಧಾರ್ಮಿಕ ಗುರುಗಳೊಂದಿಗೆ ಸಂಧಾನಕ್ಕೆ ಮುಂದಾಗಿದ್ದು ಜುಲೈ 16ರಂದು ಜಾರಿಯಾಗಬೇಕಿದ್ದ ಗಲ್ಲು ಶಿಕ್ಷೆಯನ್ನು ಸದ್ಯಕ್ಕೆ ಮುಂದೂಡಲಾಗಿದೆ. ಆದರೆ ನಿಮಿಷಾ ಪ್ರಿಯಾ ಮೇಲಿನ ಗಲ್ಲುಶಿಕ್ಷೆಯ ತೂಗುಗತ್ತಿ ಇನ್ನೂ ಹಾಗೆಯೇ ಇದೆ. ಕುಟುಂಬಸ್ಥರು ಇನ್ನೂ ಭರವಸೆ ಎಳೆಯೊಂದನ್ನು ಹಿಡಿದು ಕುಳಿತಿದ್ದಾರೆ.

▶▶ ಪಾಲಿಕೆಯಿಂದ ಐತಿಹಾಸಿಕ ನಿರ್ಧಾರ ▶▶ ಗಡಿ ಪ್ರಾಧಿಕಾರದಿಂದ ಖಡಕ್ ಎಚ್ಚರ

ಕಡ್ಡಾಯ ಕನ್ನಡಕ್ಕೆ ಎಂಇಎಸ್ ವಿಲವಿಲ

ಜಿಲ್ಲಾ ನೋಟ

ವಿನಾಯಕ ಮಠಪತಿ, ಬೆಳಗಾವಿ

ಭಾಷೆ ವಿಚಾರವಾಗಿ ಸದ್ದು ಮಾಡುವ ಬೆಳಗಾವಿ ಮಹಾನಗರ ಪಾಲಿಕೆ ಕನ್ನಡ ಭಾಷೆ ಕಡ್ಡಾಯಗೊಳಿಸುವ ವಿಚಾರವಾಗಿ ಸುದ್ದಿಯಲ್ಲಿದೆ. ಪಾಲಿಕೆಯ ಆಡಳಿತಾಧಿಕಾರಿಗಳು ಜನರ ಜೊತೆ ಕಡ್ಡಾಯವಾಗಿ ಕನ್ನಡ ಭಾಷೆಯಲ್ಲಿ ವ್ಯವಹಾರ ಮಾಡುವ ಉದ್ದೇಶದಿಂದ ಕನ್ನಡ ಕಲಿಕಾ ಕೇಂದ್ರ ಸ್ಥಾಪನೆಗೆ ಆಯುಕ್ತರು ಮುಂದಾಗಿದ್ದಾರೆ. ಭಾಷೆ ವಿಚಾರವಾಗಿ ಸರಕಾರ ಕೈಗೊಂಡ ನಿರ್ಧಾರದಿಂದ ಕಂಗಾಲಾಗಿರುವ ಎಂಇಎಸ್ ಮತ್ತೊಮ್ಮೆ ಗಡಿಯಲ್ಲಿ ಪುಂಡಾಟ ಮೆರೆಯುತ್ತಿದೆ.

ಕನ್ನಡ ಕಡ್ಡಾಯ ನಿರ್ಧಾರ

ದಶಕಗಳ ಇತಿಹಾಸ ಹೊಂದಿರುವ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಕನ್ನಡ ಭಾಷೆ ದೂರದ ತಾರಾಮಂಡಲದ ದೊಡ್ಡ ನಕ್ಷತ್ರ ದಂತಿತ್ತು. ನಮ್ಮದೇ ರಾಜ್ಯದಲ್ಲಿನ ಮಹಾನಗರ ಪಾಲಿಕೆಯಲ್ಲಿ ಕನ್ನಡ ಭಾಷೆಯೇ ಅಪರೂಪವಾಗಿತ್ತು. ಎಂಇಎಸ್ ಪ್ರಭಾವವಿದ್ದ ಕಾಲದಲ್ಲಿ ಕನ್ನಡ ನಾಡಗೀತೆ, ಬಾವುಟಕ್ಕೂ ಪಾಲಿಕೆಯಲ್ಲಿ ಅವಕಾಶ ಇರಲಿಲ್ಲ. ಆದರೆ ಈಗ ಮಹಾನಗರ ಪಾಲಿಕೆ ಆಯುಕ್ತೆ ಶುಭ ಬಿ. ಅವರು ಕನ್ನಡ ಕಡ್ಡಾಯಗೊಳಿಸುವ ನಿಟ್ಟಿನಲ್ಲಿ ಮಹತ್ವದ ನಿರ್ಧಾರ ಕೈಗೊಂಡಿದ್ದಾರೆ.

ಕಡ್ಡಾಯ ಕನ್ನಡಕ್ಕೆ ಸೂಚನೆ

ಸರಕಾರದ ಆದೇಶದ ಅನ್ವಯ ಕಚೇರಿಗಳಲ್ಲಿ ವ್ಯವಹಾರಿಕವಾಗಿ ಕನ್ನಡ ಭಾಷೆ ಕಡ್ಡಾಯವಾಗಿದೆ. ಸಾರ್ವಜನಿಕರಿಗೂ ಕನ್ನಡಲ್ಲಿಯೇ ಸೇವೆ ಒದಗಿಸಬೇಕು. ಕಚೇರಿ ಆದೇಶ ಪತ್ರಗಳಲ್ಲಿ ಕನ್ನಡ ಬಳಕೆಯಾಗಬೇಕು. ಪಾಲಿಕೆಯ ಎಲ್ಲಾ ಅಧಿಕಾರಿ ಸಿಬ್ಬಂದಿ ಗಳು ಕಡ್ಡಾಯವಾಗಿ ಕನ್ನಡ ಬಳಕೆ ಮಾಡಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ಬೆಳಗಾವಿಯಲ್ಲಿ ಸಭೆ ನಡೆಸಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಕಲಿಕಾ ಕೇಂದ್ರ ಸ್ಥಾಪನೆ

ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಆಡಳಿತಾತ್ಮಕವಾಗಿ ಕನ್ನಡವನ್ನು ಕಡ್ಡಾಯಗೊಳಿಸುವ ನಿರ್ಧಾರಕ್ಕೆ ಆಯುಕ್ತರು ಬಂದಿದ್ದಾರೆ. ಪಾಲಿಕೆಯಲ್ಲಿ ಕನ್ನಡ ಕಲಿಕಾ ಕೇಂದ್ರ ಸ್ಥಾಪಿಸಿ ಅಧಿಕಾರಿಗಳಿಗೆ ಕನ್ನಡ ಓದು ಹಾಗೂ ಬರಹ ಕಲಿಸುವ ಮೂಲಕ ಎಲ್ಲಾ ವಿಭಾಗಗಳಲ್ಲಿ ಜನರಿಗೆ ಕನ್ನಡದಲ್ಲೇ ವ್ಯವಹಾರ ನಡೆಸಲು ಸಹಕಾರಿಯಾಗುವಂತೆ ಕ್ರಮಕ್ಕೆ ಪಾಲಿಕೆ ಆಯುಕ್ತೆ ಶುಭ ಬಿ. ಅವರು ಮುಂದಾಗಿದ್ದು, ಇದಕ್ಕೆ ಎಂಇಎಸ್‌ನವರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

ಕನ್ನಡ ಬರದಿದ್ದರೆ ಬಡ್ತಿ ಕಟ್

ಬೆಳಗಾವಿ ಪಾಲಿಕೆಯಲ್ಲಿ ಸುಮಾರು 30 ಪ್ರತಿಶತ ಅಧಿಕಾರಿಗಳಿಗೆ ಕನ್ನಡ ಓದಲು ಹಾಗೂ ಬರೆಯಲು ಬರದಿರುವ ಪರಿಸ್ಥಿತಿ ಇದೆ. ಇದರಿಂದ ಜನರಿಗೆ ವ್ಯವಹಾರ ನಡೆಸಲು ತೊಂದರೆಯಾಗುತ್ತಿದೆ. ಈ ಹಿನ್ನಲೆಯಲ್ಲಿ ಕನ್ನಡ ಕಡ್ಡಾಯ ಬಳಕೆಗೆ ಗಡಿ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರ ಖಡಕ್ ಸೂಚನೆ ಬೆನ್ನಲ್ಲೆ ಬರುವ ನವೆಂಬರ್ 1 ರ ಒಳಗಾಗಿ ಅಧಿಕಾರಿಗಳು ಕನ್ನಡ ಓದಲು, ಬರೆಯಲು ಕಲಿಯಬೇಕೆಂದು ಸೂಚನೆ ನೀಡಲಾಗಿದೆ. ಅಲ್ಲದೆ ಕನ್ನಡ ಬರದಿದ್ದರೆ ವರ್ಗಾವಣೆ ಹಾಗೂ ಸೇವಾ ಬಡ್ತಿ ಸೌಲಭ್ಯ ಕಡಿತಗೊಳಿಸುವ ಎಚ್ಚರಿಕೆ ನೀಡಲಾಗಿದೆ.

ನಿಲ್ಲದ ಎಂಇಎಸ್ ಪುಂಡಾಟ

ಗಡಿ ಭಾಗದ ಸರಕಾರಿ ಕಚೇರಿಯಲ್ಲಿ ಶೇ.60 ರಷ್ಟು ಕನ್ನಡ ಕಡ್ಡಾಯಗೊಳಿಸುವ ನಿರ್ಧಾರ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಕಣ್ಣು ಕೆಂಪಾಗಿಸಿದೆ. ಗಡಿ ಭಾಗದಲ್ಲಿ ಮರಾಠಿ ಭಾಷಿಕರ ಸಂಖ್ಯೆ ಹೆಚ್ಚಾಗಿದ್ದು ಯಾವುದೇ ಕಾರಣಕ್ಕೂ ಕನ್ನಡ ಕಡ್ಡಾಯ ಮಾಡಬಾರದು ಎಂದು ಮೊಂಡಾಟ ನಡೆಸಿದೆ. ಕನ್ನಡ ನೆಲದಲ್ಲಿ ಕನ್ನಡ ಭಾಷೆ ಕಡ್ಡಾಯಗೊಳಿಸುವ ರಾಜ್ಯ ಸರಕಾರದ ನಿರ್ಧಾರಕ್ಕೆ ಅಡ್ಡಗಾಲು ಹಾಕುತ್ತಿರುವ ಎಂಇಎಸ್ ಸಭೆ ನಡೆಸಿ ಸರಕಾರದ ಆದೇಶದ ವಿರುದ್ಧ ಕಿಡಿಕಾರುತ್ತಿದೆ.

ಪಾಲಿಕೆ ಮೇಲೆ ಹಿಡಿತ ಸಡಿಲ

ಸ್ವಾತಂತ್ರ್ಯ ಪೂರ್ವ 1851 ರಿಂದಲೂ ಬೆಳಗಾವಿ ಮಹಾನಗರ ಪಾಲಿಕೆ ಅಸ್ತಿತ್ವದಲ್ಲಿದೆ. ಸ್ವಾತಂತ್ರ್ಯ ನಂತರ ಮುಂಬೈ ಪ್ರೆಸಿಡೆನ್ಸಿಗೆ ಒಳಪಟ್ಟಿದ್ದ ಬೆಳಗಾವಿ ನಂತರ 1956 ರಲ್ಲಿ ರಾಜ್ಯಗಳ ಮರುವಿಂಗಡಣೆ ಪರಿಣಾಮ ಕರ್ನಾಟಕಕ್ಕೆ ಸೇರಿತು. ಮಹಾನಗರ ಪಾಲಿಕೆಯಲ್ಲಿ ಹಿಡಿತ ಹೊಂದಿದ್ದ ಎಂಇಎಸ್ ನ ಶಕ್ತಿ ನಿಧಾನಕ್ಕೆ ಕುಂದಿದೆ. ಸದಾ ಕಾಲವೂ ಗಡಿ ವಿಚಾರವಾಗಿ ಪುಂಡಾಟ ಮೆರೆಯುವ ಎಂಇಎಸ್ ರಾಜಕೀಯ ಲಾಭಕ್ಕಾಗಿ ಹಪಹಪಿಸುತ್ತದೆ. ಕಳೆದ ಒಂದು ದಶಕದಲ್ಲಿ ಎಂಇಎಸ್ ಹೇಳ ಹೆಸರಿಲ್ಲದಂತಾಗಿದೆ. ರಾಜಕೀಯವಾಗಿ ಪ್ರಭಾವ ಕಳೆದುಕೊಂಡಿದ್ದು ನಿರಂತರವಾಗಿ ಚುನಾವಣೆಯಲ್ಲಿ ಸೋಲುವ ಮೂಲಕ ತನ್ನ ಅಸ್ತಿತ್ವಕ್ಕಾಗಿ ಹೋರಾಟ ಮುಂದುವರಿಸಿದೆ.

ನಾಡಗೀತೆ ಮೊಳಗಿಸಿದ್ದ ಡಿಸಿ

ಮೊದಲಬಾರಿಗೆ 2017ರಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ 'ಜಯ ಭಾರತ ಜನನಿಯ ತನುಜಾತೆ' ನಾಡಗೀತೆ ಮೊಳಗಿತ್ತು. ಆಗಿನ ಜಿಲ್ಲಾಧಿಕಾರಿ ಎನ್. ಜಯರಾಂ ಅವರು ಸ್ಥಾಯಿ ಸಮಿತಿ ಚುನಾವಣೆ ವೇಳೆ ನಾಡಗೀತೆ ಮೊಳಗಿಸುವ ಮೂಲಕ ಕನ್ನಡಿಗರ ಹೃದಯ ಗೆದ್ದಿದ್ದರು. ಈ ವೇಳೆ ಎಂಇಎಸ್ ಸದಸ್ಯರು ತುಟಿ ಬಿಚ್ಚದೆ ಎದ್ದು ನಿಂತು ನಾಡಗೀತೆಗೆ ಗೌರವ ಸೂಚಿಸಿದ್ದರು. ಇದಾದ ಮೇಲೆಯೇ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಕನ್ನಡ ನಾಡಿನ ಮಾಧುರ್ಯಭರಿತ ನಾಡಗೀತೆ ನಿರಂತರ ವಾಗಿ ಕೇಳಿ ಬರುತ್ತಿದೆ.

ಎಂಇಎಸ್ ಮುಖಂಡರ ಸಭೆ

ಮಹಾನಗರ ಪಾಲಿಕೆ ಸೇರಿದಂತೆ ಗಡಿ ಭಾಗದ ಸರಕಾರಿ ಕಚೇರಿಗಳಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಬಳಕೆ ಮುಂದಾಗಿರುವ ನಡೆಯನ್ನು ವಿರೋಧಿಸಿ ಎಂಇಎಸ್ ಮುಖಂಡರು ನಗರದಲ್ಲಿ ಸಭೆ ನಡೆಸಿ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಆದರೆ ಎಂಇಎಸ್ ಪುಂಡಾಟಕ್ಕೆ ಬೆಳಗಾವಿ ಜಿಲ್ಲಾಡಳಿತ ಸೊಪ್ಪು ಹಾಕಬಾರದು ಎಂಬುದು ಕನ್ನಡಿಗರ ಪ್ರಬಲ ವಾದ.

▶▶ ಜಿಲ್ಲೆಯ ಜನಪ್ರತಿನಿಧಿಗಳಲ್ಲೇ ಕಚ್ಚಾಟ ▶▶ ಕಾಂಗ್ರೆಸ್ ಎರಡು ಬಣ ಕೆಸರೆರಚಾಟ
▶▶ ದಲಿತರಿಗೆ ಅನಗತ್ಯ ಕಿರುಕುಳ, ಆರೋಪ ▶▶ ಜಿಲ್ಲಾ ಉಸ್ತುವಾರಿ ಸಚಿವರನ್ನ ಬದಲಿಸಿ

ಕುಸಿದ ಆಡಳಿತ ಯಂತ್ರ, ಭ್ರಷ್ಟಾಚಾರಕ್ಕೆ ನಾನಾ ತಂತ್ರ

ಜಿಲ್ಲಾ ನೋಟ

ಕೆ.ಎಸ್.ಮಂಜುನಾಥ ರಾವ್, ಕೋಲಾರ

ಚಿನ್ನದ ನಾಡಿನ ರಾಜಕೀಯ ಅಸ್ಥಿರತೆಯಿಂದಾಗಿ ಅಧಿಕಾರಿಗಳಿಗೆ ಆಡಿದ್ದೇ ಆಟ ಎಂಬಂತಾಗಿದ್ದು ಆಡಳಿತ ಯಂತ್ರ ಕುಸಿದು ಲಂಚ ತಾಂಡವವಾಡುತ್ತಿದೆ. ಬಿಜೆಪಿ-ಜೆಡಿಎಸ್ ಮೈತ್ರಿ ಕೂಟ ಕಾಂಗ್ರೆಸ್ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುತ್ತಿದ್ದರೆ ಕಾಂಗ್ರೆಸ್‌ನ ಎರಡು ಬಣ ಪರಸ್ಪರರ ಮೇಲೆ ಟೀಕೆ-ಟಿಪ್ಪಣಿ ಮಾಡುತ್ತಿದ್ದು ದೂರು ಮುಖ್ಯಮಂತ್ರಿವರೆಗೂ ಮುಟ್ಟಿದೆ..!

ಭ್ರಷ್ಟಾಚಾರದ ಆರೋಪ

ಇದು ಜಿಲ್ಲೆಯ ಸದ್ಯದ ರಾಜಕೀಯ ಹಾಗೂ ಆಡಳಿತ ವ್ಯವಸ್ಥೆಯ ಚಿತ್ರ. ಮಾಲೂರು ಶಾಸಕ ನಂಜೇಗೌಡರ ವಿರುದ್ಧ ಬಂಗಾರಪೇಟೆ ಶಾಸಕ ಎಸ್ಸೆನ್ ನಾರಾಯಣಸ್ವಾಮಿ ಅವರು ಮಾಡಿರುವ ಭ್ರಷ್ಟಾಚಾರದ ಆರೋಪಗಳ ಕುರಿತು ತನಿಖೆ ಮಾಡಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಸುರೇಶ್ ಆಶ್ವಾಸನೆ ಕೊಟ್ಟಿದ್ದಾರೆ ಹೌದು. ಆದರೆ ಇದುವರೆಗೆ ಅಂತಹ ಯಾವುದೇ ಪ್ರಕ್ರಿಯೆಗಳು ಆರಂಭವಾಗದ ಕಾರಣ ಇದೊಂದು ತಿಪ್ಪೆ ಸಾರಿಸುವ ಪ್ರಯತ್ನ ಎಂಬುದು ರಾಜಕೀಯ ವಿರೋಧಿಗಳ ಆರೋಪವಾಗಿದೆ.

ದಲಿತರನ್ನೇ ಟಾರ್ಗೆಟ್

ಜಿಲ್ಲೆಯಲ್ಲಿ ದಲಿತರನ್ನು ಟಾರ್ಗೇಟ್ ಮಾಡಲಾಗುತ್ತಿದ್ದು ಇದೇ ಕಾರಣಕ್ಕಾಗಿ ಮಾಜಿ ಸಂಸದ ಮುನಿಸ್ವಾಮಿ ಅವರನ್ನು ಕೋಲಾರದಿಂದ ಜಾಗ ಖಾಲಿ ಮಾಡಿಸಲಾಯಿತು. ನಂತರ ಬಂಗಾರಪೇಟೆ ಶಾಸಕ ಎಸ್ಸೆನ್ ನಾರಾಯಣಸ್ವಾಮಿ ಅವರಿಗೆ ತೊಂದರೆ ನೀಡಲಾಗುತ್ತಿದ್ದು ಮುಂದೆ ನಾನೇ ಗುರಿ ಆಗುತ್ತೇನೆ ಎಂದು ಜನರೊಂದಿಗೆ ಜನತಾದಳ ಕಾರ್ಯಕ್ರಮದಲ್ಲಿ ಮುಳಬಾಗಲು ಶಾಸಕ ಸಮೃದ್ಧಿ ಮಂಜುನಾಥ್ ಅಳಲು ತೋಡಿಕೊಳ್ಳುವ ಮೂಲಕ ದಲಿತರಿಗೆ ವಿನಾಕಾರಣ ಕಿರುಕುಳ ನೀಡಲಾಗುತ್ತಿದೆ ಎಂದು ಬಹಿರಂಗ ಆರೋಪ ಮಾಡಿದ್ದಾರೆ. ಇದು ಕೂಡ ಜಿಲ್ಲೆಯ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಶಾಸಕರ ಜಟಾಪಟಿ

ಅರಣ್ಯ ಜಮೀನು ಒತ್ತುವರಿ ತೆರವು ಪ್ರಕರಣದಲ್ಲಿ ವಿನಾ ಕಾರಣ ರೈತರಿಗೆ ಕಿರುಕುಳ ನೀಡಲಾಗುತ್ತಿದ್ದು ಅರಣ್ಯ ಇಲಾಖೆ ಅಧಿಕಾರಿಗಳದ್ದು ಏಕಪಕ್ಷೀಯ ತೀರ್ಮಾನ ಆಗುತ್ತಿದೆ ಎಂದು ಎಂಎಲ್‌ಸಿ ಇಂಚರ ಗೋವಿಂದರಾಜು, ಶಾಸಕರಾದ ಎಸ್ಸೆನ್ ನಾರಾಯಣಸ್ವಾಮಿ ಮತ್ತು ಸಮೃದ್ಧಿ ಮಂಜುನಾಥ್ ದಿಶಾ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದಾಗ ತಿರುಗೇಟು ನೀಡಿದ ಮಾಲೂರು ಶಾಸಕ ನಂಜೇಗೌಡರು ಜನಪ್ರತಿನಿಧಿಗಳು ಅಧಿಕಾರಿಗಳ ಮೇಲೆ ದಬ್ಬಾಳಿಕೆ ಮಾಡುವುದು ತರವಲ್ಲ ಎಂದು ಅರಣ್ಯ ಇಲಾಖೆ ಪರ ನಿಂತಾಗ ನಡೆದ ಜಟಾಪಟಿ ಬಿಡಿಸಲು ಸಂಸದ ಮಲ್ಲೇಶ್‌ಬಾಬು ಅವರು ಪರದಾಡಬೇಕಾಯಿತು.ಈ ಸ್ಥಿತಿಯನ್ನು ಕಂಡು ಅಧಿಕಾರಿಗಳು ಮುಸಿಮುಸಿ ನಗುತ್ತಿದ್ದುದು ಸುಳ್ಳೇನಲ್ಲ.

ದಿಶಾ ಸಭೆಯ ಕತೆ

ಅಭಿವೃದ್ಧಿ ಕುರಿತು ಪರಿಶೀಲನೆ ನಡೆಸಿ ಕೆಲಸ ಮಾಡದ ಅಧಿಕಾರಿಗಳ ಚಳಿ ಬಿಡಿಸಬೇಕಾದ ಜನಪ್ರತಿನಿಧಿಗಳೇ ಪರಸ್ಪರ ಕಚ್ಚಾಡಿಕೊಂಡಾಗ ಅಧಿಕಾರಿಗಳು ಪಾರಾಗಿದ್ದು ವಾಸ್ತವ ಸಂಗತಿ ಎಂಬುದು ಬಹಿರಂಗ ಸತ್ಯ. ಹೀಗಾಗಿ ಇಡೀ ಸಭೆ ಜನಪ್ರತಿನಿಧಿಗಳ ಜಗಳದಲ್ಲೇ ಮುಗಿಯುವ ಮೂಲಕ ಅಧಿಕಾರಿಗಳು ಕೂಡ ಅಷ್ಟರಮಟ್ಟಿಗೆ ಪಾರಾದರು. ಇಡೀ ಪ್ರಹಸನದ ಕುರಿತು ವ್ಯಾಖ್ಯಾನಿಸಿರುವ ಶಾಸಕ ಕೊತ್ತೂರು ಮಂಜುನಾಥ್ ಅಧಿಕಾರಿಗಳ ಮೇಲೆ ದಬ್ಬಾಳಿಕೆ ಮಾಡುವುದು ಕೆಲ ಶಾಸಕರ ಅಭ್ಯಾಸ ಎಂದು ಟಾಂಗ್ ನೀಡುವ ಮೂಲಕ ಬೆಂಕಿಗೆ ತುಪ್ಪ ಸುರಿದಿದ್ದಾರೆ. ಹೀಗಾಗಿ ಇದು ಇಲ್ಲಿಗೆ ನಿಲ್ಲುವುದಿಲ್ಲ ಎಂಬುದು ಎರಡೂ ಬಣದವರಿಗೆ ಮನವರಿಕೆ ಆಗಿದೆ.ಇಬ್ಬರ ಜಗಳದಿಂದಾಗಿ ಭ್ರಷ್ಟ ವ್ಯವಸ್ಥೆಯ ಭಾಗದಂತಿರುವ ಅಧಿಕಾರಿಗಳು ಪಾರಾಗುತ್ತಿದ್ದಾರೆ ಎಂದು ಜನತೆ ಹಣೆ ಹಣೆ ಚಚ್ಚಿಕೊಳ್ಳುತ್ತಿದ್ದಾರೆ.

ಸೈನೇಡ್ ಗುಡ್ಡದಿಂದ ಚಿನ್ನ

ಕೆಜಿಎಫ್ ಚಿನ್ನದ ಗಣಿಯಲ್ಲಿ ಅದಿರಿನಿಂದ ಚಿನ್ನ ತೆಗೆದು ಉಳಿದ ಮಣ್ಣನ್ನು ನಾನಾ ಕಡೆ ಗುಡ್ಡೆ ಮಾಡಲಾಗಿದ್ದು ಇದರಿಂದ ದೊಡ್ಡ ಬೆಟ್ಟಗಳು ನಿರ್ಮಾಣ ಆಗಿವೆ. ಇದೀಗ ಕೆಲ ಅಧಿಕಾರಿಗಳು ಸೈನೇಡ್ ಗುಡ್ಡದ ಮಣ್ಣಿನಿಂದ ಉಳಿದಿರುವ ಚಿನ್ನ ತೆಗೆಯಲು ಟೆಂಡರ್ ಕರೆದಿದ್ದು ಇದರಿಂದಾಗಿ ನೂರಾರು ಉದ್ಯೋಗ ಸಿಗುತ್ತದೆ ಎಂದು ಸುದ್ದಿ ಹಬ್ಬಿಸಲಾಯಿತು. ಈ ಸುದ್ದಿ ಮಾಧ್ಯಮಗಳಲ್ಲೂ ಹರಿದಾಡಿ ಸಖತ್ ವಿಜೃಂಭಿಸಿತ್ತು...!

ಜಾಗತಿಕ ಟೆಂಡರ್ ಬೇಕು

ಈ ಮಾಹಿತಿ ತಿಳಿದ ಸ್ಥಳೀಯ ಶಾಸಕಿ ರೂಪಾಶಶಿಧರ್ ಅವರು ಈ ಸಂಬಂಧ ಸ್ಪಷ್ಟೀಕರಣ ನೀಡಿದ್ದು ಇದೆಲ್ಲಾ ಊಹಾಪೋಹ. ಹಾಗೇನಾದರೂ ಸೈನೇಡ್ ಗುಡ್ಡದಿಂದ ಚಿನ್ನ ತೆಗೆಯಬೇಕಾದರೆ ಜಾಗತಿಕ ಟೆಂಡರ್ ಕರೆಯಬೇಕಾಗುತ್ತದೆ. ನನಗೆ ತಿಳಿಯದೆ ಅಂತಹ ಮಹತ್ವದ ವಿಷಯಗಳು ಕಾರ್ಯಾಚರಣೆ ಮಾಡುವುದು ಅಸಾಧ್ಯ. ಅಧಿಕಾರಿಗಳು ಸುಳ್ಳು ಸುದ್ದಿ ಹರಡುವುದನ್ನು ನಿಲ್ಲಿಸಬೇಕು ಎಂದು ಕಟ್ಟಪ್ಪಣೆ ಮಾಡಿರುವುದು ಅಧಿಕಾರಿಗಳ ಬಣ್ಣ ಬಯಲಾದಂತಾಗಿದೆ.

ಲೋಕಾಯುಕ್ತ ರೇಡ್

ಕೋಲಾರ ಜಿಲ್ಲೆಯಲ್ಲಿ ಲೋಕಾಯುಕ್ತ ರೇಡ್ ನಡೆಯುತ್ತಿದ್ದು ಪ್ರತಿನಿತ್ಯ ಅಧಿಕಾರಿಗಳು ಹಣದ ಕಂತೆಯ ಸಮೇತ ಸಿಗಿಬೀಳುತ್ತಿದ್ದಾರೆ. ಕೆಲ ದಿನಗಳ ಹಿಂದೆ ಸರಕಾರಿ ನೌಕರರ ಸಂಘದ ಅಧ್ಯಕ್ಷರೇ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಲುಕಿಕೊಂಡಿದ್ದು ಹೈಕೋರ್ಟ್‌ನಿಂದ ನಿರೀಕ್ಷಣಾ ಜಾಮೀನು ತಂದಿದ್ದಾರೆ ಎಂದರೆ ಜಿಲ್ಲೆಯ ಭ್ರಷ್ಟಾಚಾರದ ಸ್ಥಿತಿ ಹೇಗಾಗಿದೆ ಎಂಬುದು ಯಾರಿಗಾದರೂ ಅರ್ಥ ಆಗುತ್ತದೆ.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಸುರೇಶ್ ಅವರು ಧ್ವಜ ಹಾರಿಸಲು ಮಾತ್ರವೇ ಕೋಲಾರಕ್ಕೆ ಬರುತ್ತಿದ್ದಾರೆ. ಅಧಿಕಾರಿಗಳ ಸಭೆಗಳನ್ನು ಬೆಂಗಳೂರಿಗೆ ಸೀಮಿತ ಮಾಡಿರುವುದು ಸಮಸ್ಯೆಯ ಮೂಲವಾಗಿದೆ. ಹೀಗಾಗಿ ಸ್ಥಳೀಯ ಶಾಸಕರನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿಸುವ ಮೂಲಕ ಆಡಳಿತ ಯಂತ್ರವನ್ನು ಸರಿದಾರಿಗೆ ತರಬೇಕಾಗಿದೆ.
-ನಾರಾಯಣಗೌಡ, ರಾಜ್ಯ ಉಪಾಧ್ಯಕ್ಷರು, ರೈತ ಸಂಘ

ಚಿತ್ತವಿಹಾರ

ಸಕಾರಾತ್ಮಕ ಚಿಂತನೆ

• ಮಾಯಾ ಬಾಲಚಂದ್ರ

ಸಕಾರಾತ್ಮಕ ಮನಸ್ಥಿತಿ ಇದ್ದಾಗ ಯಶಸ್ಸು ಸಾಧ್ಯ ಎನ್ನುವುದು ಪ್ರಚಲಿತ. ಸಕಾರಣ, ಆಧಾರ ಸಹಿತ ಸಕಾರಾತ್ಮಕತೆ ಎಲ್ಲರಿಗೂ ಸಹಜ ಸಾಧ್ಯ. ಅಕಾರಣ, ಆಧಾರ ರಹಿತ ಸಕಾರಾತ್ಮಕತೆ ಹೇಗೆ ಸಾಧ್ಯ? ಅದು ಪ್ರಗತಿಪರವಾದದ್ದೇ?

ಎನ್ನುವುದು ಎಲ್ಲರನ್ನು ಕಾಡುವ ಪ್ರಶ್ನೆ. ಎಲ್ಲ ಸಂದರ್ಭಗಳಲ್ಲೂ, ಫಲಿತಾಂಶ ಸಕಾರಾತ್ಮಕವಾಗಿಯೇ ಬಂದುಬಿಡುತ್ತದೆ ಎಂದು ಮನಸ್ಸನ್ನು ನಂಬಿಸಿಬಿಟ್ಟರೆ ಹಲವು ಬಾರಿ ಬೆಳವಣಿಗೆ ಕುಂಠಿತವಾಗಿ ಬಿಡುತ್ತದೆ.

ಮಗ ಶಾಲೆಯಲ್ಲಿ ಹಿಂದುಳಿದಾಗ, ತಂದೆಯೊಬ್ಬ ಕಲಿಕೆಗೆ ಪರ್ಯಾಯ ಮಾರ್ಗವಾಗಿ ಬೊಂಬೆ ಆಟ ಆಡಿಸುವ ರಂಗಮಂದಿರವನ್ನು ತನ್ನ ಮಗನಿಗೆ ನಿರ್ಮಿಸಿಕೊಟ್ಟ. ರಂಗಮಂದಿರದಲ್ಲಿ ಬೊಂಬೆಗಳನ್ನು ನಿಲ್ಲಿಸುವುದು, ಅವುಗಳನ್ನು ಅಲಂಕರಿಸುವುದು ಮುಂತಾದ ಕೆಲಸಗಳನ್ನು ಮಾಡುತ್ತಾ ಹೋದ ಆ ಹುಡುಗ. ಆ ಬೊಂಬೆಗಳು ಮಕ್ಕಳನ್ನು ಬಹಳವಾಗಿಯೇ ಆಕರ್ಷಿಸಿದವು. ಪ್ರತಿನಿತ್ಯ ಮಕ್ಕಳ ಮುಂದೆ ಬೊಂಬೆ ಆಟ ಆಡಿಸಲಾರಂಭಿಸಿದ. ಆ ಆಟಕ್ಕೆ ನಾಟಕಗಳು ಅವಶ್ಯಕವಾಗಿ ಬೇಕಾದವು. ತಾನೇ ಕಥೆಯನ್ನು ಕಲ್ಪಿಸಿ, ಪಾತ್ರಗಳನ್ನು ಸೃಷ್ಟಿಸಿ, ನಾಟಕ ಹೆಣೆಯಲಾರಂಭಿಸಿದ. ತಾನು ತಯಾರಿಸಿದ ಬೊಂಬೆಗಳನ್ನೇ ತನ್ನ ನಾಟಕದ ಪಾತ್ರಧಾರಿಗಳನ್ನಾಗಿಸಿದ. ಮುಂದೆ ಸ್ವತಃ ನಾಟಕ, ಕಥೆಗಳನ್ನು ಬರೆಯುವುದರಲ್ಲಿ ಮಗ್ನನಾದ. ಶಾಲೆಯಲ್ಲಿ ಕಲಿತದ್ದು ಕಡಿಮೆಯಾದ್ದರಿಂದ ದೋಷವಿಲ್ಲದೆ ಬರೆಯಲು ಕಷ್ಟವೆನಿಸಿತು. ಸತತ ಪ್ರಯತ್ನದಿಂದ ದೋಷಗಳಿಲ್ಲದೆ ಬರೆಯುವುದನ್ನು ಕಲಿತ. ಹಲವು ಹಂತಗಳಲ್ಲಿ ಸವಾಲುಗಳನ್ನು ಎದುರಿಸುವ ಸಂದರ್ಭಗಳಲ್ಲಿ, ''ನಾನು ಹೀಗೇ ಇದ್ದರೂ ಎಲ್ಲವೂ ಒಳ್ಳೆಯದೇ ಆಗುತ್ತದೆ'' ಎಂದು ಯಾವುದೇ ಪ್ರಯತ್ನಕ್ಕೆ ತೊಡಗದೆ, ಆತ ತನ್ನ ಮನಸ್ಸಿಗೆ ಸುಳ್ಳು ಸುಳ್ಳೇ ನಂಬಿಸಿಬಿಟ್ಟಿದ್ದರೆ, ವಿಶ್ವವಿಖ್ಯಾತ ಮಕ್ಕಳ ಕಥೆಗಾರ ಆಂಡರ್ಸನ್‌ನ ಹೆಸರು ಹಾಗೂ ಆತನ ಕಥೆಗಳು ನಮ್ಮ ನಡುವೆ ಉಳಿಯುತ್ತಿರಲಿಲ್ಲ.

ತಂದೆ ಮಗ ಇಬ್ಬರ ಸಕಾರಾತ್ಮಕ ನಿಲುವು ಎನ್ನುವುದು ಕೆಲಸಗಳು ಹಾಗೂ ಪ್ರಯತ್ನಗಳೆಡೆಗಿತ್ತೇ ಹೊರತು ಫಲಿತಾಂಶದ ಕಡೆಗಲ್ಲ. ಫಲಿತಾಂಶ ಖಂಡಿತವಾಗಿ ಗೆಲುವು ಸಾರುವಂತದ್ದೇ ಆಗಿರುತ್ತದೆ ಎಂದು ಕುರುಡಾಗಿ ನಂಬಿ, ಸರಿಯಾದ ಪ್ರಯತ್ನವನ್ನು ಮಾಡದೆ ಕುಳಿತರೆ, ಅದರಿಂದ ಯಾವುದೇ ಪ್ರಯೋಜನವಿಲ್ಲ. ಆಧಾರ ರಹಿತ ಹಾಗೂ ಅಕಾರಣ ಸಕಾರಾತ್ಮಕ ನಿಲುವು ನಿಷ್ಪ್ರಯೋಜಕ. ಅದು ತಾತ್ಕಾಲಿಕ ಮಾತ್ರ. ಸಕಾರಾತ್ಮಕ ಮನೋಭಾವವನ್ನು ನಮ್ಮ ನಿಷ್ಠೆ, ಸಿದ್ಧತೆ, ಪ್ರಯತ್ನ, ಸಾಮರ್ಥ್ಯ ಎಲ್ಲವುಗಳ ಬಗ್ಗೆ ಇಟ್ಟುಕೊಂಡು ಕಾರ್ಯೋನ್ಮುಖರಾದಾಗ, ಸಕಾರಾತ್ಮಕ ಫಲಿತಾಂಶ ಮೂಡಿಬರಲು ಸಾಧ್ಯ.

ಹನಿ ಮಳೆ

ಕೊಡಿ ನಮಗೆ ನಗದು!

ಹಾಲು ಮೊಸರು ಕೊತ್ತಂಬರಿ ಕಟ್ಟು
ಎಲ್ಲಕ್ಕೂ ಇಷ್ಟು ದಿನ ಮೊಬೈಲ್ ಸನ್ನದು!
ಬಂತು ನೋಡಿ ನೋಟೀಸು, ತೆರಿಗೆ ಕಟ್ಟು
ಈಗ ಕೊಡಿ ನೀವು ಬರೇ ನಗದು!

• ಅಜಯ್ ಅಂಚೆಪಾಳ್ಯ

ಕಲ್ಪವೃಕ್ಷದಿಂದ ಕಲಾಕೃತಿ

• ಹೊಸ್ಮನೆ ಮುತ್ತು

ಕಲಾತ್ಮಕ ಮನೋಭಾವವಿದ್ದರೆ ಯಾವುದೇ ಚಿಕ್ಕ ಪುಟ್ಟ ವಸ್ತುಗಳಲ್ಲಿಯೂ ಕಲೆ ಅರಳಿಸಬಹುದು. ನಾವು ನಿತ್ಯವೂ ಕಾಣುವ ಎಷ್ಟೋ ಸಾಮಾನ್ಯ ವಸ್ತುಗಳಲ್ಲಿಯೇ ಸುಂದರ ಕಲಾಕೃತಿಗಳನ್ನು ತಯಾರಿಸಲು ಸಾಧ್ಯವಿದೆ. ಇವುಗಳಲ್ಲಿ ತೆಂಗಿನ ಗರಿಯೂ ಒಂದು.

ಬಹಳ ಹಿಂದಿನಿಂದಲೂ ತೆಂಗಿನ ಉತ್ಪನ್ನಗಳನ್ನು ಬಳಸಿ ಅನೇಕ ಕಲಾಕೃತಿಗಳನ್ನು ತಯಾರಿಸುತ್ತಿದ್ದರು. ಈ ಕಲಾ ಪ್ರಕ್ರಿಯೆಯು ತುಂಬಾ ಸರಳವಾಗಿದ್ದು, ಕಲಾಕಾರರ ನುರಿತ ಕೈಗಳಿಂದ ಅಲಂಕಾರಿಕ ಪರದೆಗಳು, ಬುಟ್ಟಿಗಳು, ತೋರಣಗಳು, ಟೋಪಿಗಳು, ಬೀಸಣಿಕೆ, ಚಾಪೆ, ಹಾಗೂ ಅಟಿಕೆ ಇತ್ಯಾದಿಗಳು ತಯಾರಾಗುತ್ತವೆ. ತೆಂಗಿನ ಗರಿಯಿಂದ ತಯಾರಾಗುವ ಟೋಪಿ ಹಾಗೂ ಬುಟ್ಟಿಗಳು ವಸ್ತುವಿನ್ಯಾಸದಲ್ಲಿ ಅಚ್ಚುಕಟ್ಟಾಗಿರುತ್ತವೆ.

ಈ ರೀತಿಯ ನೈಸರ್ಗಿಕ ಉತ್ಪನ್ನಗಳನ್ನು ತಯಾರಿಸಲು ವಿಶೇಷವಾದ ಯಾವ ಉಪಕರಣಗಳೂ ಬೇಡ. ಇದಕ್ಕೆಲ್ಲಾ ಬೇಕಿರುವುದು ಕೊಂಚ ತಾಳ್ಮೆ, ಇದರ ಎರಡು ಪಟ್ಟು ಕ್ರಿಯಾಶೀಲತೆ ಅಷ್ಟೇ. ಮಕ್ಕಳಿಗೆ ಕಲಿಸಲು ಅಥವಾ ಮನರಂಜನೆಯ ಚಟುವಟಿಕೆಯಾಗಿಯೂ, ಕೂಡಾ ತೆಂಗಿನ ಗರಿಗಳನ್ನು ಕ್ರಾಫ್ಟ್ ಸಮಯಕ್ಕೆ ಸೇರಿಸಿಕೊಳ್ಳಬಹುದು. ಯಾವುದೇ ದುಷ್ಪರಿಣಾಮಗಳಿಲ್ಲದ, ಆರೋಗ್ಯಕ್ಕೆ ಮಾರಕವಲ್ಲದ, ತೆಂಗಿನ ಗರಿಯ ವಸ್ತುಗಳು ನೋಡಲು ಸುಂದರವಾಗಿರುವುದರ ಜೊತೆಗೆ ಪರಿಸರ ಸ್ನೇಹಿಯಾಗಿರುತ್ತದೆ.



ಡಿಜಿಟಲ್ ಇಂಡಿಯಾ ಕನಸಿಗೆ ಹಿನ್ನಡೆ?

• ಲಕ್ಷ್ಮೀಕಾಂತ್ ಎಲ್ ವಿ, ತುಮಕೂರು



ಆನ್‌ಲೈನ್ ಪಾವತಿಯ ಮೂಲಕ ವ್ಯವಹಾರವನ್ನು ಸರಳಗೊಳಿಸಿರುವ ತಂತ್ರಜ್ಞಾನವು ಎಲ್ಲರಿಗೂ ಇಷ್ಟವೇ. ಆದರೆ, ಸಣ್ಣ ವ್ಯಾಪಾರಿಗಳಿಗೆ ತೆರಿಗೆ ಇಲಾಖೆಯಿಂದ ನೋಟೀಸ್ ಬಂದಿದ್ದರಿಂದ, ಅವರೆಲ್ಲಾ ಕಳವಳಕ್ಕೆ ಒಳಗಾಗಿದ್ದಾರೆ. ಡಿಜಿಟಲ್ ಪಾವತಿಯನ್ನು ದೂರವಿಡುವ ಪ್ರಯತ್ನ ನಡೆಸಿದ್ದಾರೆ! ಇದರಿಂದಾಗಿ, ಡಿಜಿಟಲ್ ಇಂಡಿಯಾ ಕನಸಿಗೆ ಹಿನ್ನಡೆಯುಂಟಾದಂತೆ, ಅಲ್ಲವೆ?

ಬೆಂಗಳೂರು ಅಂದ್ರೆ, ಸಾಕು, ತಂತ್ರಜ್ಞಾನದ ರಾಜಧಾನಿ, ಸ್ಟಾರ್ಟ್‌ಅಪ್ ಕೇಂದ್ರ ಅಂತಾನೇ ಗೊತ್ತು. ಇಲ್ಲಿ ಸಣ್ಣ ಪುಟ್ಟ ಚಿಲ್ಲರೆ ಅಂಗಡಿಗಳಿಂದ ಹಿಡಿದು ದೊಡ್ಡ ಮಾಲ್‌ಗಳ ತನಕ ಎಲ್ಲೆಲ್ಲೂ ಫೋನ್ ಪೇ ಮತ್ತು ಗೂಗಲ್ ಪೇ ಇಲ್ಲದೆ ವ್ಯಾಪಾರ ಇಲ್ಲ ಅನ್ನೋ ಹಾಗಿದೆ. ಜೇಬಿನಲ್ಲಿ ದುಡ್ಡು ಇಡೋದು ಹಳೆಯ ಫ್ಯಾಷನ್, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪಾವತಿಸೋದು ಹೊಸ ಟ್ರೆಂಡ್. ಆದ್ರೆ, ಈ ಡಿಜಿಟಲ್ ಕ್ರಾಂತಿಯ ನಡುವೆ ಆದಾಯ ತೆರಿಗೆ ಇಲಾಖೆ ಪ್ರವೇಶಿಸಿ, ವ್ಯಾಪಾರಿಗಳಿಗೆ ನೋಟಿಸ್‌ಗಳನ್ನ ಕೊಡೋಕೆ ಶುರು ಮಾಡಿದಾಗ, ಅಸಲಿ ಕಥೆ ಶುರುವಾಯ್ತು!

ಡಿಜಿಟಲ್ ಪಾವತಿಗಳು ವ್ಯಾಪಾರ ವ್ಯವಹಾರವನ್ನು ಎಷ್ಟರ ಮಟ್ಟಿಗೆ ಸುಲಭಗೊಳಿಸಿವೆ ಅಂದ್ರೆ, ಕಿಸೆಯಲ್ಲಿ ದುಡ್ಡಿಲ್ಲ ಅಂದ್ರೂ ಚಿಂತೆಯಿಲ್ಲ, ಫೋನ್ ಇದ್ದರೆ ಸಾಕು, ಏನು ಬೇಕಾದರೂ ಖರೀದಿಸಬಹುದು. ಕಾಯಿನ್, ಚಿಲ್ಲರೆ ಸಮಸ್ಯೆ ಇಲ್ಲ, ವಾಪಸ್ ಚಿಲ್ಲರೆ ಕೊಡೋ ತಲೆನೋವೂ ವ್ಯಾಪಾರಿಗಳಿಗಿಲ್ಲ. ಆದರೆ, ಈ ಡಿಜಿಟಲ್ ವಹಿವಾಟುಗಳ ಮೇಲೂ ಆದಾಯ ತೆರಿಗೆ ಇಲಾಖೆಯ ಕಣ್ಣು ಬಿದ್ದು, ಹೆಚ್ಚು ವಹಿವಾಟು ನಡೆಸಿದವರಿಗೆ ನಿಮ್ಮ ಆದಾಯದ ಮೂಲವೇನು, ಇಷ್ಟು ಹಣ ಎಲ್ಲಿಂದ ಬಂತು? ಅನ್ನೋ ಪ್ರಶ್ನೆಗಳಿರುವ ನೋಟಿಸ್‌ಗಳು ಬರಲು ಶುರುವಾದಾಗ, ಪರಿಸ್ಥಿತಿ ತಲೆಕೆಳಗಾಯ್ತು.

ದೊಡ್ಡ ವ್ಯಾಪಾರಿಗಳಿಗೆ ಅಷ್ಟೇನು ಸಮಸ್ಯೆ ಆಗಲಿಲ್ಲ, ಯಾಕಂದ್ರೆ ಅವರು ಈಗಾಗಲೇ ಲೆಕ್ಕಪತ್ರಗಳನ್ನ ಇಟ್ಟುಕೊಂಡಿರುತ್ತಾರೆ. ಆದರೆ, ಚಿಕ್ಕಪುಟ್ಟ ಅಂಗಡಿಗಳು, ಟೀ ಅಂಗಡಿಗಳು, ತರಕಾರಿ ಮಾರುವವರು, ಆಟೋ ಚಾಲಕರು ಇವರೆಲ್ಲಾ ದೈನಂದಿನ ಕಾಯಕದಲ್ಲಿ ತೊಡಗಿರುವಾಗ ಲೆಕ್ಕಪತ್ರ ಇಡೋದು, ತೆರಿಗೆ ಕಟ್ಟೋದು ಅಂದ್ರೆ ತಲೆನೋವು. ಹಲವರಿಗೆ ತೆರಿಗೆ ನಿಯಮಗಳ ಬಗ್ಗೆ ಸರಿಯಾದ ಅರಿವೇ ಇರಲಿಲ್ಲ. ಈ ನೋಟಿಸ್‌ಗಳು ಬಂದು ಬೀಳುತ್ತಿದ್ದಂತೆ, ವ್ಯಾಪಾರಿಗಳ ಮನಸ್ಸಲ್ಲಿ ಒಂದು ಭಯ ಶುರುವಾಯ್ತು.

ನೋಟಿಸ್ ನಂತರ ಬದಲಾವಣೆ

ಆರಂಭದಲ್ಲಿ ಒಬ್ಬಿಬ್ಬರಿಗೆ ನೋಟಿಸ್ ಬಂದಾಗ ಹೆಚ್ಚು ಗಮನ ಸೆಳೆಯಲಿಲ್ಲ, ಆದರೆ ಅದು ಹೆಚ್ಚಾಗುತ್ತಾ ಹೋದಂತೆ, ಹಲವು ವ್ಯಾಪಾರಿ ಸಂಘಟನೆಗಳು ಒಂದಾದವು. ನಾವು ದಿನಕ್ಕೆ ಐನೂರು, ಸಾವಿರ ರೂಪಾಯಿ ಸಂಪಾದನೆ ಮಾಡ್ತೀವಿ, ಅದಕ್ಕೂ ತೆರಿಗೆ ಕಟ್ಟಬೇಕಾ? ಡಿಜಿಟಲ್ ವ್ಯವಹಾರ ಮಾಡೋದು ಸುಲಭ ಅಂದುಕೊಂಡರೆ, ಈಗ ಇದು ಕಂಟಕವಾಗಿ ಪರಿಣಮಿಸಿದೆ ಎಂದು ವ್ಯಾಪಾರಿಗಳು ದೂರಿದರು. ಕೆಲವರು ತಮ್ಮ ಫೋನ್ ಪೇ, ಗೂಗಲ್ ಪೇ ಕ್ಯೂಆರ್ ಕೋಡ್‌ಗಳನ್ನು ತೆಗೆದುಹಾಕಿ, 'ಕ್ಯಾಶ್ ಮಾತ್ರ ಸ್ವೀಕರಿಸಲಾಗುವುದು' ಎಂಬ ಬೋರ್ಡ್ ಹಾಕಲು ಶುರುಮಾಡಿದರು. ಇದು ಡಿಜಿಟಲ್ ಇಂಡಿಯಾ ಕನಸಿಗೆ ಒಂದು ಹಿನ್ನಡೆಯೇ ಸರಿ!

ವ್ಯಾಪಾರಿಗಳ ವಾದ ಸರಳ

ನಾವು ಡಿಜಿಟಲ್ ಪಾವತಿ ಬಳಸಿದ್ದು ಸರ್ಕಾರದ ನೀತಿಗೆ ಬೆಂಬಲ ಕೊಡೋಕೆ. ಆದರೆ ಈಗ ಅದೇ ನಮಗೆ ಕಂಟಕ ಆಗಿದೆ. ಸಣ್ಣ ವ್ಯಾಪಾರ ಮಾಡುವವರಿಗೆ ಲೆಕ್ಕವಿಟ್ಟು, ತೆರಿಗೆ ಕಟ್ಟೋ ವ್ಯವಹಾರಿಕ ಜ್ಞಾನವೂ ಇಲ್ಲ. ಇದನ್ನೇ ಬಂಡವಾಳ ಮಾಡಿಕೊಂಡು ದೊಡ್ಡ ಮೊತ್ತದ ನೋಟಿಸ್ ಕೊಟ್ಟರೆ, ವ್ಯಾಪಾರ ಹೇಗೆ ಮಾಡೋದು? ಎಂಬುದು ಅವರ ಆತಂಕ.

ನಗದು ನಿಜಕ್ಕೂ ಸುಖ!

ಹಳೆಯ ದಿನಗಳಲ್ಲಿ ಎಲ್ಲವೂ ನಗದು ರೂಪದಲ್ಲಿ ನಡೆಯುತ್ತಿತ್ತು, ಆಗ ತೆರಿಗೆ ಇಲಾಖೆಗೆ ವಹಿವಾಟಿನ ಸಂಪೂರ್ಣ ಮಾಹಿತಿ ಲಭ್ಯವಿರಲಿಲ್ಲ. ಆದರೆ, ಡಿಜಿಟಲ್ ಪಾವತಿಯಿಂದ ಪ್ರತಿಯೊಂದು ವಹಿವಾಟು ದಾಖಲಾಗುತ್ತದೆ. ಇದೆಲ್ಲವನ್ನೂ ನೋಡಿ ಆದಾಯ ತೆರಿಗೆ ಇಲಾಖೆ ಕಾರ್ಯಪ್ರವೃತ್ತವಾಯಿತು. ಈ ಬೆಳವಣಿಗೆಯಿಂದ ಬೆಂಗಳೂರಿನ ಅನೇಕ ವ್ಯಾಪಾರ ಕೇಂದ್ರಗಳಲ್ಲಿ ನಗದು ವಹಿವಾಟು ಮತ್ತೆ ಹೆಚ್ಚಾಗುವ ಲಕ್ಷಣಗಳು ಕಂಡುಬಂದವು. ಹಲವು ಗ್ರಾಹಕರಿಗೂ ಇದು ಆಶ್ಚರ್ಯ ತಂದಿತು. ಎಲ್ಲೆಲ್ಲೂ ಯುಪಿಐ ಅಂತ ಹೇಳಿದ್ರು, ಈಗ ವ್ಯಾಪಾರಿಗಳು ಕ್ಯಾಶ್ ಕೇಳ್ತಿದಾರೆ ಅಂತ ಕೆಲವರು ಗೊಂದಲಕ್ಕೊಳಗಾದರು. ಈ ಪರಿಸ್ಥಿತಿ ಡಿಜಿಟಲ್ ವಹಿವಾಟಿನ ಸುರಕ್ಷತೆ ಮತ್ತು ಸುಧಾರಣೆಯ ಜೊತೆಗೆ, ಸಾಮಾನ್ಯ ಜನರ ಜೀವನದ ಮೇಲೆ ತೆರಿಗೆ ನಿಯಮಗಳ ಪ್ರಭಾವವನ್ನು ಎತ್ತಿ ತೋರಿಸಿತು. ಇದು ಕೇವಲ ಬೆಂಗಳೂರಿನ ಸಮಸ್ಯೆ ಮಾತ್ರವಲ್ಲ, ಎಲ್ಲಾ ಕಡೆಯೂ ಇದೇ ಸಮಸ್ಯೆ!

ಮುಂದಿನ ದಾರಿ ಏನು?

ಈ ಪರಿಸ್ಥಿತಿಯನ್ನು ನಿಭಾಯಿಸಲು ಕೇವಲ ನೋಟಿಸ್‌ಗಳನ್ನು ನೀಡುವುದು ಮಾತ್ರ ಪರಿಹಾರವಲ್ಲ. ಆದಾಯ ತೆರಿಗೆ ಇಲಾಖೆ ಮತ್ತು ವ್ಯಾಪಾರಿಗಳ ನಡುವೆ ಸೂಕ್ತ ಸಂವಹನ ಮತ್ತು ತಿಳುವಳಿಕೆ ಮೂಡಿಸುವುದು ಅತ್ಯಗತ್ಯ. ಸಣ್ಣ ವ್ಯಾಪಾರಿಗಳಿಗೆ ತೆರಿಗೆ ನಿಯಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಾಗಾರಗಳನ್ನು ಆಯೋಜಿಸಬೇಕು. ಎಷ್ಟು ವಹಿವಾಟಿಗೆ ತೆರಿಗೆ ಅನ್ವಯವಾಗುತ್ತದೆ, ಸಣ್ಣ ವ್ಯಾಪಾರಿಗಳಿಗೆ ಯಾವ ವಿನಾಯಿತಿಗಳಿವೆ, ಲೆಕ್ಕಪತ್ರಗಳನ್ನು ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ಸರಳವಾಗಿ ವಿವರಿಸುವ ಅಗತ್ಯವಿದೆ. ಡಿಜಿಟಲ್ ಪಾವತಿಗಳನ್ನು ಉತ್ತೇಜಿಸುವ ಜೊತೆಗೆ, ಅವುಗಳ ಮೇಲಿನ ತೆರಿಗೆ ನಿಯಮಗಳನ್ನು ಸುಲಭಗೊಳಿಸುವುದು ಅಥವಾ ಸಣ್ಣ ವಹಿವಾಟುಗಳಿಗೆ ತೆರಿಗೆ ಮಿತಿಗಳನ್ನು ಹೆಚ್ಚಿಸುವುದು ಕೂಡ ಒಂದು ಪರಿಹಾರವಾಗಬಹುದು. ಇಲ್ಲಿ ಇನ್ನೊಂದು ವಿಚಾರವಿದೆ. ನಗದು ಪಾವತಿಯ ವ್ಯಾಪಾರವೂ ತೆರಿಗೆಯ ವ್ಯಾಪ್ತಿಗೆ ಬರುತ್ತದೆ! ಅದೇನೇ ಇದ್ದರೂ, ವ್ಯಾಪಾರಿಗಳು ಡಿಜಿಟಲ್ ವಹಿವಾಟಿನಿಂದ ಹಿಂದೆ ಸರಿಯುವ ಬದಲು, ತೆರಿಗೆ ನಿಯಮಗಳನ್ನು ಪಾಲಿಸುತ್ತಲೇ ತಮ್ಮ ವ್ಯಾಪಾರವನ್ನು ಮುಂದುವರಿಸಲು ಸಾಧ್ಯವಾಗುವ ವಾತಾವರಣ ಸೃಷ್ಟಿಯಾಗಬೇಕು.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಟಿ



ಎಡದಿಂದ ಬಲಕ್ಕೆ

3. ನೆಲದ ಹಾಸುಗಂಬಳಿ (4)
5. ಪಾಂಡವರಲ್ಲಿ ಒಬ್ಬನು(3)
6. ಕೋಟೆಯ ಸುತ್ತಲಿನ ಅಗಳು (3)
8. ಗಡಿಯಲ್ಲಿರುವ ಯಕ್ಷಿಣಿಗಾರ (4)
10. ಪರರಿಗೆ ಸಿಕ್ಕಿದ ಸಲಕರಣೆ (4)
12. ರೋಗದೊಂದಿಗೆ ಬಂದಿರುವ ಜೋಡಿಪದ (3)
14. ಕಲಿಯುವಾಗ ಸಿಕ್ಕಿತು ನೂಲು ತೆಗೆಯುವ ಸಾಧನ (3)
16. ಮನಸ್ಸುಗಳ ನಡುವಿನ ವಿರಸ (4)
17. ದುಡ್ಡಿನಿಂದ ಧನಿಕ (4)
18. ದಿಕ್ಕುತಪ್ಪಿಸಿ ಬಂದಿರುವ ಮಗ (3)
20. ಆತನು ಮಾಡಿರುವ ಸಂಗ್ರಹ (3)
22. ತಪಸ್ವಿಗಳು ವಾಸಿಸುವ ಅರಣ್ಯ (4)

ಮೇಲಿಂದ ಕೆಳಕ್ಕೆ

1. ಸಂತೋಷ, ಆನಂದವಿದು (3)
2. ಹಣವು ಎರಡೇ ಅಕ್ಷರದಲ್ಲಿದೆ (2)
3. ಕಸಗುಡಿಸುವವನು (4)
4. ಶೀತದಿಂದ ಉಂಟಾಗುವ ಬಾಧೆ ಅಸ್ತವ್ಯಸ್ತವಾಗಿದೆ (3)
6. ಎರಡು ತಂಡಗಳ ನಡುವಿನ ಒಪ್ಪಂದ (3)
7. ಭಯದಿಂದ, ಚಳಿಯಿಂದ ಅದುರುವಿಕೆ (3)
9. ಆ ಕಡೆಯಿಂದ ಬಂದಿರುವ ಭಲ್ಲೂಕ (3)
11. ಕನಸಿನಲ್ಲೂ ಬಂದಿದೆ ಸಮರ (3)
13. ಹಣ ವ್ಯಯಿಸಲು ಬಲು ಲೋಭಿ (3)
14. ಕೆಳಕ್ಕೆ ಪತನವಾದಾಗ ಕಂಡನು ಸೂರ್ಯ (3)
15. ಬರೆಯಲ್ಪಟ್ಟ ಎಂದರ್ಥ (3)
16. ಚುನಾವಣೆಯ ದಿನ ಮಾಡುವ ದಾನ (4)
17. ತೀಕ್ಷ್ಣವಾದದು ಎಂದರ್ಥ (3)
19. ಗೆಲುವು (3)

ಸರಿಯುತ್ತರಗಳು

ಸದ್ಗುಣ ಸಂಪನ್ನ ವಿಭೀಷಣ

ಬ್ರಹ್ಮನ ಮಾನಸಪುತ್ರರಾದ 'ಪುಲಸ್ತ್ಯ' ಅಥವಾ ವಿಶ್ವವಸು ಮುನಿಗೆ ನಾಲ್ವರು ಪುತ್ರರು. ರಾವಣ, ಕುಂಭಕರ್ಣ, ವಿಭೀಷಣ ಹಾಗೂ ಶೂರ್ಪನಖಿ. ವಿಶ್ವವಸುವಿನ ಪತ್ನಿಯ ಹೆಸರು 'ಕೈಕಸೆ'. ಈಕೆಗೆ ಪುಷೋತ್ಕಟೆಎ ಂಬ ಹೆಸರೂ ಇತ್ತು. ರಾಕ್ಷಸ ವಂಶದ ಸುಮಾಲಿ ಎಂಬವನ ಪತ್ನಿ ಕೈಕಸೆ. ಆದರೂ ಆಕೆಗೆ ಸ್ವಲ್ಪ ದೈವಭಕ್ತಿ, ನಿಷ್ಠೆ ಇತ್ತು.

ಕೈಕಸೆಯು ಪುತ್ರಾರ್ಥಿಯಾಗಿ ಸಂಧ್ಯಾಕಾಲದಲ್ಲಿ ಪತಿ ಮಿಲನ ಹೊಂದಿದುದರಿಂದ ರಾವಣ, ಕುಂಭಕರ್ಣ, ಶೂರ್ಪಣಖಿಯರುಗಳು ರಾಕ್ಷಸಗುಣದವರಾಗಿ ಜನಿಸಿದರು ಎಂದು ಹೇಳಲಾಗುತ್ತದೆ. ಇವರ ಕ್ರೂರ ಬುದ್ಧಿಗೆ ಖಿನ್ನಳಾದ ಕೈಕಸೆ ಬ್ರಹ್ಮನನ್ನು ಪ್ರಾರ್ಥಿಸಿ ತನಗೆ ಧರ್ಮಾತ್ಮನೂ ತತ್ವಜ್ಞಾನಿಯೂ ಆದ ಪುತ್ರನು ಬೇಕೆಂದು ಕೋರಿಕೊಂಡಳು. ಇದರಿಂದ ಮುಂದೆ ಸದ್ಗುಣ ಸಂಪನ್ನನಾದ ವಿಭೀಷಣನು ಜನಿಸಿದನೆಂದು ತಿಳಿದು ಬರುತ್ತದೆ. ಮಕ್ಕಳಾರ್ಥಿ ದಂಪತಿಗಳಿಗೆ ಪರೋಕ್ಷವಾಗಿ ಒಂದು ನೀತಿಯುಕ್ತ ಕಿವಿಮಾತನ್ನು ಇಲ್ಲಿ ವಾಲ್ಮೀಕಿ ಮಹರ್ಷಿ ಹೇಳುತ್ತಾನೆ. ಏನೆಂದರೆ...ಸಂಧ್ಯಾಕಾಲವಂತೂ ದೇವರ ಪೂಜೆ, ಭಜನೆಗೆ ಮೀಸಲಿಟ್ಟ ಕಾಲ. ಅದು ಬಿಟ್ಟು ದಾಂಪತ್ಯ ಸಂಬಂಧಿ ಕೃತ್ಯಗಳು ನಡೆದರೆ ಅದರಿಂದ ಕೆಟ್ಟ ಪರಿಣಾಮವನ್ನೆದುರಿಸಬೇಕಾಗುತ್ತದೆ ಎಂಬುದು ಎಚ್ಚರಿಕೆಯ ಮಾತು. ಹಾಗೆಯೇ ಯೋಗ್ಯ ಸಮಯದಲ್ಲಿ ಸತ್ಸಂತಾನವನ್ನು ಬಯಸಿ ದಾಂಪತ್ಯ ನಡೆಸಿದಲ್ಲಿ ಅದರಿಂದ ಸತ್ಪ್ರಜೆಗಳು ಜನಿಸಬಹುದು ಎಂಬುದನ್ನೂ ಈ ಕತೆ ನಿರೂಪಿಸುತ್ತದೆ.

ವಿಭೀಷಣ ತಾಯಿ ಬ್ರಹ್ಮನನ್ನು ಪ್ರಾರ್ಥಿಸಿದ ಪರಿಣಾಮವಾಗಿ ಒಲಿದು ಬಂದ ಗುಣವಂತ ಮಗನಿವನು. ತಾನೂ ಗೋಕರ್ಣದಲ್ಲಿ ಬ್ರಹ್ಮನ ಕುರಿತು ತಪಸ್ಸು ಮಾಡುತ್ತಾನೆ. ತನಗೆ ಎಂತಹ ಕಷ್ಟಕಾಲದಲ್ಲಿಯೂ ಧರ್ಮಮಾರ್ಗದಲ್ಲೇ ಬುದ್ಧಿಯೋಡುವಂತೆಯೂ ಮಂತ್ರಾಭ್ಯಾಸವಿಲ್ಲದೆ ಬ್ರಹ್ಮಾಸ್ತ್ರವು ಸ್ವಾಧೀನವಾಗುವಂತೆಯೂ ವರ ಬೇಡಿದ. ವಿಭೀಷಣನ ಸದ್ಗುಣಗಳಿಗೆ ಮೆಚ್ಚಿದ ಬ್ರಹ್ಮನು ಈತನು ಅಪೇಕ್ಷಿಸಿದ ವರವನ್ನಿತ್ತುದಲ್ಲದೆ 'ಚಿರಂಜೀವಿಯಾಗು' ಎಂಬ ವರವನ್ನೂ ಕರುಣಿಸಿದ.

ಸಪ್ತ ಚಿರಂಜೀವಿಗಳಲ್ಲಿ ವಿಭೀಷಣ ಒಬ್ಬ. ಹನುಮಂತನಿಂದ ಲಂಕಾದಹನವಾದ ಮೇಲೆ ಮಂತ್ರಾಲೋಚನಾ ಸಭೆ ಕರೆದ ರಾವಣ, ಆಂಜನೇಯನನ್ನು ವಧಿಸಲು ಆಜ್ಞೆ ಮಾಡಿದಾಗ ದೂತ ವಧೆಯು ಸಲ್ಲದು ಎಂದು ಹೇಳಿ ದುಷ್ಕಾರ್ಯವನ್ನು ವಿಭೀಷಣ ತಡೆಯುತ್ತಾನೆ. 'ಅಣ್ಣ..... ಪರಸತಿಗೆ ಆಸೆಪಟ್ಟು ಕಳ್ಳತನದಿಂದ ಸೀತೆಯನ್ನು ಹೊತ್ತು ತಂದಿರುವೆ. ಈಗ ಲಂಕಾದಹನವಾಗಿದೆ. ಇನ್ನು ಮುಂದೆ ವಾನರಸೇನೆ ಲಂಕೆಯನ್ನು ಮುತ್ತುವುದಕ್ಕೆ ಮೊದಲೇ ಸೀತೆಯನ್ನು ಶ್ರೀರಾಮನಿಗೆ ಒಪ್ಪಿಸಿಬಿಡೋಣ. ನನ್ನ ಮಾತು ಕೇಳು. ಇದರಿಂದ ಎರಡೂ ಕಡೆ ಶಾಂತಿ ಇರುತ್ತದೆ.' ಎಂದು ಎಷ್ಟೇ ನೀತಿ ಬೋಧಿಸಿದರೂ ತಮ್ಮನ ಹಿತವಚನ ರಾವಣನಿಗೆ ರುಚಿಸುವುದಿಲ್ಲ. ಹಾಗೆಯೇ ವಿಭೀಷಣನ ಸಲಹೆ ಯಾವ ರಾಕ್ಷಸವೀರರಿಗೂ ಸರಿಕಾಣಲಿಲ್ಲ. ಸಭೆಯಲ್ಲಿದ್ದ ಎಲ್ಲರೂ ವಿಭೀಷಣನನ್ನು ಜರೆದು ಮಾತನಾಡಿದರಲ್ಲದೆ ರಾವಣನ ಮಗನಾದ ಇಂದ್ರಜಿತು, ಚಿಕ್ಕಪ್ಪನನ್ನು ಹೇಡಿಯೆಂದು ತಿರಸ್ಕರಿಸಲು ಇಂದ್ರಜಿತುವಿಗೂ ಬುದ್ಧಿ ಹೇಳಿದಾಗ ರಾವಣ ಸಿಟ್ಟಿನಿಂದ ಕರಣ ನಿನ್ನ ಮತ್ಸರ ಬುದ್ಧಿಯನ್ನು ತೋರಿಸಬೇಡ, ಇಲ್ಲಿಂದ ತೊಲಗಾಚೆ. ಇಲ್ಲದಿದ್ದರೆ ಈಗಲೇ ನಿನ್ನನ್ನು ಕೊಲ್ಲುವೆ' ಎನ್ನುತ್ತಾನೆ. ತೀರಾ ವಿಷಾದದಿಂದ ವಿಭೀಷಣ ಶ್ರೀರಾಮನ ಪಾಳಯಕ್ಕೆ ಬಂದು ಅವನಿಗೆ ಶರಣಾಗತನಾಗುತ್ತಾನೆ. ಶರಣು ಬಂದ ವಿಭೀಷಣನಿಗೆ ರಾಮ ಅಭಯ ನೀಡುತ್ತಾನೆ.

ಕಾಳಗದಲ್ಲಿ ಇಂದ್ರಜಿತು ಮಾಯಾಸೀತೆಯನ್ನು ಸಂಹರಿಸಲು ಅದನ್ನು ನೋಡಿ ಪ್ರಲಾಪಿಸುತ್ತಿದ್ದ ಶ್ರೀರಾಮನನ್ನು ಸಮಾಧಾನಪಡಿಸುತ್ತಾನೆ. ಇಂದ್ರಜಿತುವನ್ನು ವಧಿಸಬೇಕಾದರೆ ಹನ್ನೆರಡು ವರ್ಷ ಬ್ರಹ್ಮಚರ್ಯೆ ಪಾಲಿಸಿದ ವೀರನಿಗೆ ಮಾತ್ರ ಸಾಧ್ಯವೆಂಬ ಮರಣ ರಹಸ್ಯವನ್ನು ವಿಭೀಷಣ ಲಕ್ಷ್ಮಣನಿಗೆ ಹೇಳಿ ತನ್ಮೂಲಕ ಲಕ್ಷ್ಮಣನಿಂದ ಇಂದ್ರಜಿತುವಿನ ಸಂಹಾರವಾಗುತ್ತದೆ.

ರಾವಣನ ಸಂಹಾರ ನಂತರ ಅಣ್ಣನ ಮರಣಕ್ಕಾಗಿ ದುಃಖಿಸುತ್ತಿದ್ದ ವಿಭೀಷಣ ಅಂತ್ಯ ಕ್ರಿಯೆಗಳನ್ನೆಲ್ಲ ಗೌರವದಿಂದ ಮಾಡುತ್ತಾನೆ. ಆತನನ್ನು ಶ್ರೀರಾಮ ಸಮಾಧಾನಪಡಿಸಿ ಲಂಕೆಯ ಅರಸನನ್ನಾಗಿ ಪಟ್ಟಾಭಿಷೇಕ ಮಾಡುತ್ತಾನೆ. ವಿಭೀಷಣನು ರಾವಣನ ಪುಷ್ಪಕ ವಿಮಾನವನ್ನು ರಾಮನಿಗೆ ತಂದೊಪ್ಪಿಸುತ್ತಾನೆ. ಶ್ರೀರಾಮನು ಅಯೋಧ್ಯೆಗೆ ಹಿಂದಿರುಗುವಾಗ, ಲಂಕೆಗೆ ಸೇತುವೆಯ ಮುಂದೆಯೂ ಇದ್ದರೆ ತನಗೆ ಶತ್ರುಬಾಧೆ ತಪ್ಪಿದಲ್ಲವೆನ್ನಲು ಶ್ರೀರಾಮನು ಸೇತುವೆಯನ್ನು ಅಲ್ಲಲ್ಲಿ ಕಡಿಯುತ್ತಾನೆ. ಈ ಪ್ರದೇಶವನ್ನು 'ಧನುಷೋಟಿ ತೀರ್ಥ' ವೆನ್ನುತ್ತಾರೆ. ಮುಂದೆ ಅಯೋಧ್ಯೆಯ ಶ್ರೀರಾಮ ಪಟ್ಟಾಭಿಷೇಕದಲ್ಲೂ ವಿಭೀಷಣ ಭಾಗವಹಿಸಿದ್ದ. ಕೆಲವೊಮ್ಮೆ ನಮ್ಮ ಕೆಟ್ಟತನಗಳಿಗೆ ನಾವಿರುವ ಪರಿಸರದ, ಸುತ್ತಲಿರುವ ಜನರ ನೆಪ ಕೊಟ್ಟು ಜಾರಿಕೊಳ್ಳುತ್ತೇವೆ. ಆದರೆ ಸ್ವಭಾವ ನಮ್ಮ ಆಂತರ್ಯಕ್ಕೆ ಸಂಬಂಧಪಟ್ಟಿದ್ದು. ಕೆಸರೆರಿಲ್ಲಿ ಕಮಲ ಅರಳುವ ಹಾಗೆ, ಎಲ್ಲಿದ್ದರೂ ನಮ್ಮತನವನ್ನು ಉಳಿಸಿಕೊಳ್ಳಬಹುದು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಪಾಠ ಕಲಿತು ಬದುಕಲು ಕಲಿ

ನಾಟಕದೊಳನುವಿಂದ ಬೆರತದನು ಮೆಚ್ಚಿನಿಸಿ
ನೋಟಕನುಮಾಗಿ ತಾಂ ನಲಿದು ನಲಿಯಿಸುವಾ
ಪಾಠವನು ಕಲಿತವನೆ ಬಾಳನಾಳುವ ಯೋಗಿ
ಆಟಕಂ ನಯವುಂಟು – ಮಂಕುತಿಮ್ಮ

ಈ ಜೀವನ ಎಂಬ ನಾಟಕಕ್ಕೆ ಆ ಭಗವಂತನೇ ಸೂತ್ರಧಾರಿ, ಈ ಜಗತ್ತೇ ಆ ನಾಟಕದ ರಂಗಸ್ಥಳ. ಆ ಭಗವಂತನಾಡಿಸುವ ಈ ಜೀವನ ಎಂಬ ನಾಟಕದಲ್ಲಿ ನಾವೇ ನಟರಾಗಿ, ಈ ನಾಟಕದಲ್ಲಿ ನಾಕಟದೊಳನುವಿಂದ ಬೆರತು, ಆ ನಾಟಕದಲ್ಲಿ ಮೆಚ್ಚುವಂತೆ ನಟನೆ ಮಾಡುತ್ತಾ ಜೊತೆಗೆ ಆ ನಾಟಕದ ನೋಟಕನೂ ನೀನಾಗಿ, ಪಾತ್ರಧಾರಿಯಾಗಿಯೂ, ನೋಟಕನಾಗಿಯೂ ನಿನ್ನ ಆಟವನ್ನು ಸಮರ್ಥವಾಗಿ ಎಲ್ಲರೂ ಮೆಚ್ಚುವಂತೆ ನಿರ್ವಹಿಸಿ, ಎಲ್ಲರಿಂದಲೂ, ಎಲ್ಲದರಿಂದಲೂ ನೀನು ಪಾಠವನ್ನು ಕಲಿತೆಯೆಂತಾದರೆ ನೀನೇ ಯೋಗಿ. ಈ ಬಾಳು ಎಂಬ ನಾಟಕಕ್ಕೂ ಒಂದು ನಯವುಂಟು, ಒಂದು ಅರ್ಥ ಉಂಟು, ಕಲಿಕೆ ಉಂಟು, ಕಲಿತು ಬಾಳುವುದುಂಟು ಎಂದು ಈ ಕಗ್ಗದಲ್ಲಿ ಹೇಳಿದ್ದಾರೆ.

ಈ ಜಗವೊಂದು ಆ ಭಗವಂತನಾಡಿಸುವ ನಾಟಕದ ಒಂದು ರಂಗಸ್ಥಳ. ಒಬ್ಬೊಬ್ಬರೂ ಒಂದೊಂದು ಪೊಷಾಕು, ಒಂದೊಂದು ಬಣ್ಣ ಹಚ್ಚಿಕೊಂಡೇ ಈ ರಂಗಸ್ಥಳದಲ್ಲಿ ನಾಟಕ ಮಾಡುತ್ತಲಿದ್ದಾರೆ. ಈ ನಾಟಕಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ, ಹಾಗೆಯೇ ಈ ನಾಟಕಕ್ಕೆ ಕಥೆಯೂ ಇಲ್ಲ, ಇಂಥಹ ಮೂಲ ಹಾಗೂ ಕೊನೆಯಿಲ್ಲದ ಈ ನಾಟಕದಲ್ಲಿ ನಾವೆಲ್ಲರೂ ನಟರಾಗಿ ನಮಗೆ ದೊರೆತ ಅವಕಾಶದಲ್ಲಿ ನಾವು ನಾವು ನಾಟಕ ಮಾಡುತ್ತಲೇ ಇದ್ದೇವೆ. ಈ ನಾಟಕದಲ್ಲಿ ನಾವು ಪಾತ್ರಧಾರಿಗಳಾಗಿ ನಮ್ಮ ಪಾತ್ರ ನಿರ್ವಹಿಸುವಾಗ, ನಮ್ಮಿಂದ ಯಾರಿಗೂ ನೋವಾಗದಂತೆ, ಕೇಡಾಗದಂತೆ, ಹಿಂಸೆಯಾಗದಂತೆ ನಮ್ಮ ಪಾತ್ರವನ್ನು ನಾವು ನಿರ್ವಹಿಸಬೇಕು. ನಮ್ಮ ನಡವಳಿಕೆ ಎಂಬುದು ಯಾವುದೇ ಕಾರಣಕ್ಕೂ ಮತ್ತೊಬ್ಬರಿಗೆ ಘಾಸಿಸದಂತೆ ನಮ್ಮ ಜವಾಬ್ದಾರಿಯನ್ನ ನಾವು ಹೊರುವಂತಹ ಪಾತ್ರಗಳನ್ನು ಮಾಡಿ ಜೀವನ ಸಾರ್ಥ್ಯಕಕ್ಕೆ ನಾವು ಪ್ರಯತ್ನಿಸಬೇಕು. ಇದು ಒಬ್ಬ ಪಾತ್ರಧಾರಿಯ ಕೆಲಸವೆಂದಾದರೆ ಇನ್ನು ನೋಟಕನಾಗಿ, ಪ್ರೇಕ್ಷಕನಾಗಿಯೂ ಸಹ ಈ ನಾಟಕದಲ್ಲಿದ್ದು, ಯಾರೋ ಒಬ್ಬರು ಒಂದೊಳ್ಳೆ ನಟನೆ, ಒಂದೊಳ್ಳೆ ಗುಣ, ಒಂದೊಳ್ಳೆ ಸ್ವಭಾವ ಹೊಂದಿದ್ದರೆ ಅದನ್ನೂ ನಾವೂ ಸಹ ನಮ್ಮ ಜೀವನದಲ್ಲಿ ಅದನ್ನು ರೂಡಿಸಿಕೊಂಡು ಬದುಕಬೇಕು. ಇಂಥಹ ಸದ್ಗತಿ, ಸಧ್ಧರ್ಮಗಳನ್ನು ರೂಡಿಸಿಕೊಳ್ಳುತ್ತಾರೋ ಅವರೇ ಯೋಗಿಯೂ ಆಗಿರುತ್ತೀಯೆ ಅವರ ಬಾಳು ಎಂದಿಗೂ ಪರೋಪಕಾರಂ ಇದಂ ಶರೀರಂ ಎಂಬುದಾಗಿ ಈ ಸಮಾಜದ ಏಳಿಗೆಗೆ, ಈ ಸಮಾಜದ ಔನ್ನತ್ಯಿಗೆಂದೇ ದುಡಿಯುತ್ತಿರುತ್ತಾರೆ. ಹಾಗಾಗಿಯೇ ಈ ಕಗ್ಗದಲ್ಲಿ ಈ ಜೀವನ ಎನ್ನುವ ಬೃಹತ್ ನಾಟಕದಲ್ಲಿ ನೀನು ಪಾತ್ರದಾರಿಯಾಗಿ ನಿಸ್ವಾರ್ಥದಿಂದ ನಟಿಸುವುದರೊಂದಿಗೆ, ನೋಡುಗನಾಗಿಯೂ ಬೇರೆಯವರ ಒಳ್ಳೆಯ ಅಂಶಗಳನ್ನು ಕಲಿತುಕೋ, ಆಗ ನೀನು ಯೋಗಿಯೇ ಆಗಿರುತ್ತೀಯೆ ಎಂದು ಆದೇಶಿಸಿದ್ದಾರೆ.

ಈ ಕಗ್ಗವು ಒಂದು ರೀತಿಯಲ್ಲಿ 'ನೀನೂ ಬದುಕು, ಇತರರನ್ನೂ ಬದುಕಿಸು' ಎಂಬ ಭಾವಾರ್ಥ ಹೊಂದಿದೆ. ಒಬ್ಬ ವ್ಯಕ್ತಿ ಹುಟ್ಟಿದ ನಂತರ ಮಗುವಾಗಿ, ಪ್ರೌಢಾವಸ್ಥೆಗೆ ಬಂದು ಕಲಿಕೆಯ ಮುಖಾಂತರವಾಗಿ ಈ ಜಗತ್ತನ್ನು ಅರಿಯಲು ಪ್ರಾರಂಭಿಸುತ್ತಾನೆ. ಈ ಕಲಿಕೆಯ ಸಮಯದಲ್ಲಿ ಅವನ ತಂದೆ, ತಾಯಿ, ಗುರು, ಹಿರಿಯರು ಹಾಕಿಕೊಟ್ಟ ಪಥದಲ್ಲಿ ಆತನು ಈ ಜಗತ್ತನ್ನು ನೋಡಲು ಪ್ರಾರಂಭೀಸುತ್ತಾನೆ. ಹೀಗೆ ಪ್ರಾರಂಭದಲ್ಲಿಯೇ ಆ ವ್ಯಕ್ತಿಗೆ ಸಂಸ್ಕೃತಿ, ಸಂಸ್ಕಾರ, ನಯವಿನಯಗಳು, ಗುರುಹಿರಿಯರಲ್ಲಿ ಭಕ್ತಿ, ಜೀವನದ ಸಾರಗಳೆಂಬ ಸಾತ್ವಿಕತನಗಳನ್ನು ಕಲಿಸುತ್ತಾ ಹೋದರೆ ಆತನು ಮುಂದೆಯೂ ಸಾತ್ವಿಕನಾಗುತ್ತಾನೆ. ನಂತರದೆ ಈ ಜೀವನ ಎಂಬ ನಾಟಕದಲ್ಲಿ ಸ್ವಾರ್ಥವಿಲ್ಲದೆ ಆತನು ಬದುಕು ಕಂಡು, ಇತರರನ್ನೂ ಬದುಕಿಸುತ್ತಾನೆ. ಆತನು ನಾಟಕದ ಪಾತ್ರಧಾರಿಯಾಗಿಯೂ ಸೈ ಎನಿಸಿಕೊಂಡು, ನೋಡುಗನಾಗಿಯೂ ಒಳ್ಳೆಯ ಅಂಶಗಳನ್ನು ಮೈಗೂಡಿಸಿಕೊಂಡು ಆತನು ಮಹಾನ್ ವ್ಯಕ್ತಿಯೇ ಆಗುತ್ತಾನೆ. ಆತನು ಒಬ್ಬ ಯೋಗಿಯೇ ಆಗುತ್ತಾನೆ. ಆದುದರಿಂದ 'ಸ್ವಾರ್ಥವಿಲ್ಲದಾ ಬದುಕು ಸರ್ವ ಕಾಲಕ್ಕೂ ಶ್ರೇಷ್ಠ' ಎಂಬ ಬೀಜವನ್ನ ಎಳೆಯದರಲ್ಲಿಯೇ ಬಿತ್ತಿ, ಅದನ್ನೇ ಬೆಳೆದು ನಮ್ಮಯ ಜೀವನದ ಘನ ಉದ್ದೇಶವನ್ನು ಸಾರ್ಥಕಗೊಳಿಸಿಕೊಳ್ಳುವುದೇ ನಿಜವಾದ ಜೀವನವಾಗುತ್ತದೆ ಎಂಬುದೇ ಈ ಕಗ್ಗದ ಅರ್ಥವಾಗಿದೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಮಹಿಳಾ ಕ್ರಿಕೆಟ್: ಭಾರತಕ್ಕೆ ಸರಣಿ ಗೆಲ್ಲುವ ತವಕ

ಲಂಡನ್: ಇಂಗ್ಲೆಂಡ್ ವಿರುದ್ಧ ಮೊದಲ ಏಕದಿನ ಪಂದ್ಯವನ್ನು ಗೆದ್ದು ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ಭಾರತದ ವನಿತೆಯರು ಶನಿವಾರ ನಡೆಯುವ ಎರಡನೇ ಪಂದ್ಯದಲ್ಲೂ ಪಾರಮ್ಯ ಮುಂದುವರಿಸುವ ಛಲದಲ್ಲಿದ್ದಾರೆ. ಸೌತಾಂಪ್ಟನ್ ನಲ್ಲಿ ನಡೆದ ಆರಂಭಿಕ ಪಂದ್ಯವನ್ನು ಹರ್ಮನ್ ಪ್ರೀತ್ ಕೌರ್ ಬಳಗವು ನಾಲ್ಕು ವಿಕೆಟ್‌ಗಳಿಂದ ಗೆದ್ದು, ಮೂರು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಪಡೆದಿದೆ. ಲಾರ್ಡ್ಸ್ ನಲ್ಲಿ ನಡೆಯಲಿರುವ ಎರಡನೇ ಪಂದ್ಯದಲ್ಲೂ ಉತ್ತಮ ಪ್ರದರ್ಶನ ತೋರಿ ಸರಣಿ ವಶಮಾಡಿಕೊಳ್ಳುವತ್ತ ಭಾರತ ಚಿತ್ತ ಹರಿಸಿದೆ. ಮತ್ತೊಂದೆಡೆ ಅತಿಥೇಯ ತಂಡಕ್ಕೆ ಸರಣಿಯನ್ನು ಜೀವಂತವಾಗಿ ಇಡಲು ಈ ಪಂದ್ಯ ಮಹತ್ವದ್ದಾಗಿದೆ. ಮೇ ತಿಂಗಳಿನಲ್ಲಿ ನಡೆದ ಶ್ರೀಲಂಕಾ ಮತ್ತು ದಕ್ಷಿಣ ಆಫ್ರಿಕಾ ಒಳಗೊಂಡ ತ್ರಿಕೋನ ಸರಣಿಯಲ್ಲಿ ಚಾಂಪಿಯನ್ ಆಗಿರುವ ಭಾರತ ತಂಡವು ಇದೀಗ ಸತತ ಎರಡನೇ ಸರಣಿ ಗೆಲುವನ್ನು ಎದುರು ನೋಡುತ್ತಿದೆ. ಸೆಪ್ಟೆಂಬರ್ 30ರಿಂದ ಭಾರತದ ಆತಿಥ್ಯದಲ್ಲಿ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿ ನಡೆಯಲಿದ್ದು, ಅದರ ಪೂರ್ವತಯಾರಿ ನಿಟ್ಟಿನಲ್ಲಿ ಇಂಗ್ಲೆಂಡ್ ವಿರುದ್ಧದ ಈ ಸರಣಿ ಹೆಚ್ಚಿನ ಮಹತ್ವ ಪಡೆದಿದೆ.

ಬ್ಯಾಡ್ಮಿಂಟನ್: ಭಾರತ ಶುಭಾರಂಭ

ಸೋಲೊ (ಇಂಡೊನೇಷ್ಯಾ): ಭಾರತ ತಂಡವು ಏಷ್ಯಾ ಬ್ಯಾಡ್ಮಿಂಟನ್ ಜೂನಿಯರ್ ಮಿಶ್ರ ತಂಡ ಚಾಂಪಿಯನ್‌ಷಿಪ್‌ನ 'ಡಿ' ಗುಂಪಿನ ಪಂದ್ಯದಲ್ಲಿ ಶುಕ್ರವಾರ ಶ್ರೀಲಂಕಾ ತಂಡವನ್ನು 110-69 ರಿಂದ ಸೋಲಿಸಿತು. ಟೂರ್ನಿಯಲ್ಲಿ ರಿಲೇ ಪಾಯಿಂಟ್ ಮಾದರಿಯ ವ್ಯವಸ್ಥೆ ಅಳವಡಿಸಲಾಗಿದೆ. ತಂಡವೊಂದು ಪಂದ್ಯ ಗೆಲ್ಲಬೇಕಾದರೆ 110 ಪಾಯಿಂಟ್ ಗಳಿಸಬೇಕಾಗುತ್ತದೆ. ವಿಷ್ಣು ಕೋಡೆ ಮತ್ತು ರೆಷಿಕಾ ಯು ಅವರನ್ನು 11-5 ರಿಂದ ಕೆನೆತ್ ಅರುಗೊಡ-ಇಸುರಿ ಅತ್ತನಾಯಕೆ ಜೋಡಿಯನ್ನು ಗಾಯತ್ರಿ-ಮಾನಸಾ ರಾವತ್ ಸೋದರಿಯರ ಜೋಡಿ ಮತ್ತು ಇನ್ನೊಂದು ಪಂದ್ಯದಲ್ಲಿ 22-14ರಿಂದ ಅತ್ತನಾಯಕೆ-ಸಿತುಮಿ ಡಿ ಸಿಲ್ವ ಜೋಡಿಯನ್ನು ಮಣಿಸಿತು. ವಿಶ್ವದ ಅಗ್ರ ಕ್ರಮಾಂಕದ ಜೂನಿಯರ್ ಆಟಗಾರ್ತಿ ತನ್ವಿ ಶರ್ಮಾ 33-21ರಿಂದ ಸಿತುಲಿ ರಣಸಿಂಘ ಅವರನ್ನು ಹಿಮ್ಮೆಟ್ಟಿಸಿದರು.

ವಿರಾಮ
ಪ್ರತಿ ಭಾನುವಾರ

ಮ್ಯಾಂಚೆಸ್ಟರ್‌ನಲ್ಲಿ ಒಂದೇ ಒಂದು ಟೆಸ್ಟ್ ಗೆಲ್ಲದ ಭಾರತ | 23ರಿಂದ ನಾಲ್ಕನೇ ಟೆಸ್ಟ್

ಹೊಸ ಇತಿಹಾಸದ ನಿರೀಕ್ಷೆ

ಮ್ಯಾಂಚೆಸ್ಟರ್: ಎಲ್ಲ ಲೆಕ್ಕಾಚಾರವೂ ಯೋಜನೆಯಂತೆ ಸಾಗಿದರೆ ಇದೇ 23ರಿಂದ 27ರ ವರೆಗೆ ಇಂಗ್ಲೆಂಡ್ ವಿರುದ್ಧ ನಡೆಯಲಿರುವ 4ನೇ ಟೆಸ್ಟ್‌ನಲ್ಲಿ ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್ ಅಂಗಳದಲ್ಲಿ ಟೀಮ್ ಇಂಡಿಯಾ ಹೊಸ ಇತಿಹಾಸವೊಂದನ್ನು ಬರೆಯಲಿದೆ. ಇಲ್ಲಿ ನಡೆಯುವ ಆತಿಥೇಯ ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಭಾರತ ಗೆದ್ದರೆ, ಓಲ್ಡ್ ಟ್ರಾಫರ್ಡ್ ಅಂಗಳದಲ್ಲಿ ಟೆಸ್ಟ್ ಗೆದ್ದ ಭಾರತದ ಮೊದಲ ನಾಯಕನೆಂಬ ಹೆಗ್ಗಳಿಕೆ ಶುಭಮನ್ ಗಿಲ್ ಅವರದಾಗಲಿದೆ.

ಓಲ್ಡ್ ಟ್ರಾಫರ್ಡ್ ಕ್ರಿಕೆಟ್ ಮೈದಾನವು ಇಂಗ್ಲೆಂಡ್‌ನ ವೇಗಿ ಜೇಮ್ಸ್ ಆ್ಯಂಡರ್ಸನ್ ಅವರ ತವರು. 1857ರಲ್ಲಿ ನಿರ್ಮಾಣವಾದ ಈ ಕ್ರೀಡಾಂಗಣದಲ್ಲಿ ಮೊದಲ ಬಾರಿಗೆ 1884ರಲ್ಲಿ ಸುಮಾರು 141 ವರ್ಷಗಳ ಹಿಂದೆ, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ನಡುವೆ ಮೊದಲ ಟೆಸ್ಟ್ ಪಂದ್ಯ ನಡೆದಿತ್ತು. ಆ ಪಂದ್ಯ ಡ್ರಾದಲ್ಲಿ ಅಂತ್ಯ ಕಂಡಿತ್ತು. ಕಳೆದ 89 ವರ್ಷಗಳಲ್ಲಿ ಭಾರತ ಕ್ರಿಕೆಟ್ ತಂಡವು ಓಲ್ಡ್ ಟ್ರಾಫರ್ಡ್‌ನಲ್ಲಿ ಒಮ್ಮೆಯೂ ಟೆಸ್ಟ್ ಪಂದ್ಯವನ್ನು ಗೆದ್ದಿಲ್ಲ. ಮೊದಲ ಬಾರಿಗೆ 1936ರಲ್ಲಿ ಭಾರತ ಟೆಸ್ಟ್ ಪಂದ್ಯವನ್ನು ಆಡಿತ್ತು, ಆ ಪಂದ್ಯ ಡ್ರಾ ಗೊಂಡಿತ್ತು. ಅಂದಿನಿಂದ ಇಂದಿನ ವರೆಗೆ ಭಾರತ ಒಟ್ಟು 9 ಪಂದ್ಯಗಳನ್ನು ಆಡಿದ್ದು, ಆ ಪೈಕಿ ನಾಲ್ಕು ಸೋಲು ಮತ್ತು ಐದು ಡ್ರಾ ಸಾಧಿಸಿದೆ. ಓಲ್ಡ್ ಟ್ರಾಫರ್ಡ್ ಮೈದಾನದಲ್ಲಿ ಭಾರತ ಪರ ಉತ್ತಮ ಬ್ಯಾಟಿಂಗ್ ದಾಖಲೆ ಮಾಜಿ ನಾಯಕ ಹಾಗೂ ಆಟಗಾರ ಮೊಹಮ್ಮದ್ ಅಜರುದ್ದೀನ್ ಹೆಸರಿನಲ್ಲಿದೆ. ಅವರು 1990ರಲ್ಲಿ ನಡೆದಿದ್ದ ಪಂದ್ಯದಲ್ಲಿ 179 ರನ್ ಬಾರಿಸಿದ್ದರು, ಅದು ಈ ಮೈದಾನದಲ್ಲಿ ಭಾರತೀಯ ಬ್ಯಾಟರ್ ಒಬ್ಬರ ಅತ್ಯಧಿಕ ಗರಿಷ್ಠ ದಾಖಲೆಯಾಗಿ ಉಳಿದಿದೆ. 102 ರನ್‌ಗೆ 6 ವಿಕೆಟ್ ಕಿತ್ತ ದಿಲೀಪ್ ಜೋಶಿ ಅತ್ಯುತ್ತಮ ಬೌಲಿಂಗ್ ದಾಖಲೆ ಹೊಂದಿದ್ದಾರೆ.

ಹನುಮಾನ್ ಚಾಲೀಸಾ ಪಠಿಸಿ ಅಭ್ಯಾಸ

ಲಾರ್ಡ್ಸ್ ಟೆಸ್ಟ್ ಸೋಲಿನ ಬಳಿಕ ಎಡು ದಿನಗಳ ವಿಶ್ರಾಂತಿ ಪಡೆದಿದ್ದ ಭಾರತ ತಂಡ ಗುರುವಾರದಿಂದ ಅಭ್ಯಾಸ ಆರಂಭಿಸಿದೆ. ಬೆಕೆನ್‌ಹ್ಯಾಂ ಕೆಂಟ್ ಕೌಂಟಿ ಕ್ರಿಕೆಟ್ ಮೈದಾನದಲ್ಲಿ ಆಟಗಾರರು ಅಭ್ಯಾಸಕ್ಕೂ ಮುನ್ನ ಡ್ರೆಸ್ಸಿಂಗ್ ಕೋಣೆಯಲ್ಲಿ ಭಗವಾನ್ ಹನುಮಂತನನ್ನು ಸ್ಮರಿಸುವ ಹನುಮಾನ್ ಚಾಲೀಸಾ ಪಠಣ ಮಾಡಿದ್ದು ವಿಶೇಷ ಎನಿಸಿತು. ಮೊದಲ ದಿನ ಕನ್ನಡಿಗ ರಾಹುಲ್ ಹೊರತಾಗಿ ಉಳಿದ ಎಲ್ಲ ಆಟಗಾರರು ಅಭ್ಯಾಸದಲ್ಲಿ ಭಾಗಿಯಾಗಿದ್ದರು. ಶುಕ್ರವಾರ ಭಾರತೀಯ ಆಟಗಾರರು ವಿಶ್ರಾಂತಿ ಪಡೆದಿದ್ದು, ಶನಿವಾರ ಮ್ಯಾಂಚೆಸ್ಟರ್‌ಗೆ ಪ್ರಯಾಣಿಸಲಿದ್ದಾರೆ.

ಭಾರತ ತಂಡಕ್ಕೆ ಆಘಾತ

ಟೀಮ್ ಇಂಡಿಯಾಗೆ ಗಾಯದ ಭೀತಿ ಎದುರಾಗಿದೆ. ಈಗಾಗಲೇ ರಿಷಭ್ ಪಂತ್ ತನ್ನ ಬೆರಳು ಗಾಯದಿಂದ ಚೇತರಿಸಿಕೊಳ್ಳುತ್ತಿದ್ದಾರೆ. ಇದೀಗ ಯುವ ವೇಗಿ ಅರ್ಷದೀಪ್ ಸಿಂಗ್ ಅವರಿಗೂ ಗಾಯವಾಗಿದೆ ಎಂದು ಹೇಳಲಾಗುತ್ತಿದೆ. ಅವರು ಅಭ್ಯಾಸದ ವೇಳೆ ತಮ್ಮ ಕೈಗೆ ಬ್ಯಾಂಡೇಜ್ ಸುತ್ತಿಕೊಂಡು ಬಂದಿದ್ದರು.

ದಾಖಲೆ ಸನಿಹದಲ್ಲಿ ರವೀಂದ್ರ ಜಡೇಜಾ

ಅದ್ಭುತ ಬ್ಯಾಟಿಂಗ್ ಫಾರ್ಮ್‌ನಲ್ಲಿರುವ ರವೀಂದ್ರ ಜಡೇಜಾ, ಮ್ಯಾಂಚೆಸ್ಟರ್ ಟೆಸ್ಟ್ ಪಂದ್ಯದಲ್ಲಿ ಕೇವಲ 58 ರನ್ ಗಳಿಸಿದರೆ, ಇಂಗ್ಲೆಂಡ್‌ನಲ್ಲಿ 1000 ಟೆಸ್ಟ್ ರನ್ ಪೂರೈಸಿದ ಕ್ರಿಕೆಟ್ ದಿಗ್ಗಜ ಗ್ಯಾರಿ ಫೀಲ್ಡ್ ಸೋಬರ್ಸ್ ಅವರನ್ನು ಒಳಗೊಂಡ ಎಲೈಟ್ ಲಿಸ್ಟ್‌ಗೆ ಸೇರ್ಪಡೆಯಾಗಲಿದ್ದಾರೆ. ಈ ಹಿಂದೆ ಇಂಗ್ಲೆಂಡ್‌ನಲ್ಲಿ ಅದ್ಭುತ ಪ್ರದರ್ಶನ ತೋರಿ ಎಲ್ಲರ ಗಮನ ಸೆಳೆದಿದ್ದ ವಿಂಡೀಸ್‌ನ ಸೋಬರ್ಸ್ 6 ರಿಂದ 11ನೇ ಕ್ರಮಾಂಕಗಳಲ್ಲಿ ಆಡಿದ ಆಟಗಾರರಲ್ಲಿ 1000 ರನ್ ಗಡಿದಾಟಿದ ಏಕೈಕ ಆಟಗಾರಾಗಿದ್ದರು. ಅವರು 16 ಇನಿಂಗ್ಸ್‌ಗಳಲ್ಲಿ 84.38ರ ಸರಾಸರಿಯಲ್ಲಿ 1097 ರನ್ ಕಲೆಹಾಕಿದ್ದಾರೆ. ಇದರಲ್ಲಿ 4 ಶತಕಗಳು ಮತ್ತು 5 ಶತಕಗಳು ಒಳಗೊಂಡಿವೆ. ಜಡೇಜಾ ಈಗಾಗಲೇ 27 ಇನಿಂಗ್ಸ್‌ಗಳಲ್ಲಿ 40.95ರ ಸರಾಸರಿಯಲ್ಲಿ 942 ರನ್ ಗಳಿಸಿದ್ದು ಒಂದು ಶತಕ ಹಾಗೂ ಏಳು ಅರ್ಧಶತಕ ಬಾರಿಸಿದ್ದಾರೆ. ಇನ್ನು ಕೇವಲ 58 ರನ್ ಗಳಿಸಿದರೆ ಸೋಬರ್ಸ್ ಜೊತೆ ಎಲೈಟ್ ಕ್ಲಬ್‌ಗೆ ಜಡೇಜಾ ಸೇರಿಕೊಳ್ಳಲಿದ್ದಾರೆ.

ಟೆನಿಸ್‌ನಿಂದ ವಿರಾಮ ಪಡೆದ ಒನ್ಸ್ ಜಬೇರ್

ದೆಹಲಿ: ಟ್ಯುನೀಷಿಯಾದ ಟೆನಿಸ್ ತಾರೆ, ಮೂರು ಬಾರಿ ಗ್ರ್ಯಾಂಡ್ ಸ್ಲಾಮ್ ಫೈನಲಿಸ್ಟ್ ಆಗಿರುವ ಒನ್ಸ್ ಜಬೇರ್ ಅವರು ತಮ್ಮ ಮಾನಸಿಕ ಮತ್ತು ದೈಹಿಕ ಯೋಗಕ್ಷೇಮಕ್ಕೆ ಆದ್ಯತೆ ನೀಡುವ ಸಲುವಾಗಿ ವೃತ್ತಿಪರ ಟೆನಿಸ್‌ನಿಂದ ವಿರಾಮ ತೆಗೆದುಕೊಳ್ಳುವುದಾಗಿ ಘೋಷಿಸಿದ್ದಾರೆ.

ಶುಕ್ರವಾರ ಸಾಮಾಜಿಕ ಮಾಧ್ಯಮದಲ್ಲಿ ಭಾವನಾತ್ಮಕ ಪೋಸ್ಟ್ ಮೂಲಕ ಅವರು ಈ ನಿರ್ಧಾರ ಪ್ರಕಟಿಸಿದರು. 'ಕಳೆದ ಎರಡು ವರ್ಷಗಳಿಂದ, ತುಂಬಾ ಕಠಿಣ ಪರಿಸ್ಥಿತಿಗಳನ್ನು ಎದುರಿಸಿದ್ದೇನೆ, ಗಾಯಗಳ ವಿರುದ್ಧ ಹೋರಾಡುತ್ತಿದ್ದೇನೆ ಮತ್ತು ಇತರ ಹಲವು ಸವಾಲುಗಳನ್ನು ಎದುರಿಸುತ್ತಿದ್ದೇನೆ' ಎಂದು ಜಬೇರ್ ಇನ್‌ಸ್ಟಾಗ್ರಾಮ್ ಮತ್ತು ಎಕ್ಸ್‌ನಲ್ಲಿ ಹಂಚಿಕೊಂಡ ಹೇಳಿಕೆಯಲ್ಲಿ ಬರೆದಿದ್ದಾರೆ.

'ಸ್ವಲ್ಪ ಸಮಯದಿಂದ ಟೆನಿಸ್ ಅಂಗಣದಲ್ಲಿ ನಿಜವಾಗಿಯೂ ಸಂತೋಷವಾಗಿರಲಿಲ್ಲ, ಟೆನಿಸ್ ತುಂಬಾ ಸುಂದರವಾದ ಕ್ರೀಡೆಯಾಗಿದೆ. ಆದರೆ ಇದೀಗ ಒಂದು ಹೆಜ್ಜೆ ಹಿಂದಕ್ಕೆ ಇಡಲು ಮತ್ತು ಅಂತಿಮವಾಗಿ ನಾನು ಮೊದಲಿನಂತಾಗಲು ಮತ್ತು ಸರಳವಾಗಿ ಬದುಕುವ ಸಂತೋಷವನ್ನು ಮರುಶೋಧಿಸಲು ಬಯಸುತ್ತೇನೆ' ಎಂದು 30 ವರ್ಷದ ಒನ್ಸ್ ಜಬೇರ್ ಬರೆದುಕೊಂಡಿದ್ದಾರೆ.

'ನನ್ನನ್ನು ಅರ್ಥಮಾಡಿಕೊಂಡಿದ್ದಕ್ಕಾಗಿ ನನ್ನ ಎಲ್ಲಾ ಅಭಿಮಾನಿಗಳಿಗೆ ಧನ್ಯವಾದಗಳು. ನಿಮ್ಮ ಬೆಂಬಲ ಮತ್ತು ಪ್ರೀತಿ ನನಗೆ ಸ್ಫೂರ್ತಿ. ನಾನು ಅದನ್ನು ಯಾವಾಗಲೂ ನನ್ನೊಂದಿಗೆ ಕೊಂಡೊಯ್ಯುತ್ತೇನೆ. ಟೆನಿಸ್‌ನಿಂದ ದೂರವಿದ್ದರೂ ಸಹ, ನಾನು ವಿಭಿನ್ನ ರೀತಿಯಲ್ಲಿ ನಿಕಟವಾಗಿ ಅಭಿಮಾನಿಗಳೊಂದಿಗೆ ಸಂಪರ್ಕದಲ್ಲಿರುತ್ತೇನೆ ಮತ್ತು ಈ ಪ್ರಯಾಣವನ್ನು ನಿಮ್ಮೆಲ್ಲರೊಂದಿಗೆ ಹಂಚಿಕೊಳ್ಳುತ್ತೇನೆ' ಎಂದು ಹೇಳಿದ್ದಾರೆ.

ಇಂಗ್ಲೆಂಡ್‌ನಲ್ಲಿ ಆರಂಭವಾದ ಲೆಜೆಂಡ್ಸ್ ಕ್ರಿಕೆಟ್

ಭಾರತಕ್ಕೆ ಪಾಕ್ ಮೊದಲ ಎದುರಾಳಿ

ಲಂಡನ್: ಮಾಜಿ ಆಟಗಾರರ ಎರಡನೇ ಆವೃತ್ತಿಯ ಲೆಜೆಂಡ್ಸ್ ವಿಶ್ವ ಚಾಂಪಿಯನ್‌ಶಿಪ್ ಕ್ರಿಕೆಟ್ ಟೂರ್ನಿ ಶುಕ್ರವಾರ ಆರಂಭಗೊಂಡಿದೆ. ಹಾಲಿ ಚಾಂಪಿಯನ್ ಭಾರತ, ಪಾಕಿಸ್ತಾನ, ಇಂಗ್ಲೆಂಡ್, ಆಸ್ಟ್ರೇಲಿಯಾ, ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿದೆ. ಮೊದಲ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ತಂಡ ಪಾಕಿಸ್ತಾನ ಸವಾಲು ಎದುರಿಸಲಿದೆ. ಪಂದ್ಯಾವಳಿಗಳು ಇಂಗ್ಲೆಂಡ್‌ನ ನಾಲ್ಕು ತಾಣಗಳಾದ ಎಜ್‌ಬಾಸ್ಟನ್, ನಾರ್ಥಂಪ್ಟನ್, ಲೀಸೆಸ್ಟರ್ ಮತ್ತು ಲೀಡ್ಸ್‌ನಲ್ಲಿ ನಡೆಯಲಿದೆ.

ಭಾರತಕ್ಕೆ ಪಾಕ್ ಮೊದಲ ಎದುರಾಳಿ: ಯುವರಾಜ್ ಸಿಂಗ್ ಸಾರಥ್ಯದ ಭಾರತ ತಂಡ ತನ್ನ ಅಭಿಯಾನವನ್ನು ಬದ್ಧ ಎದುರಾಳಿ ಪಾಕ್ ವಿರುದ್ಧ ಆಡುವ ಮೂಲಕ ಆರಂಭಿಸಲಿದೆ. ಆ ಪಂದ್ಯ ಭಾನುವಾರ ನಡೆಯಲಿದೆ. ಆಪರೇಷನ್ ಸಿಂದೂರದ ಬಳಿಕ ಭಾರತ-ಪಾಕ್ ಆಡುತ್ತಿರುವ ಮೊದಲ ಕ್ರಿಕೆಟ್ ಪಂದ್ಯ ಇದಾಗಿದೆ, ಹೀಗಾಗಿ ಪಂದ್ಯ ಭಾರೀ ಕುತೂಹಲ ಕೆರಳಿದೆ. ಕಳೆದ ಆವೃತ್ತಿಯ ಫೈನಲ್‌ನಲ್ಲಿ ಪಾಕಿಸ್ತಾನ ತಂಡವನ್ನೇ ಸೋಲಿಸಿ ಭಾರತ ಚೊಚ್ಚಲ ಚಾಂಪಿಯನ್ ಪಟ್ಟ ಅಲಂಕರಿಸಿತ್ತು. ಭಾರತ ತಂಡದಲ್ಲಿ ಕನ್ನಡಿಗರಾದ ರಾಬಿನ್ ಉತ್ತಪ್ಪ, ಸ್ಟುವರ್ಟ್ ಬಿನ್ನಿ, ವಿನಯ್ ಕುಮಾರ್ ಮತ್ತು ಅಭಿಮನ್ಯು ಮಿಥುನ್ ಸ್ಥಾನ ಪಡೆದಿದ್ದಾರೆ. ಭಾರತದ ಎಲ್ಲ ಪಂದ್ಯಗಳು ರಾತ್ರಿ 9 ಗಂಟೆಗೆ ಆರಂಭವಾಗಲಿದೆ.

ರೌಂಡ್ ರಾಬಿನ್ ಮಾದರಿಯಲ್ಲಿ ನಡೆಯುವ ಈ ಟೂರ್ನಿಯಲ್ಲಿ ಅಗ್ರ ನಾಲ್ಕು ತಂಡಗಳು ಸೆಮಿಫೈನಲ್‌ಗೇರಲಿವೆ. ಎಲ್ಲ ಮೂರು ನಾಕೌಟ್ ಪಂದ್ಯಗಳು ಎಜ್‌ಬಾಸ್ಟನ್ ಮೈದಾನದಲ್ಲಿ ನಡೆಯಲಿದೆ. ಸೆಮಿಫೈನಲ್ ಪಂದ್ಯಗಳು ಜುಲೈ 31 ರಂದು, ಫೈನಲ್ ಪಂದ್ಯ ಆಗಸ್ಟ್ 2 ರಂದು ನಡೆಯಲಿದೆ.

ಭಾರತ ಲೆಜೆಂಡ್ಸ್ ತಂಡ: ಯುವರಾಜ್ ಸಿಂಗ್ (ನಾಯಕ), ಶಿಖರ್ ಧವನ್, ಹರ್ಭಜನ್ ಸಿಂಗ್, ಸುರೇಶ್ ರೈನಾ, ಇರ್ಫಾನ್ ಪಠಾಣ್, ಯೂಸುಫ್ ಪಠಾಣ್ ರಾಬಿನ್ ಉತ್ತಪ್ಪ, ಸ್ಟುವರ್ಟ್ ಬಿನ್ನಿ, ವಿನಯ್ ಕುಮಾರ್, ಅಭಿಮನ್ಯು ಮಿಥುನ್, ಅಂಬಾಟಿ ರಾಯುಡು, ಪೀಯೂಷ್ ಚಾವ್ಲಾ, ವರುಣ್ ಆರೋನ್, ಸಿದ್ಧಾರ್ಥ್ ಕೌಲ್, ಗುರುಕೀರತ್ ಮಾನ್.

ಭಾರತದ ಪಂದ್ಯಗಳು

ಜುಲೈ 20: ಭಾರತ-ಪಾಕಿಸ್ತಾನ
ಜುಲೈ 22: ಭಾರತ-ದಕ್ಷಿಣ ಆಫ್ರಿಕಾ
ಜುಲೈ 26: ಭಾತ-ಆಸ್ಟ್ರೇಲಿಯಾ
ಜುಲೈ 27: ಭಾರತ-ಇಂಗ್ಲೆಂಡ್
ಜುಲೈ 29: ಭಾರತ-ವೆಸ್ಟ್ ಇಂಡೀಸ್

ರೋಜರ್ ಬಿನ್ನಿ ಬದಲಾವಣೆ ಖಚಿತ

ರಾಜೀವ್ ಶುಕ್ಲಾಗೆ ಬಿಸಿಸಿಐ ಹಂಗಾಮಿ ಅಧ್ಯಕ್ಷ ಹುದ್ದೆ ಸಾಧ್ಯತೆ

ಮುಂಬಯಿ: ಭಾರತದ ಮಾಜಿ ಆಲ್‌ರೌಂಡರ್, ಮತ್ತು ಪ್ರಸ್ತುತ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ)ಅಧ್ಯಕ್ಷ ರೋಜರ್ ಬಿನ್ನಿ ಅವರು ಜುಲೈ 19ರಂದು 70ನೇ ವರ್ಷಕ್ಕೆ ಕಾಲಿಡಲಿದ್ದಾರೆ. ಇದರ ಬೆನ್ನಲ್ಲೇ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವ ಸಾಧ್ಯತೆ ಇದೆ. ಕನ್ನಡಿಗ ರೋಜರ್ ಬಿನ್ನಿ ಅವರನ್ನು ವಯಸ್ಸಿನ ಮಿತಿಯ ಕಾರಣದಿಂದ ಬದಲಾವಣೆ ಮಾಡಲಾಗುತ್ತಿದೆ. ಬಿಸಿಸಿಐ ಸಂವಿಧಾನದ ಪ್ರಕಾರ 70 ವರ್ಷದ ಬಳಿಕ ಬಿಸಿಸಿಐ ಅಧ್ಯಕ್ಷರಾಗಿ ಇರುವಂತಿಲ್ಲ, ಹೀಗಾಗಿ ಬದಲಾವಣೆ ಮಾಡಬೇಕಿದೆ.

ರೋಜರ್ ಬಿನ್ನಿ ಅವರು ಅಕ್ಟೋಬರ್ 2022ರಲ್ಲಿ ಬಿಸಿಸಿಐನ 36ನೇ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ಅದುವರೆಗೆ ಸೌರವ್ ಗಂಗೂಲಿ ಆ ಸ್ಥಾನದಲ್ಲಿದ್ದರು. ಬಿನ್ನಿ ಅವರ ಮೂರು ವರ್ಷಗಳ ಅಧಿಕಾರಾವಧಿಯಲ್ಲಿ ಭಾರತ ಪುರುಷರ ತಂಡ 2024ರ ಟಿ20 ವಿಶ್ವಕಪ್ ಮತ್ತು 2025ರ ಚಾಂಪಿಯನ್ಸ್ ಟ್ರೋಫಿಯನ್ನು ಗೆದ್ದುಕೊಂಡಿತ್ತು. ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಪ್ರಾರಂಭವಾದದ್ದು ಸಹ ಅವರ ಅಧಿಕಾರಾವಧಿಯಲ್ಲಿ ಎಂಬುದು ಸ್ಮರಣೀಯ.

ಸದ್ಯ ಬಿಸಿಸಿಐ ಉಪಾಧ್ಯಕ್ಷರಾಗಿರುವ ರಾಜೀವ್ ಶುಕ್ಲಾ ಬಿನ್ನಿ ಅವರ ಸ್ಥಾನ ತುಂಬುವ ಸಾಧ್ಯತೆ ದಟ್ಟವಾಗಿದೆ. ಖಾಲಿ ಇರುವ ಹುದ್ದೆ ಭರ್ತಿ ಮಾಡಲು, ಗೌರವಾನ್ವಿತ ಸ್ಥಾನಕ್ಕೆ ಹೊಸ ವ್ಯಕ್ತಿಯನ್ನು ಆಯ್ಕೆ ಮಾಡುವವರೆಗೆ ರಾಜೀವ್ ಶುಕ್ಲಾ ಅಧ್ಯಕ್ಷರ ಕರ್ತವ್ಯಗಳನ್ನು ವಹಿಸಿಕೊಳ್ಳುತ್ತಾರೆ ಎನ್ನಲಾಗಿದೆ.

ರಾಜೀವ್ ಶುಕ್ಲಾ ಅವರು 2020ರಿಂದ ಬಿಸಿಸಿಐ ಉಪಾಧ್ಯಕ್ಷರಾಗಿದ್ದಾರೆ. ಅವರು 2017ರವರೆಗೆ ಉತ್ತರ ಪ್ರದೇಶ ಕ್ರಿಕೆಟ್ ಅಸೋಸಿಯೇಶನ್‌ನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. 2018ರವರೆಗೆ ಐಪಿಎಲ್ ಅಧ್ಯಕ್ಷರಾಗಿ ಶುಕ್ಲಾ ಕೆಲಸ ಮಾಡಿದ್ದರು. ಹಲವು ಅನುಭವ ಆಧಾರದಲ್ಲಿ ಅವರಿಗೆ ಹಂಗಾಮಿ ಅಧ್ಯಕ್ಷ ಸ್ಥಾನ ಸಿಗುವ ಸಾಧ್ಯತೆ ಅಧಿಕವಾಗಿದೆ.

ಕ್ರಿಕೆಟ್‌ನಲ್ಲಿ ರೋಜರ್ ಬಿನ್ನಿ ಸಾಧನೆ: ಭಾರತದ ಪರ 27 ಟೆಸ್ಟ್ ಮತ್ತು 72 ಏಕದಿನ ಪಂದ್ಯಗಳಾಡಿರುವ ರೋಜರ್ ಬಿನ್ನಿ ಒಟ್ಟು 124 ವಿಕೆಟ್ ಪಡೆದಿದ್ದರು. 1983ರ ಐತಿಹಾಸಿಕ ವಿಶ್ವಕಪ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಭೂಗತ ಲೋಕದಲ್ಲಿ ಮುಗ್ಧ ಮುತ್ತ

ಭೂಗತ ಲೋಕವೇ ಹಾಗೇ ಕೆಲವರನ್ನು ತನಗೆ ಅರಿವಿಲ್ಲದಂತೆ ಸೆಳೆದು ಬಿಡುತ್ತದೆ. ಅಂತಹದ್ದೇ ಕಥೆ ಹೊತ್ತ, ಎಕ್ಕ ಈ ವಾರ ತೆರೆಗೆ ಬಂದಿದೆ. ಮುತ್ತ ಹಳ್ಳಿಯ ಮುಗ್ಧ ಯುವಕ, ತಾಯಿ ಮುದ್ದಿನ ಮಗನಾದ ಮುತ್ತನಿಗೆ ಸ್ನೇಹಿತರೆಂದರೆ ಪ್ರಾಣ, ಅವರಿಗಾಗಿ ಎಂತಹ ತ್ಯಾಗಕ್ಕೂ ಸಿದ್ಧನಿರುತ್ತಾನೆ. ಹೀಗಿರುವಾಗಲೇ ಆತನ ಸ್ನೇಹಿತನಿಗೆ ಉದ್ಯಮಕ್ಕೆ ಫೈನಾನ್ಶಿಯರ್‌ನಿಂದ ಸಾಲ ಕೊಡಿಸುತ್ತಾನೆ. ಸಾಲ ಪಡೆದ ಗೆಳೆಯ ಊರಿಂದಲೇ ಪರಾರಿಯಾಗುತ್ತಾನೆ. ಆ ಸಾಲದ ಹೊರೆ ಮುತ್ತನ ಮೇಲೆ ಬೀಳುತ್ತದೆ. ಆತನ ಮನೆ ಸಾಲಕ್ಕಾಗಿ ವಶವಾಗುತ್ತದೆ. ಇತ್ತ ತನ್ನ ಮನೆ ಬಿಡಿಸಿಕೊಳ್ಳುವುದು ಮುತ್ತನಿಗೆ ಅನಿವಾರ್ಯವಾಗಿರುತ್ತದೆ. ಅದಕ್ಕಾಗಿ ಬೆಂಗಳೂರಿಗೆ ಬಂದು ದುಡಿದು ಸಾಲ ತೀರಿಸಲು ಮುಂದಾಗುತ್ತಾನೆ. ಹೀಗೆ ಮಹಾನಗರದಲ್ಲಿ ದುಡಿಯುತ್ತಾ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ತನಗೆ ಅರಿವಿಲ್ಲದಂತೆ ಭೂಗತ ಜಗತ್ತಿಗೆ ಕಾಲಿಡುತ್ತಾನೆ. ಅಷ್ಟಕ್ಕೂ ಮುತ್ತ ಅಂಡರ್‌ವರ್ಲ್ಡ್‌ಗೆ ಎಂಟ್ರಿಯಾಗಿದ್ದು ಹೇಗೆ. ಆತನ ಜೀವನದಲ್ಲಿ ನಡೆದ ಘಟನೆಯಾದಾರು ಏನು, ಈ ಎಕ್ಕ ಯಾರು ಎಂಬುದನ್ನು ತಿಳಿಯಲು ಸಿನಿಮಾ ನೋಡಲೇಬೇಕು. ಎಕ್ಕ ಭೂಗತ ಲೋಕದ ಕಥೆಗೆ ಸೀಮಿತವಾಗಿಲ್ಲ, ಇಲ್ಲಿ ತಾಯಿ ಸೆಂಟಿಮೆಂಟ್ ಸ್ಟೋರಿ ಎಲ್ಲವೂ ಬೆರೆತಿದೆ. ರೋಹಿತ್ ಪದಕಿ ಆ್ಯಕ್ಷನ್ ಸೆಂಟಿಮೆಂಟ್ ಬೆರೆತ ಕಥೆಯನ್ನು ಮನರಂಜನಾತ್ಮಕವಾಗಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಯುವ ರಾಜ್‌ಕುಮಾರ್ ಮುತ್ತನಾಗಿ, ಎಕ್ಕನಾಗಿ ಹೀಗೆ ವಿವಿಧ ಶೇಡ್‌ನಲ್ಲಿ ಅದ್ದೂರಿಯಾಗಿ ಮಿಂಚಿದ್ದಾರೆ. ಈ ಚಿತ್ರದ ಮೂಲಕ ಯುವ ಎಂತಹ ಪಾತ್ರಗಳಿಗೂ ಹೊಂದಿಕೊಳ್ಳುವ ನಟ ಎಂಬುದನ್ನು ಸಾಬೀತುಪಡಿಸಿದ್ದಾರೆ. ನಟ ಆದಿತ್ಯ, ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದು ಮೆಚ್ಚುವ ಅಭಿನಯ ತೋರಿದ್ದಾರೆ. ಅತುಲ್ ಕುಲಕರ್ಣಿ, ಪವರ್ ಫುಲ್ ರೋಲ್ ನಿರ್ವಹಿಸಿದ್ದಾರೆ. ಮುತ್ತನ ತಾಯಿಯಾಗಿ ಶ್ರುತಿ ಪಾತ್ರಕ್ಕೆ ಜೀವತುಂಬಿದ್ದಾರೆ. ಸಂಜನಾ ಮತ್ತು ಸಂಪದಾ ತಮಗೆ ಸಿಕ್ಕ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಸಿನಿಮಾ ನೋಡಿ ಬಂದ ಮೇಲೂ ಹಾಡುಗಳು ಮನಸಿನಲ್ಲಿ ಗುನುಗುನಿಸುತ್ತವೆ. ಚಿತ್ರದ ಛಾಯಾಗ್ರಹಣ, ಸಂಗೀತಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಆ್ಯಕ್ಷನ್ ಜತೆಗೆ ಎಮೋಷನ್ಸ್ ಬೆರೆತಿರುವ ಎಕ್ಕ ಸಿನಿಮಾವನ್ನು ಕಣ್ತುಂಬಿಕೊಂಡು ಆನಂದಿಸಬಹುದು.

ಚಿತ್ರ : ಎಕ್ಕ
ನಿರ್ದೇಶನ : ರೋಹಿತ್ ಪದಕಿ
ನಿರ್ಮಾಣ : ಪಿಆರ್‌ಕೆ ಪ್ರೊಡಕ್ಷನ್ಸ್, ಜಯಣ್ಣ ಫಿಲಂಸ್, ಕೆಆರ್‌ಜಿ
ತಾರಾಗಣ : ಯುವ ರಾಜ್‌ಕುಮಾರ್, ಆದಿತ್ಯ, ಅತುಲ್ ಕುಲಕರ್ಣಿ, ಶ್ರುತಿ, ಸಂಜನಾ, ಸಂಪದಾ
ರೇಟಿಂಗ್ : 3.5

ಬಾಂಧವ್ಯ ಬೆಸೆದ ಸುಂದರ ಕಥನಾ

ಲವ್ ಸ್ಟೋರಿಯ ಜತೆಗೆ ಸೆಂಟಿಮೆಂಟ್ ಕಥೆಯ ಸಿನಿಮಾಗಳು ಪ್ರೇಕ್ಷಕರನ್ನು ಸೆಳೆಯುತ್ತವೆ. ಜೂನಿಯರ್ ಕೂಡ ಪ್ರೇಮಕಥೆಯ ಜತೆಗೆ ಬಾಂಧವ್ಯದ ಹೂರಣವನ್ನು ಹೊತ್ತುಬಂದಿದೆ. ನಾಯಕ ಅಭಿನವ್ ತಂದೆಯ ಮುದ್ದಿನ ಮಗ, ತನ್ನ ಮಗನನ್ನು ಬಿಟ್ಟಿರದ ಕೋದಂಡಪಾಣಿಗೆ ಮಗ ತನ್ನ ಜತೆಯೇ ಇರಬೇಕು ಎಂಬ ಆಸೆ. ಮಗನಿಗೋ ಎಲ್ಲಾದರೂ ದೂರದಲ್ಲಿ ಕೆಲಸ ಮಾಡಿಕೊಂಡು ಇರಬೇಕು ಎಂಬ ಹಂಬಲ. ಅಭಿ ಅಂದುಕೊಂಡಂತೆ ಒಳ್ಳೆಯ ಕಂಪನಿಯಲ್ಲಿ ಕೆಲಸವೂ ಸಿಗುತ್ತದೆ. ಪ್ರತಿಭಾನ್ವಿತ ಅಭಿ ಆ ಕಂಪನಿಯಲ್ಲಿ ಹಣಕಾಸಿನ ವ್ಯವಹಾರದಲ್ಲಾದ ಲೋಪದ ಬಗ್ಗೆ ಚೇರ್‌ಮನ್ ಗಮನಕ್ಕೆ ತರುತ್ತಾನೆ. ವಿಜಯನಗರದಲ್ಲಿ ಆಗಿರುವ ಮೋಸದ ಬಗ್ಗೆ ಅಭಿ, ವಿಜಯ ಅವರ ಜತೆಗೆ ಒಂದು ತಂಡ ಹೊರಡುತ್ತದೆ. ಹೀಗೆ ಹೊರಟ ಅಭಿನವ್‌ಗೆ ತನ್ನ ತಂದೆಯ ಬಾಳಲ್ಲಿ ಘಟಿಸಿದ ಫ್ಲಾಶ್ ಬ್ಯಾಕ್ ಸ್ಟೋರಿ ತೆರೆದುಕೊಳ್ಳುತ್ತದೆ. ಮಧ್ಯಂತರದ ಬಳಿಕ ಕಥೆ ಹೊಸ ತಿರುವು ಪಡೆದುಕೊಳ್ಳುತ್ತಾ ಸಾಗುತ್ತದೆ. ಅಭಿನವ್‌ಗೆ ತನ್ನ ತಂದೆಯ ತ್ಯಾಗದ ವಿಚಾರ ತಿಳಿದು ಹೆಮ್ಮೆ ಮೂಡುತ್ತದೆ. ಅಷ್ಟಕ್ಕೂ ಅಭಿನವ್ ತಂದೆಯ ಬಾಳಲ್ಲಿ ನಡೆದ ಘಟನೆ ಏನು, ವಿಜಯನಗರಕ್ಕೂ ಕೋದಂಡಪಾಣಿಗೂ ಏನು ಸಂಬಂಧ ಎನ್ನುವ ವಿಚಾರ ಕುತೂಹಲ ಮೂಡಿಸುತ್ತಾ ಸಾಗುತ್ತದೆ ಅದನ್ನು ತೆರೆಯಲ್ಲಿ ನೋಡಿ ತಿಳಿದರೆ ಚೆಂದ.

ಜೂನಿಯರ್ ಲವ್, ಆ್ಯಕ್ಷನ್ ಬೆರೆತ ಸಿನಿಮಾ ಎನ್ನಿಸುತ್ತದೆ ಆದರೆ ಅದಕ್ಕೂ ಮಿಗಿಲಾಗಿ ಇಲ್ಲಿ ಬಾಂಧವ್ಯದ ಹೂರಣವಿದ್ದು, ಅದು ಪ್ರೇಕ್ಷಕರನ್ನು ಸೆಳೆಯುತ್ತದೆ. ಕಥೆಯಲ್ಲಿ ಬರುವ ಟ್ವಿಸ್ಟ್‌ಗಳು ಸೀಟಿನ ತುದಿಯಲ್ಲಿ ಹಿಡಿದು ಕೂರುವಂತೆ ಮಾಡುತ್ತದೆ. ನಿರ್ದೇಶಕ ರಾಧಾಕೃಷ್ಣ ರೆಡ್ಡಿ ಕೌಟುಂಬಿಕ ಕಥೆಯನ್ನು ಆಯ್ದುಕೊಂಡು ಅದನ್ನು ಎಲ್ಲರಿಗೂ ಹಿಡಿಸುವಂತೆ ತೆರೆಯಲ್ಲಿ ಅಚ್ಚುಕಟ್ಟಾಗಿ ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಜೂನಿಯರ್ ಮೂಲಕ ನಟ ಕಿರೀಟಿ ಚಂದನವನಕ್ಕೆ ಎಂಟ್ರಿಕೊಟ್ಟಿದ್ದು, ಚೊಚ್ಚಲ ಚಿತ್ರದಲ್ಲಿಯೇ ಎಲ್ಲರ ಮನಸೂರೆಗೊಂಡಿದ್ದಾರೆ. ಮೆಚ್ಚುವ ನಟನೆ ತೋರಿರುವ ಕಿರೀಟಿ ಡ್ಯಾನ್ಸ್, ಆ್ಯಕ್ಷನ್‌ನಲ್ಲೂ ಮಿಂಚಿದ್ದು, ಸ್ಯಾಂಡಲ್‌ವುಡ್‌ನಲ್ಲಿ ಹೊಸ ಭರವಸೆ ಮೂಡಿಸಿದ್ದಾರೆ. ಜೂನಿಯರ್‌ನಲ್ಲಿ ರವಿಮಾಮ ಅಕ್ಷರಶಃ ಮನಸೂರೆಗೊಳ್ಳುತ್ತಾರೆ. ದಶಕಗಳ ಬಳಿಕ ಕನ್ನಡ ಚಿತ್ರರಂಗಕ್ಕೆ ಮರಳಿರುವ ಜೆನಿಲಿಯಾ ವಿಜಯಳಾಗಿ ಪವರ್ ಫುಲ್ ಪಾತ್ರ ನಿರ್ವಹಿಸಿದ್ದಾರೆ. ಈ ಪಾತ್ರ ಜೆನಿಲಿಯಾಗೆ ಬಿಗ್ ಬ್ರೇಕ್ ನೀಡುವುದು ಖಚಿತವಾಗಿದೆ. ಚಿತ್ರದ ಸಂಗೀತ ಹೊಸತನ ತಂದಿದೆ. ಆದರೆ ಸಾಹಿತ್ಯಕ್ಕೆ ಇನ್ನೂ ಒತ್ತು ನೀಡಿದ್ದರೆ ಚೆನ್ನಾಗಿರುತ್ತಿತ್ತು ಎನಿಸುತ್ತದೆ, ಜೂನಿಯರ್ ಸುಂದರ ದೃಶ್ಯಕಾವ್ಯವಾಗಿ ಮೂಡಿಬಂದಿದ್ದು ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ಜೂನಿಯರ್ ಚಿತ್ರವನ್ನು ಮನೆಮಂದಿಯೆಲ್ಲಾ ಕುಳಿತು ಕಣ್ತುಂಬಿಕೊಳ್ಳಬಹುದಾಗಿದೆ.

ಚಿತ್ರ : ಜೂನಿಯರ್
ನಿರ್ದೇಶನ : ರಾಧಾಕೃಷ್ಣ ರೆಡ್ಡಿ
ನಿರ್ಮಾಣ : ವಾರಾಹಿ ಪ್ರೊಡಕ್ಷನ್ಸ್
ತಾರಾಗಣ : ಕಿರೀಟಿ, ರವಿಚಂದ್ರನ್, ಜೆನಿಲಿಯಾ, ಸುಧಾರಾಣಿ ಮುಂತಾದವರು
ರೇಟಿಂಗ್ : 3.5

ಸದ್ದು ಮಾಡಿದ ಹಿಕೋರಾ

ನೀನಾಸಂ ಕಿಟ್ಟಿ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ನಿರ್ದೇಶನ ಮಾಡಿರುವ ಹಿಕೋರಾ ಸದ್ದಿಲ್ಲದೆ ಚಿತ್ರೀಕರಣ ಮುಗಿಸಿದ್ದು ತೆರೆಗೆ ಬರಲು ಸಿದ್ಧವಾಗಿದೆ. ಈ ಚಿತ್ರದ ಹಾಡುಗಳು ಬಿಡುಗಡೆಯಾಗಿದ್ದು ಕೇಳಲು ಮಧುರವಾಗಿವೆ. ಸಂಗೀತ ಪ್ರಿಯರ ಮನಗೆದ್ದಿವೆ. ಕರ್ನಾಟಕ ಚಲನಚಿತ್ರ ಪ್ರದರ್ಶಕರ ಸಂಘದ ಅಧ್ಯಕ್ಷ ಕೆ.ವಿ.ಚಂದ್ರಶೇಖರ್, ಕನ್ನಡ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಚಿತ್ರದಲ್ಲಿ ಒಟ್ಟು ಐದು ಹಾಡುಗಳಿದ್ದು ಸದ್ಯ ಮೂರು ಹಾಡುಗಳು ಬಿಡುಗಡೆಯಾಗಿವೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ಸಂಯೋಜಿಸಿರುವ ಹಾಡುಗಳು ಒಂದಕ್ಕಿಂತ ಒಂದು ವಿಭಿನ್ನವಾಗಿದ್ದು ಅರ್ಥಪೂರ್ಣವಾಗಿವೆ. ಕರೋನಾದಂತೆಯೇ ಕಾಡುವ ವೈರಸ್ ವಿರುದ್ಧ ಹೋರಾಡುವ ಆಂಟಿ ವೈರಸ್‌ಗೆ ಕಥೆ ಇಲ್ಲಿದೆ. ಆ ಆಂಟಿ ವೈರಸ್ ಹಿಕೋರಾವಾಗಿದ್ದು ಹೇಗೆ ಎಂಬುದರ ಸುತ್ತ ಚಿತ್ರದ ಕಥೆ ಸಾಗುತ್ತದೆ.

ನೀನಾಸಂ ಕಿಟ್ಟಿ ಅವರೇ ನಾಯಕನಾಗಿ ನಟಿಸಿದ್ದು, ಸ್ಪಂದನಾ ಪ್ರಸಾದ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ನಟಿ ಲಾವಂತಿ, ಸರ್ದಾರ್ ಸತ್ಯ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. ನಿರ್ದೇಶಕರು ಒಳ್ಳೆಯ ಕಥೆಯನ್ನು ಸಿದ್ಧ ಮಾಡಿಕೊಂಡಿದ್ದರು. ಕಥೆ ಕೇಳಿದಾಕ್ಷಣ ಮನಸಿಗೆ ಹಿಡಿಸಿತು. ಸಾಮಾಜಿಕ ಸಂದೇಶ ಸಾರುವ ಸ್ಟೋರಿ ಇದಾಗಿದ್ದು ಹಿಕೋರಾ ಎಲ್ಲರೂ ನೋಡಲೇಬೇಕಾದ ಚಿತ್ರವಾಗುತ್ತದೆ ಎಂಬ ನಂಬಿಕೆ ನನಗಿತ್ತು. ಹಾಗಾಗಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾಗಿ ನಿರ್ಮಾಪಕಿ ರತ್ನಾ ಶ್ರೀಧರ್ ತಿಳಿಸಿದರು.

ಕರೋನಾ ವೈರಸ್‌ನಿಂದ ಇಡೀ ಜಗತ್ತೇ ಕಂಗೆಟ್ಟಿತ್ತು. ಅದಕ್ಕೆ ಹಲವು ವ್ಯಾಕ್ಸಿನ್ ಸಂಶೋಧಿಸಲಾಯಿತು. ಆಂಟಿ ವೈರಸ್‌ನಿಂದ ಹಲವರು ಕರೋನಾದಿಂದ ಪಾರಾದರು. ಹಿಕೋರಾ ಕೂಡ ಒಂದು ಆಂಟಿ ವೈರಸ್. ಹಾಗಾದರೆ ಅದು ಯಾವ ವೈರಸ್ ವಿರುದ್ಧ ಹೋರಾಡುತ್ತದೆ ಎಂಬುದನ್ನು ಚಿತ್ರದಲ್ಲಿ ಥ್ರಿಲ್ಲಿಂಗ್ ಆಗಿ ಕಟ್ಟಿಕೊಡಲಾಗಿದೆ.

-ನೀನಾಸಂ ಕಿಟ್ಟಿ ನಿರ್ದೇಶಕ

ಗರ್ಲ್ ಫ್ರೆಂಡ್‌ನ ಮೊದಲ ಗಾನ

ಬಹುಭಾಷಾ ನಟಿ ರಶ್ಮಿಕಾ ಮಂದಣ್ಣ ಹಲವು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಅದರಲ್ಲಿ ದಿ ಗರ್ಲ್‌ಫ್ರೆಂಡ್ ಸಿನಿಮಾವೂ ಒಂದು. ರಾಹುಲ್ ರವೀಂದ್ರನ್ ನಿರ್ದೇಶನದ ಸುಂದರ ಪ್ರೇಮಕಥೆಯ ದಿ ಗರ್ಲ್ ಫ್ರೆಂಡ್ ಸಿನಿಮಾದ ಮೊದಲ ಹಾಡು ಬಿಡುಗಡೆಯಾಗಿದೆ. ದಿ ಗರ್ಲ್ ಫ್ರೆಂಡ್ ಸ್ವರವೇ.. ಎಂಬ ಮೊದಲ ಹಾಡು ಇದಾಗಿದ್ದು, ನಾಗಾರ್ಜುನ್ ಶರ್ಮಾ ಹಾಡಿಗೆ ಸಾಹಿತ್ಯ ಬರೆದಿರುವ ಈ ಹಾಡಿಗೆ ಹೇಶಮ್ ಅಬ್ದುಲ್ ವಹಾಬ್ ಸಂಗೀತ ಸಂಯೋಜಿಸಿದ್ದು, ಹಾಡಿಗೂ ದನಿಯಾಗಿದ್ದಾರೆ. ರಶ್ಮಿಕಾ ಮಂದಣ್ಣ ಮತ್ತು ದೀಕ್ಷಿತ್ ಶೆಟ್ಟಿ ನಡುವಿನ ಆನ್ ಸ್ಕ್ರೀನ್ ಕೆಮಿಸ್ಟ್ರಿ ಈ ಹಾಡಿನಲ್ಲಿ ಮೋಡಿಮಾಡುತ್ತದೆ. ತೆಲುಗು, ತಮಿಳು, ಹಿಂದಿ, ಕನ್ನಡ ಮತ್ತು ಮಲೆಯಾಳಂ ಭಾಷೆಗಳಲ್ಲಿ ಹಾಡು ಬಿಡುಗಡೆಯಾಗಿದೆ. ಟೈಟಲ್‌ನಲ್ಲೇ ಹೇಳುವಂತೆ ಇದು ಲವ್ ಸ್ಟೋರಿಯ ಸಿನಿಮಾವಾಗಿದ್ದು, ಪ್ಯಾನ್ ಇಂಡಿಯಾ ಮಟ್ಟದಲ್ಲಿ ದಿ ಗರ್ಲ್‌ಫ್ರೆಂಡ್ ಸಿನಿಮಾ ತೆರೆಗೆ ಬರಲಿದೆ. ಕೃಷ್ಣನ್ ವಸಂತ್ ಛಾಯಾಗ್ರಹಣ, ಹೇಶಮ್ ಅಬ್ದುಲ್ ವಹಾಬ್ ಸಂಗೀತ ಚಿತ್ರಕ್ಕಿದೆ. ಗೀತಾ ಆರ್ಟ್ಸ್ ಮತ್ತು ಧೀರಜ್ ಮೊಗಿಲಿನೇನಿ ಎಂಟರ್‌ಟೇನ್‌ಮೆಂಟ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ. ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ದಿ ಗರ್ಲ್‌ಫ್ರೆಂಡ್ ಶೀಘ್ರವೇ ತೆರೆಗೆ ಬರಲಿದೆ.